ಮಂಗಳವಾರ, ಜನವರಿ 17, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 17 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳ ಸಮಗ್ರ ಬೆಳವಣಿಗೆಗೆ ಪಾಠದ ಜತೆ ಆಟೋಟಗಳೂ ಇರಲಿ



ಆಳ-ಅಗಲ
ಬಡವರಿಗೆ ಹೆಚ್ಚು ತೆರಿಗೆ
ಜೋಶಿಮಠ ಬಿಕ್ಕಟ್ಟು: ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಣೆ 4B
ಸಗಟು ಹಣದುಬ್ಬರ ಇಳಿಕೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,093	17,894	₹58,700 (ಬೆಂಗಳೂರು)	₹71,600 (ಬೆಂಗಳೂರು)	81.59

ಮತ್ತೆ ಮುನ್ನೆಲೆಗೆ ಶೇ 40 ಲಂಚದ ಸದ್ದು

ರಾಜ್ಯ ಸರ್ಕಾರದ ವಿರುದ್ಧ ಶೇಕಡ 40ರಷ್ಟು ಲಂಚದ ಆರೋಪ ಮತ್ತೆ ಚರ್ಚೆಯ ಮುನ್ನೆಲೆಗೆ ಬಂದಿದೆ. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಈ ವಿಚಾರವನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರೆ, ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಆರ್. ಮಂಜುನಾಥ್, 'ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರಿಗೆ ಮೂರು ವರ್ಷಗಳಲ್ಲಿ ₹ 90 ಲಕ್ಷ ಲಂಚ ಕೊಟ್ಟಿದ್ದೇನೆ' ಎಂದು ಆರೋಪಿಸಿದರು.

ಬಿಜೆಪಿ ಶಾಸಕ ತಿಪ್ಪಾರೆಡ್ಡಿಗೆ ₹90 ಲಕ್ಷ ಕಮಿಷನ್: ಮಂಜುನಾಥ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗದ ಬಿಜೆಪಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರಿಗೆ ಕಳೆದ ಮೂರು ವರ್ಷಗಳಲ್ಲಿ ₹90 ಲಕ್ಷ ಕಮಿಷನ್ ನೀಡಿದ್ದೇನೆ' ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಆರ್. ಮಂಜುನಾಥ್ ಆರೋಪಿಸಿದರು.

ಕಮಿಷನ್‌ಗೆ ಸಂಬಂಧಿಸಿದಂತೆ ಜಿ.ಎಚ್. ತಿಪ್ಪಾರೆಡ್ಡಿ ಮತ್ತು ತಮ್ಮ ಮಧ್ಯೆ ನಡೆದ ಮಾತುಕತೆಯ ಆಡಿಯೊವೊಂದನ್ನು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

4ನೇ ಪುಟ ನೋಡಿ

ವಿವಿಧ ಕಾಮಗಾರಿಗಳಿಗೆ ನೀಡಿರುವ ಕಮಿಷನ್ ವಿವರ

- ₹12.50 ಲಕ್ಷ — ₹2.5 ಕೋಟಿ ವೆಚ್ಚದ ಪಿಡಬ್ಲ್ಯುಡಿ ಕಚೇರಿ ನಿರ್ಮಾಣ ಕಾಮಗಾರಿಗೆ
- ₹12.50 ಲಕ್ಷ — ₹2.5 ಕೋಟಿ ಮೊತ್ತದ ಆಸ್ಪತ್ರೆ ಕಾಮಗಾರಿಗೆ
- ₹10 ಲಕ್ಷ — ಕೋವಿಡ್–1 ಅಲೆ ಸಂದರ್ಭದಲ್ಲಿನ ಕಾಮಗಾರಿಗೆ
- ₹12 ಲಕ್ಷ — ಕೋವಿಡ್–2 ಅಲೆ ಸಂದರ್ಭದಲ್ಲಿನ ಕಾಮಗಾರಿಗೆ
- ₹22 ಲಕ್ಷ — ₹8.5 ಕೋಟಿ ವೆಚ್ಚದ ಎಂಸಿಎಚ್ 2 ಮತ್ತು 3ನೇ ಹಂತದ ನಿರ್ಮಾಣಕ್ಕೆ
- ₹4 ಲಕ್ಷ — ₹15 ಲಕ್ಷ ಮೊತ್ತದ ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ಸಿಸ್ಟಂ (ಎಂಜಿಪಿಎಸ್) ಕಾಮಗಾರಿಗೆ
- ₹18 ಲಕ್ಷ — ಬಡಾವಣೆ ಅನುಮೋದನೆಗೆ

ಕಾನೂನು ಹೋರಾಟ: ಶಾಸಕ ತಿಪ್ಪಾರೆಡ್ಡಿ

ಚಿತ್ರದುರ್ಗ: ಲಂಚ ಆರೋಪ ಮಾಡಿರುವ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಮಂಜುನಾಥ್ ವಿರುದ್ಧ ಎರಡು ದಿನದಲ್ಲಿ ಕಾನೂನು ಹೋರಾಟಕ್ಕೆ ಮುಂದಾಗುತ್ತೇನೆ' ಎಂದು ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಹೇಳಿದ್ದಾರೆ.

ಸುದ್ದಿಗಾರರ ಜೊತೆಗೆ ಇಲ್ಲಿ ಮಾತನಾಡಿದ ಅವರು, 'ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯಡಿ (ಕೆಎಚ್‌ಎಸ್‌ಡಿಪಿ) ಟೆಂಡರ್ ಕೊಡಿಸದೇ ಇರುವುದಕ್ಕೆ ವೈಯಕ್ತಿಕ ದ್ವೇಷದಿಂದ ಈಗ ಕಮಿಷನ್ ಆರೋಪ ಮಾಡಿದ್ದಾನೆ. ಆತನ ಗುಣವೇ ಹೆದರಿಸಿ ಕೆಲಸ ಮಾಡುವುದು' ಎಂದು ಟೀಕಿಸಿದರು.

4ನೇ ಪುಟ ನೋಡಿ

₹ 1.5 ಲಕ್ಷ ಕೋಟಿ ಲೂಟಿ: ಪ್ರಿಯಾಂಕಾ

'ಪ್ರತಿ ಕೆಲಸದಲ್ಲೂ ಶೇಕಡ 40ರಷ್ಟು ಲಂಚ ಪಡೆಯುತ್ತಿರುವ ಕರ್ನಾಟಕದ ಬಿಜೆಪಿ ಸರ್ಕಾರ, ಮೂರು ವರ್ಷಗಳಲ್ಲಿ ₹ 1.5 ಲಕ್ಷ ಕೋಟಿಯಷ್ಟು ಲೂಟಿ ಮಾಡಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ವತಿಯಿಂದ ನಗರದ ಬೆಂಗಳೂರು ಅರಮನೆ ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ 'ನಾ ನಾಯಕಿ' ಸಮಾವೇಶದಲ್ಲಿ ಮಾತನಾಡಿದ ಅವರು, 'ಇಲ್ಲಿನ ಬಿಜೆಪಿ ಸರ್ಕಾರದಲ್ಲಿ ಲಂಚ ನೀಡದೆ ಯಾವ ಕೆಲಸವೂ ಆಗುವುದಿಲ್ಲ. ವಾಹನ ಚಾಲನಾ ಪರವಾನಗಿಯಿಂದ ಅಧಿಕಾರಿಗಳ ವರ್ಗಾವಣೆವರೆಗೆ ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಕಾಮಗಾರಿ, ಸೇವೆ ಒದಗಿಸುವುದು, ಅಧಿಕಾರಿಗಳ ನೇಮಕಾತಿ, ವರ್ಗಾವಣೆ, ಸ್ಥಳನಿಯುಕ್ತಿ ಎಲ್ಲದರಲ್ಲೂ ಭ್ರಷ್ಟಾಚಾರ ನಡೆಯುತ್ತಿದೆ' ಎಂದರು.

ಬಿಬಿಎಂಪಿಯಲ್ಲಿ ₹ 8,000 ಕೋಟಿ ಬಜೆಟ್ ಇದ್ದರೆ, ಅದರಲ್ಲಿ ₹ 3,200 ಕೋಟಿ ಸರ್ಕಾರದಲ್ಲಿರುವವರ ಜೇಬಿಗೆ ಹೋಗುತ್ತಿದೆ. ಜನರ ತೆರಿಗೆಯ ಹಣದ ಲೂಟಿ ಅವ್ಯಾಹತವಾಗಿ ನಡೆಯುತ್ತಿದೆ ಎಂದು ಟೀಕಿಸಿದರು.

ಪೊಲೀಸ್ ಪಡೆ ಮಾರಾಟಕ್ಕೆ: ರಾಜ್ಯದಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿಯಲ್ಲಿ ನಡೆದಿರುವ ಹಗರಣ ನಾಚಿಕೆಗೇಡಿನ ಪ್ರಕರಣ. ಇಲ್ಲಿನ ಸರ್ಕಾರ ಹಣಕ್ಕಾಗಿ ಪೊಲೀಸ್ ಪಡೆಯನ್ನೂ ಮಾರಾಟಕ್ಕೆ ಇಟ್ಟಿದೆ. ಪಿಎಸ್‌ಐ ಹುದ್ದೆಯನ್ನೇ ಮಾರಿಕೊಂಡಿದ್ದಾರೆ. ಇಂತಹ ಅನೇಕ ನೇಮಕಾತಿ ಹಗರಣಗಳಿವೆ ಎಂದು ಆರೋಪಿಸಿದರು.

'ನೀವು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುತ್ತೀರಿ. ಆದರೆ, ಇವರು ಹುದ್ದೆಗಳನ್ನೇ ಮಾರಿಕೊಂಡರೆ ನಿಮ್ಮ ಮಕ್ಕಳಿಗೆ ಉದ್ಯೋಗ ಎಲ್ಲಿಂದ ದೊರಕುತ್ತದೆ? ಇವರಿಂದ ನಿಮ್ಮ ಮಕ್ಕಳ ಭವಿಷ್ಯ ಉತ್ತಮವಾಗುತ್ತದೆ ಎಂಬ ಭರವಸೆ ಇದೆಯೆ' ಎಂದು ಪ್ರಿಯಾಂಕಾ ಸಭೆಯಲ್ಲಿದ್ದ ಮಹಿಳೆಯರನ್ನು ಪ್ರಶ್ನಿಸಿದರು.

4ನೇ ಪುಟ ನೋಡಿ

ಕುಸಿದ ಮಕ್ಕಳ ಸಂಖ್ಯೆ; 10,500 ಶಿಕ್ಷಕರು ಹೆಚ್ಚುವರಿ

ಬೆಂಗಳೂರು: ವರ್ಗಾವಣೆಯ ಹೊಸ ನೀತಿಯ ಅನ್ವಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಿದ್ದು, ಮಕ್ಕಳು ಕಡಿಮೆ ಇರುವ ಶಾಲೆಗಳಲ್ಲಿನ 10,500 ಶಿಕ್ಷಕರನ್ನು 'ಹೆಚ್ಚುವರಿ' ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿದೆ. 4

ಚಿನಕುರಳಿ
ಪ್ರಕಾಶ್ ಶೆಟ್ಟಿ

ಕೊಲಿಜಿಯಂ: ಮುಖ್ಯ ನ್ಯಾಯಮೂರ್ತಿಗೆ ಕೇಂದ್ರ ಸಚಿವ ರಿಜಿಜು ಪತ್ರ
'ಸರ್ಕಾರದ ಪ್ರತಿನಿಧಿಗೂ ಸ್ಥಾನ ಕೊಡಿ'

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳ ನೇಮಕ ಮಾಡುವ ಕೊಲಿಜಿಯಂ ವ್ಯವಸ್ಥೆಯಲ್ಲಿ ಸರ್ಕಾರದ ಪ್ರತಿನಿಧಿಯನ್ನೂ ಸೇರಿಸಿಕೊಳ್ಳಬೇಕು ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಒತ್ತಾಯಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ರಿಜಿಜು ಪತ್ರ ಬರೆದಿದ್ದಾರೆ.

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ಕಾಯ್ದೆಯನ್ನು ರದ್ದುಪಡಿಸಿದಾಗ ಇಂತಹ ಸಲಹೆಯೊಂದನ್ನು ಸುಪ್ರೀಂ ಕೋರ್ಟ್ ಮುಂದಿಟ್ಟಿತ್ತು. ಅದನ್ನು ನೆನಪಿಸುವುದಕ್ಕಾಗಿ ಈ ಪತ್ರ ಬರೆಯಲಾಗಿದೆ ಎಂದು ತಮ್ಮ ನಡೆಯನ್ನು ರಿಜಿಜು ಸಮರ್ಥಿಸಿಕೊಂಡಿದ್ದಾರೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಕೇಂದ್ರ ಸರ್ಕಾರದ ಪ್ರತಿನಿಧಿಗಳು, ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕೆ ಆಯಾ ರಾಜ್ಯ ಸರ್ಕಾರದ ಪ್ರತಿನಿಧಿಗಳು ಇರುವ 'ಶೋಧ ಮತ್ತು ಮೌಲ್ಯಮಾಪನ' ಸಮಿತಿ ರಚಿಸಬೇಕು ಎಂಬ ಪ್ರಸ್ತಾವವನ್ನು ಕಾನೂನು ಸಚಿವರು ಇರಿಸಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿ ನೇಮಕದ ಕುರಿತು ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ಮಧ್ಯೆ ನಡೆಯುತ್ತಿರುವ ಜಟಾಪಟಿಯ ನಡುವೆಯೇ ರಿಜಿಜು ಅವರು ಪತ್ರ ಬರೆದಿದ್ದಾರೆ.

ಕೇಂದ್ರದ ಹಲವು ಸಚಿವರು ಎನ್‌ಜೆಎಸಿ ರದ್ದತಿಯ ವಿರುದ್ಧ ಇತ್ತೀಚೆಗೆ ಮಾತನಾಡಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರೂ ಇದಕ್ಕೆ ದನಿಗೂಡಿಸಿದ್ದಾರೆ. ಶಾಸಕಾಂಗದ ಕಾರ್ಯದಲ್ಲಿ ನ್ಯಾಯಾಂಗವು ಹಸ್ತಕ್ಷೇಪ ಮಾಡುತ್ತಿದೆ ಎಂಬ ಆರೋಪವನ್ನು ಧನಕರ್ ಅವರು ಮಾಡಿದ್ದರು.

ಕೊಲಿಜಿಯಂ ವ್ಯವಸ್ಥೆಯು ಸಂವಿಧಾನಕ್ಕೆ ಅನುಗುಣವಾಗಿ ಇಲ್ಲ ಎಂದು ರಿಜಿಜು ಅವರು ಕಳೆದ ನವೆಂಬರ್‌ನಲ್ಲಿಯೂ ಹೇಳಿದ್ದರು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇಮಕ ಮಾರ್ಗಸೂಚಿ, ಬಡ್ತಿ, ವರ್ಗಾವಣೆ ವಿಚಾರಗಳಲ್ಲಿ ಏಳು ವರ್ಷಗಳ ಬಳಿಕವೂ ಸಹಮತಕ್ಕೆ ಬರಲು ಸರ್ಕಾರ ಮತ್ತು ಸುಪ್ರೀಂ ಕೋರ್ಟ್ ಕೊಲಿಜಿಯಂಗೆ ಸಾಧ್ಯವಾಗಿಲ್ಲ ಎಂದು ಸಂಸದೀಯ ಸಮಿತಿಯೊಂದು ಕೂಡ ಅಸಮಾಧಾನ ವ್ಯಕ್ತಪಡಿಸಿತ್ತು.

ಸಂಸತ್ತು ಅವಿರೋಧವಾಗಿ ಅಂಗೀಕರಿಸಿದ್ದ ಎನ್‌ಜೆಎಸಿ ಕಾಯ್ದೆಯು ಅಸಾಂವಿಧಾನಿಕ ಎಂದು ಈ ಕಾಯ್ದೆಯನ್ನು ಸುಪ್ರೀಂ ಕೋರ್ಟ್ 2015ರ ಅಕ್ಟೋಬರ್‌ನಲ್ಲಿ ರದ್ದು ಮಾಡಿತ್ತು.

ವಿರೋಧ ಪಕ್ಷಗಳ ಆಕ್ಷೇಪ

ನ್ಯಾಯಾಂಗ ನೇಮಕಾತಿಯಲ್ಲಿ ಸುಧಾರಣೆ ಅಗತ್ಯ ಇದೆ. ಆದರೆ, ಸರ್ಕಾರ ಸೂಚಿಸುತ್ತಿರುವ ಪರಿಹಾರವು ಸ್ವತಂತ್ರ ನ್ಯಾಯಾಂಗಕ್ಕೆ ವಿಷ ಕೊಡುವಂತೆ ಇದೆ. ನ್ಯಾಯಾಂಗವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಸರ್ಕಾರವು ಯೋಜಿತ ಪ್ರಯತ್ನ ನಡೆಸುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಹೇಳಿದ್ದಾರೆ.

ಸರ್ಕಾರದ ನಡೆಯು ಅತ್ಯಂತ ಅಪಾಯಕಾರಿ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ. ನ್ಯಾಯಾಂಗ ನೇಮಕಾತಿಯಲ್ಲಿ ಸರ್ಕಾರದ ಹಸ್ತಕ್ಷೇಪ ಇರಲೇಬಾರದು ಎಂದು ಅವರು ಪ್ರತಿಪಾದಿಸಿದ್ದಾರೆ.

ಉಪರಾಷ್ಟ್ರಪತಿ ದಾಳಿ ನಡೆಸುತ್ತಿದ್ದಾರೆ. ಕಾನೂನು ಸಚಿವರು ದಾಳಿ ನಡೆಸುತ್ತಿದ್ದಾರೆ. ಇವೆಲ್ಲವೂ ನ್ಯಾಯಾಂಗವನ್ನು ಕೈವಶ ಮಾಡಿಕೊಳ್ಳುವುದಕ್ಕೆ ಇರುವ ವ್ಯವಸ್ಥಿತ ಕಾರ್ಯಾಚರಣೆ. ಕೊಲಿಜಿಯಂಗೆ ಸುಧಾರಣೆ ಅಗತ್ಯ. ಆದರೆ, ಸರ್ಕಾರ ಪೂರ್ಣ ಶರಣಾಗತಿ ಬಯಸುತ್ತಿದೆ' ಎಂದು ಕಾಂಗ್ರೆಸ್ ಹೇಳಿದೆ.

ಕೊಲಿಜಿಯಂನ ಕಾರ್ಯವಿಧಾನವನ್ನು ಪುನರ್ ರೂಪಿಸಬೇಕು ಎಂದು ಎನ್‌ಜೆಎಸಿಯನ್ನು ರದ್ದುಪಡಿಸಿದ್ದ ಸಂವಿಧಾನ ಪೀಠವು ಹೇಳಿತ್ತು. ಮುಖ್ಯ ನ್ಯಾಯಮೂರ್ತಿಗೆ ಬರೆದ ಪತ್ರವು ಆ ತೀರ್ಪಿಗೆ ಅನುಗುಣವಾಗಿ ಇದೆ. ಅನುಕೂಲಸಿಂಧು ರಾಜಕಾರಣ ಸರಿಯಲ್ಲ, ಅದೂ ನ್ಯಾಯಾಂಗದ ಹೆಸರಿನಲ್ಲಿ. ಭಾರತದ ಸಂವಿಧಾನವೇ ಸರ್ವೋಚ್ಚ. ಅದಕ್ಕಿಂತ ಮೇಲೆ ಯಾರೂ ಇಲ್ಲ ಎಂದು ರಿಜಿಜು ಅವರು ಆಕ್ಷೇಪಗಳಿಗೆ ಉತ್ತರವಾಗಿ ಟ್ವೀಟ್ ಮಾಡಿ ಹೇಳಿದ್ದಾರೆ.

ಪ್ರಿಯಾಂಕಾ ಗಾಂಧಿಗೆ ಗೌರವ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಸೋಮವಾರ ನಡೆದ 'ನಾ ನಾಯಕಿ' ಸಮಾವೇಶದಲ್ಲಿ ಪಾಲ್ಗೊಂಡಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರಿಗೆ ಬೆಳ್ಳಿಯ ಖಡ್ಗ ಮತ್ತು ಚಾಮುಂಡೇಶ್ವರಿ ವಿಗ್ರಹ ನೀಡಿ ಗೌರವಿಸಲಾಯಿತು. ಶಾಸಕಿಯರಾದ ಅಂಜಲಿ ನಿಂಬಾಳ್ಕರ್, ಸೌಮ್ಯಾ ರೆಡ್ಡಿ, ಲಕ್ಷ್ಮಿ ಹೆಬ್ಬಾಳ್ಕರ್, ಸಮಾವೇಶದ ಅಧ್ಯಕ್ಷೆ ಉಮಾಶ್ರೀ, ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪುಷ್ಪಾ ಅಮರನಾಥ್ ಇದ್ದರು -ಪ್ರಜಾವಾಣಿ ಚಿತ್ರ

ಸುದ್ದಿ 4

ಚುಟುಕು ಪುಟಗಳು
'ಸೇನಾಪಡೆ ಬಲ ತುಂಬಲಿದೆ ಅಗ್ನಿಪಥ' 10

ತಮಿಳುನಾಡಿನಲ್ಲಿ ಹೋರಿ ನಿಯಂತ್ರಿಸುವ ವೇಳೆ ಇಬ್ಬರ ಸಾವು 5
ಆರ್‌ವಿಎಂ ಪ್ರಾತ್ಯಕ್ಷಿಕೆ ಕೈಬಿಟ್ಟ ಚುನಾವಣಾ ಆಯೋಗ 5

9 ರಾಜ್ಯಗಳಲ್ಲೂ ಗೆಲುವಿಗೆ ಬಿಜೆಪಿ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಪೂರ್ವಭಾವಿಯಾಗಿ ಈ ವರ್ಷ ನಡೆಯಲಿರುವ 9 ರಾಜ್ಯಗಳ ವಿಧಾನಸಭಾ ಚುನಾವಣೆಗಳ ಮಹತ್ವವನ್ನು ಒತ್ತಿ ಹೇಳಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, 'ಯಾವುದೇ ರಾಜ್ಯದಲ್ಲಿ ಪಕ್ಷ ಸೋಲದಂತೆ ನೋಡಿಕೊಳ್ಳಬೇಕು. ಈ ದಿಸೆಯಲ್ಲಿ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಕೆಲಸ ಮಾಡಬೇಕು' ಎಂದು ಸೂಚಿಸಿದರು.

ನವದೆಹಲಿಯಲ್ಲಿ ಸೋಮವಾರ ಆರಂಭವಾದ ಬಿಜೆಪಿಯ ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಅವರು ಮಾತನಾಡಿದರು.

ಕೇಂದ್ರದಲ್ಲಿ ಮೂರನೇ ಸಲ ಅಧಿಕಾರದ ಚುಕ್ಕಾಣಿ ಹಿಡಿಯಲು ಸಂಘಟನೆಯನ್ನು ಇನ್ನಷ್ಟು ಬಲಪಡಿಸಲು ಪಕ್ಷವು ಹಲವು ಕಸರತ್ತುಗಳನ್ನು ನಡೆಸುತ್ತಿದೆ. ಕಾರ್ಯಕಾರಿಣಿಗೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರ ರಾಜಧಾನಿಯಲ್ಲಿ ರೋಡ್ ಷೋ ನಡೆಸಿ ಮುಖಂಡರು ಹಾಗೂ ಕಾರ್ಯಕರ್ತರಿಗೆ ಹುರುಪು ತುಂಬಿದರು.

ಕಾರ್ಯಕಾರಿಣಿಯಲ್ಲಿ ನಡ್ಡಾ ಮಾಡಿರುವ ಭಾಷಣದ ಬಗ್ಗೆ ಪಕ್ಷದ ಮುಖಂಡ ರವಿಶಂಕರ್ ಪ್ರಸಾದ್ ಸುದ್ದಿಗಾರರಿಗೆ ಮಾಹಿತಿ ನೀಡಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಭಾರತದಲ್ಲಿ ಆಗಿರುವ ಪ್ರಗತಿಯನ್ನು ನಡ್ಡಾ ಶ್ಲಾಘಿಸಿದರು ಎಂದು ರವಿಶಂಕರ್ ಪ್ರಸಾದ್ ತಿಳಿಸಿದರು.

4B ಪುಟ ನೋಡಿ

ಪಿಎಸ್‌ಐ ಅಕ್ರಮ ತನಿಖಾ ತಂಡಕ್ಕೆ 'ಸ್ಯಾಂಟ್ರೊ' ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಸಮುದಾಯದ ಮಹಿಳೆ ಮೇಲೆ ಅತ್ಯಾಚಾರವೆಸಗಿ ಹಲ್ಲೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದ ಆರೋಪಿ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ (51) ವಿರುದ್ಧದ ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವಹಿಸಲಾಗಿದ್ದು, ಡಿವೈಎಸ್ಪಿ ನೇತೃತ್ವದ ತಂಡ ತನಿಖೆ ಆರಂಭಿಸಿದೆ.

ಸ್ಯಾಂಟ್ರೊ ರವಿ

ಮೈಸೂರಿಗೆ ಸೋಮವಾರ ಭೇಟಿ ನೀಡಿದ ಸಿಐಡಿ ಅಧಿಕಾರಿಗಳು, ವಿಜಯನಗರ ಠಾಣೆ ಪೊಲೀಸರಿಂದ ಕಡತಗಳನ್ನು ಸುಪರ್ದಿಗೆ ಪಡೆದುಕೊಂಡರು.

ರಾಜ್ಯದಲ್ಲಿ ಹೆಚ್ಚು ಸುದ್ದಿಯಾಗಿದ್ದ ಪಿಎಸ್‌ಐ ನೇಮಕಾತಿ ಅಕ್ರಮದ ತನಿಖೆ ನಡೆಸಿದ್ದ ಸಿಐಡಿ ಅಧಿಕಾರಿಗಳ ತಂಡಕ್ಕೆ ಸ್ಯಾಂಟ್ರೊ ರವಿ ಪ್ರಕರಣದ ತನಿಖೆ ಹೊಣೆ ವಹಿಸಲಾಗಿದೆ. ಡಿವೈಎಸ್ಪಿ ನರಸಿಂಹಮೂರ್ತಿ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿದೆ. ಅವರ ತಂಡದಲ್ಲಿ ಇನ್‌ಸ್ಪೆಕ್ಟರ್‌ಗಳು, ಪಿಎಸ್‌ಐಗಳು ಹಾಗೂ ಸಿಬ್ಬಂದಿ ಇದ್ದಾರೆ.

'ಸ್ಯಾಂಟ್ರೊ ರವಿ ವಿರುದ್ಧ ಮೈಸೂರು ವಿಜಯನಗರ ಠಾಣೆಯಲ್ಲಿ ಜ. 2ರಂದು ಪ್ರಕರಣ ದಾಖಲಾಗಿದೆ. ತಲೆಮರೆಸಿಕೊಂಡಿದ್ದ ರವಿಯನ್ನು ಗುಜರಾತ್‌ನಲ್ಲಿ ಬಂಧಿಸಿ ಕರೆತರಲಾಗಿದೆ. ಈತನ ವಿರುದ್ಧ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮೈಸೂರು ಪೊಲೀಸರಿಂದ ಮಾಹಿತಿ ಪಡೆಯಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

4B ಪುಟ ನೋಡಿ

‘ಕೊವೊವ್ಯಾಕ್ಸ್’ ಮಾರಾಟಕ್ಕೆ ಡಿಸಿಜಿಐ ಅನುಮತಿ

ನವದೆಹಲಿ (ಪಿಟಿಐ): ಕೋವಿಶೀಲ್ಡ್ ಅಥವಾ ಕೊವ್ಯಾಕ್ಸಿನ್ ಲಸಿಕೆಗಳ 2ಡೋಸ್ ಪಡೆದ ವಯಸ್ಕರಿಗೆ ಬೂಸ್ಟರ್ ಡೋಸ್ ಆಗಿ ‘ಸೀರಂ’ ಸಂಸ್ಥೆ ತಯಾರಿಸಿರುವ ‘ಕೊವೊವ್ಯಾಕ್ಸ್’ ಅನ್ನು ಬಳಕೆ ಮಾಡಲು ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಅನುಮೋದನೆ ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ಸೋಮವಾರ ತಿಳಿಸಿವೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ (ಸಿಡಿಎಸ್‌ಸಿಒ) ವಿಷಯ ತಜ್ಞರ ಸಮಿತಿ ಶಿಫಾರಸು ಮಾಡಿದ ಬೆನ್ನಲ್ಲೇ ಡಿಸಿಜಿಐ ಅನುಮೋದನೆ ನೀಡಿದೆ. ಲಸಿಕೆಯ ಮಾರಾಟಕ್ಕೆ ಅನುಮತಿ ಕೋರಿ ‘ಸೀರಂ’ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರು ಇತ್ತೀಚೆಗೆ ಡಿಸಿಜಿಐಗೆ ಅರ್ಜಿ ಸಲ್ಲಿಸಿದ್ದರು.

ನಿಧನ

ಶ್ರೀಮತಿ ವಾಸಂತಿ ರವೀಂದ್ರನ್

ಕೋಂ. ನ್ಯಾಯಮೂರ್ತಿ ಆರ್.ವಿ.ರವೀಂದ್ರನ್

01-07-1949 - 16-01-2023

ದುಃಖತಪ್ತರು :

ನ್ಯಾಯಮೂರ್ತಿ ಆರ್.ವಿ.ರವೀಂದ್ರನ್

ಬಂಧುಬಳಗ ಮತ್ತು ಸ್ನೇಹಿತರು

ನಂ.8/2, ಕೃಷ್ಣಾ ರಸ್ತೆ, ಬಸವನಗುಡಿ, ಬೆಂಗಳೂರು 560004

‘ಪುಸ್ತಕ ಸಂಸ್ಕೃತಿ ದಿನ’ ಜ. 20ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗೋತ್ರಿ ಮಕ್ಕಳ ರಂಗಶಾಲೆ ವತಿಯಿಂದ ಪುಸ್ತಕಮನೆ ಹರಿಹರಪ್ರಿಯ ಅವರ 70ನೇ ಜನ್ಮದಿನವನ್ನು ಜ. 20ರಂದು ರವೀಂದ್ರ ಕಲಾಕ್ಷೇತ್ರದ ನಯನ ಸಭಾಂಗಣದಲ್ಲಿ ‘ಪುಸ್ತಕ ಸಂಸ್ಕೃತಿ ದಿನ’ವನ್ನಾಗಿ ಆಚರಣೆ ಮಾಡಲಾಗುತ್ತಿದೆ.



ಹರಿಹರಪ್ರಿಯ

ಕನ್ನಡ ನಾಡಿನಲ್ಲಿ ಮಾತ್ರವಲ್ಲದೇ ದೇಶ-ವಿದೇಶಗಳಲ್ಲಿ ವಿಶಿಷ್ಟವಾದ ಪುಸ್ತಕ ಸಂಗ್ರಹ, ಪುಸ್ತಕ ಪ್ರದರ್ಶನ ಹಾಗೂ ಪುಸ್ತಕದ ಕುರಿತು ಪತ್ರಿಕೆ ಹೊರಡಿಸಿದ ಪುಸ್ತಕಮನೆ ಹರಿಹರಪ್ರಿಯ ಅವರ 70ನೇ ವರ್ಷದ ಜನ್ಮದಿನದ ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಉದ್ಘಾಟನೆ ಮಾಡಲಿದ್ದು, ಎಲ್. ಹನುಮಂತಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕರಾದ ರವೀಂದ್ರ ಭಟ್ಟ ಅವರು ‘ಮೈ ಸ್ಟ್ಯಾಂಪ್’ ಗೌರವ ಸಮರ್ಪಣೆ ಮಾಡಲಿದ್ದಾರೆ. ವೈ.ಎಸ್.ವಿ. ದತ್ತ ಅವರು ಹರಿಹರಪ್ರಿಯ ಕುರಿತು ಕಿರುಚಿತ್ರ ಪ್ರದರ್ಶನವನ್ನು ಉದ್ಘಾಟನೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆನೇಕಲ್ ಯೋಜನಾ ಪ್ರಾಧಿಕಾರ

“ಅಣ್ಣ” ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/78/2022–23 ದಿನಾಂಕ: 13.01.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀಮತಿ ಚೌಡಮ್ಮ ಕೋಂ ಲೇ. ಮುನಿರೆಡ್ಡಿ, ಶ್ರೀ ಎಂ. ವಿಜಯಕುಮಾರ್, ಶ್ರೀ ಎಂ. ಪ್ರಭು, ಶ್ರೀ ಎಂ. ನಂದೀಶ್ ಬಿನ್ ಲೇ. ಮುನಿರೆಡ್ಡಿ, ಶ್ರೀ ಎನ್. ನಾರಾಯಣರೆಡ್ಡಿ ಬಿನ್ ನಂದಿ ರೆಡ್ಡಿ	ಆನೇಕಲ್	ಅತ್ತಿಬೆಲೆ	ತಿರುಮಗೊಂಡನ ಹಳ್ಳಿ	72/2	1–21.08	ಕೃಷಿ	ವಾಣಿಜ್ಯ	
2		ಆನೇಕಲ್	ಅತ್ತಿಬೆಲೆ	ತಿರುಮಗೊಂಡನ ಹಳ್ಳಿ	72/2	0–05.08	ವಸತಿ	ವಾಣಿಜ್ಯ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ಮತ್ತು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/4100/2022–23

20ರಿಂದ 10 ದಿನಗಳ ಕಾಲ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ಆಯೋಜನೆ

ಹೂವಿನಲ್ಲಿ ‘ಬೆಂಗಳೂರು ದರ್ಶನ’

ಲಾಲ್‌ಬಾಗ್‌ನ ಗಾಜಿನಮನೆಯಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಕಲಾಕೃತಿ ನಿರ್ಮಿಸುತ್ತಿರುವ ಕಾರ್ಮಿಕ

ಪ್ರಜಾವಾಣಿ ವಾರ್ತೆ

ಎನ್‌.ಮುನಿರತ್ನ

ಬೆಂಗಳೂರು: ‘ಪುಷ್ಪಕಾಶಿ’ ಲಾಲ್ ಬಾಗ್ ಗಣರಾಜ್ಯೋತ್ಸವದ ಫಲಪುಷ್ಪ ಪ್ರದರ್ಶನಕ್ಕೆ ಸಜ್ಜಾಗುತ್ತಿದೆ.

ಈ ಬಾರಿ ‘ಬೆಂಗಳೂರು ನಗರದ ಇತಿಹಾಸ’ ವಿಷಯ ಆಧರಿಸಿ ಜ.20ರಿಂದ 30ರ ತನಕ ಪ್ರದರ್ಶನ ನಡೆಯಲಿದ್ದು, ಹಳೆಯ ಹಾಗೂ ಹೊಸ ಬೆಂಗಳೂರಿನ ಪರಿಚಯವು ವೀಕ್ಷಕರಿಗೆ ಆಗಲಿದೆ.

‘ಇದು 213ನೇ ಫಲಪುಷ್ಪ ಪ್ರದರ್ಶನವಾಗಿದ್ದು, ಹಲವು ವಿಶೇಷತೆಗಳನ್ನು ಒಳಗೊಂಡಿದೆ. 10 ಲಕ್ಷದಿಂದ 12 ಲಕ್ಷ ಮಂದಿ ವೀಕ್ಷಿಸುವ ಸಾಧ್ಯತೆಯಿದೆ’ ಎಂದು ತೋಟಗಾರಿಕೆ ಸಚಿವ ಎನ್. ಮುನಿರತ್ನ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.

‘ವಿಜ್ಞಾನ- ತಂತ್ರಜ್ಞಾನ ನಗರಿ ಬೆಂಗಳೂರನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುವ ಬೃಹತ್ ಕಲಾಕೃತಿ ಗಾಜಿನಮನೆಯಲ್ಲಿ ಪ್ರದರ್ಶನಗೊಳ್ಳಲಿದೆ. ವಿಜ್ಞಾನ-ತಂತ್ರಜ್ಞಾನದ ಪರಿಕಲ್ಪನೆಗಳು, ಲಾಲ್‌ಬಾಗ್ ಬಂಡೆ, ವೃಷಭಾವತಿ ನದಿಯ ಮೂಲ, ಬೇಗೂರು ಶಾಸನದ ಪ್ರತಿಕೃತಿ, ಕೆಂಪೇಗೌಡರ ಕಾಲದ ಗೋಪುರಗಳು, ದೊಡ್ಡಬಸವಣ್ಣ ಹಾಗೂ ಮರಾಠರ ಕಾಲದ ಕಾಡು-ಮಲ್ಲೇಶ್ವರ ದೇವಾಲಯ, ಟಿಪ್ಪು ಕಾಲದ ಬೇಸಿಗೆ ಅರಮನೆ, ಬ್ರಿಟಿಷ್ ಕಮಿಷನರ್ ಆಡಳಿತಾವಧಿಯ ಹೈಕೋರ್ಟ್ ಕಟ್ಟಡ, ಮೈಸೂರು ಒಡೆಯರ್ ಆಡಳಿತದ ಅವಧಿಯ ಬೆಂಗಳೂರು ಅರಮನೆ ಹಾಗೂ ಸ್ವಾತಂತ್ರ್ಯೋತ್ತರ ಕಾಲದ ನಗರವನ್ನು ಪ್ರತಿಬಿಂಬಿಸುವಂತೆ ವಿಧಾನಸೌಧದ ಕಲಾಕೃತಿಗಳು ಬಿಂಬಿತವಾಗಲಿವೆ. ಆಂಥೋರಿಯಂ, ಲಿಲ್ಲಿ, ಜರ್‌ಬೆರಾ, ಸೇವಂತಿ, ಆರ್ಕಿಡ್ಸ್ ಸೇರಿ 30 ಸಾವಿರ ಬಗೆಯ ಹೂವುಗಳ ಜೋಡಣೆಯಿಂದ ಈ ಕಲಾಕೃತಿಗಳು ಕಂಗೊಳಿಸಲಿವೆ ಎಂದು ಮಾಹಿತಿ ನೀಡಿದರು.

ಪುಷ್ಪ ಪಿರಮಿಡ್‌ಗಳು, ಆಧುನಿಕ ಕಡಲ ಕಿನಾರೆ ಉದ್ಯಾನದ ಪರಿಕಲ್ಪನೆ, ಆಕರ್ಷಕ ಬೋನ್ಸಾಯ್ ಗಿಡಗಳ ಪ್ರದರ್ಶನ ಇರಲಿದೆ ಎಂದರು.

ವಿದೇಶಿ ಹೂವುಗಳ ಮೆರುಗು: ‘ಫಲಪುಷ್ಪ ಪ್ರದರ್ಶನಕ್ಕೆ 11 ದೇಶಗಳಿಂದ ವಿವಿಧ ತಳಿಯ ಹೂವುಗಳನ್ನು ತರಿಸಿಕೊಳ್ಳಲಾಗುತ್ತಿದೆ., ಕೊಲಂಬಿಯಾ, ಇಸ್ರೇಲ್, ನೆದರ್‌ಲೆಂಡ್ಸ್, ಬೆಲ್ಜಿಯಂ, ಕೀನ್ಯಾ, ಆಸ್ಟ್ರೇಲಿಯಾದಿಂದ ಹೂವುಗಳು ಬರಲಿದ್ದು ಪ್ರದರ್ಶನಕ್ಕೆ ಮೆರುಗು ನೀಡಲಿವೆ’ ಎಂದು ಹೇಳಿದರು.

ಉದ್ಯಾನದ ಹೂವಿನ ಕುಂಡಗಳಲ್ಲಿ ಬೆಳೆದ 65ಕ್ಕೂ ಹೆಚ್ಚು ಬಗೆಯ ಹೂವುಗಳನ್ನು ಗಾಜಿನಮನೆಯಲ್ಲಿ ಪ್ರದರ್ಶನಕ್ಕೆ ಇಡಲಾಗುವುದು. 8 ಬಗೆಯ ಸೇವಂತಿಗೆ, ಗುಲಾಬಿ, ಜರ್‌ಬೆರಾ, ಸಿಲೋಷಿಯಾ, ಕಾಸ್ಮಾಸ್, ಸೆಂಚೂರಿಯಾ ಹೂವುಗಳು ಕಣ್ಮನ ಸೆಳೆಯಲಿವೆ ಎಂದರು.

‘ಗಾಜಿನಮನೆಯ ಹೊರಭಾಗದಲ್ಲೂ ಪಕ್ಷಿಗಳ ಕಲಾಕೃತಿಗಳು, ಹೃದಯಾಕಾರದ ಹೂವಿನ ಕಮಾನುಗಳು, ಬಿಗೋನಿಯಾ ಹಾಗೂ ಸೆಲ್ಫಿ ಪಾಯಿಂಟ್, ಮುದ ನೀಡುವ ಕಾರಂಜಿಯ ಆಕರ್ಷಣೆ ಇರಲಿದೆ’ ಎಂದರು.

ಈ ಬಾರಿ ಪ್ರದರ್ಶನಕ್ಕೆ ₹ 2.50 ಕೋಟಿ ವೆಚ್ಚವಾಗಲಿದೆ. ಕಳೆದ ಪ್ರದರ್ಶನದಲ್ಲಿ ₹ 75 ಲಕ್ಷ ಲಾಭ ಬಂದಿತ್ತು ಎಂದರು.

‘ಜ.20ರಂದು ಬೆಳಿಗ್ಗೆ 10ಕ್ಕೆ ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. 21ರಂದು ಇಕೆಬಾನ ಹಾಗೂ ಪೂರಕ ಕಲೆಗಳ ಉದ್ಘಾಟನೆ, 28ರಂದು ಬಹುಮಾನ ವಿತರಣಾ ಸಮಾರಂಭ ನಡೆಯಲಿದೆ’ ಎಂದು ಅವರು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್ ಹಾಜರಿದ್ದರು.

ಲಾಲ್‌ಬಾಗ್‌ನಲ್ಲೂ ‘ನಮ್ಮ ಕ್ಲಿನಿಕ್’

‘ಉದ್ಯಾನದಲ್ಲಿ ವಾಯುವಿಹಾರ ನಡೆಸುತ್ತಿದ್ದ ಇಬ್ಬರು ದಿಢೀರ್ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಅವರಿಗೆ ಸ್ಥಳದಲ್ಲಿ ಚಿಕಿತ್ಸೆ ಲಭಿಸಿದ್ದರೆ ಬದುಕುತ್ತಿದ್ದರು. ಹೀಗಾಗಿ, ಲಾಲ್‌ಬಾಗ್‌ನಲ್ಲಿ ನಮ್ಮ ಕ್ಲಿನಿಕ್ ಆರಂಭಿಸಲಾಗುವುದು’ ಎಂದು ಸಚಿವರು ಹೇಳಿದರು.

‘ಈ ಬಾರಿ ಯಾವುದೇ ಸಂಘ–ಸಂಸ್ಥೆಯ ನೆರವಿಲ್ಲದೆ ತೋಟಗಾರಿಕೆ ಇಲಾಖೆ ಫಲಪುಷ್ಪ ಪ್ರದರ್ಶನ ನಡೆಸುತ್ತಿದೆ. ಯಾರ ಸಹಯೋಗವೂ ಬೇಕಿಲ್ಲ. ಇಲಾಖೆಯೇ ನಡೆಸಬೇಕೆಂದು ಸರ್ಕಾರ ತೀರ್ಮಾನಿಸಿದೆ’ ಎಂದು ‘ಮೈಸೂರು ಉದ್ಯಾನ ಕಲಾ ಸಂಘ’ದ ಹೆಸರು ಪ್ರಸ್ತಾಪಿಸದೆ ಹೇಳಿದರು.

‘ಖಾಸಗಿ ಕಾರ್ಯಕ್ರಮಕ್ಕೆ ಅವಕಾಶ ಇಲ್ಲ’: ‘ಲಾಲ್‌ಬಾಗ್ ಸಾರ್ವಜನಿಕರ ಆಸ್ತಿ. ಖಾಸಗಿಯವರು ಕಾರ್ಯಕ್ರಮ ನಡೆಸಲು ಅವಕಾಶ ಇಲ್ಲ. ಒಬ್ಬರಿಗೆ ಅವಕಾಶ ಕೊಟ್ಟರೆ ಮತ್ತೊಬ್ಬರು ಬರುತ್ತಾರೆ. ಅದನ್ನು ಗಮನಿಸಿಯೇ ಅನುಮತಿ ನಿರಾಕರಿಸಲಾಗಿದೆ. ಸಮಸ್ಯೆಗಳ ಕುರಿತು ವರದಿ ಮಾಡಲು ಯಾವುದೇ ಅಭ್ಯಂತರ ಇಲ್ಲ’ ಎಂದು ಹೇಳಿದರು.

ಪ್ರವೇಶ ಶುಲ್ಕ

ವಿವರ	ಸಾಮಾನ್ಯ ದಿನ	ರಜಾ ದಿನಗಳು
ವಯಸ್ಕರು	₹70	₹75
ಮಕ್ಕಳು (12 ವರ್ಷದ ಒಳಗೆ)	₹30	

ಮುನ್ನೆಚ್ಚರಿಕೆ ಕ್ರಮಗಳು

- ಲಾಲ್‌ಬಾಗ್ ಸಸ್ಯತೋಟಕ್ಕೆ ತಿಂಡಿ ತಿನಿಸು ತರುವಂತಿಲ್ಲ
- ಲಾಲ್‌ಬಾಗ್ ಒಳಗೆ ಯಾವುದೇ ಪ್ಲಾಸ್ಟಿಕ್ ಕೈಚೀಲ ತರುವುದು ಹಾಗೂ ಬಳಕೆ ನಿಷೇಧಿಸಲಾಗಿದೆ
- ಸಸ್ಯತೋಟದ ಗಿಡ ಹಾಗೂ ಹೂವು ಕೀಳುವಂತಿಲ್ಲ
- ಉದ್ಯಾನ ಒಳಗೆ ಆಟ ಆಡುವಂತಿಲ್ಲ

ವಾಹನ ನಿಲುಗಡೆಗೆ ವ್ಯವಸ್ಥೆ

- ನಾಲ್ಕು ಪ್ರವೇಶ ದ್ವಾರದಲ್ಲೂ ಮೆಟಲ್ ಡಿಟೆಕ್ಟರ್ಸ್ ಅಳವಡಿಕೆ
- ಎಲ್ಲಾ ಪ್ರವೇಶ ದ್ವಾರಗಳ ಬಳಿಯೂ ವಾಹನಗಳ ನಿಲುಗಡೆಗೆ ವ್ಯವಸ್ಥೆ
- 104 ಸಿ.ಸಿ.ಟಿವಿ ಕ್ಯಾಮೆರಾ ಅಳವಡಿಕೆ
- ಆಯ್ದ ಸ್ಥಳಗಳಲ್ಲಿ ಪ್ರತ್ಯೇಕ ಔಟ್‌ಪೋಸ್ಟ್ ತೆರೆಯಲು ನಿರ್ಧಾರ
- ಆಯ್ದ 10 ಸ್ಥಳಗಳಲ್ಲಿ ಎತ್ತರದ ವೇದಿಕೆಯಿಂದ ಪೊಲೀಸ್ ಕಣ್ಗಾವಲು
- ಮುನ್ನೆಚ್ಚರಿಕಾ ಕ್ರಮವಾಗಿ ಗಾಜಿನಮನೆಯ ಎದುರು ಅಗ್ನಿಶಾಮಕ ದಳದ ವಾಹನ ನಿಲುಗಡೆ
- 38 ಪ್ರಥಮ ಚಿಕಿತ್ಸಾ ಪೆಟ್ಟಿಗೆ ಅಳವಡಿಕೆ
- ಹಾವು, ಜೇನುಹುಳು ಹಾಗೂ ನಾಯಿಗಳ ಕಚ್ಚುವಿಕೆ ಸಂಬಂಧಿಸಿದಂತೆ ಚುಚ್ಚುಮದ್ದುಗಳ ದಾಸ್ತಾನು
- ಗಾಜಿನಮನೆ ಹಾಗೂ ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರದಲ್ಲಿ ಆಂಬುಲೆನ್ಸ್ ವ್ಯವಸ್ಥೆ
- ಬೆಳಿಗ್ಗೆ 7ರಿಂದ ಸಂಜೆ 6.30ರ ತನಕ ವೀಕ್ಷಣೆಗೆ ಅವಕಾಶ

ಪ್ರಜಾವಾಣಿ ‘ಮಾಸ್ಟರ್‌ಮೈಂಡ್’ ವಿಚಾರಸಂಕಿರಣ ಇಂದು

ಬೆಂಗಳೂರು: 'ಪ್ರಜಾವಾಣಿ' ಹಾಗೂ ‘ಡೆಕ್ಕನ್ ಹೆರಾಲ್ಡ್’ನ ‘ಮಾಸ್ಟರ್‌ಮೈಂಡ್’ ವತಿಯಿಂದ ಜ. 17ರಂದು ‘ಕ್ರಿಯಾತ್ಮಕ ಶಿಕ್ಷಣ–2022–23ನೇ ಸಾಲಿನ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿ ಅವಕಾಶಗಳು ಮತ್ತು ಸವಾಲುಗಳು’ ಎಂಬ ವಿಷಯದ ಮೇಲೆ ವಿಚಾರಸಂಕಿರಣ ನಡೆಯಲಿದೆ.

ವಿಚಾರಸಂಕಿರಣ ಬೆಳಿಗ್ಗೆ 10 ಗಂಟೆಗೆ ರಿಚ್‌ಮಂಡ್ ರಸ್ತೆಯಲ್ಲಿರುವ ವೆಲ್‌ಕಮ್ ಹೋಟೆಲ್‌ನಲ್ಲಿ ನಡೆಯಲಿದ್ದು, ಯುಜಿಸಿ ಮತ್ತು ಎನ್‌ಸಿಎಫ್‌ನ ರಾಷ್ಟ್ರೀಯ ಪರಿಶೀಲನಾ ಸಮಿತಿ ಸದಸ್ಯರಾದ ಪ್ರೊ. ಶ್ರೀಧರ್ ಎಂ.ಕೆ. ಅವರು ವಿಷಯವನ್ನು ಮಂಡಿಸಲಿದ್ದಾರೆ.

EXAM DH ಪ್ರಜಾವಾಣಿ MASTERMIND



ಜಯನಗರದಲ್ಲಿರುವ ಮಯ್ಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆಯೋಜಿಸಿದ್ದ ‘ಪುನರ್ ಸಮರ್ಪಣಾ ಸಮಾರಂಭ’ವನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ (ಎಡದಿಂದ ಮೂರನೇಯವರು) ಸೋಮವಾರ ಉದ್ಘಾಟಿಸಿದರು. (ಎಡದಿಂದ ಬಲಕ್ಕೆ) ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಉದಯ್ ಶಂಕರ್, ಶಾಸಕರಾದ ದಿನೇಶ್ ಗುಂಡೂರಾವ್, ಜಮೀರ್ ಅಹ್ಮದ್, ಆಸ್ಪತ್ರೆಯ ಅಧ್ಯಕ್ಷರಾದ ಬಿ. ಗುರಪ್ಪ ನಾಯ್ಡು, ಡಾ.ಬಿ.ಜಿ. ಮಹೇಶ್ ಇದ್ದರು

ಒಂಟಿ ಮನೆ ಯೋಜನೆ: ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಂತ ನಿವೇಶನ ಹೊಂದಿದವರು ಒಂಟಿ ಮನೆ ಯೋಜನೆಯಡಿ ₹5 ಲಕ್ಷ ಸಹಾಯಧನ ಪಡೆಯಲು ಅರ್ಜಿ ಸಲ್ಲಿಕೆ ಅವಧಿಯನ್ನು ಪಾಲಿಕೆ ವಿಸ್ತರಿಸಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು 2022ರ ನ.18 ಕೊನೆ ದಿನವಾಗಿತ್ತು. ಈ ಸಂದರ್ಭದಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದವರಿಗೆ ಮತ್ತೊಂದು ಅವಕಾಶ ನೀಡುವಂತೆ ಶಾಸಕರುಗಳು ಮತ್ತು ಸಾರ್ವಜನಿಕರಿಂದ ಬೇಡಿಕೆ ಬಂದಿರುವುದರಿಂದ ಅವಧಿಯನ್ನು ಜ.20ರವರೆಗೆ ವಿಸ್ತರಿಸಲಾಗಿದೆ ಎಂದು ಪಾಲಿಕೆ ತಿಳಿಸಿದೆ.

ಆಸ್ತಕರು ಪಾಲಿಕೆಯ ವೆಬ್‌ಸೈಟ್ https://welfare.bbmpgov.in ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು. ಬೆಂಗಳೂರು ಒನ್ ಕೇಂದ್ರದಲ್ಲೂ ₹30 ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದು. ಎಲ್ಲಾ ವಲಯ ಆಯುಕ್ತರ ಕಚೇರಿಗಳಲ್ಲೂ ಸಹಾಯ ಕೇಂದ್ರ ತೆರೆಯಲಾಗಿದ್ದು, ಅಲ್ಲಿಯೂ ಅರ್ಜಿ ಸಲ್ಲಿಸಲು ಅವಕಾಶ ಇದೆ ಎಂದು ಪಾಲಿಕೆಯ ಕಲ್ಯಾಣ ವಿಭಾಗದ ವಿಶೇಷ ಆಯುಕ್ತರು ತಿಳಿಸಿದ್ದಾರೆ.

ಪ್ರಯಾಣಿಕರಿಗೆ ಹೂಗುಚ್ಛ ನೀಡಿ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಸ್ವಾಗತಿಸಿದರು

ಬೆಂಗಳೂರು–ಮೈಸೂರು ನಡುವೆ ಎಲೆಕ್ಟ್ರಿಕ್ ಬಸ್

ಬೆಂಗಳೂರು: ಕೆಎಸ್‌ಆರ್‌ಟಿಸಿ ‘ಪವರ್ ಪ್ಲಸ್’ ಎಲೆಕ್ಟ್ರಿಕ್ ಬಸ್ ಸಂಚಾರ ಆರಂಭಿಸಿದ್ದು, ಸೋಮವಾರ ಬೆಂಗಳೂರು–ಮೈಸೂರು ನಡುವೆ ಮೊದಲ ಕಾರ್ಯಾಚರಣೆ ನಡೆಸಿತು.

ಬೆಳಿಗ್ಗೆ 6.50ಕ್ಕೆ ಕೆಂಪೇಗೌಡ ಬಸ್ ನಿಲ್ದಾಣದಿಂದ 15 ಪ್ರಯಾಣಿಕರೊಂದಗೆ ಹೊರಟಿತು. ಮೊದಲ ಟ್ರಿಪ್‌ನಲ್ಲಿ ಬಸ್ ಹತ್ತಿದ ಎಲ್ಲಾ ಪ್ರಯಾಣಿಕರಿಗೆ ಹೂಗುಚ್ಛ ನೀಡಿ ಕೆಎಸ್‌ಆರ್‌ಟಿಸಿ ಸಿಬ್ಬಂದಿ ಸ್ವಾಗತಿಸಿದರು. ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ 20 ಪ್ರಯಾಣಿಕರನ್ನು ಹತ್ತಿಸಿಕೊಂಡು 7.35ಕ್ಕೆ ಹೊರಟು ಬಸ್, 9.45ಕ್ಕೆ ಮೈಸೂರು ಬಸ್ ನಿಲ್ದಾಣಕ್ಕೆ ತಲುಪಿತು.

ಮೈಸೂರು ಬಸ್ ನಿಲ್ದಾಣದಿಂದ 12.10ಕ್ಕೆ 35 ಪ್ರಯಾಣಿಕರೊಂದಿಗೆ ಹೊರಟು, 2.20ಕ್ಕೆ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಬಂದಿತು. 2.45ಕ್ಕೆ ಕೆಂಪೇಗೌಡ ಬಸ್ ನಿಲ್ದಾಣ ತಲುಪಿತು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

‘ವಾಯುಮಾಲಿನ್ಯ, ಶಬ್ದ ಮಾಲಿನ್ಯ ಇಲ್ಲದ ಐಷಾರಾಮಿ ಬಸ್‌ನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ₹300 ದರದಲ್ಲಿ ಪ್ರಯಾಣ ಮಾಡುತ್ತಿದ್ದೇವೆ. ಈ ಬಸ್‌ನಲ್ಲಿ ಪ್ರಯಾಣ ಮಾಡುವುದು ವಿಶೇಷ ಅನುಭವ ನೀಡುತ್ತಿದೆ’ ಎಂದು ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಫೆಬ್ರುವರಿಯಲ್ಲಿ ಎಲ್ಲಾ 50 ಎಲೆಕ್ಟ್ರಿಕ್ ಬಸ್‌ಗಳು ಕೆಎಸ್‌ಆರ್‌ಟಿಸಿಗೆ ಸೇರ್ಪಡೆಯಾಗಲಿವೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ನಗರದಲ್ಲಿ ಇಂದು

ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ: ರಾಘವೇಂದ್ರ. ಎಚ್. ಔರಾದಕರ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆ.ಎಸ್.ಆರ್.ಪಿ. ಕ್ರೀಡಾಂಗಣ, ಕೋರಮಂಗಲ, ಬೆಳಿಗ್ಗೆ 9

‘ಕನ್ನಡ ಸಾಹಿತ್ಯದಲ್ಲಿ ಶಾಂತಿ ಮತ್ತು ಸಾಮರಸ್ಯದ ನೆಲೆಗಳು’ ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಕೃಷ್ಣಮೂರ್ತಿ ಹನೂರು, ಆಶಯ ನುಡಿ: ಅಗಸ್ಟಿನ್ ಜಾರ್ಜ್, ಅಧ್ಯಕ್ಷತೆ: ರಹಮತ್ ತರೀಕೆರೆ, ಸಂಪನ್ಮೂಲ ವ್ಯಕ್ತಿಗಳು: ಎಸ್. ಡಿ. ಶಶಿಕಲಾ, ಎಂ. ಲಿಂಗಪ್ಪ ಗೋನಾಲ, ಆಯೋಜನೆ ಮತ್ತು ಸ್ಥಳ: ಕ್ರಿಸ್ತು ಜಯಂತಿ ಸ್ವಾಯತ್ತ ಕಾಲೇಜಿನ 4ನೇ ಸಭಾಂಗಣ, ಮೇನ್ ಬ್ಲಾಕ್, ಕೊತ್ತನೂರು, ಬೆಳಿಗ್ಗೆ 10

ರಹಮತ್ ತರೀಕೆರೆ

ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಎಂ.ಆರ್. ದೊರೆಸ್ವಾಮಿ, ಅಧ್ಯಕ್ಷತೆ: ರಾಮಲಿಂಗಾ ರೆಡ್ಡಿ, ಅತಿಥಿಗಳು: ಆನಂದರಾಜ್ ಎ., ಮಂಜುನಾಥ್, ಬಿ.ಎನ್. ಮಂಜುನಾಥ್ ರೆಡ್ಡಿ, ಎಂ. ಚಂದ್ರಪ್ಪ, ಜಿ. ಮಂಜುನಾಥ್, ಆಯೋಜನೆ: ಪದವಿ ಪೂರ್ವ ಶಿಕ್ಷಣ ಇಲಾಖೆ, ಸ್ಥಳ: ಸರ್ಕಾರಿ ಪದವಿ ಪೂರ್ವ ಕಾಲೇಜು, ಮಡಿವಾಳ, ಹೊಸೂರು ರಸ್ತೆ, ಬೆಳಿಗ್ಗೆ 11



ಎಂ.ಆರ್. ದೊರೆಸ್ವಾಮಿ

‘ಕನ್ನಡದ ಬಣ್ಣಗಳು’ ಚಿತ್ರಗಳ ಪ್ರದರ್ಶನ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಬಿ.ಎಸ್. ಪರಮಶಿವಯ್ಯ, ಶ್ರೀನಿವಾಸ್ ರಾಜು, ಚೂಡಾಮಣಿ ನಂದಗೋಪಾಲ್, ಎಂ.ಎಸ್. ಮೂರ್ತಿ, ನಳಿನಿ ಮಾಳವಿಯಾ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಕರೋಕೆ ಗಾಯನ ಸಂಭ್ರಮ, ಹವ್ಯಾಸಿ ಗಾಯನ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಂತೋಷ್ ಹಾನಗಲ್, ವಾ.ಚ. ಚನ್ನೇಗೌಡ, ಪ್ರಶಸ್ತಿ ಪ್ರದಾನ: ಚಂದ್ರಶೇಖರ್, ಅಧ್ಯಕ್ಷತೆ: ಕುವೆಂಪು ಪ್ರಕಾಶ್, ಆಯೋಜನೆ: ಸ್ನೇಹ ಶ್ರೀರಕ್ಷಾ ಸಂಗೀತ ನೃತ್ಯ ಸಾಂಸ್ಕೃತಿಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 2

ಡೇವಿಡ್.ಎ. ಹಂಗರ್‌ಫೋರ್ಡ್ ಸ್ಮಾರಕ ಉಪನ್ಯಾಸ: ವಿಷಯ: ಬಿಯಾಂಡ್ ದಿ ಕ್ಯಾನ್ಸರ್ ಜೆನೋಮ್, ಉಪನ್ಯಾಸಕರು: ಡಾ. ಸಿದ್ಧಾರ್ಥ ಮುಖರ್ಜಿ, ಆಯೋಜನೆ: ಸೆಂಟರ್ ಫಾರ್ ಹ್ಯೂಮನ್ ಜೆನಿಟಿಕ್ಸ್ ಬೆಂಗಳೂರು, ಸ್ಥಳ: ಸಿಎಚ್‌ಜಿ ಸಭಾಂಗಣ, ಬಯೋಟೆಕ್ ಪಾರ್ಕ್, ಎಲೆಕ್ಟ್ರಾನಿಕ್ ಸಿಟಿ 1ನೇ ಹಂತ, ಸಂಜೆ 4

ಸಂಗೀತ ಕಾರ್ಯಕ್ರಮ: ಗಾಯನ: ಎಂ.ಎಸ್. ಶೀಲಾ ಮತ್ತು ತಂಡ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 6.30

ಎಂ.ಎಸ್. ಶೀಲಾ

ಸಂಕ್ರಾಂತಿ ಸುಗ್ಗಿ ನಗೆಹಬ್ಬ: ಉದ್ಘಾಟನೆ: ಕೆ.ಎಸ್. ಕೃಷ್ಣಾರೆಡ್ಡಿ, ಅಧ್ಯಕ್ಷತೆ: ಸಿ.ಎಸ್. ಷಡಾಕ್ಷರಿ, ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಆವರಣ, ಕಬ್ಬನ್ ಉದ್ಯಾನ, ಸಂಜೆ 5.30

ಎ.ಎಸ್. ಮೂರ್ತಿ ನೆನಪುಗಳು: ಅತಿಥಿಗಳು: ಬಿ.ಎಂ. ವೆಂಕಟೇಶ್, ಆಶಾ ರಘು, ಅನಂತ ಚಿನಿವಾರ್, ಹೊಸ್ಮನೆ ಮೂರ್ತಿ, ರಾಜಶ್ರೀ, ರಾಮಕೃಷ್ಣ ಬೆಳ್ತೂರು, ರವೀಂದ್ರ ಪೂಜಾರ್, ಎ.ಎಂ. ಪ್ರಕಾಶ್, ಆಯೋಜನೆ: ಕಪ್ಪಣ್ಣ–75 ಸಾಂಸ್ಕೃತಿಕ ಸಂಭ್ರಮ, ಸ್ಥಳ: ಅಭಿನಯ ತರಂಗ, 5ನೇ ಅಡ್ಡರಸ್ತೆ, ಅ.ನ. ಸುಬ್ಬರಾವ್ ರಸ್ತೆ, ಹನುಮಂತನಗರ, ಸಂಜೆ 6

ವಿದ್ಯುತ್ ಕಳ್ಳತನ; ₹2.59 ಕೋಟಿ ದಂಡ

ಬೆಂಗಳೂರು: ಬೆಸ್ಕಾಂ ಜಾಗೃತ ದಳವು ಕಳೆದ ನಾಲ್ಕು ತಿಂಗಳಲ್ಲಿ 10,908 ಸ್ಥಾವರಗಳ ತಪಾಸಣೆ ಮಾಡಿ, ವಿದ್ಯುತ್ ಕಳ್ಳತನ ಮಾಡಿದ್ದ ಗ್ರಾಹಕರಿಗೆ ₹2.59 ಕೋಟಿ ದಂಡ ವಿಧಿಸಿದೆ. ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ಒಟ್ಟು 1,781 ಪ್ರಕರಣಗಳನ್ನು ಜಾಗೃತ ದಳ ದಾಖಲಿಸಿಕೊಂಡಿದ್ದು, ಇದರಲ್ಲಿ 1,721 ಪ್ರಕರಣಗಳನ್ನು ಇತ್ಯರ್ಥಗೊಳಿಸಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಇದೇ ರೀತಿ ಬಾಕಿ ವಿದ್ಯುತ್ ಬಿಲ್ ವಸೂಲಿಗೆ ಬೆಸ್ಕಾಂ ಕ್ರಮ ಕೈಗೊಂಡಿದ್ದು, 3 ತಿಂಗಳಲ್ಲಿ ಬಾಕಿ ಇದ್ದ ₹1417.45 ಕೋಟಿ ಮೊತ್ತದಲ್ಲಿ ₹358.3 ಕೋಟಿ ಮೊತ್ತವನ್ನು ಸಂಗ್ರಹಿಸಿದೆ. ಬಿಲ್ ಪಾವತಿಸದ ಸುಮಾರು 23 ಲಕ್ಷ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Public are hereby informed that our client intends to purchase the property bearing Site No.438 (having Bruhat Bangalore Mahanagara Palike Katha No.438 and PID number 68-2-438) measuring East to West 80 feet and North to South 118.6 feet, totally measuring 9,488 sq. ft., situated at III Cross, III Block, II Phase, Koramangala Extension, Bangalore, which is morefully described in the Schedule hereto and hereinafter referred to as the "Schedule Property" from M/s.NRJN Family Trust.

Any personhaving any claim/s including any right, title, interest, charge, pending litigation or demand of any nature whatsoever in or upon the Schedule Property or any part thereof, must notify the undersigned in writing with documentary proof thereof within 7 (seven) days of this publication, failing which such claim shall be considered to have been unconditionally waived and/or given up and our client shall be entitled to complete any transaction in respect of the Schedule Property or any part thereof. Objections and/or claims received after the expiry of the period stipulated above shall not be binding on our client.

SCHEDULE
DESCRIPTION OF THE SCHEDULE PROPERTY

All that piece and parcel of vacant plot bearing Site No.438 (having Bruhat Bangalore Mahanagara Palike Katha No.438 and property identification number 68-2-438 measuring East to West 80 feet and North to South 118.6 feet, totally measuring 9,488 square feet, situated at III Cross, III Block, II Phase, Koramangala Extension, Bangalore and bounded as under:
East by: Site No.439 West by: Site No.437 North by: Road South by: Site No.413
Date: 17.1.2023
Place: Bangalore

Arjun Perikal,
Advocate,
Shardul Amarchand Mangaldas,
2nd Floor, Prestige Sterling Square,
State Bank of India Road,
Bangalore – 560001.

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

COMPUTERS

Hardware

USED COMPUTERS FOR SALE
Dual Core/ 2GB Ram/ 250GB HDD/ 17"LCD Rs.6,000/-
For Qty of 10 No's. Rs.5,000/- per system
For Quantity of 10 No's without Monitor Rs.3,000/- per system
Courier Charges: Rs.1,000/- per system
COMPUTER HOUSE
L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.
09886038331 / 080- 42076287

JOB OPPORTUNITIES

Manager

WANTED MARKETING MANAGERS
To promote our JEE & NEET Publications in PU Colleges
send resume to our Hyderabad Office
gsnpublishers@gmail.com

Marketing & Sales

WANTED MARKETING Male/ Female Executive Excellent Career Email: rajandroy@gmail.com Call: 9845698799/ 9008702225

PERSONAL

Change of Name

CHANGE OF NAME
I, VIKRANTH @ PREM KUMAR VICKY, residing at No. 28, 1st floor, 2nd main, KC Layout, Lingarajapuram, St. Thomas Town Post, Bangalore- 560084, declare that both the names pertain to me and henceforth I shall be known as VIKRANTH, vide affidavit dated 16.01.2023 before Notary C. Santhosh, Bangalore.

DEIVANI, MOTHER/O 14865096Y, SEP/MT, CHINNASAMY S, Vill- Pannandur, Pochampalli, Krishnagiri, Tamil Nadu changed name DEIVANI to DEIVANAI SHAKTHIVEL, 14/01/2023, Notary K.V. Mani, Bangalore

I, HEMA SHRIHARI ITAGI R/a No. 7, Ramapriya 2nd main, Hosakerehalli, BSK 3rd Stage, Bangalore 560085 Have Changed my Name to HEMA ITAGI Vide Affidavit Dated 16/01/2023 before Notary Mamatha N.K Bangalore

I, SHAIK ABDUL KHADAR HAY, Residing at #34, Thigalarapalya, Peenya 2nd stage, Bangalore-58 have changed my name as SHAIK ABDUL KHADAR, Vide affidavit dated 14/01/2023 before Notary V.Anjanappa, Bangalore

I, WASIRA D/o Abdul Jabbar R/o #National Colony Mavalli 1 Murdeshwar Bhatkal Uttar Kannada Karnataka 581350. Have Changed My Name to WASIRA MOHAMMED ATOOF for all future purposes.

I,SANJAY MANOHAR NARANG AND SANJAY MANOHARLAL NARANG`Both Names- belong to one and the same person, i.e.myself`only Henceforth,I`am Known as`SANJAY MANOHAR NARANG` only.Vide Affidavit Dated:10-1-2023 Before`Notary M.Venkataraman, Bengaluru

SAKTHI, FATHER/O 14865096Y, SEP/MT, CHINNASAMY S, Vill- Pannandur, Pochampalli, Krishnagiri, Tamil Nadu changed name SAKTHI to SAKTHIVEL C, 14/01/2023, Notary K.V. Mani, Bangalore

I, DAYANANDHA S/o Basavaiah R/o Balenahalli, Mattikere Post, Madabal Hobli, Magadi Tq, Ramanagara, KA- 562120 have changed my name to Dayanandha B for all purposes.

Lost

I, NAUSHEEN Sirajuddin, have lost my B.Com Convocation Certification with Registration No. 06BC22A, issued by Jyoti Nivas College, Bangalore University passed out in the year April 2009, while in transit. Finders please Contact: +91 8884185980 (Mr. Siraj).

DH DECCAN HERALD | ಪ್ರಜಾವಾಣಿ
JOB CORNER
For More Details Contact:
9731810277 | 9901641752
9845114560 | 9886213331
080- 45557163 | 164
BOOK DOUBLE COLUMN JOB ADS ON WEEKDAY + SUNDAY
Rs. 750/-* pscm
conditions apply*

ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘ ಉದ್ಘಾಟನೆ • ನಿರ್ದೇಶಕ ಗಿರೀಶ ಕಾಸರವಳ್ಳಿ ಅಭಿಮತ

‘ಕನ್ನಡ ಸಿನಿಮಾ ಇತಿಹಾಸ ಮುನ್ನೆಲೆಗೆ ಬರಲಿ’

ಪ್ರಜಾವಾಣಿ ವಾರ್ತೆ

ಸಂಘದ ಲಾಂಛನ ಬಿಡುಗಡೆಗೊಳಿಸಿದ ಪತ್ರಕರ್ತೆ ವಿಜಯಾ. ನಿರ್ದೇಶಕರ ಸಂಘದ ಅಧ್ಯಕ್ಷ ನಾಗೇಂದ್ರ ಅರಸ್, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್, ನಿರ್ದೇಶಕ ಗಿರೀಶ ಕಾಸರವಳ್ಳಿ, ಸಂಘದ ಅಧ್ಯಕ್ಷ ಬಿ.ಎನ್.ಸುಬ್ರಹ್ಮಣ್ಯ, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ಅಖಿಲ ಭಾರತ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ ಮಲ್ಲಿಕಾರ್ಜುನಯ್ಯ, ಪತ್ರಕರ್ತ–ಪ್ರಕಾಶಕ ಜಿ.ಎನ್ ಮೋಹನ್ ಇದ್ದಾರೆ

ಬೆಂಗಳೂರು: ಕನ್ನಡ ಚಲನಚಿತ್ರಗಳ ಇತಿಹಾಸ ಮತ್ತು ಪರಂಪರೆಯನ್ನು ಮತ್ತೆ ಮತ್ತೆ ಮುನ್ನೆಲೆಗೆ ತರುವ ಕೆಲಸ ಆಗಬೇಕಿದೆ ಎಂದು ನಿರ್ದೇಶಕ ಗಿರೀಶ ಕಾಸರವಳ್ಳಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘ಅಡೂರು ಗೋಪಾಲಕೃಷ್ಣ ಅವರ ರಾಷ್ಟ್ರಪ್ರಶಸ್ತಿ ವಿಜೇತ ‘ಸ್ವಯಂವರ’ ಸಿನಿಮಾ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕೇರಳ ಸರ್ಕಾರ ‘ಸ್ವಯಂವರ-50’ ಎಂಬ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಕನ್ನಡದಲ್ಲಿ ಈ ರೀತಿಯ ದಾಖಲೆ ಬರೆದ, ಪ್ರಶಸ್ತಿ ಪಡೆದ ಹಲವು ಸಿನಿಮಾಗಳು 50 ವರ್ಷ, 75 ವರ್ಷ ಪೂರೈಸಿವೆ. ಆದರೆ ಈ ರೀತಿ ಕಾರ್ಯಕ್ರಮ ಇಲ್ಲಿ ನಡೆದಿಲ್ಲ. ಮೂರು ವರ್ಷಗಳ ಹಿಂದೆ ‘ಸಂಸ್ಕಾರ’ ಬಿಡುಗಡೆಯಾಗಿ 50 ವರ್ಷ ಪೂರೈಸಿತ್ತು. ಒಂದು ಜನಾಂಗದ ಕಣ್ಣು ತೆರೆಸಿದ ಸಿನಿಮಾ ಅದು. ಇಂತಹ ಸಿನಿಮಾಗಳನ್ನು ಮತ್ತೆ ಮತ್ತೆ ಮಂಥನ ಮಾಡದೆ, ರೌಡಿ ಸಿನಿಮಾಗಳ ಯಶಸ್ಸನ್ನು ಮಾತ್ರ ಬಿಂಬಿಸುವ ಮೂಲಕ ರಾಜ್ಯದ ಹೊರಗಡೆ ಕನ್ನಡ ಸಿನಿಮಾದ ಬಗ್ಗೆ ತಪ್ಪು ಅಭಿಪ್ರಾಯವನ್ನು ನಾವೇ ಸೃಷ್ಟಿಸಿದ್ದೇವೆ’ ಎಂದರು.

‘ಕನ್ನಡ ಸಿನಿಮಾದ ಇತಿಹಾಸವನ್ನು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನ ಮಾಡುವ ಕೆಲಸ ರಾಷ್ಟ್ರೀಯ ಮಟ್ಟದಲ್ಲಿ ಆಗಬೇಕು. ಕೋಲ್ಕತ್ತದಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ತಮಿಳಿನವರೊಬ್ಬರು ತಮ್ಮ ಚಿತ್ರರಂಗದ ಪ್ರತಿ ಸಂಸ್ಕೃತಿ ಸೃಷ್ಟಿಯ ಮರುಕಥನಗಳನ್ನು ಎಂಜಿಆರ್, ಶಿವಾಜಿ ಗಣೇಶನ್, ಕಮಲ ಹಾಸನ್ ಹಾಗೂ ರಜನೀಕಾಂತ್ ಅವರ ಉದಾಹರಣೆಗಳಿಂದ ಚಪ್ಪಾಳೆ ಗಿಟ್ಟಿಸುವಂತೆ ಕಟ್ಟಿಕೊಟ್ಟರು. ಕನ್ನಡದ ಒಳ್ಳೆಯ ಸಿನಿಮಾಗಳನ್ನು ಕೂಡ ನಾವು ಸರಿಯಾಗಿ ಬಿಂಬಿಸುತ್ತಿಲ್ಲ. ‘ಕಾಂತಾರ’ ತನ್ನ ಶಕ್ತಿಯಿಂದ ಬಿಂಬಿತವಾಗಿದೆ. ಕಳೆದ ಐದು ವರ್ಷಗಳಲ್ಲಿ ಕನ್ನಡದ ಕೆಲವು ಸಿನಿಮಾಗಳು ಜಗತ್ತಿನಾದ್ಯಂತ ಮಿಂಚಿವೆ. ‘ಬಳೆ ಕೆಂಪ’, ‘ಪಿಂಕಿ ಎಲ್ಲಿ’, ‘ನಾನು ಕುಸುಮ’, ‘ಪೆದ್ರೊ’ ಹೀಗೆ ಪಟ್ಟಿ ಬೆಳೆಯುತ್ತದೆ. ನಮ್ಮ ಅಸ್ಮಿತೆ, ಕನ್ನಡ ಸಿನಿಮಾದ ಹೆಗ್ಗಳಿಕೆಯನ್ನು ತೋರಿಸುವ ಕೆಲಸ ಮಾಡಬೇಕು’ ಎಂದರು.

‘ಸಿನಿಮಾ ಶೂನ್ಯದಲ್ಲಿ ಸೃಷ್ಟಿಯಾಗುವುದಿಲ್ಲ. ಸಾಮಾಜಿಕ, ರಾಜಕೀಯ ಅಥವಾ ಧಾರ್ಮಿಕ ಸನ್ನಿವೇಶ ಅದರ ಸೃಷ್ಟಿಗೆ ಕಾರಣವಾಗಿರುತ್ತದೆ. ಅದರ ಪರಿವೇಷ ಇಟ್ಟುಕೊಳ್ಳದೇ ಸಿನಿಮಾವನ್ನು ವ್ಯಾಖ್ಯಾನಿಸಿದರೆ ಅದು ಸಿನಿಮಾದ ಒಂದು ಆಯಾಮದ ವಿಮರ್ಶೆಯಷ್ಟೆ. ಸಿನಿಮಾ ಪತ್ರಕರ್ತರು ಒಂದು ಸಿನಿಮಾವನ್ನು ಈ ಆಯಾಮಗಳಲ್ಲಿ ನೋಡಬೇಕು’ ಎಂದು ಅಭಿಪ್ರಾಯಪಟ್ಟರು.

ಪತ್ರಕರ್ತೆ ವಿಜಯಾ ಸಂಘದ ಲಾಂಛನ ಬಿಡುಗಡೆಗೊಳಿಸಿ, ಹಿಂದಿನ ಸಿನಿಮಾ ಪತ್ರಕರ್ತರ ಪರಿಶ್ರಮ ಕಾರ್ಯವೈಖರಿಯನ್ನು ನೆನಪಿಸಿಕೊಂಡರು. ಸಂಘದ ಅಧ್ಯಕ್ಷ ಬಿ.ಎನ್.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

ಅಕ್ರಮ ಸಂಬಂಧ ಮುಂದುವರಿಸದಿದ್ದಕ್ಕೆ ಇರಿತ

ಬೆಂಗಳೂರು: ಅಕ್ರಮ ಸಂಬಂಧ ಮುಂದುವರಿಸಲಿಲ್ಲವೆಂಬ ಕಾರಣಕ್ಕೆ ಮಹಿಳೆಯೊಬ್ಬರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಲಾಗಿದ್ದು, ಆರೋಪಿ ಶೇಖ್ ಮೆಹಬೂಬ್ (32) ಎಂಬುವವರನ್ನು ಆರ್.ಟಿ. ನಗರ ಪೊಲೀಸರು ಬಂಧಿಸಿದ್ದಾರೆ.

‘ಮಠದಹಳ್ಳಿ ಬಳಿ ಭಾನುವಾರ ತಡರಾತ್ರಿ ನಡೆದಿರುವ ಘಟನೆಯಲ್ಲಿ 30 ವರ್ಷದ ಮಹಿಳೆ ತೀವ್ರವಾಗಿ ಗಾಯಗೊಂಡಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಹಿಳೆ ಹೇಳಿಕೆ ಹಾಗೂ ಸಹೋದರನ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಶೇಖ್ ಮೆಹಬೂಬ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸ್ಥಳೀಯ ನಿವಾಸಿಯಾದ ಮಹಿಳೆಯ ಪತಿ 6 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಆಟೊ ಚಾಲಕನಾದ ಶೇಖ್ ಮೆಹಬೂಬ್, ಮಹಿಳೆಯನ್ನು ಪರಿಚಯ ಮಾಡಿಕೊಂಡು ಸ್ನೇಹ ಬೆಳೆಸಿದ್ದ. ಇಬ್ಬರ ನಡುವೆ ಅಕ್ರಮ ಸಂಬಂಧವೂ ಬೆಳೆದಿತ್ತು’ ಎಂದರು.

‘ತನಗೆ ಮದುವೆಯಾಗಿಲ್ಲವೆಂದು ಆರೋಪಿ ಹೇಳಿಕೊಂಡಿದ್ದ. ಆದರೆ, ಆತನಿಗೆ ಮದುವೆಯಾಗಿ ಮಕ್ಕಳಿದ್ದರು. ಇತ್ತೀಚೆಗೆ ಈ ಸಂಗತಿ ಮಹಿಳೆಗೆ ಗೊತ್ತಾಗಿತ್ತು. ಹೀಗಾಗಿ, ಅವರು ಆರೋಪಿಯಿಂದ ದೂರವಿರಲು ಯತ್ನಿಸಿದ್ದರು’ ಎಂದು ಹೇಳಿದರು.

ಶುಶ್ರೂಷಕಿ ಸೋಗು: ಆಭರಣ ಕಳ್ಳತನ

ಬೆಂಗಳೂರು: ಸೆಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿ ಶುಶ್ರೂಷಕಿ ಸೋಗಿನಲ್ಲಿ ರೋಗಿಯೊಬ್ಬರ ಚಿನ್ನಾಭರಣ ಕಳ್ಳತನ ಮಾಡಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಜ. 14ರಂದು ನಡೆದಿರುವ ಕಳ್ಳತನ ಸಂಬಂಧ ರೋಗಿಯ ಸಂಬಂಧಿಕರು ದೂರು ನೀಡಿದ್ದಾರೆ. ಅಸಲಿ ಚಿನ್ನಾಭರಣ ಕದ್ದಿರುವ ಆರೋಪಿ, ಅದೇ ಜಾಗದಲ್ಲಿ ನಕಲಿ ಚಿನ್ನಾಭರಣ ಇಟ್ಟು ಪರಾರಿಯಾಗಿದ್ದಾರೆ. ಅಪರಿಚಿತ ಮಹಿಳೆ ಹಾಗೂ ಸೂಕ್ತ ಭದ್ರತೆ ಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿರುವ ಆಸ್ಪತ್ರೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಮೂಲಗಳು ಹೇಳಿವೆ.

ಸಿಗರೇಟ್ ವಿಚಾರ: ಹಲ್ಲೆ

ಬೆಂಗಳೂರು: ಸಿಗರೇಟ್ ವಿಚಾರವಾಗಿ ಬೇಕರಿ ಮಾಲೀಕ ಮಂಜುನಾಥ್ ಶೆಟ್ಟಿ ಎಂಬುವರ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ನಾಲ್ವರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಜೆ.ಪಿ. ನಗರದ 24ನೇ ಮುಖ್ಯರಸ್ತೆಯಲ್ಲಿ ಸೋಮವಾರ ಈ ಘಟನೆ ನಡೆದಿದೆ. ಗಾಯಗೊಂಡಿರುವ ಮಂಜುನಾಥ್ ಶೆಟ್ಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಮಂಜುನಾಥ್ ಶೆಟ್ಟಿ ಅವರು ‘ಶ್ರೀ ಮಂಜುನಾಥೇಶ್ವರ ಕಾಂಡಿಮೆಂಟ್ಸ್’ ಬೇಕರಿ ನಡೆಸುತ್ತಿದ್ದರು. ಬೇಕರಿಗೆ ಬಂದಿದ್ದ ಆರೋಪಿಗಳು, ನೇರವಾಗಿ ಸಿಗರೇಟ್ ಪ್ಯಾಕೆಟ್‌ಗಳಿಗೆ ಕೈ ಹಾಕಿ ತೆಗೆದುಕೊಳ್ಳಲು ಮುಂದಾಗಿದ್ದರು. ಇದನ್ನು ಪ್ರಶ್ನಿಸಿದ ಮಂಜುನಾಥ್ ಜೊತೆ ಜಗಳ ತೆಗೆದಿದ್ದರು. ‘ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಮಾಹಿತಿ ಬರುತ್ತಿದ್ದಂತೆ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಕೆಲ ಪುರಾವೆಗಳನ್ನು ಆಧರಿಸಿ ನಾಲ್ವರನ್ನು ವಶಕ್ಕೆ ಪಡೆದಿದ್ದು, ಅವರ ಹಿನ್ನೆಲೆ ಏನು ಎಂಬುದರ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದೇವೆ’ ಎಂದರು.

ಮತ್ತೆ ತೆಕ್ಕೆಗೆ ಪಡೆಯಲು ಜೆಡಿಎಸ್ ತಂತ್ರ

ಪ್ರಜಾ ಮತ — ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

• ಆದಿತ್ಯ ಕೆ.ಎ.

ಬೆಂಗಳೂರು: ನಿರಂತರವಾಗಿ ಚಾಮರಾಜಪೇಟೆ ಕ್ಷೇತ್ರದಿಂದ ಗೆದ್ದು ಕ್ಷೇತ್ರದ ಮೇಲೆ ಹಿಡಿತ ಸಾಧಿಸಿರುವ ಶಾಸಕ ಜಮೀರ್ ಅಹಮದ್ ಖಾನ್ ಅವರನ್ನು ಹಣಿಯಲು ಜೆಡಿಎಸ್ ಹಾಗೂ ಬಿಜೆಪಿ ಚುನಾವಣೆ ಘೋಷಣೆಗೂ ಮೊದಲೇ ತಂತ್ರ ರೂಪಿಸುತ್ತಿವೆ.

ಅಲ್ಪಸಂಖ್ಯಾತ ಸಮುದಾಯದ ಮತದಾರರೇ ನಿರ್ಣಾಯಕವಾಗಿರುವ ಕ್ಷೇತ್ರವು ಜೆಡಿಎಸ್ ಹಿಡಿತದಿಂದ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ತೆಕ್ಕೆಗೆ ಜಾರಿತು. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ್ದರೂ ಜಮೀರ್ ಪ್ರಭಾವ ಕ್ಷೇತ್ರದಲ್ಲಿ ಕುಂದಿಲ್ಲ.

ಕ್ಷೇತ್ರ ಸ್ಥಿತಿ–ಗತಿ

ಜಮೀರ್, ಜೆಡಿಎಸ್‌ನಲ್ಲಿದ್ದಾಗ ಎಚ್.ಡಿ. ಕುಮಾರಸ್ವಾಮಿ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿದ್ದರು. ಈಗ ಇಬ್ಬರೂ ಬಹಿರಂಗವಾಗಿಯೇ ವಾಕ್ಸಮರ ಮಾಡುತ್ತಿದ್ದಾರೆ. 2008, 2013ರ ಚುನಾವಣೆಯಲ್ಲಿ ಜಮೀರ್ ಅಹಮದ್ ಜೆಡಿಎಸ್‌ನಿಂದ ಸ್ಪರ್ಧಿಸಿ ಜಯಿಸಿದ್ದರು. 2018ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು. ಜಮೀರ್‌ಗೆ ಮತ್ತೆ ಕಾಂಗ್ರೆಸ್ ಟಿಕೆಟ್ ಲಭಿಸುವುದು ಖಚಿತ. ಅವರ ವಿರುದ್ಧ ಜೆಡಿಎಸ್, ಬಿಜೆಪಿಯ ಹುರಿಯಾಳುಗಳು ಯಾರು ಎಂಬ ಕುತೂಹಲ ಮೂಡಿದೆ.

ಮಧ್ಯಮ ವರ್ಗದ ಜನರೇ ನೆಲೆಸಿರುವ ಕ್ಷೇತ್ರದಲ್ಲಿ ಸಂಚಾರ, ತ್ಯಾಜ್ಯ ವಿಲೇವಾರಿ, ರಸ್ತೆ ವಿಸ್ತರಣೆಯಂತಹ ಸಮಸ್ಯೆಗಳು ಉಳಿದಿವೆ. ಕಿರಿದಾದ ರಸ್ತೆಗಳಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದೆ ಎಂಬುದು ಸ್ಥಳೀಯರ ಅಳಲು. ಮುಂದಿನ ಚುನಾವಣೆಯಲ್ಲಿ ಜಾತಿಯೋ, ಅಭಿವೃದ್ಧಿ ಕೆಲಸಗಳು ಮುಖ್ಯವಾಗುವುದೋ ಎನ್ನುವ ಕುರಿತು ಚರ್ಚೆಗಳು ನಡೆಯುತ್ತಿವೆ.

ಜಮೀರ್ ಹಿಡಿತದಿಂದ ಕ್ಷೇತ್ರವನ್ನು ಮತ್ತೆ ತೆಕ್ಕೆಗೆ ಪಡೆಯಲು ಜೆಡಿಎಸ್ ಕ್ಷೇತ್ರದ ಹಲವು ಮುಖಂಡರನ್ನು ಪಕ್ಷಕ್ಕೆ ಸೆಳೆಯುತ್ತಿದೆ. ಬಿಬಿಎಂಪಿಯ ಮಾಜಿ ಸದಸ್ಯೆ ಗೌರಮ್ಮ ಅವರ ಪತಿ, ಕಾಂಗ್ರೆಸ್ ಮುಖಂಡ ಗೋವಿಂದರಾಜು ಹಾಗೂ ಅವರ ಬೆಂಬಲಿಗರನ್ನು ಜೆಡಿಎಸ್ ಸೆಳೆಯುವ ಮೂಲಕ ಕ್ಷೇತ್ರದಲ್ಲಿ ಸಂಚಲನ ಸೃಷ್ಟಿಸಿದೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಹಾಗೂ ಸಿ.ಎಂ. ಇಬ್ರಾಹಿಂ ಅವರ ಸಮ್ಮುಖದಲ್ಲೇ ಗೋವಿಂದರಾಜು, ಜೆಡಿಎಸ್ ಸೇರಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಜಮೀರ್ ಪರ ಗೋವಿಂದರಾಜು ಕೆಲಸ ಮಾಡಿದ್ದರು. ಪಕ್ಷ ಬಿಟ್ಟಿರುವುದು ‘ಕೈ’ ಪಡೆಗೆ ಆತಂಕ ತಂದೊಡ್ಡಿದೆ.

‘ಕ್ಷೇತ್ರದಲ್ಲಿ ನಿರೀಕ್ಷಿತ ಕೆಲಸಗಳು ಆಗಿಲ್ಲ. ಆ ಕಾರಣಕ್ಕಾಗಿಯೇ ಕಾಂಗ್ರೆಸ್ ಬಿಟ್ಟಿರುವೆ’ ಎಂದು ಆಪ್ತರ ಬಳಿ ಗೋವಿಂದರಾಜು ಹೇಳಿಕೊಂಡಿದ್ದಾರೆ. ಈ ನಡುವೆ ಪಾಲಿಕೆ ಮಾಜಿ ಸದಸ್ಯ ಇಮ್ರಾನ್ ಪಾಷಾ ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದಾರೆ.

‘ಲಹರಿ ರೆಕಾರ್ಡಿಂಗ್ ಸಂಸ್ಥೆ’ಯ ಲಹರಿ ವೇಲು ಬಿಜೆಪಿ ಟಿಕೆಟ್ ಮೇಲೆ ಕಣ್ಣಿಟ್ಟಿದ್ದಾರೆ. ಈದ್ಗಾ ಮೈದಾನದ ಹೋರಾಟದಲ್ಲೂ ಸ್ಥಳೀಯರೊಂದಿಗೆ ವೇಲು ಕಾಣಿಸಿಕೊಂಡಿದ್ದು, ರಾಜಕೀಯಕ್ಕೆ ಬರುವ ಭೂಮಿಕೆ ಸಿದ್ಧತೆ ಮಾಡಿಕೊಂಡಿದ್ದಾರೆ. ಈದ್ಗಾ ಮೈದಾನದ ಹೋರಾಟ ಚುನಾವಣೆ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ. ಚಾಮರಾಜಪೇಟೆ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ, ಅಂಬೇಡ್ಕರ್ ಸೇನೆಯ ಅಧ್ಯಕ್ಷ ಸುನಿಲ್‌ಬಾಬು ಸಹ ಟಿಕೆಟ್ ಆಕಾಂಕ್ಷಿ.

ಇದೇ ಕ್ಷೇತ್ರದಲ್ಲಿ ನಡೆದಿದ್ದ ರಕ್ತದಾನ ಶಿಬಿರಕ್ಕೆ ಬಿಜೆಪಿ ಶಾಸಕರು ಹಾಗೂ ಸಂಸದರನ್ನು ಕರೆಸಿ ‘ಸೈಲೆಂಟ್’ ಸುನಿಲ್ ಕುಮಾರ್ ಸಂಚಲನ ಸೃಷ್ಟಿಸಿದ್ದರು. ‘ಸೈಲೆಂಟ್ ಸುನಿಲ್’ ಸಹ ಟಿಕೆಟ್‌ಗೆ ಪ್ರಯತ್ನಿಸಿ ಈ ಶಿಬಿರ ಆಯೋಜಿಸಿದ್ದರು ಎನ್ನಲಾಗಿದೆ. ಆಮ್ ಆದ್ಮಿ ಪಕ್ಷದಿಂದ (ಎಎಪಿ) ಜಗದೀಶ್ ಚಂದ್ರ ಸ್ಪರ್ಧಿಸುವ ಸಾಧ್ಯತೆಯಿದೆ.

ಚಾಮರಾಜಪೇಟೆ



ಜಮೀರ್ ಅಹಮದ್ ಖಾನ್

ಹಾಲಿ ಮತದಾರರ ವಿವರ

1,13,340 ಪುರುಷರು | 1,06,963 ಮಹಿಳೆಯರು | 34 ತೃತೀಯ ಲಿಂಗಿಗಳು

2,20,337 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	65,339	26,177	15,229
ಬಿಜೆಪಿ	32,202	17,720	23,414
ಜೆಡಿಎಸ್	19,393	56,339	43,004

ತಡರಾತ್ರಿ ಅಡ್ಡಗಟ್ಟಿ ಗಾಂಜಾ ಪ್ರಕರಣ ದಾಖಲಿಸುವ ಬೆದರಿಕೆ

ಸುಲಿಗೆ: ಕಾನ್‌ಸ್ಟೆಬಲ್‌ಗಳು ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಕಂಪನಿ ಉದ್ಯೋಗಿ ವೈಭವ್ ಪಟೇಲ್ ಅವರನ್ನು ಅಡ್ಡಗಟ್ಟಿ ಗಾಂಜಾ ಸೇವನೆ ಪ್ರಕರಣ ದಾಖಲಿಸುವ ಬೆದರಿಕೆಯೊಡ್ಡಿ ₹ 2,500 ಸುಲಿಗೆ ಮಾಡಿದ್ದ ಆರೋಪದಡಿ ಕಾನ್‌ಸ್ಟೆಬಲ್‌ಗಳಾದ ಮಲ್ಲೇಶ್ ಹಾಗೂ ತೀರ್ಥ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಜ. 11ರಂದು ತಡರಾತ್ರಿ ನಡೆದಿದ್ದ ಘಟನೆ ಸಂಬಂಧ ವೈಭವ್ ಪಟೇಲ್ ಅವರು ಟ್ವೀಟ್ ಮೂಲಕ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ದೂರು ನೀಡಿದ್ದರು. ಬಳಿಕ ವೈಭವ್ ಅವರನ್ನು ಸಂಪರ್ಕಿಸಿದ್ದ ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ, ಲಿಖಿತ ದೂರು ಪಡೆದು ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಸಿದ್ದರು.

ಪ್ರಾಥಮಿಕ ವರದಿ ಆಧರಿಸಿ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಿ ಸಿ.ಕೆ. ಬಾಬಾ ಆದೇಶ ಹೊರಡಿಸಿದ್ದಾರೆ.

ದೂರಿನ ವಿವರ: ‘ಜ. 11ರಂದು ತಡರಾತ್ರಿ ಕೆಲಸ ಮುಗಿಸಿ ರ್‍ಯಾಪಿಡೊ ಬೈಕ್‌ನಲ್ಲಿ ಮನೆಯತ್ತ ಹೊರಟಿದ್ದೆ. ಎಚ್‌ಎಸ್‌ಆರ್ ಲೇಔಟ್‌ನ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಗಸ್ತಿನಲ್ಲಿದ್ದ ಬಂಡೇಪಾಳ್ಯ ಠಾಣೆಯ ಮಲ್ಲೇಶ್ ಹಾಗೂ ತೀರ್ಥ, ಬೈಕ್ ಅಡ್ಡಗಟ್ಟಿದ್ದರು. ಎಲ್ಲಿಗೆ ಹೊರಟಿದ್ದೀರಾ ಎಂದು ಪ್ರಶ್ನಿಸಿ ಬ್ಯಾಗ್ ಪರಿಶೀಲಿಸಿದ್ದರು. ಇದೇ ವೇಳೆ ಗಮನಕ್ಕೆ ಬಾರದಂತೆ ಬ್ಯಾಗ್‌ನಲ್ಲಿ ಯಾವುದೋ ಸೊಪ್ಪು ಇರಿಸಿದ್ದರು’ ಎಂದು ವೈಭವ್ ಅವರು ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

‘ಬ್ಯಾಗ್‌ನಿಂದ ಸೊಪ್ಪು ಹೊರಗೆ ತೆಗೆದಂತೆ ನಟಿಸಿದ್ದ ಪೊಲೀಸರು, ಗಾಂಜಾ ಸೇವನೆ ಮಾಡುತ್ತೀಯಾ? ಎಂದು ಬೆದರಿಸಿದ್ದರು. ಗಾಂಜಾ ಸೇವಿಸುವುದಿಲ್ಲ ಎಂದು ಬೇಡಿಕೊಂಡಿದ್ದೆ. ರ್‍ಯಾಪಿಡೊ ಬೈಕ್ ಸವಾರನಿಗೆ ನನ್ನಿಂದ ₹100 ಕೊಡಿಸಿ ಆತನನ್ನು ಸ್ಥಳದಿಂದ ಕಳುಹಿಸಿದ್ದರು. ನನ್ನನ್ನು ಹಿಡಿದುಕೊಂಡಿದ್ದ ಪೊಲೀಸರು, ‘ನಿನ್ನನ್ನು ಪೊಲೀಸ್ ಠಾಣೆಗೆ ಕರೆದೊಯ್ದು ಜೈಲಿಗೆ ಹಾಕಿದರೆ, ನಮಗೆ ತಲಾ ₹ 15 ಸಾವಿರ ಬಹುಮಾನ ಬರಲಿದೆ’ ಎಂದಿದ್ದರು. ನಾನು ಗಾಂಜಾ ಸೇವಿಸಿಲ್ಲವೆಂದರೂ ತಪ್ಪೊಪ್ಪಿಕೊಳ್ಳುವಂತೆ ಪೀಡಿಸಿದರು.’

‘ಸುಲಿಗೆ ಮಾಡುವುದೇ ಪೊಲೀಸರ ಉದ್ದೇಶವಾಗಿತ್ತು. ಹೀಗಾಗಿಯೇ ಅವರು ಪ್ರಕರಣ ದಾಖಲಿಸುವ ಬೆದರಿಕೆಯೊಡುತ್ತಿದ್ದರು. ನನ್ನನ್ನು ಬಿಡಲು ಏನು ಮಾಡಬೇಕೆಂದು ಕೇಳಿದ್ದೆ. ಆಗ ಅವರು, ಜೇಬಿನಲ್ಲಿದ್ದ ಪರ್ಸ್ ತೆಗೆದುಕೊಂಡು ₹ 2,500 ಕಿತ್ತುಕೊಂಡರು. ಎಟಿಎಂ ಘಟಕಕ್ಕೆ ಹೋಗಿ ಪುನಃ ₹ 4 ಸಾವಿರ ತರುವಂತೆ ಹೇಳಿದರು. ಖಾತೆಯಲ್ಲಿ ಹಣವಿಲ್ಲವೆಂದು ಹೇಳಿ ಗೋಗರೆದ ಬಳಿಕವೇ ನನ್ನನ್ನು ಬಿಟ್ಟು ಕಳುಹಿಸಿದರು’ ಎಂದೂ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

‘ಬಾಡಿವೋರ್ನ್ ಕ್ಯಾಮೆರಾ ಧರಿಸದ ಸಿಬ್ಬಂದಿ’: ‘ರಾತ್ರಿ ಗಸ್ತು ಸಿಬ್ಬಂದಿ ಕಡ್ಡಾಯವಾಗಿ ಬಾಡಿವೋರ್ನ್ ಕ್ಯಾಮೆರಾ ಧರಿಸುವಂತೆ ಡಿಸಿಪಿ ಸೂಚನೆ ನೀಡಿದ್ದರು. ಆದರೆ, ಕಾನ್‌ಸ್ಟೆಬಲ್‌ಗಳಾದ ಮಲ್ಲೇಶ್ ಹಾಗೂ ತೀರ್ಥ, ಬಾಡಿವೋರ್ನ್ ಕ್ಯಾಮೆರಾ ಧರಿಸಿರಲಿಲ್ಲ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹಣ ಸುಲಿಗೆ ಮಾಡಿದ್ದ ಬಗ್ಗೆ ಪುರಾವೆಗಳು ಸಿಕ್ಕಿಲ್ಲ. ಆದರೆ, ಕಾನ್‌ಸ್ಟೆಬಲ್‌ಗಳು ಘಟನೆಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರದೇ ಕರ್ತವ್ಯ ಲೋಪೆಸಗಿದ್ದರು. ತನಿಖೆ ಬಳಿಕ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ತಿಳಿಸಿವೆ.

ಜಾಲತಾಣದ ಮೂಲಕ ವೇಶ್ಯಾವಾಟಿಕೆ: ಬಂಧನ

ಬೆಂಗಳೂರು: ಜಾಲತಾಣಗಳಲ್ಲಿ ಜಾಹೀರಾತು ನೀಡಿ ಗ್ರಾಹಕರನ್ನು ಸಂಪರ್ಕಿಸಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಆರು ಆರೋಪಿಗಳನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಂಜುನಾಥ್ ಅಲಿಯಾಸ್ ಸಂಜು, ಮಂಜುನಾಥ್ ಅಲಿಯಾಸ್ ಬುಲೆಟ್, ಮಲ್ಲಿಕಾರ್ಜುನಯ್ಯ, ಹನುಮೇಶ್, ಮೋಹನ್ ಹಾಗೂ ರಾಜೇಶ್ ಬಂಧಿತರು.

‘ಉದ್ಯೋಗ ಹಾಗೂ ಹಣದ ಆಮಿಷವೊಡ್ಡಿ ನಗರಕ್ಕೆ ಯುವತಿಯರನ್ನು ಕರೆಸುತ್ತಿದ್ದ ಆರೋಪಿಗಳು, ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಇರಿಸುತ್ತಿದ್ದರು. ಅವರ ಭಾವಚಿತ್ರಗಳ ಸಮೇತ ಜಾಲತಾಣಗಳಲ್ಲಿ ಜಾಹೀರಾತು ನೀಡಿ, ಗ್ರಾಹಕರನ್ನು ವೇಶ್ಯಾವಾಟಿಕೆಗೆ ಆಕರ್ಷಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಗ್ರಾಹಕರು ಹೇಳಿದ ಸ್ಥಳಗಳಲ್ಲಿ ಮಹಿಳೆಯರನ್ನು ಕರೆದೊಯ್ಯುತ್ತಿದ್ದ ಆರೋಪಿಗಳು, ಕಮಿಷನ್ ರೂಪದಲ್ಲಿ ಹಣ ಪಡೆಯುತ್ತಿದ್ದರು. ಜೊತೆಗೆ, ಕೆಲ ಮಹಿಳೆಯರ ಹೆಸರಿನಲ್ಲಿ ನಕಲಿ ಖಾತೆಗಳನ್ನೂ ಆರೋಪಿಗಳು ಸೃಷ್ಟಿಸಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ. ಜಾಲದಲ್ಲಿ ಸಿಲುಕಿದ್ದ ಮಹಿಳೆಯರನ್ನು ರಕ್ಷಿಸಲಾಗಿದೆ ಎಂದು ಅವರು ಹೇಳಿದರು’ ಎಂದರು.

ಆತ್ಮಹತ್ಯೆಗೆ ಕಟ್ಟಿದ್ದ ಪಂಚೆ ಹರಿದು ಯುವಕ ಸಾವು

ದೊಡ್ಡಬಳ್ಳಾಪುರ: ನಗರದ ಭಗತ್‌ಸಿಂಗ್ ಕ್ರೀಡಾಂಗಣ ಸಮೀಪ ಸೋಮವಾರ ಆತ್ಮಹತ್ಯೆ ಮಾಡಿಕೊಳ್ಳಲು ಮರಕ್ಕೆ ಕಟ್ಟಿದ್ದ ಪಂಚೆ ಹರಿದು ಬಿದ್ದು ಯುವಕನೊಬ್ಬ ಮೃತಪಟ್ಟಿದ್ದಾನೆ.

19 ವರ್ಷ ವಯಸ್ಸಿನ ಮೃತ ಯುವಕನ ವಿವರಗಳು ಲಭ್ಯವಾಗಿಲ್ಲ. ಪಂಚೆ ಹರಿದು ಮರದಿಂದ ನೆಲಕ್ಕೆ ಬಿದ್ದ ಯುವಕನ ತಲೆಗೆ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಚರ್ಚೆ

ಬಜೆಟ್ ಬಳಿಕ ರಥಯಾತ್ರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಜೆಟ್ ಅಧಿವೇಶನದ ನಂತರ ರಾಜ್ಯದ ನಾಲ್ಕು ಕಡೆ ರಥಯಾತ್ರೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿಯ ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನವದೆಹಲಿಯಲ್ಲಿ ಸೋಮವಾರ ಆರಂಭವಾಗಿದೆ. ಬಸವರಾಜ ಬೊಮ್ಮಾಯಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸೇರಿದಂತೆ ರಾಜ್ಯದ ಕೆಲವು ಮುಖಂಡರು ಕಾರ್ಯಕಾರಿಣಿಯಲ್ಲಿ ಭಾಗಿಯಾಗಿದ್ದಾರೆ.

ಕಾರ್ಯಕಾರಿಣಿಯಲ್ಲಿ ಪಾಲ್ಗೊಂಡು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ’ಕಾರ್ಯಕಾರಿಣಿಯಲ್ಲಿ ಹಲವಾರು ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಚುನಾವಣೆ ನಡೆಯುವ ರಾಜ್ಯಗಳ ಬಗ್ಗೆ ವರದಿ ಮಂಡಿಸಲಾಯಿತು. ಬೂತ್ ಮಟ್ಟದ ಕಾರ್ಯಕ್ರಮಗಳಿಂದ ಹಿಡಿದು, ಸಂಘಟನೆ ಬಗ್ಗೆ ಮಾಹಿತಿ ನೀಡಲಾಗಿದೆ’ ಎಂದು ಹೇಳಿದರು.

’ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇಲ್ಲದೆ ಚುನಾವಣೆ ಎದುರಿಸುತ್ತಿದ್ದೇವೆ. ನಕಾರಾತ್ಮಕ ಪ್ರಚಾರದ ಪ್ರಯತ್ನಗಳು ನಡೆದರೂ ಪರಿಣಾಮ ಬೀರಿಲ್ಲ. ರಾಜ್ಯದಲ್ಲಿ ಬಿಜೆಪಿ ನಡೆಸಿರುವ ಜನಸಂಕಲ್ಪ ಯಾತ್ರೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬಜೆಟ್ ಅಧಿವೇಶನದ ಬಳಿಕ ನಾಲ್ಕು ಕಡೆ ರಥಯಾತ್ರೆ ನಡೆಸಲು ನಿರ್ಧಾರ ಮಾಡಲಾಗಿದೆ. ಹೇಗೆ ಮಾಡಬೇಕು ಎಂಬುದು ನಿರ್ಧಾರ ಆಗಿಲ್ಲ. ಆದರೆ, ನಾಲ್ಕು ದಿಕ್ಕಿನಿಂದ ರಥಯಾತ್ರೆ ಮಾಡಬೇಕು ಎಂದು ನಿರ್ಧರಿಸಲಾಗಿದೆ’ ಎಂದರು.

‘ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಲವು ವಿಚಾರಗಳ ಬಗ್ಗೆ ಬಹಿರಂಗವಾಗಿ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ರಾಜ್ಯ ಘಟಕವು ರಾಷ್ಟ್ರೀಯ ಘಟಕಕ್ಕೆ ವರದಿಯನ್ನು ನೀಡಿದೆ. ಕಾರ್ಯಕಾರಿಣಿ ಮುಗಿದ ಬಳಿಕ ಈ ವಿಚಾರಗಳ ಬಗ್ಗೆ ರಾಷ್ಟ್ರೀಯ ನಾಯಕರು ತೀರ್ಮಾನ ತೆಗೆದುಕೊಳ್ಳಲಿದ್ದಾರೆ’ ಎಂದರು.

ಕಾಮಗಾರಿಗಳಲ್ಲಿ ಶೇ 40ರಷ್ಟು ಲಂಚ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಇದು ಈ ಹಿಂದಿನಿಂದಲೂ ನಡೆಯುತ್ತಿತ್ತು. ಇದರ ಹಿಂದಿರುವವರು ಯಾರು ಎಂಬುದು ಗೊತ್ತಿದೆ’ ಎಂದರು.

ಆರೋಪಕ್ಕೆ ತಿರುಗೇಟಿಗೆ ಸೂಚನೆ: ‘ಯಾವುದೇ ವಿಷಯದ ಬಗ್ಗೆ ಆರೋಪಗಳನ್ನು ಮಾಡಲು ವಿರೋಧ ಪಕ್ಷಗಳಿಗೆ ಅವಕಾಶ ನೀಡಬಾರದು. ವಿರೋಧ ಪಕ್ಷಗಳ ಚುನಾವಣಾ ಘೋಷಣೆಗಳನ್ನು ಎಚ್ಚರಿಕೆಯಿಂದ ಗಮನಿಸಿ ಅದಕ್ಕೆ ತಕ್ಕ ಪ್ರತಿ ತಂತ್ರ ಹೆಣೆಯಬೇಕು ಎಂಬುದಾಗಿ ರಾಷ್ಟ್ರೀಯ ನಾಯಕರು ಹೇಳಿದರು’ ಎಂದು ಮೂಲಗಳು ಹೇಳಿವೆ.

ಮೂರು–ನಾಲ್ಕು ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಗಳಿಸಲಿದೆ ಎಂದು ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಘೋಷಣೆ ಮಾಡಲಿರುವ ಕಲ್ಯಾಣ ಕಾರ್ಯಕ್ರಮಗಳು ಪಕ್ಷದ ಕೈ ಹಿಡಿಯಲಿದೆ ಎಂದೂ ಮುಖ್ಯಮಂತ್ರಿ ಹೇಳಿದರು ಎಂದು ಮೂಲಗಳು ಮಾಹಿತಿ ನೀಡಿವೆ.

ಯಾವುದೇ ರಾಜಕೀಯ ಪಕ್ಷದ ಮೈತ್ರಿ ಮಾಡಿಕೊಳ್ಳದೆ ಚುನಾವಣೆ ಎದುರಿಸಬೇಕು ಎಂದು ರಾಜ್ಯ ನಾಯಕರು ರಾಷ್ಟ್ರೀಯ ನಾಯಕರ ಗಮನಕ್ಕೆ ತಂದರು. ರಾಜ್ಯ ನಾಯಕರು ಮಾಡುತ್ತಿರುವ ಒಳ ಒಪ್ಪಂದಗಳಿಂದ ಪಕ್ಷಕ್ಕೆ ಹಿನ್ನಡೆಯಾಗುತ್ತಿರುವ ಬಗ್ಗೆಯೂ ಸಭೆಯಲ್ಲಿ ವಿಸ್ತೃತ ಚರ್ಚೆಯಾಯಿತು.

ಪಕ್ಷ ಸಂಘಟನೆ ಬಲಪಡಿಸಲು ಬೂತ್ ಮಟ್ಟದಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ರಾಜ್ಯ ಘಟಕದ ಅಧ್ಯಕ್ಷರು ಮಾಹಿತಿ ನೀಡಿದರು. ಮುಂದಿನ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಸೇರಿದಂತೆ ರಾಷ್ಟ್ರೀಯ ನಾಯಕರು ರಾಜ್ಯಕ್ಕೆ ಹೆಚ್ಚು ಹೆಚ್ಚು ಭೇಟಿ ನೀಡಬೇಕು ಎಂದು ರಾಜ್ಯ ನಾಯಕರು ಮನವಿ ಮಾಡಿದರು ಎಂದು ಮೂಲಗಳು ತಿಳಿಸಿವೆ.

ಬಿಜೆಪಿಗೆ 106 ಸ್ಥಾನ– ವರಿಷ್ಠರಿಗೆ ಮಾಹಿತಿ

ಕರ್ನಾಟಕದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರಸ್ತುತ ಸನ್ನಿವೇಶದ ಪ್ರಕಾರ ಬಿಜೆಪಿಯು ಸ್ವಂತ ಬಲದಿಂದ 106 ಸ್ಥಾನಗಳನ್ನು ಗೆಲ್ಲಲಿದೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಸುಧಾರಿಸಲಿದೆ ಎಂದು ಬಸವರಾಜ ಬೊಮ್ಮಾಯಿ ಅವರು ಬಿಜೆಪಿ ವರಿಷ್ಠರಿಗೆ ತಿಳಿಸಿದ್ದಾರೆ.

ಕಾರ್ಯಕಾರಿಣಿ ಸಭೆಯ ನೇಪಥ್ಯದಲ್ಲಿ ಬೊಮ್ಮಾಯಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ರಾಜ್ಯದ ರಾಜಕೀಯ ವಿದ್ಯಮಾನಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಮೀಸಲಾತಿ ಘೋಷಣೆ ಬಳಿಕ ಆಗಿರುವ ಪರಿಣಾಮಗಳ ಬಗ್ಗೆಯೂ ವಿವರಣೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ಮಾಡುತ್ತಿರುವ ಆರೋಪಗಳಿಗೆ ತಕ್ಕ ತಿರುಗೇಟು ನೀಡಬೇಕು ಎಂದು ರಾಜ್ಯ ನಾಯಕರಿಗೆ ರಾಷ್ಟ್ರೀಯ ನಾಯಕರು ಸೂಚಿಸಿದರು ಎಂದು ತಿಳಿಸಿವೆ.

ಬುಡಕಟ್ಟು ಹೆಣ್ಣುಮಕ್ಕಳ ಶಿಕ್ಷಣ: ಫ್ಯಾಶನ್ ಷೋ 22ಕ್ಕೆ

ಬೆಂಗಳೂರು: ಸ್ಯಾಕ್ ಇವೆಂಟ್ ಸೆರ ಸಂಸ್ಥೆ ವತಿಯಿಂದ ಜ. 22ರಂದು ‘ಬುಡಕಟ್ಟು ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಫ್ಯಾಶನ್ ಷೋ’ ಸ್ಪರ್ಧೆಯನ್ನು ರಾಜರಾಜೇಶ್ವರಿ ನಗರದ ಸುಭಾಷ್ ಭವನದಲ್ಲಿ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ 5 ರಿಂದ 15 ವರ್ಷದೊಳಗಿನ ಮಕ್ಕಳ ಭಾಗವಹಿಸಲಿದ್ದಾರೆ. ಸ್ಪರ್ಧೆಯನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಫ್ಯಾಶನ್ ಷೋದಿಂದ ಸಂಗ್ರಹವಾದ ಹಣವನ್ನು ಬುಡಕಟ್ಟು ಹೆಣ್ಣಮಕ್ಕಳ ಶಿಕ್ಷಣ ಮತ್ತು ಅಗತ್ಯ ಸೌಕರ್ಯ ವ್ಯವಸ್ಥೆಯನ್ನು ಕಲ್ಪಿಸುವುದಕ್ಕಾಗಿ ಮೀಸಲಿಡಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಪತ್ರಕರ್ತೆ–ನಿರ್ಮಾಪಕಿ ಭಾವನಾ ಬೆಳಗೆರೆ, ನಟಿ ರಶ್ಮಿ ಹರಿಪ್ರಸಾದ್ ಪಾಲ್ಗೊಳ್ಳಲಿದ್ದಾರೆ. ತೀರ್ಪುಗಾರ್ತಿಯಾಗಿ ಚಾಂದಿನಿ ದಿಲೀಪ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ sac.eventsera@gmail.com ಅಥವಾ 9743399904ಗೆ ಸಂಪರ್ಕಿಸಿ.

ಮಗು ತನ್ನದಲ್ಲವೆಂದು ಗರ್ಭಿಣಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಾಜ್ (22) ಎಂಬುವವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದಾರೆ ಎನ್ನಲಾದ ಪತಿ ನಾಸಿರ್ ಹುಸೇನ್ ಪರಾರಿಯಾಗಿದ್ದಾರೆ.

‘ನಾಜ್ ಹಾಗೂ ನಾಸಿರ್ ಹುಸೇನ್, ಪರಸ್ಪರ ಪ್ರೀತಿಸಿ ಆರು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ತಾವರೆಕೆರೆಯ ಸುಭಾಷ್ ನಗರದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಭಾನುವಾರ ರಾತ್ರಿ ನಾಜ್ ಅವರನ್ನು ಉಸಿರುಗಟ್ಟಿಸಿ ಕೊಲೆ ಮಾಡಲಾಗಿದೆ. ಕೃತ್ಯದ ನಂತರ ಪತಿ ನಾಸಿರ್ ಪರಾರಿಯಾಗಿದ್ದಾನೆ. ನಾಜ್ ಸಂಬಂಧಿಕರು ನೀಡಿರುವ ದೂರು ಆಧರಿಸಿ ನಾಸಿರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆತನ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಶೀಲ ಶಂಕಿಸಿ ಗಲಾಟೆ: ‘ಆರೋಪಿ ನಾಸಿರ್‌ಗೆ ತಂದೆ– ತಾಯಿ ಇಲ್ಲ. ನಾಜ್ ಅವರು ತಮ್ಮ ಪೋಷಕರನ್ನು ಒಪ್ಪಿಸಿ ಆರೋಪಿಯನ್ನು ಮದುವೆಯಾಗಿದ್ದರು. ಇತ್ತೀಚಿನ ದಿನಗಳಲ್ಲಿ ನಾಜ್ ಅವರ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿ ಪತಿ ಗಲಾಟೆ ಮಾಡಲಾರಂಭಿಸಿದ್ದ. ಈ ಬಗ್ಗೆ ಸಂಬಂಧಿಕರು ಮಾಹಿತಿ ನೀಡಿದ್ದಾರೆ’ ಎಂದು ಪೊಲೀಸರು ವಿವರಿಸಿದರು.

‘ನಾಜ್ ಅವರು ಗರ್ಭಿಣಿ ಎಂಬುದು ಇತ್ತೀಚೆಗೆ ಗೊತ್ತಾಗಿತ್ತು. ಅಷ್ಟಕ್ಕೆ ಕೋಪಗೊಂಡಿದ್ದ ಪತಿ, ‘ನೀನು ಅಕ್ರಮ ಸಂಬಂಧವಿಟ್ಟುಕೊಂಡಿದ್ದಿಯಾ? ನಿನ್ನ ಹೊಟ್ಟೆಯಲ್ಲಿರುವ ಮಗು ನನ್ನದಲ್ಲ. ಗರ್ಭಪಾತ ಮಾಡಿಸು’ ಎಂದು ಜಗಳ ತೆಗೆದಿದ್ದ. ಅದಕ್ಕೆ ನಾಜ್ ಒಪ್ಪಿರಲಿಲ್ಲ’ ಎಂದು ಹೇಳಿದರು.

ಕೊಲೆ ಬಳಿಕ ಸಹೋದರನಿಗೆ ಸಂದೇಶ: ‘ದಂಪತಿ ನಡುವೆ ಭಾನುವಾರ ರಾತ್ರಿಯೂ ಜಗಳ ಶುರುವಾಗಿತ್ತು. ಇದೇ ವೇಳೆಯೇ ಆರೋಪಿ, ಪತ್ನಿ ನಾಜ್ ಮೇಲೆ ಹಲ್ಲೆ ಮಾಡಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಕೊಲೆ ನಂತರ ನಾಜ್ ಅವರ ಸಹೋದರನಿಗೆ ಸಂದೇಶ ಕಳುಹಿಸಿದ್ದ ನಾಸಿರ್, ಸ್ಥಳದಿಂದ ಪರಾರಿಯಾಗಿದ್ದಾನೆ. ಸಂದೇಶ ನೋಡಿ ಗಾಬರಿಗೊಂಡ ಸಂಬಂಧಿಕರು ಮನೆಗೆ ಹೋಗಿ ನೋಡಿದಾಗ ಮೃತದೇಹ ಕಂಡಿತ್ತು. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಹೇಳಿದರು.

‘ನಾಜ್ ಗರ್ಭಿಣಿಯಾಗಿದ್ದರು ಎಂಬುದಕ್ಕೆ ಪುರಾವೆಯಾಗಿ ವೈದ್ಯಕೀಯ ವರದಿಯ ಚೀಟಿಯೊಂದು ಮನೆಯಲ್ಲಿ ಸಿಕ್ಕಿದೆ. ಮರಣೋತ್ತರ ಪರೀಕ್ಷೆ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ’ ಎಂದು ತಿಳಿಸಿದರು.

ಅತ್ಯಾಚಾರ ಸಂತ್ರಸ್ತೆಯ ವಿವಾಹ: ಪ್ರಕರಣ ರದ್ದು

ಬೆಂಗಳೂರು: ಅತ್ಯಾಚಾರ ಆರೋಪದ ಪ್ರಕರಣವೊಂದರಲ್ಲಿ, ‘ಆರೋಪಿಯು ಸಂತ್ರಸ್ತೆಯನ್ನು ವಿವಾಹವಾಗಿ ಸುಖ ಜೀವನ ನಡೆಸುತ್ತಿದ್ದಾರೆ’ ಎಂಬ ಆರೋಪಿ ಪರ ವಕೀಲರ ವಾದವನ್ನು ಪರಿಗಣಿಸಿದ ಹೈಕೋರ್ಟ್ ಪ್ರಕರಣ ಮುಕ್ತಾಯಗೊಳಿಸಿ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಸಿ.ಎನ್.ರಾಜು, ‘ಸಂತ್ರಸ್ತೆ ಮತ್ತು ಆರೋಪಿಯ ನಡುವೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮದುವೆಯಾಗಿ ನೆಮ್ಮದಿಯಿಂದ ಸಂಸಾರ ನಡೆಸುತ್ತಿದ್ದಾರೆ. ಪ್ರಕರಣ ಹಿಂಪಡೆಯಲು ಇಬ್ಬರೂ ಜಂಟಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಕೋರ್ಟ್ ಪ್ರಮಾಣ ಪತ್ರವನ್ನು ಪುರಸ್ಕರಿಸಿ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ಅರ್ಜಿ ಪುರಸ್ಕರಿಸಿ ಆರೋಪಿ ವಿರುದ್ಧದ ಅತ್ಯಾಚಾರ, ಹಣ ವಸೂಲಿ ಮತ್ತು ಜೀವ ಬೆದರಿಕೆ ಪ್ರಕರಣವನ್ನು ರದ್ದುಪಡಿಸಿದೆ.

ಗೋಪಾಲಗೌಡರ ಜನ್ಮಶತಮಾನೋತ್ಸವ 28ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತವೇರಿ ಗೋಪಾಲಗೌಡ ಜನ್ಮ ಶತಮಾನೋತ್ಸವ ಸಮಾರಂಭವು ಜ. 28ರಂದು ಸಂಜೆ 4 ಗಂಟೆಗೆ ಟೌನ್‌ಹಾಲ್‌ನಲ್ಲಿ ನಡೆಯಲಿದೆ.

ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟನೆ ಮಾಡಲಿದ್ದು, ಗೃಹ ಸಚಿವ ಆರಗ ಜ್ಞಾನೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಗೋಪಾಲಗೌಡರ ಕಿರುಪರಿಚಯದ ಪುಸ್ತಕವನ್ನು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಬಿಡುಗಡೆ ಮಾಡಲಿದ್ದಾರೆ. ಅತಿಥಿಗಳಾಗಿ ಸಚಿವ ವಿ. ಸುನಿಲ್ ಕುಮಾರ್, ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಆರ್. ರಮೇಶ್ ಕುಮಾರ್, ಸಾಹಿತಿ ಚಂದ್ರಶೇಖರ ಕಂಬಾರ, ರಾಮಮನೋಹರ ಶಾಂತವೇರಿ, ಜಿ.ಎ. ಪುರುಷೋತ್ತಮ ಗೌಡ ಭಾಗವಹಿಸಲಿದ್ದಾರೆ ಎಂದು ಶಾಂತವೇರಿ ಗೋಪಾಲಗೌಡ ಜನ್ಮ ಶತಮಾನೋತ್ಸವ ಆಚರಣಾ ಸಮಿತಿ ಪ್ರಕಟಣೆ ತಿಳಿಸಿದೆ.

ಶಾಂತವೇರಿ ಗೋಪಾಲಗೌಡ

ನಾಯಕರೆಲ್ಲರಿಗೂ ವೇದಿಕೆ ಎದುರು ಆಸನ • ಅರಮನೆ ಆವರಣದಲ್ಲಿ ಮಹಿಳೆಯರದ್ದೇ ಪಾರುಪತ್ಯ

‘ನಾ ನಾಯಕಿ’: ‘ಕೈ ನಾರಿ ಶಕ್ತಿ’ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಮಹಿಳೆಯರ ಮತ ಸೆಳೆಯುವುದಕ್ಕಾಗಿ ಕೆಪಿಸಿಸಿ ವತಿಯಿಂದ ನಗರದ ಬೆಂಗಳೂರು ಅರಮನೆ ಆವರಣದಲ್ಲಿ ಸೋಮವಾರ ನಡೆದ ‘ನಾ ನಾಯಕಿ’ ಸಮಾವೇಶದ ವೇದಿಕೆಯನ್ನು ಸಂಪೂರ್ಣವಾಗಿ ಸ್ತ್ರೀಯರಿಗೆ ಮೀಸಲಿಡಲಾಗಿತ್ತು. ನಾಯಕರನ್ನು ವೇದಿಕೆ ಎದುರಿನ ಆಸನಗಳಿಗೆ ಸೀಮಿತಗೊಳಿಸಲಾಗಿತ್ತು.

ಶಾಸಕಿಯರು, ಮಾಜಿ ಸಂಸದೆಯರು, ಮಾಜಿ ಸಚಿವೆಯರು, ಮಾಜಿ ಶಾಸಕಿಯರು, ವಿವಿಧ ಮುಂಚೂಣಿ ಘಟಕಗಳಲ್ಲಿ ಪದಾಧಿಕಾರಿಗಳಾಗಿರುವ ಮಹಿಳೆಯರು, ಯುವ ಕಾಂಗ್ರೆಸ್ ನಾಯಕಿಯರು ಸೇರಿದಂತೆ ನೂರಕ್ಕೂ ಹೆಚ್ಚು ಮಹಿಳೆಯರಿಗೆ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಮಾಜಿ ಸಚಿವೆ ಉಮಾಶ್ರೀ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ನೆಟ್ಟಾ ಡಿಸೋಜ, ರಾಜ್ಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಪುಷ್ಪಾ ಅಮರನಾಥ್, ಶಾಸಕಿಯರಾದ ಲಕ್ಷ್ಮಿ ಹೆಬ್ಬಾಳ್ಕರ್, ಅಂಜಲಿ ನಿಂಬಾಳ್ಕರ್, ರೂಪಾ ಶಶಿಧರ್, ಕನೀಝ್ ಫಾತಿಮಾ, ಕುಸುಮಾ ಶಿವಳ್ಳಿ, ಸೌಮ್ಯಾ ರೆಡ್ಡಿ, ಮಾಜಿ ರಾಜ್ಯಪಾಲೆ ಮಾರ್ಗರೇಟ್ ಆಳ್ವ, ಮಾಜಿ ಸಚಿವೆಯರಾದ ರಾಣಿ ಸತೀಶ್, ಮೋಟಮ್ಮ ಸೇರಿದಂತೆ ಹಲವರು ವೇದಿಕೆಯಲ್ಲಿದ್ದರು. ವೇದಿಕೆಯಲ್ಲಿದ್ದ ಮಹಿಳೆಯರೆಲ್ಲರಿಗೂ ತಲಾ ಮೂರರಿಂದ ಐದು ನಿಮಿಷ ಮಾತನಾಡಲು ಅವಕಾಶ ಕಲ್ಪಿಸಲಾಗಿತ್ತು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಮಾವೇಶದ ಉದ್ಘಾಟನೆ ವೇಳೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ ಸೇರಿದಂತೆ ಕೆಲವು ನಾಯಕರನ್ನು ವೇದಿಕೆಗೆ ಆಹ್ವಾನಿಸಲಾಗಿತ್ತು. ಉದ್ಘಾಟನೆ ಮುಗಿದ ತಕ್ಷಣ ಎಲ್ಲರೂ ವೇದಿಕೆ ಮುಂಭಾಗದ ಆಸನಗಳಿಗೆ ಮರಳಿದರು.

‘ಬಿಜೆಪಿ ಮಹಿಳಾ ವಿರೋಧಿ’: ಸುರ್ಜೇವಾಲಾ ಮಾತನಾಡಿ, ‘ಬಿಜೆಪಿ ಮಹಿಳೆಯರ ವಿರೋಧಿ ಪಕ್ಷ. ಕರ್ನಾಟಕದಲ್ಲಿ 2018ರ ವಿಧಾನಸಭಾ ಚುನಾವಣೆ ವೇಳೆ ಮಹಿಳೆಯರಿಗೆ ಸಂಬಂಧಿಸಿದಂತೆ 21 ಭರವಸೆ ನೀಡಿತ್ತು. ಅಧಿಕಾರಕ್ಕೆ ಬಂದು ಮೂರು ವರ್ಷಗಳಾದರೂ ಒಂದನ್ನೂ ಈಡೇರಿಸಿಲ್ಲ’ ಎಂದರು.

ಉಮಾಶ್ರೀ ಮಾತನಾಡಿ, ‘ಕೇಂದ್ರ ಮತ್ತು ರಾಜ್ಯದಲ್ಲಿರುವ ಬಿಜೆಪಿ ಸರ್ಕಾರಗಳನ್ನು ಕಿತ್ತೊಗೆಯಲು ಈ ಸಮಾವೇಶ ಪ್ರೇರಣೆಯಾಗಲಿದೆ. ಎಲ್ಲ ಹಂತದಲ್ಲೂ ಮಹಿಳೆಯರು ಬಿಜೆಪಿ ಸರ್ಕಾರಗಳ ವಿರುದ್ಧ ಹೋರಾಟಕ್ಕೆ ಅಣಿಯಾಗಬೇಕು’ ಎಂದು ಹೇಳಿದರು.

ಪ್ರತಿಜ್ಞೆ: ಪಕ್ಷದ ತತ್ವ, ಸಿದ್ಧಾಂತ ಮತ್ತು ಮೌಲ್ಯಗಳ ಅನುಸಾರ ಪ್ರತಿ ಗ್ರಾಮ, ನಗರ, ಪಟ್ಟಣಗಳಲ್ಲಿ ನಾಯಕಿಯರಾಗಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದಾಗಿ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಪ್ರತಿಜ್ಞೆ ಸ್ವೀಕರಿಸಿದರು. ಸೌಮ್ಯಾ ರೆಡ್ಡಿ ಅವರು ಪ್ರತಿಜ್ಞೆ ಬೋಧಿಸಿದರು.

ಹರಿದು ಬಂದ ಮಹಿಳೆಯರ ದಂಡು

ಬೆಂಗಳೂರು ಅರಮನೆ ಆವರಣದಲ್ಲಿರುವ ಒಳಾಂಗಣ ಸಭಾಂಗಣದಲ್ಲಿ ‘ನಾ ನಾಯಕಿ’ ಸಮಾವೇಶ ಆಯೋಜಿಸಲಾಗಿತ್ತು. ಆದರೆ, ಅಲ್ಲಿರುವ ಆಸನಗಳ ಸಂಖ್ಯೆಗೆ ಹೋಲಿಸಿದರೆ ಅದರ ಹಲವು ಪಟ್ಟು ಮಹಿಳೆಯರು ಸಮಾವೇಶಕ್ಕೆ ಬಂದಿದ್ದರು. ಇದರಿಂದಾಗಿ ದೊಡ್ಡ ಸಂಖ್ಯೆಯ ಮಹಿಳೆಯರು ಸಭಾಂಗಣದ ಹೊರಗೆ ನಿಂತೇ ಭಾಷಣ ಆಲಿಸುವಂತಾಗಿತ್ತು.

ರಾಜ್ಯದ ವಿವಿಧೆಡೆಯಿಂದ ಮಹಿಳೆಯರು ಸಮಾವೇಶಕ್ಕೆ ಬಂದಿದ್ದರು. ಸಭಾಂಗಣದ ಸುತ್ತ ಮುತ್ತಲಿನ ಪ್ರದೇಶ ಮಹಿಳೆಯರಿಂದ ಕಿಕ್ಕಿರಿದು ತುಂಬಿತ್ತು. ದೂರದ ಊರುಗಳಿಂದ ಹೊರಟಿದ್ದ ಮಹಿಳೆಯರು ಸಮಾವೇಶದ ಕೊನೆಯವರೆಗೂ ಕಾರ್ಯಕ್ರಮದ ಸ್ಥಳಕ್ಕೆ ಬರುತ್ತಲೇ ಇದ್ದರು.

ಬಂಜಾರಾ ಶಾಲು, ಮುತ್ತಿನ ಸರ...

ಸಮಾವೇಶಕ್ಕೆ ಬಂದ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರಿಗೆ ಮಾಜಿ ಶಾಸಕಿ ಜಲಜಾ ನಾಯಕ್ ಅವರು ಬಂಜಾರಾ ಶೈಲಿಯ ಶಾಲು ಹೊದಿಸಿ ಗೌರವಿಸಿದರು. ಮಾಜಿ ಸಚಿವೆ ಮೋಟಮ್ಮ ಅವರು ಮುತ್ತಿನ ಸರವೊಂದನ್ನು ಪ್ರಿಯಾಂಕಾ ಕೊರಳಿಗೆ ತೊಡಿಸಿದರು.

ವೇದಿಕೆಗೆ ತಲುಪುವ ಮುನ್ನ ಪ್ರಿಯಾಂಕಾ ಅವರು ಮಹಿಳೆಯರ ಬಳಿ ತೆರಳಿ ಹಸ್ತಲಾಘವ ನೀಡಿದರು. ಹಲವರು ಅವರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನನಗೆ ಅವಮಾನ ಮಾಡಿದರು: ನಫೀಜ್ ಫಜಲ್

ಬೆಂಗಳೂರು: ‘ನಾ ನಾಯಕಿ ಕಾರ್ಯಕ್ರಮದಲ್ಲಿ ವೇದಿಕೆ ಹತ್ತಲು ಹೋದಾಗ ‘ನಿಮಗೆ ವೇದಿಕೆ ಹತ್ತಲು ಅನುಮತಿ ನೀಡಿಲ್ಲ ನಡೆಯಿರಿ’ ಎಂದು ಪೊಲೀಸರು ಕೈ ಹಿಡಿದು ಕೆಳಗೆ ಎಳೆದೊಯ್ದರು’ ಎಂದು ಮಾಜಿ ಸಚಿವೆ ಹಾಗೂ ಕಾಂಗ್ರೆಸ್ ನಾಯಕಿ ನಫೀಜ್ ಫಜಲ್ ಅವರು ಕಿಡಿಕಾರಿದ್ದಾರೆ.

‘ಪ್ರಜಾವಾಣಿ’ ಜತೆ ಮಾತನಾಡಿದ ಅವರು ‘ಕಾಂಗ್ರೆಸ್ ಸರ್ಕಾರದಲ್ಲಿ ಸಚಿವೆಯಾಗಿದ್ದ ಮತ್ತು ಹಿರಿಯ ನಾಗರಿಕಳಾದ ನನ್ನನ್ನು ಈ ರೀತಿ ನಡೆಸಿಕೊಂಡಿದ್ದು ಸರಿಯಲ್ಲ. ಪಕ್ಷದ ಎಲ್ಲಾ ಮಾಜಿ ಸಚಿವೆಯರಿಗೂ ಅವಕಾಶ ಕೊಟ್ಟು, ನನಗೆ ಮಾತ್ರ ವೇದಿಕೆಗೆ ಬಿಡಬಾರದು ಎಂದು ಪೊಲೀಸರಿಗೆ ಆದೇಶ ಕೊಟ್ಟವರು ಯಾರು’ ಎಂದು ಅವರು ಪ್ರಶ್ನಿಸಿದ್ದಾರೆ.

‘ಮಹಿಳಾ ಕಾರ್ಯಕ್ರಮವಾದ್ದರಿಂದ, ಉಮಾಶ್ರೀ ಅವರು ಎಲ್ಲರಿಗೂ ಒಂದೇ ರೀತಿಯ ಪಾಸ್ ಕೊಟ್ಟಿದ್ದೇವೆ, ಬರಬಹುದು ಎಂದು ಹೇಳಿದ್ದರಿಂದಲೇ ವೇದಿಕೆ ಹತ್ತಲು ಹೋಗಿದ್ದೆ. ಆದರೆ, ವೇದಿಕೆ ಹತ್ತಲು ವಿಶೇಷ ಪಾಸ್ ಮಾಡಿದ್ದರು ಎಂಬ ಮಾಹಿತಿ ಗೊತ್ತಿರಲಿಲ್ಲ. ಆ ವಿಷಯ ಗೊತ್ತಿದ್ದರೆ ನಾನು ವೇದಿಕೆ ಹತ್ತಲು ಹೋಗುತ್ತಿರಲಿಲ್ಲ. ನಾನು ಬಿಜೆಪಿ ಸೇರಿದ್ದೇನೆ ಎಂದು ಪಕ್ಷದಲ್ಲೇ ಕೆಲವರು ಅಪಪ್ರಚಾರ ಮಾಡಿದ್ದಾರೆ. ನಾನು ಈಗಲೂ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವ ಹೊಂದಿದ್ದೇನೆ’ ಎಂದು ಹೇಳಿದರು.

ಡಿಕೆಶಿಗೆ ಗರಂ ಸಂದೇಶ: ತಮ್ಮನ್ನು ಆಹ್ವಾನಿಸದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿರುವ, ‘ನೀವು ಇಂದು ಈ ಸ್ಥಾನ ಏರಲು ಎಸ್.ಎಂ.ಕೃಷ್ಣ ಅವರೇ ಕಾರಣರು. ಈ ಕಾರ್ಯಕ್ರಮಕ್ಕೆ ಎಲ್ಲ ಮಾಜಿ ಸಚಿವೆಯರನ್ನು ಆಹ್ವಾನಿಸಿ, ನನ್ನೊಬ್ಬಳನ್ನು ಬಿಟ್ಟಿದ್ದೇಕೆ? ನಾನು ಮುಸ್ಲಿಂ ಮಹಿಳೆ ಎಂಬ ಕಾರಣಕ್ಕಾ? ದಕ್ಷಿಣ ಭಾರತದಲ್ಲಿ ಮುಸ್ಲಿಂ ಸಮುದಾಯದಿಂದ ಸಚಿವೆ ಆಗಿದ್ದು ನಾನೊಬ್ಬಳು ಮಾತ್ರ’ ಎಂದು ಹೇಳಿಕೊಂಡಿದ್ದಾರೆ.

ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸಂಸತ್ತು ಮತ್ತು ವಿಧಾನಮಂಡಲಗಳಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಮೀಸಲಾತಿ ಕಲ್ಪಿಸುವಂತೆ ಪಕ್ಷದ ವರಿಷ್ಠರನ್ನು ಒತ್ತಾಯಿಸುತ್ತೇನೆ
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಕೆಳ ಹಂತದಿಂದ ಪಕ್ಷದ ಕಾರ್ಯಕರ್ತರಿಗೆ ಜವಾಬ್ದಾರಿ ಕಲಿಸಿದರೆ ಮಾತ್ರ ಬಲಿಷ್ಠವಾಗಿ ಬೆಳೆಯಲು ಸಾಧ್ಯ. ಮಹಿಳೆಯರು ಪೂರ್ಣ ಪ್ರಮಾಣದಲ್ಲಿ ಸಾಮರ್ಥ್ಯ ಗಳಿಸಿಕೊಳ್ಳಲು ಸಮಾವೇಶ ಆಯೋಜಿಸಲಾಗಿದೆ.
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ರಾಜ್ಯದ ಮೂಲೆ ಮೂಲೆಯಲ್ಲಿರುವ ಕಾಂಗ್ರೆಸ್ ಕಾರ್ಯಕರ್ತೆಯರೆಲ್ಲರೂ ನಾಯಕಿಯರಾಗಿ ಹೊರಹೊಮ್ಮಬೇಕು. ಆ ಮೂಲಕ ರಾಜ್ಯದಲ್ಲಿ ಮಹಿಳಾ ನಾಯಕತ್ವವನ್ನು ಯಶಸ್ವಿಗೊಳಿಸಬೇಕು.
ನೆಟ್ಟಾ ಡಿಸೋಜ
ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ

ಸುದ್ದಿ 2 ನಿಮಿಷ

‘ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಲಿ’

ರಾಮನಗರ: ‘ಗೃಹ ಸಚಿವ ಆರಗ ಜ್ಞಾನೇಂದ್ರ ಆತ್ಮಹತ್ಯೆ ಮಾಡಿಕೊಳ್ಳುವುದು ಬೇಡ. ತಮ್ಮ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಂಡರೆ ಸಾಕು’ ಎಂದು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಬಿಡದಿ ಬಳಿಯ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಸೋಮವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ‘ಲಂಚ ತೆಗೆದುಕೊಂಡಿದ್ದು ಸಾಬೀತಾದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಗೃಹ ಸಚಿವರು ಹೇಳಿದ್ದಾರೆ. ನಾನೇನು ಅವರು ಆತ್ಮಹತ್ಯೆ ಮಾಡಿಕೊಳ್ಳಲಿ ಎಂದು ಹೇಳಿಲ್ಲ’ ಎಂದರು.

‘ಕಾಸಿಗಾಗಿ ಪೋಸ್ಟಿಂಗ್ ವಿಚಾರ ಹಾದಿಬೀದಿಯಲ್ಲಿ ಚರ್ಚೆ ಆಗುತ್ತಿದೆ. ಸ್ಯಾಂಟ್ರೊ ರವಿ ಎಂಬಾತ ಸುಮಾರು 150 ಪೊಲೀಸ್ ಅಧಿಕಾರಿಗಳಿಂದ ದುಡ್ಡು ವಸೂಲಿ ಮಾಡಿದ್ದಾನೆ.

ಗೃಹ ಸಚಿವರ ಚೇಂಬರ್‌ನಲ್ಲಿ ಆತ ಜೊತೆಗಿರುವ ಎರಡು ಫೋಟೊಗಳು ಇವೆ. ಯಾತಕ್ಕೆ ಇಂತವರನ್ನು ಸೇರಿಸಿಕೊಂಡಿರಿ?‘ಎಂದು ಪ್ರಶ್ನಿಸಿದರು.

ಸಂವಾದ: ‘ರೈತ ಸಂಕ್ರಾಂತಿ’ ಕಾರ್ಯಕ್ರಮದ ಅಂಗವಾಗಿ ಸೋಮವಾರ ಮಧ್ಯಾಹ್ನ ಕುಮಾರಸ್ವಾಮಿ 58 ತಾಲ್ಲೂಕಿನ ಸಾವಿರಾರು ರೈತರ ಜೊತೆ ಆನ್‌ಲೈನ್ ಮೂಲಕ ಸಂವಾದ ನಡೆಸಿದರು.

ಬಾಗಲಕೋಟೆಯಲ್ಲಿ ಕನಿಷ್ಠ ತಾಪಮಾನ ದಾಖಲು

ಬೆಂಗಳೂರು: ರಾಜ್ಯದ ಹಲವೆಡೆ ಮತ್ತೆ ಚಳಿ ತೀವ್ರಗೊಂಡಿದ್ದು, ಮುಂಜಾನೆಯ ಚಳಿ ಮೈನಡುಗಿಸುತ್ತಿದೆ.

ಬಾಗಲಕೋಟೆಯಲ್ಲಿ ಸೋಮವಾರ ಕನಿಷ್ಠ ಉಷ್ಣಾಂಶ 8.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಮುಂದಿನ 48 ಗಂಟೆಯಲ್ಲಿ ಒಳನಾಡಿನ ಹಲವು ಸ್ಥಳಗಳಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 5ರಿಂದ 6 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನ ಹಗಲು ವೇಳೆ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಬೆಳಿಗ್ಗೆ ದಟ್ಟ ಮಂಜು ಕವಿದ ವಾತಾವರಣ ಇರಲಿದ್ದು ಗರಿಷ್ಠ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ 13 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗುವ ಸಾಧ್ಯತೆಯಿದೆ ಎಂದು ತಿಳಿಸಿದೆ.

‘ರೈತ ಶಕ್ತಿ’ ಯೋಜನೆಗೆ ಶೀಘ್ರ ಚಾಲನೆ

ಬೆಂಗಳೂರು: ‘ಪ್ರತಿ ಎಕರೆಗೆ ₹ 250ರಂತೆ ಗರಿಷ್ಠ ಐದು ಎಕರೆಗೆ ₹ 1,250 ಅನ್ನು ಡಿಬಿಟಿ (ನೇರ ನಗದು ವರ್ಗಾವಣೆ) ಮೂಲಕ ಡೀಸೆಲ್‌ಗೆ ಸಹಾಯಧನ ನೀಡುವ ‘ರೈತ ಶಕ್ತಿ ಯೋಜನೆ’ಗೆ ಇದೇ ತಿಂಗಳ ಅಂತ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ’ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ತಿಳಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಅವರು, ‘45 ಲಕ್ಷಕ್ಕೂ ಹೆಚ್ಚು ರೈತರ ಖಾತೆಗೆ ಮುಖ್ಯಮಂತ್ರಿ ಸಹಾಯಧನ ಬಿಡುಗಡೆ ಮಾಡಲಿದ್ದಾರೆ’ ಎಂದಿದ್ದಾರೆ.

‘ಇಲಾಖೆಯ ಎಲ್ಲ ಯೋಜನೆಗಳನ್ನು ‘ಫ್ರುಟ್ಸ್’ ವೆಬ್‌ಸೈಟ್ ಮೂಲಕ ರೈತರ ನೋಂದಣಿ ಗುರುತಿನ ಸಂಖ್ಯೆ ಬಳಸಿ ಕಿಸಾನ್ ತಂತ್ರಾಂಶದ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ. ಈ ವೆಬ್‌ಸೈಟ್‌ನಲ್ಲಿ ನೋಂದಾಯಿಸಿದ ಎಲ್ಲ ರೈತರಿಗೆ ರೈತ ಶಕ್ತಿ ಯೋಜನೆಯನ್ನು ಕೂಡಾ ಇದೇ ತಂತ್ರಾಂಶ ಬಳಸಿ ಅನುಷ್ಠಾನ ಮಾಡಲಾಗುತ್ತಿದೆ. ರೈತರು ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ವೆಬ್‌ಸೈಟ್‌ನಲ್ಲಿ ಲಭ್ಯವಿರುವ ದತ್ತಾಂಶಗಳ ಆಧಾರದಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗುವುದು. ವೆಬ್‌ಸೈಟ್‌ನಲ್ಲಿ ನಮೂದಿಸಿದ ಕೃಷಿ ಭೂಮಿಯ ವಿಸ್ತೀರ್ಣದ ಆಧಾರದಲ್ಲಿ ರೈತರ ಖಾತೆಗೆ ಡೀಸೆಲ್ ಸಹಾಯಧನ ವರ್ಗಾಯಿಸಲಾಗುವುದು’ ಎಂದರು.

ಕುಟುಂಬ ನಿರ್ವಹಣೆಗೆ ‘ಗೃಹಲಕ್ಷ್ಮಿ’ ಯೋಜನೆ ಘೋಷಿಸಿದ ಕಾಂಗ್ರೆಸ್

ತಿಂಗಳಿಗೆ ₹ 2,000 ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದರೆ ರಾಜ್ಯದ ಪ್ರತಿಯೊಂದು ಕುಟುಂಬಗಳ ಯಜಮಾನಿಯರಿಗೆ ಮನೆ ನಿರ್ವಹಣೆಗಾಗಿ ತಿಂಗಳಿಗೆ ₹ 2,000 ನೆರವು ನೀಡುವ ‘ಗೃಹಲಕ್ಷ್ಮಿ’ ಯೋಜನೆ ಜಾರಿಗೊಳಿಸುವುದಾಗಿ ಕಾಂಗ್ರೆಸ್ ಘೋಷಿಸಿದೆ.

ಕೆಪಿಸಿಸಿ ವತಿಯಿಂದ ನಗರದ ಬೆಂಗಳೂರು ಅರಮನೆ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ‘ನಾ ನಾಯಕಿ’ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರಿಗೆ ಸಹಿಮಾಡಿದ ಚೆಕ್ ಮಾದರಿಯನ್ನು ನೀಡುವ ಮೂಲಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಈ ಘೋಷಣೆ ಮಾಡಿದರು.

2023ರ ಚುನಾವಣೆಗೆ ಪ್ರಣಾಳಿಕೆ ಸಿದ್ಧಪಡಿಸಲು ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲಾಗುತ್ತಿದೆ. ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆಗೆ ಸಂಕಷ್ಟ ಉಂಟಾಗಿರುವ ಕುರಿತು ಸಾವಿರಾರು ಮಹಿಳೆಯರು ಪತ್ರದ ಮೂಲಕ ಅಭಿಪ್ರಾಯ ನೀಡಿದ್ದರು. ಅದನ್ನು ಆಧರಿಸಿ ‘ಗೃಹಲಕ್ಷ್ಮಿ’ ಯೋಜನೆ ಅನುಷ್ಠಾನದ ಭರವಸೆ ನೀಡಲಾಗಿದೆ. ಅದನ್ನು ಕಾರ್ಯರೂಪಕ್ಕೆ ತರುವ ಖಾತರಿಯನ್ನೂ ಪ್ರಿಯಾಂಕಾ ಅವರಿಗೆ ನೀಡಲಾಗಿದೆ ಎಂದು ಕಾಂಗ್ರೆಸ್ ತಿಳಿಸಿದೆ.

ಒಂದು ಕುಟುಂಬದ ಒಬ್ಬ ಮಹಿಳೆಗೆ ತಿಂಗಳಿಗೆ ₹ 2,000ದಂತೆ ವರ್ಷಕ್ಕೆ ₹ 24,000 ನೆರವು ನೀಡಲಾಗುವುದು. ರಾಜ್ಯದ 1.5 ಕೋಟಿ ಕುಟುಂಬಗಳಿಗೆ ಇದರಿಂದ ನೆರವಾಗಲಿದೆ ಎಂದು ಹೇಳಿದೆ.

ಇದೇ ಮಾದರಿಯಲ್ಲಿ ‘ಗೃಹಿಣಿ ಶಕ್ತಿ’ ಯೋಜನೆ ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎರಡು ದಿನಗಳ ಹಿಂದೆ ಪ್ರಕಟಿಸಿದ್ದರು. ಕುಟುಂಬ ನಿರ್ವಹಣೆಗಾಗಿ ಪ್ರತಿ ಮನೆಯ ಒಬ್ಬ ಮಹಿಳೆಗೆ ತಿಂಗಳಿಗೆ ₹ 1,000ದಿಂದ ₹ 2,000ದವರೆಗೆ ಯೋಜನೆ ಜಾರಿಗೊಳಿಸುವುದಾಗಿ ತಿಳಿಸಿದ್ದರು.

‘ಪ್ರಿಯಾಂಕಾ ಗಾಂಧಿಯವರು ಗೃಹಲಕ್ಷ್ಮಿ ಯೋಜನೆ ಘೋಷಿಸುವ ಕುರಿತು ತಿಳಿದುಕೊಂಡು ರಾಜ್ಯ ಸರ್ಕಾರ ಮೊದಲೇ ಜಾಹೀರಾತು ನೀಡಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

₹ 1.5 ಲಕ್ಷ ಕೋಟಿ ಲೂಟಿ: ಪ್ರಿಯಾಂಕಾ

ಒಂದನೇ ಪುಟದಿಂದ...

‘ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಲ್‌ಪಿಜಿ ದರ ಎಷ್ಟಿತ್ತು? ಈಗ ಎಷ್ಟಿದೆ? ಮುಂದಿನ ಕೆಲವು ದಿನಗಳಲ್ಲಿ ರಾಜ್ಯದಲ್ಲಿ ಚುನಾವಣೆ ಬರಲಿದೆ. ಕೆಲವು ವರ್ಷಗಳ ಆಡಳಿತವನ್ನು ಹೋಲಿಕೆ ಮಾಡಿ. ನಿಮಗೆ ಅಗತ್ಯವಿರುವ ನೆರವು ನೀಡಿದವರು ಯಾರು? ಎಂದು ತೀರ್ಮಾನಿಸಿ’ ಎಂದರು.

ಕೆಲವರಿಗಾಗಿ ಆಡಳಿತ: ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಅವರ ಕೆಲವು ಆಪ್ತರಿಗಾಗಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಖಾಸಗೀಕರಣ ಮಾಡುತ್ತಿದೆ. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಕೆಲವು ಬಂಡವಾಳಶಾಹಿಗಳಿಗಾಗಿ ಕೆಲಸ ಮಾಡುತ್ತಿವೆ. ಅವರಷ್ಟೆ ಶ್ರೀಮಂತರಾಗುತ್ತಿದ್ದು, ಉಳಿದವರು ಇನ್ನಷ್ಟು ಬಡವರಾಗುತ್ತಲೇ ಇದ್ದಾರೆ ಎಂದರು. ‘ಬಿಜೆಪಿ ಆಡಳಿತದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚುತ್ತಿದೆ. ಸರಕು ಮತ್ತು ಸೇವಾ ತೆರಿಗೆ, ನೋಟು ಅಮಾನ್ಯೀಕರಣದಂತಹ ಕೆಟ್ಟ ನಿರ್ಧಾರಗಳಿಂದ ಜನರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಇದರಿಂದ ಜನರ ಗಮನ ಬೇರೆಡೆ ಸೆಳೆಯಲು ಬಸವಣ್ಣನಂತಹ ಮಹನೀಯರ ವಿಚಾರಗಳನ್ನು ಪಠ್ಯಕ್ರಮದಿಂದ ತೆಗೆದುಹಾಕಿದ್ದಾರೆ’ ಎಂದರು.

‘ಇಂದಿರಾ ಗಾಂಧಿ ಮತ್ತು ಸೋನಿಯಾ ಗಾಂಧಿ ಸಂಕಷ್ಟದ ನಡುವೆಯೂ ಜನರಿಗಾಗಿ ದುಡಿದಿರುವುದನ್ನು ಕಣ್ಣಾರೆ ಕಂಡಿರುವೆ. ಅವರಿಬ್ಬರೂ ನಮಗೆ ಮಾದರಿ. ಅವರಂತೆ ಪ್ರತಿಯೊಬ್ಬ ಮಹಿಳೆಯೂ ನಾಯಕಿಯರಾಗಬೇಕು. ಮನೆ ಮನೆಯಲ್ಲೂ ನಾಯಕಿಯರನ್ನು ಕಾಣುವಂತಾಗಬೇಕು’ ಎಂದರು.

ಚಿಕ್ಕ ರಥೋತ್ಸವ
ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಾಥ ಸ್ವಾಮಿ ದೇಗುಲದಲ್ಲಿ ಸೋಮವಾರ ರಂಗನಾಥ ಸ್ವಾಮಿಯ ಚಿಕ್ಕರಥೋತ್ಸವ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು

ಬಿಜೆಪಿ ಶಾಸಕ ತಿಪ್ಪಾರೆಡ್ಡಿಗೆ ₹90 ಲಕ್ಷ ಕಮಿಷನ್: ಮಂಜುನಾಥ್ ಆರೋಪ

ಒಂದನೇ ಪುಟದಿಂದ

‘₹90 ಲಕ್ಷ ಮೊತ್ತವನ್ನು ನಗದು ರೂಪದಲ್ಲಿ ನೀಡಿದ್ದೇನೆ. ಕಮಿಷನ್ ಕೇಳುವುದು ಅತಿರೇಕವಾಗಿದ್ದು, ಕಾಮಗಾರಿ ಕೈಗೊಳ್ಳುವ ಮುನ್ನವೇ ಕೇಳುತ್ತಿದ್ದಾರೆ. ತಿಪ್ಪಾರೆಡ್ಡಿ ನೇರವಾಗಿ ಕಮಿಷನ್ ಕೇಳಿದ್ದಾರೆ’ ಎಂದು ಅವರು ದೂರಿದರು.

‘ನನಗೆ ಕೆಲಸ ಕೊಡಬೇಡಿ ಎಂದು ಮುಖ್ಯ ಎಂಜಿನಿಯರ್ ಮತ್ತು ಕಾರ್ಯನಿರ್ವಾಹಕ ಎಂಜಿನಿಯರ್‌ಗಳಿಗೆ ಶಾಸಕ ತಿಪ್ಪಾರೆಡ್ಡಿ ಹೇಳಿರುವ ನಿದರ್ಶನಗಳಿವೆ. ಅವರ ಸಂಬಂಧಿಕ ಸುಭಾಷ್ ರೆಡ್ಡಿಗೆ ಮಾತ್ರ ಕೆಲಸ ಕೊಡಿ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ, ಗುತ್ತಿಗೆದಾರರಿಗೆ ಚಿತ್ರಹಿಂಸೆ ಕೊಡುವುದೇ ಇವರ ಉದ್ದೇಶ’ ಎಂದು ಕಿಡಿಕಾರಿದರು.

‘ಈ ಆರೋಪದಿಂದ ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಸಮಸ್ಯೆಗಳನ್ನು ಎದುರಿಸಲು ಸಿದ್ಧವಾಗಿದ್ದೇವೆ. ಗುತ್ತಿಗೆದಾರರಾಗಿದ್ದ ಸಂತೋಷ್ ಪಾಟೀಲ್‌ಗಾದ ರೀತಿ ನನಗೂ ಆಗಬಹುದು ಅಥವಾ ಆಗದಿರಬಹುದು. ಇದರ ಅರಿವು ಇರುವುದರಿಂದಲೇ ಆಡಿಯೊ ಬಿಡುಗಡೆ ಮಾಡಿದ್ದೇನೆ’ ಎಂದರು.

‘ಚಿತ್ರದುರ್ಗದಲ್ಲಿ ಲಂಚದ ವ್ಯವಸ್ಥೆ ಜಾರಿಗೆ ತಂದವರೇ ಶಾಸಕ ತಿಪ್ಪಾರೆಡ್ಡಿ. ₹1 ಕೋಟಿಗೆ 10 ಲಕ್ಷ ಕಮಿಷನ್ ಅನ್ನು ಶಾಸಕರಿಗೆ ನೀಡಿದ್ದೇನೆ. ಸ್ವಲ್ಪ ಮೊತ್ತವನ್ನು ಎಂಜಿನಿಯರ್ ಮೂಲಕವೂ ನೀಡಲಾಗಿದೆ. ಕಳೆದ ಡಿಸೆಂಬರ್ 27ರಂದು ₹ 30 ಲಕ್ಷ ಮುಂಗಡ ಕಮಿಷನ್ ಕೇಳಿದ್ದರು. ನನ್ನ ಈ ಎಲ್ಲ ಆರೋಪಗಳೂ ಧರ್ಮಸ್ಥಳದ ಮಂಜುನಾಥನ ಆಣೆಯಾಗಿಯೂ ಸತ್ಯವಾಗಿದ್ದು, ತಿಪ್ಪಾರೆಡ್ಡಿ ಅವರ ಮಗನೇ ಸಾಕ್ಷಿ’ ಎಂದರು.

ಆ ಡಿ ಯೊ ದ ಲ್ಲಿ ರು ವು ದೇ ನು ? : ‘ನನ್ನನ್ನು ಹಿಡಿದು ಕೇಳುವ ಕೆಪಾಸಿಟಿ ನಿಮಗಿದೆ. ಆದರೆ, ಬಿಲ್ ಮಾಡಬೇಡಿ ಎಂದು ಹೇಳಿದರೆ ತಪ್ಪಾಗುತ್ತದೆ. ಕೊಡ್ತಿನಿ ಎಂದು ಹೇಳಿದ್ದೇನೆ. ಅರ್ಥ ಮಾಡಿಕೊಳ್ಳಿ. ₹5ಕೋಟಿ ₹6 ಕೋಟಿ ಪೆಂಡಿಂಗ್ ಇದೆ. ನಾನು ಹೇಗೆ ಜೀವನ ಮಾಡಬೇಕು. ನಾವು ಮರ್ಯಾದೆ ಇಟ್ಟುಕೊಂಡಿರುತ್ತೀವಿ. ನೀವು ಹಾಗೆ ಮಾಡಬಾರದಿತ್ತು. ನೀವು ಅವರ ಹತ್ತಿರ (ಎಂಜಿನಿಯರ್‌ಗಳಿಗೆ) ಹಾಗೆ ಹೇಳಬಾರದಿತ್ತು’ ಎಂದು ಮಂಜುನಾಥ್ ಹೇಳಿದ್ದಾರೆ. ಇದಕ್ಕೆ ತಿಪ್ಪಾರೆಡ್ಡಿ ಪ್ರತಿಕ್ರಿಯಿಸಿದ್ದು, ‘ನಿಮ್ಮಂತಹ ಹಲವರ ಹತ್ತಿರ ಅಡ್ಜಸ್ಟ್ ಮಾಡಿಕೊಂಡಿದ್ದೇನೆ. ನಾನು ಎಂಜಿನಿಯರ್ ಹತ್ತಿರ ಮಾತನಾಡುತ್ತೇನೆ. ಹಳೆಯದ್ದು ನಾನೂ ಮಾತಾಡಲ್ಲ; ನೀನೂ ಮಾತಾಡಬೇಡ. ನಿನಗೆ ಕೆಲಸ ಕೊಡಬೇಡಿ ಅಂತ ಹೇಳಿಲ್ಲ’ ಎಂದು ಹೇಳಿದ್ದಾರೆ.

‘13-14 ಶಾಸಕರು, 4 ಸಚಿವರ ಬಗ್ಗೆ ದಾಖಲೆಗಳಿವೆ’: ‘ಕಮಿಷನ್ ಕೇಳಿದ ನಾಲ್ವರು ಸಚಿವರ ಮತ್ತು 13–14 ಶಾಸಕರ ಬಗ್ಗೆ ದಾಖಲೆಗಳಿವೆ. ಕಾನೂನು ಸಲಹೆ ಪಡೆದು ಒಂದು ತಿಂಗಳಲ್ಲಿ ಸಾಕ್ಷ್ಯಾಧಾರಗಳನ್ನು ಬಹಿರಂಗಪಡಿಸಲಾಗುವುದು’ ಎಂದು ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

‘ಹಲವು ಗುತ್ತಿಗೆದಾರರ ಬಳಿಕ ಆಡಿಯೊ ಮತ್ತು ವಾಟ್ಸ್‌ಆ್ಯಪ್ ದಾಖಲೆಗಳಿವೆ. ಆದರೆ, ಗುತ್ತಿಗೆದಾರ ಸಂತೋಷ್ ಪಾಟೀಲ್ ಸಾವಿನ ಬಳಿಕ ಕೆಲವರು ಭಯಪಡುತ್ತಿದ್ದಾರೆ. ಸಚಿವ ಮುನಿರತ್ನ ಆಸ್ತಿ ವಿವರ ಕೋರಿ ಆರ್‌ಟಿಐ ಅಡಿಯಲ್ಲಿ ಲೋಕಾಯುಕ್ತರಿಂದ ಮಾಹಿತಿ ಕೇಳಿದ್ದೇವೆ’ ಎಂದರು.

ಬಾಕಿ ಮೊತ್ತ ಬಿಡುಗಡೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಇದೇ 18ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುತ್ತಿಗೆದಾರರ ಬೃಹತ್ ಪ್ರತಿಭಟನೆ ನಡೆಯಲಿದೆ. ಲೋಕೋಪಯೋಗಿ, ನೀರಾವರಿ, ಬಿಬಿಎಂಪಿ ಸೇರಿದಂತೆ ವಿವಿಧ ಇಲಾಖೆಗಳಿಂದ ₹25 ಸಾವಿರ ಕೋಟಿ ಮೊತ್ತವನ್ನು ಸರ್ಕಾರ ಬಾಕಿ ಉಳಿಸಿಕೊಂಡಿದೆ. ಸಂಘವು ಯಾವುದೇ ಒಂದು ಪಕ್ಷ ಅಥವಾ ಸರ್ಕಾರದ ವಿರುದ್ಧ ಆರೋಪಿಸುತ್ತಿಲ್ಲ. ಇಡೀ ವ್ಯವಸ್ಥೆ ಕುರಿತು ಪ್ರಶ್ನಿಸುತ್ತಿದೆ’ ಎಂದರು.

ಕಾನೂನು ಚೌಕಟ್ಟಿನಲ್ಲೇ ಉತ್ತರ’– ಸಚಿವ ಎನ್.ಮುನಿರತ್ನ: ‘ಲೋಕಾಯುಕ್ತ ಅಥವಾ ನ್ಯಾಯಾಲಯಕ್ಕೆ ತೆರಳಲು ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರಿಗೆ ಕಾನೂನಿನಲ್ಲಿ ಅವಕಾಶವಿದೆ. ಅವರು ಎಲ್ಲಿಗೆ ಬೇಕಾದರೂ ಹೋಗಲಿ. ನಾನು ಕಾನೂನು ಚೌಕಟ್ಟಿನಲ್ಲಿಯೇ ಉತ್ತರಿಸುತ್ತೇನೆ’ ಎಂದು ಸಚಿವ ಎನ್. ಮುನಿರತ್ನ ಹೇಳಿದರು.

‘ಎಲ್ಲರಿಗೂ ಒಂದೇ ಕಾನೂನು. ದಾಖಲೆಗಳನ್ನು ಸಲ್ಲಿಸಿದರೆ ಅವರು ಶಿಕ್ಷೆಯಿಂದ ಪಾರಾಗಲಿದ್ದಾರೆ’ ಎಂದು ಅವರು ಹೇಳಿದರು.

ಕಾನೂನು ಹೋರಾಟ: ಶಾಸಕ ತಿಪ್ಪಾರೆಡ್ಡಿ

ಒಂದನೇ ಪುಟದಿಂದ

‘ಹಿಂದೆ ಲೋಕೋಪಯೋಗಿ ಸಚಿವರ ಎದುರೇ ನನ್ನ ವಿರುದ್ಧ ಆರೋಪ ಮಾಡಿದ್ದ. ಆಗ ಸಚಿವರು ಅವನ ಭಾಷಣವನ್ನು ನಿಲ್ಲಿಸಿದ್ದರು. ಅಧಿಕಾರಿಗಳಿಗೆ ಬೆದರಿಕೆ ಹಾಕುತ್ತಿದ್ದ. ಸಣ್ಣಪುಟ್ಟ ಗುತ್ತಿಗೆದಾರರು ಕೆಲಸ ಕೇಳಿದಾಗ ತಾರತಮ್ಯ ಮಾಡುತ್ತಿದ್ದ’ ಎಂದು ಶಾಸಕರು ಏಕವಚನದಲ್ಲಿಯೇ ವಾಗ್ದಾಳಿ ನಡೆಸಿದರು.

‘ಲೆಫ್ಟಿನೆಂಟ್ ಗವರ್ನರ್ ಹೆಡ್ ಮಾಸ್ಟರ್ ಅಲ್ಲ’

ನವದೆಹಲಿ (ಪಿಟಿಐ): ‘ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಅವರು ನಮ್ಮ ಮುಖ್ಯೋಪಾಧ್ಯಾಯರಲ್ಲ. ಅವರು ‘ಹೆಡ್ ಮಾಸ್ಟರ್’ ರೀತಿ ವರ್ತಿಸಬಾರದು’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಸೋಮವಾರ ಕಿಡಿಕಾರಿದ್ದಾರೆ.

ದೆಹಲಿ ಸರ್ಕಾರವು ಶಾಲಾ ಶಿಕ್ಷಕರನ್ನು ತರಬೇತಿಗಾಗಿ ಫಿನ್ಲೆಂಡ್‌ಗೆ ಕಳುಹಿಸಲು ನಿರ್ಧರಿಸಿತ್ತು. ಈ ಪ್ರಸ್ತಾವನೆಯನ್ನು ಸಕ್ಸೇನಾ ಅವರು ತಿರಸ್ಕರಿಸಿದ್ದರು. ಅವರ ಈ ನಿರ್ಧಾರವನ್ನು ಖಂಡಿಸಿ ದೆಹಲಿ ಸರ್ಕಾರದ ಸಚಿವರು ಹಾಗೂ ಶಾಸಕರು ಕೇಜ್ರಿವಾಲ್ ನೇತೃತ್ವದಲ್ಲಿ ಸೋಮವಾರ ವಿಧಾನಸಭೆಯಿಂದ ಲೆಫ್ಟಿನೆಂಟ್ ಗವರ್ನರ್ ಕಚೇರಿವರೆಗೂ ಪಾದಯಾತ್ರೆ ನಡೆಸಿದ್ದಾರೆ. ಈ ವೇಳೆ ಮಾತನಾಡಿದ ಕೇಜ್ರಿವಾಲ್, ‘ದೆಹಲಿಯು ಸರ್ವಾಧಿಕಾರಿ ಧೋರಣೆ ಸಹಿಸುವುದಿಲ್ಲ. ಯಾರೇ ಅಡ್ಡಿಪಡಿಸಿದರೂ ಶಿಕ್ಷಕರನ್ನು ಫಿನ್ಲೆಂಡ್‌ಗೆ ಕಳುಹಿಸುವ ನಿರ್ಧಾರದಿಂದ ನಮ್ಮ ಸರ್ಕಾರ ಹಿಂದೆ ಸರಿಯುವುದಿಲ್ಲ’ ಎಂದು ಹೇಳಿದ್ದಾರೆ.

ಆಡಳಿತಾರೂಢ ಎಎಪಿ ಸರ್ಕಾರದ ಶಾಸಕರು ಸೋಮವಾರ ವಿಧಾನಸಭೆಯಲ್ಲೂ ಗದ್ದಲ ನಡೆಸಿದ್ದಾರೆ. ಹೀಗಾಗಿ ದಿನದ ಕಲಾಪವನ್ನು ಮುಂದೂಡಲಾಗಿದೆ. ‘ಲೆಫ್ಟಿನೆಂಟ್ ಗವರ್ನರ್ ಸಾಹೇಬರೆ ಶಿಕ್ಷಕರನ್ನು ಫಿನ್ಲೆಂಡ್‌ಗೆ ಹೋಗಲು ಬಿಡಿ’ ಎಂಬ ಫಲಕಗಳನ್ನು ಹಿಡಿದಿದ್ದ ಶಾಸಕರು, ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಸಕ್ಸೇನಾ ವಿರುದ್ಧ ಘೋಷಣೆಗಳನ್ನೂ ಕೂಗಿದ್ದಾರೆ.

21ರಿಂದ ‘ವಿಜಯ ಸಂಕಲ್ಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 21 ರಿಂದ 29 ರವರೆಗೆ ರಾಜ್ಯವ್ಯಾಪಿ ‘ವಿಜಯಸಂಕಲ್ಪ’ ಅಭಿಯಾನವನ್ನು ಬಿಜೆಪಿ ನಡೆಸಲಿದ್ದು, ಎರಡು ಕೋಟಿ ಜನರನ್ನು ಸಂಪರ್ಕಿಸುವ ಗುರಿ ಹೊಂದಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಕ್ಷದ 39 ಸಂಘಟನಾ ಜಿಲ್ಲೆಗಳು, 312 ಮಂಡಲಗಳಲ್ಲಿ ಈ ಅಭಿಯಾನ ನಡೆಯಲಿದೆ. ಮಹಾಶಕ್ತಿ ಕೇಂದ್ರ ಮತ್ತು ಶಕ್ತಿ ಕೇಂದ್ರಗಳ ಸಭೆಗಳು ನಡೆಯಲಿವೆ ಎಂದು ಅವರು ತಿಳಿಸಿದರು.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ವಿಜಯಪುರದಲ್ಲಿ ಜ.21 ರಂದು ಈ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಭಾಗವಹಿಸಲಿದ್ದಾರೆ. ಸುಮಾರು 50 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಲಿದ್ದಾರೆ ಎಂದರು.

ಈ ಅಭಿಯಾನದ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜನ್‌ಧನ್, ಪಿಎಂ ಕಿಸಾನ್, ಪಿಎಂ ಆವಾಸ್, ಉಜ್ವಲಾ, ರೈತ ವಿದ್ಯಾನಿಧಿ ಸೇರಿದಂತೆ ಎಲ್ಲ ಕಾರ್ಯಕ್ರಮಗಳ ಫಲಾನುಭವಿಗಳನ್ನು ಸಂಕರ್ಿಸುತ್ತೇವೆ. ಸುಮಾರು ಎರಡು ಕೋಟಿಗೂ ಹೆಚ್ಚು ಫಲಾನುಭವಿಗಳು ಎಂದರೆ, ಒಂದು ಕೋಟಿ ಕುಟುಂಬಗಳನ್ನು ಸಂಪರ್ಕಿಸುವ ಗುರಿ ಹಮ್ಮಿಕೊಳ್ಳಲಾಗಿದೆ ಎಂದರು.

ಅವರ ಮನೆಗಳ ಮೇಲೆ ಪಕ್ಷವನ್ನು ಬೆಂಬಲಿಸುವ ಉದ್ದೇಶದ ಸ್ಟಿಕ್ಕರ್‌ಗಳನ್ನು ಅಂಟಿಸಲಾಗುವುದು. ಇದಕ್ಕಾಗಿ ಮೂರು ಕೋಟಿ ಸ್ಟಿಕ್ಕರ್ ಹಂಚಲಾಗುವುದು. ಈ ಕಾರ್ಯಕ್ರಮ ಏಕ ಕಾಲದಲ್ಲಿ 58 ಸಾವಿರ ಬೂತ್‌ಗಳಲ್ಲಿ ನಡೆಯಲಿದೆ. ಇದರಲ್ಲಿ ಕೇಂದ್ರ ಸಚಿವರು, ರಾಜ್ಯ ಸಚಿವರು, ಸಂಸದರು, ಶಾಸಕರು ಭಾಗವಹಿಸಲಿದ್ದಾರೆ ಎಂದು ಅಶ್ವತ್ಥನಾರಾಯಣ ಹೇಳಿದರು.

ಇದೇ 29 ರಂದು ಪ್ರಧಾನಿ ಮೋದಿಯವರ ‘ಮನ್‌ಕಿ ಬಾತ್ ರೇಡಿಯೋ’ ಕಾರ್ಯಕ್ರಮವನ್ನು ಎಲ್ಲ ಬೂತ್‌ಗಳಲ್ಲಿ ಒಟ್ಟಿಗೇ ಕುಳಿತು ಆಲಿಸುವ ಕಾರ್ಯಕ್ರಮವೂ ಇದೆ. ಇದರೊಂದಿಗೆ ಅಭಿಯಾನವನ್ನು ಪೂರ್ಣಗೊಳಿಸಲಾಗುವುದು ಎಂದು ಅಶ್ವತ್ಥನಾರಾಯಣ ಅವರು ಹೇಳಿದರು.

ಬಿಜೆಪಿ ಪ್ರಚಾರ ಸಾಮಗ್ರಿಯನ್ನು ಸಚಿವ ಅಶ್ವತ್ಥನಾರಾಯಣ ಅವರು ಬಿಡುಗಡೆ ಮಾಡಿದರು. ಪಕ್ಷದ ಪ್ರಧಾನಕಾರ್ಯದರ್ಶಿ ಸಿದ್ದರಾಜು ಮತ್ತು ಕಾರ್ಯದರ್ಶಿ ಜಗದೀಶ್ ಹಿರೇಮನಿ ಇದ್ದರು.

‘ನಾಲಾಯಕ್ ಕಾರ್ಯಕ್ರಮ’

ಕಾಂಗ್ರೆಸ್ ಪಕ್ಷ ಹಮ್ಮಿಕೊಂಡ ‘ನಾ ನಾಯಕಿ’ ಕಾರ್ಯಕ್ರಮವಲ್ಲ ‘ನಾಲಾಯಕ್’ ಕಾರ್ಯಕ್ರಮ ಎಂದು ಸಚಿವ ಡಾ. ಅಶ್ವತ್ಥ ನಾರಾಯಣ ವ್ಯಾಖ್ಯಾನಿಸಿದರು.

‘ಈ ಕಾರ್ಯಕ್ರಮದಿಂದ ಏನೂ ಪ್ರಯೋಜನ ಆಗುವುದಿಲ್ಲ. ಉತ್ತರ ಪ್ರದೇಶದಲ್ಲಿ ಪ್ರಿಯಾಂಕಾ ಗಾಂಧಿ ಅವರು ಚುನಾವಣೆಯಲ್ಲಿ ಪ್ರಚಾರಕ್ಕೆ ಹೋದ ಮೇಲೆ ಅಲ್ಲಿ ಕಾಂಗ್ರೆಸ್ ಸಿಂಗಲ್ ಡಿಜಿಟ್‌ಗೆ ಇಳಿಯಿತು. ಇಡೀ ದೇಶದಲ್ಲಿ ಕಾಂಗ್ರೆಸ್ ಅಪ್ರಸ್ತುತವಾಗಿದೆ’ ಎಂದು ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ವರ್ಗಾವಣೆಯ ಹೊಸ ನೀತಿಯ ಅನ್ವಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಆರಂಭ

ಕುಸಿದ ಮಕ್ಕಳ ಸಂಖ್ಯೆ; 10,500 ಶಿಕ್ಷಕರು ಹೆಚ್ಚುವರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಗಾವಣೆಯ ಹೊಸ ನೀತಿಯ ಅನ್ವಯ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗಳು ಆರಂಭವಾಗಿದ್ದು, ಮಕ್ಕಳು ಕಡಿಮೆ ಇರುವ ಶಾಲೆಗಳಲ್ಲಿನ 10,500 ಶಿಕ್ಷಕರನ್ನು ‘ಹೆಚ್ಚುವರಿ’ ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿದೆ.

ಸರ್ಕಾರ ಒಂದರಿಂದ ಐದನೇ ತರಗತಿಯವರೆಗೆ 40 ವಿದ್ಯಾರ್ಥಿಗಳಿಗೆ, ಆರರಿಂದ ಎಂಟನೇ ತರಗತಿಯವರೆಗೆ 35 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಂತೆ ಅನುಪಾತ ನಿಗದಿ ಮಾಡಿದೆ. ಈ ಅನುಪಾತಕ್ಕೆ ಅನುಗುಣವಾಗಿ ರಾಜ್ಯದ ವಿವಿಧ ಶಾಲೆಗಳಲ್ಲಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವರ್ಷ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದ್ದು, ಎರಡು ವರ್ಷಗಳಿಗೆ ಒಮ್ಮೆ ಹೆಚ್ಚುವರಿ ಶಿಕ್ಷಕರ ಪಟ್ಟಿ ಸಿದ್ಧಪಡಿಸಿ, ಅವರನ್ನು ಅಗತ್ಯವಿರುವ ಇತರೆ ಶಾಲೆಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಈ ಬಾರಿ 10,500 ಶಿಕ್ಷಕರು ಹೆಚ್ಚುವರಿಯಾಗಿದ್ದು, ವರ್ಗಾವಣೆಗೂ ಮೊದಲು ಅವರಿಗೆ ಸ್ಥಳ ನಿಯುಕ್ತಿ ಮಾಡಲಾಗುತ್ತಿದೆ. ನಂತರ ಉಳಿಯುವ ಖಾಲಿ ಹುದ್ದೆಗಳಿಗೆ ಕೌನ್ಸೆಲಿಂಗ್ ಮೂಲಕ ಸಾಮಾನ್ಯ ವರ್ಗಾವಣೆ ಮಾಡಲಾಗುತ್ತದೆ.

ಒಂದರಿಂದ ಎಂಟನೇ ತರಗತಿಯವರೆಗಿನ ಪ್ರಾಥಮಿಕ ಶಾಲೆಗಳಲ್ಲಿ 1.53 ಲಕ್ಷ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ವರ್ಗಾವಣೆಯ ನೀತಿಯಂತೆ ಶೇ 7ರಷ್ಟು ಶಿಕ್ಷಕರು ವರ್ಗಾವಣೆಗೆ ಅವಕಾಶ ಪಡೆಯುತ್ತಾರೆ. ಅಂದರೆ 10,700 ಶಿಕ್ಷಕರು ಈ ಬಾರಿ ವರ್ಗಾವಣೆಗೆ ಅರ್ಹತೆ ಪಡೆಯಲಿದ್ದಾರೆ. ಅಷ್ಟೇ ಸಂಖ್ಯೆಯ ಶಿಕ್ಷಕರು ಹೆಚ್ಚುವರಿಯಾಗಿದ್ದಾರೆ.

200ಕ್ಕಿಂತ ಹೆಚ್ಚಿದ್ದರಷ್ಟೇ ದೈಹಿಕ ಶಿಕ್ಷಣ ಶಿಕ್ಷಕರು: ಯಾವುದೇ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 200ಕ್ಕಿಂತ ಹೆಚ್ಚು ಮಕ್ಕಳಿದ್ದರಷ್ಟೇ ದೈಹಿಕ ಶಿಕ್ಷಣ ಶಿಕ್ಷಕರನ್ನು ಸರ್ಕಾರ ನೀಡುತ್ತದೆ. 200ಕ್ಕಿಂತ ಕಡಿಮೆ ಮಕ್ಕಳಿದ್ದರೆ ಅಲ್ಲಿಗೆ ಅವಕಾಶವಿಲ್ಲ. ಈಗಾಗಲೇ ನೇಮಕಗೊಂಡಿರುವ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾದರೆ ಅವರನ್ನು ಹೆಚ್ಚುವರಿ ಎಂದು ಪರಿಗಣಿಸಿ, ಅಗತ್ಯವಿರುವ ಶಾಲೆಗಳಿಗೆ ನಿಯೋಜಿಸಲಾಗುತ್ತಿದೆ.

‘200ಕ್ಕಿಂತ ಕಡಿಮೆ ಮಕ್ಕಳು ಇದ್ದರೆ ದೈಹಿಕ ಶಿಕ್ಷಣ ಶಿಕ್ಷಕರು ಬೇಡ ಎಂಬ ಇಲಾಖೆಯ ನಿರ್ಧಾರವೇ ಅವೈಜ್ಞಾನಿಕ. 199 ಇರುವ ಮಕ್ಕಳು ದೈಹಿಕ ಶಿಕ್ಷಣ ತರಬೇತಿಯಿಂದ ವಂಚಿತರಾಗಬೇಕೇ? ಪ್ರತಿ ಮಗುವೂ ಶಿಕ್ಷಣದಿಂದ ವಂಚಿತವಾಗಬಾರದು ಎಂಬ ಸರ್ಕಾರದ ಧ್ಯೇಯಕ್ಕೆ ಇಂತಹ ನೀತಿಗಳು ವಿರುದ್ಧವಾಗಿವೆ. ಶಿಕ್ಷಣ ವ್ಯವಸ್ಥೆ ಸಂಪೂರ್ಣ ಹಾಳಾಗುತ್ತಿರುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ತಕ್ಷಣ ಹೆಚ್ಚುವರಿ ಶಿಕ್ಷಕರ ವರ್ಗಾವಣೆಗೆ ತಡೆಹಾಕಬೇಕು’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಶಿಕ್ಷಣ ಇಲಾಖೆಯ ಆಯುಕ್ತ ಆರ್.ವಿಶಾಲ್ ಅವರಿಗೆ ಲಿಖಿತ ಪತ್ರ ಬರೆದಿದ್ದಾರೆ.

ಬಡ್ತಿ ನೀಡಲು ಶಿಕ್ಷಕರ ಸಂಘ ಆಗ್ರಹ

ಸರ್ಕಾರ ಹಿಂದೆ ನೀಡಿದ್ದ ಭರವಸೆಯಂತೆ ವರ್ಗಾವಣೆಗೂ ಮೊದಲು ಶಿಕ್ಷಕರಿಗೆ ಬಡ್ತಿ ನೀಡಬೇಕಿತ್ತು. ಸುಮಾರು 5 ಸಾವಿರ ಶಿಕ್ಷಕರು ಬಡ್ತಿ ನಿರೀಕ್ಷೆಯಲ್ಲಿ ಇದ್ದಾರೆ. ಆದರೆ, ಬಡ್ತಿ ಸಮಿತಿ ಸಭೆಗಳನ್ನು ಆಯೋಜಿಸದಂತೆ ಇಲಾಖೆ ಸುತ್ತೋಲೆ ಹೊರಡಿಸಿದೆ. ಇದರಿಂದ ಪ್ರಸ್ತುತ ನಿವೃತ್ತಿ ಹೊಂದಲಿರುವ ಒಂದು ಸಾವಿರಕ್ಕೂ ಹೆಚ್ಚು ಶಿಕ್ಷಕರಿಗೆ ಅನ್ಯಾಯವಾಗುತ್ತದೆ. ತಕ್ಷಣ ಬಡ್ತಿ ಪ್ರಕ್ರಿಯೆ ಆರಂಭಿಸಬೇಕು ಎಂದು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಂಭುಲಿಂಗನಗೌಡ ಪಾಟೀಲ, ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ನುಗ್ಗಲಿ ಆಗ್ರಹಿಸಿದ್ದಾರೆ.

ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಶಫಿ ಸಅದಿ ಅಸಮಾಧಾನ

ದರ್ಗಾ ತೆರವು ಹಿಂದೆ ಷಡ್ಯಂತ್ರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಇಲ್ಲಿನ ಬೈರಿದೇವರಕೊಪ್ಪದ ಹಜರತ್ ಸೈಯ್ಯದ್ ಮಹ್ಮದ್ ಶಾ ಖಾದ್ರಿ ಅವರ ದರ್ಗಾ ತೆರವು ಕ್ರಮ ಅಲ್ಪ-ಸಂಖ್ಯಾತರ ವಿರುದ್ಧ ನಡೆಯುತ್ತಿರುವ ಷಡ್ಯಂತ್ರದ ಭಾಗವಾಗಿದೆ' ಎಂದು ಎಂದು ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಶಫಿ ಸಅದಿ ಅಸಮಾಧಾನ ವ್ಯಕ್ತಪಡಿಸಿದರು.

ಸೋಮವಾರ ಇಲ್ಲಿ ಅವರು ದರ್ಗಾ ಸಮಿತಿ ಪದಾಧಿಕಾರಿಗಳು, ಸ್ಥಳೀಯ ಮುಸ್ಲಿಂ ಮುಖಂಡರ ಜೊತೆಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ದರ್ಗಾ ತೆರವು ಹಿಂದಿನ ಷಡ್ಯಂತ್ರದ ವಿರುದ್ಧ ಹಿಂದೂ, ಮುಸ್ಲಿಮರು ಒಗ್ಗಟ್ಟಾಗಿ ಹೋರಾಡಬೇಕಿದೆ. ಕರ್ನಾಟಕ ಬಸವಣ್ಣ ಸೇರಿ ಹಲವು ದಾರ್ಶನಿಕರ ನಾಡಾಗಿದ್ದು, ಶಾಂತಿ ಮತ್ತು ಸಹಬಾಳ್ವೆಗೆ ಹೆಸರಾಗಿದೆ. ಇಲ್ಲಿ ಕೋಮು ರಾಜಕಾರಣ ಹಾಗೂ ಧ್ರುವೀಕರಣ ನಡೆಯಬಾರದು' ಎಂದು ಪ್ರತಿಪಾದಿಸಿದರು.

ಪರಿಪರಿಯಾಗಿ ಬೇಡಿಕೊಂಡೆ: 'ದರ್ಗಾ ತೆರವು ವಿಷಯ ಗೊತ್ತಾದ ತಕ್ಷಣ ಮುಖ್ಯಮಂತ್ರಿ, ಜಿಲ್ಲಾಧಿಕಾರಿ, ಸ್ಥಳೀಯ ಶಾಸಕರು, ವಿರೋಧ ಪಕ್ಷದ ನಾಯಕರು ಹಾಗೂ ಮುಸ್ಲಿಂ ಸಮುದಾಯದ ಜನಪ್ರತಿನಿಧಿಗಳಿಗೆ ಕರೆ ಮಾಡಿ ಕಾರ್ಯಾಚರಣೆ ನಿಲ್ಲಿಸಲು ಕೋರಿದ್ದೆ. ಅವಕಾಶ ಕೊಟ್ಟರೆ, ನಾವೇ ಸ್ಥಳಾಂತರಿಸಿಕೊಳ್ಳುತ್ತೇವೆ ಎಂದು ಡಿ.ಸಿ.ಗೆ ಪರಿಪರಿಯಾಗಿ ಬೇಡಿಕೊಂಡೆ. ಕೋರ್ಟ್ ಆದೇಶ ಪಾಲಿಸಲೇಬೇಕು ಎಂದು ಹೇಳಿ ದರ್ಗಾ ತೆರವುಗೊಳಿಸಿದರು' ಎಂದರು.

'ಯಾವುದೇ ಕೋರ್ಟ್ ಆದೇಶಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ತೆರವಿಗೆ ಮುಂಚೆ ನೋಟಿಸ್ ಕೊಡಬೇಕು. ದರ್ಗಾ ವಿಷಯದಲ್ಲಿ ಅದನ್ನು ಪಾಲಿಸಿಲ್ಲ. ದರ್ಗಾ, ಮಸೀದಿ, ಮಂದಿರ, ಚರ್ಚ್ ಭಾವನಾತ್ಮಕ ವಿಷಯಗಳು. ಯಾವುದೇ ಕಾರಣಕ್ಕೂ ಆತುರದ ನಿರ್ಧಾರ ಕೈಗೊಳ್ಳಬಾರದು' ಎಂದು ಹೇಳಿದರು.

'ಹೈಕೋರ್ಟ್‌ಗೆ ವರದಿ ಸಲ್ಲಿಕೆ'

'ದರ್ಗಾ ತೆರವು ಕುರಿತು ವಿಚಾರಣೆ ನಡೆಸಿರುವ ಹೈಕೋರ್ಟ್, ಸ್ಥಳಕ್ಕೆ ವಕ್ಫ್ ಮಂಡಳಿ ಅಧ್ಯಕ್ಷರು ಹಾಗೂ ಸದಸ್ಯರು ಭೇಟಿ ನೀಡಿ ವರದಿ ನೀಡಲು ಸೂಚಿಸಿದೆ. ದರ್ಗಾ ಸಮಿತಿ ಪದಾಧಿಕಾರಿಗಳು ಹಾಗೂ ಸ್ಥಳೀಯ ಮುಖಂಡರ ಜೊತೆ ಸಭೆ ನಡೆಸಿದ್ದು, ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿ ವರದಿ ಸಲ್ಲಿಸುವೆ. ಮುಂದೆ ಏನಾಗಬೇಕು ಎಂಬುದನ್ನು ಕೋರ್ಟ್ ನಿರ್ಧರಿಸಲಿದೆ' ಎಂದು ಮೌಲಾನಾ ಶಫಿ ಸಅದಿ ಹೇಳಿದರು.

26ನೇ ರಾಷ್ಟ್ರೀಯ ಯುವಜನೋತ್ಸವ ಸಂಪನ್ನ

ಮಧುರ ನೆನಪು; ಭರವಸೆಯ ಬೆಳಕು

ಪ್ರಜಾವಾಣಿ ವಾರ್ತೆ

ಧಾರವಾಡದ ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ ಸೋಮವಾರ ನಡೆದ ಸಮಾರೋಪದಲ್ಲಿ ಬಹುಮಾನ ಪಡೆದ ನಂತರ ಪಂಜಾಬ್ ತಂಡದ ಸಂಭ್ರಮ —ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ

ಧಾರವಾಡ: ದೇಶದ ವಿವಿಧ ಭಾಗಗಳಿಂದ ಹಲವು ನಿರೀಕ್ಷೆಗಳೊಂದಿಗೆ ಬಂದಿದ್ದ ಯುವ ಮನಸ್ಸುಗಳು ಧಾರವಾಡದ ಮಧುರ ನೆನಪು ಹಾಗೂ ಭರವಸೆಯ ಬೆಳಕನ್ನು ಹೊತ್ತೊಯ್ದರು.

ಸೋಮವಾರ ನಡೆದ 26ನೇ ರಾಷ್ಟ್ರೀಯ ಯುವಜನೋತ್ಸವ ಸಮಾರೋಪದಲ್ಲಿ ಪಾಲ್ಗೊಂಡ ಪ್ರತಿನಿಧಿಗಳಲ್ಲಿ ಉತ್ಸಾಹದ ಜತೆಗೆ ಬಹುಮಾನ ಯಾರಿಗೆ ಎಂಬ ಕುತೂಹಲ ಮನೆ ಮಾಡಿತ್ತು.

ಐದು ದಿನಗಳಿಂದ ನಡೆದ ಜಾನಪದ ನೃತ್ಯ ಹಾಗೂ ಹಾಡಿನ ಸ್ಪರ್ಧೆಯ ಫಲಿತಾಂಶಕ್ಕಾಗಿ 8 ಕೇಂದ್ರಾಡಳಿತ ಪ್ರದೇಶ ಹಾಗೂ ಆತಿಥೇಯ ಕರ್ನಾಟಕ ಸೇರಿದಂತೆ 28 ರಾಜ್ಯಗಳ ತಂಡಗಳು ತುದಿಗಾಲಲ್ಲಿ ನಿಂತಿದ್ದವು.

ಜಾನಪದ ನೃತ್ಯದಲ್ಲಿ ಮೊದಲ ಬಹುಮಾನ ಪಂಜಾಬ್ ತಂಡಕ್ಕೆ ಘೋಷಣೆ-ಯಾಗುತ್ತಿದ್ದಂತೆ, 'ಜೊ ಬೋಲೆ... ಸೋ ನಿಹಾಲ್...' ಎಂಬ ಘೋಷಣೆ ಮೊಳಗಿತು. ಪಂಜಾಬ್ ತಂಡದವರ ಸಂಭ್ರಮ ಮುಗಿಲು ಮುಟ್ಟಿತ್ತು. ಈ ವಿಭಾಗದಲ್ಲಿ ಗುಜರಾತ್ ಹಾಗೂ ಕೇರಳ ಕ್ರಮವಾಗಿ ಎರಡು ಹಾಗೂ 3ನೇ ಸ್ಥಾನ ಪಡೆದವು.

'ಜಾನಪದ ಹಾಡು' ಸ್ಪರ್ಧೆಯ ಬಹುಮಾನ ಪ್ರಕಟಣೆ ಸಂದರ್ಭದಲ್ಲಿ ಮೊದಲಿಗೆ ಘೋಷಣೆಯಾದ ಕರ್ನಾಟಕ ತಂಡದ ಹೆಸರಿಗೂ ಅದೇ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ವಿಭಾಗದ ಮೊದಲ ಬಹುಮಾನ ಉತ್ತರ ಪ್ರದೇಶಕ್ಕೆ ಹಾಗೂ ದ್ವಿತೀಯ ಬಹುಮಾನ ಅಸ್ಸಾಂ ತಂಡಕ್ಕೆ ಲಭಿಸಿತು.

ಹೊರರಾಜ್ಯಗಳ ಪ್ರತಿನಿಧಿಗಳು ಧಾರವಾಡ ಹಾಗೂ ಕರ್ನಾಟಕದ ಆತಿಥ್ಯವನ್ನು ಮನಸಾರೆ ಹೊಗಳಿದರು. ಪ್ರತಿ ಪ್ರದೇಶದ ಸಾಂಪ್ರದಾಯಿಕ ಉಡುಗೆಯಲ್ಲಿಯೇ ಸಮಾರೋಪದಲ್ಲಿ ಪಾಲ್ಗೊಂಡಿದ್ದರು.

ಲಡಾಕ್‌ನ ಮಾಸೂಮಾ ಪ್ರತಿಕ್ರಿಯಿಸಿ, 'ಕೇರಳದ ಲುಂಗಿ, ಕರ್ನಾಟಕದ ಊಟ, ಕೊಲ್ಹಾಪುರದ ಚಪ್ಪಲಿ ಸೇರಿದಂತೆ ಸಮಗ್ರ ಭಾರತದ ದರ್ಶನವಾಯಿತು' ಎಂದರು.

ಸಿಕ್ಕಿಂನ ಭೀಮ್ ಸುಬ್ಬು ಪ್ರತಿಕ್ರಿಯಿಸಿ, 'ಎಲ್ಲ ರಾಜ್ಯಗಳ ಜಾನಪದ ಕಲೆಯನ್ನು ಒಂದೇ ಕಡೆ ನೋಡುವ ಸೌಭಾಗ್ಯ ಇಲ್ಲಿ ದೊರೆಯಿತು. ಭಾರತವನ್ನು ನೋಡುವುದು ಇನ್ನೂ ಸಾಕಷ್ಟಿದೆ ಎನಿಸಿತು' ಎಂದರು.

ಕೊನೆಯ ದಿನ ಕರ್ನಾಟಕ ಕಾಲೇಜು ಮೈದಾನದಲ್ಲಿ ರಸ ಸಂಜೆ ಕಾರ್ಯಕ್ರಮದೊಂದಿಗೆ ಐದು ದಿನಗಳ ರಾಷ್ಟ್ರೀಯ ಯುವಜನೋತ್ಸವಕ್ಕೆ ಸಂಭ್ರಮದ ತೆರೆ ಬಿದ್ದಿತು.

ಸಂಕ್ಷಿಪ್ತ ಸುದ್ದಿ

ಬಸವರಾಜು, ಗುರುಬಸವ ಪಟ್ಟದ್ದೇವರಿಗೆ ಪ್ರಶಸ್ತಿ

ಬಾಗಲಕೋಟೆ: ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯು 'ಸಂಯಮ' ವಾರ್ಷಿಕ ಪ್ರಶಸ್ತಿಗೆ 2021ನೇ ಸಾಲಿಗೆ ಭಾಲ್ಕಿಯ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದ್ದೇವರು, 2022ನೇ ಸಾಲಿಗೆ ಮೈಸೂರಿನ ಬಸವಮಾರ್ಗ ಫೌಂಡೇಷನ್ ಮುಖ್ಯಸ್ಥ ಎಸ್.ಬಸವರಾಜು ಅವರನ್ನು ಆಯ್ಕೆ ಮಾಡಿದೆ.

ಗುರುಬಸವ ಪಟ್ಟದ್ದೇವರು

ಎಸ್. ಬಸವರಾಜು

ಮಂಡಳಿ ಅಧ್ಯಕ್ಷ ಮಲ್ಲಿಕಾರ್ಜುನ ತುಬಾಕಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದು, 'ಪ್ರಶಸ್ತಿ ತಲಾ ₹1 ಲಕ್ಷ ನಗದು, ಸ್ಮರಣಿಕೆ ಒಳಗೊಂಡಿದೆ. ಜ.18ರಂದು ಬೆಳಿಗ್ಗೆ 10.30ಕ್ಕೆ ಇಳಕಲ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ತಿಳಿಸಿದರು.

ಎಸ್‌ವಿಪಿ ಸಂಸ್ಮರಣ ಪ್ರಶಸ್ತಿಗೆ ಆಯ್ಕೆ

ಮಂಗಳೂರು: ಪ್ರೊ.ಎಸ್.ವಿ. ಪರಮೇಶ್ವರ ಭಟ್ಟ ಸಂಸ್ಮರಣ ಪ್ರಶಸ್ತಿಗೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕ, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಡಾ.ತಾಳ್ತಜೆ ವಸಂತ ಕುಮಾರ್ (2022ರ ಸಾಲು) ಹಾಗೂ ವಿಮರ್ಶಕ ಡಾ.ಒ.ಎಲ್. ನಾಗಭೂಷಣ ಸ್ವಾಮಿ (2023ನೇ ವರ್ಷ) ಅವರನ್ನು ಆಯ್ಕೆ ಮಾಡಲಾಗಿದೆ.

ಡಾ.ನಾಗಭೂಷಣ ಸ್ವಾಮಿ

ಡಾ.ತಾಳ್ತಜೆ ವಸಂತ ಕುಮಾರ್

ಪ್ರಶಸ್ತಿ ತಲಾ ₹10 ಸಾವಿರ ನಗದು ಒಳಗೊಂಡಿದೆ. ಪ್ರೊ.ಬಿ.ಎ.ವಿವೇಕ ರೈ ಅಧ್ಯಕ್ಷತೆಯ ಸಮಿತಿ ಆಯ್ಕೆ ಮಾಡಿದೆ. ಪ್ರೊ. ಎಸ್.ವಿ.ಪಿ ಜನ್ಮದಿನವಾದ ಫೆ.8ರಂದು ಮಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ಎಸ್‌ವಿಪಿ ಸಂಸ್ಮರಣ ಸಮಿತಿಯ ಕಾರ್ಯದರ್ಶಿ ಡಾ.ನರಸಿಂಹ ಮೂರ್ತಿ ತಿಳಿಸಿದ್ದಾರೆ.

ವಕ್ಫ್ ಬೋರ್ಡ್‌ಗೆ ನೋಟಿಸ್

ಬೆಳಗಾವಿ: 'ಇಲ್ಲಿನ ಸಾರಥಿ ನಗರದಲ್ಲಿ ಮಸೀದಿ ಅನಧಿಕೃತ ನಿರ್ಮಾಣ ಪೂರ್ಣಗೊಳ್ಳುತ್ತಿದ್ದು, ಕಾಮಗಾರಿ ತಡೆಯಬೇಕು ಹಾಗೂ ಈಗಿನಿಂದಲೇ ಧಾರ್ಮಿಕ ಚಟುವಟಿಕೆ ನಿಲ್ಲಿಸಬೇಕು' ಎಂದು ಮಹಾನಗರ ಪಾಲಿಕೆ ಆಯುಕ್ತರು ಜಿಲ್ಲಾ ವಕ್ಫ್ ಬೋರ್ಡ್ ಕಾರ್ಯಾಲಯದ ಅಧಿಕಾರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

'ಮನೆ ನಿರ್ಮಾಣಕ್ಕೆ ಅನುಮತಿ ಪಡೆದು, ಮಸೀದಿ ನಿರ್ಮಿಸಲಾಗಿದೆ' ಎಂದು ಬಿಜೆಪಿ ಈಚೆಗೆ ಧರಣಿ ನಡೆಸಿತ್ತು. ಇದಕ್ಕೆ ಸ್ಪಂದಿಸಿದ ಪಾಲಿಕೆ ಆಯುಕ್ತ ಡಾ.ರುದ್ರೇಶ್ ಘಾಳಿ, ನೋಟಿಸ್ ನೀಡಿದ್ದಾರೆ. ಅನುಮೋದಿತ ನಕ್ಷೆ ಉಲ್ಲಂಘಿಸಿ ನಿರ್ಮಾಣ, ಭೂ ಬಳಕೆ ಮಾರ್ಗಸೂಚಿ ಉಲ್ಲಂಘಿ-ಸಲಾಗಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ನಿಧನ ವಾರ್ತೆ

ಹೆಗ್ಗಪ್ಪ ಡಿ. ಲಮಾಣಿ

ತಡಸ (ಹಾವೇರಿ ಜಿಲ್ಲೆ): ಧುಂಡಶಿ ತಾಂಡಾ ಗ್ರಾಮದ ನಿವಾಸಿ, ಮಾಜಿ ಶಿಕ್ಷಣ ಹಾಗೂ ಸಕ್ಕರೆ ಖಾತೆ ಸಚಿವ ಹೆಗ್ಗಪ್ಪ ದೇಶಪ್ಪ ಲಮಾಣಿ (85) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ನಾಲ್ವರು ಪುತ್ರರಿದ್ದಾರೆ. ವೀರಪ್ಪ ಮೊಯ್ಲಿ ಸಂಪುಟದಲ್ಲಿ ಶಿಕ್ಷಣ, ಸಕ್ಕರೆ ಖಾತೆ ಸಚಿವರಾಗಿದ್ದರು. ಎಸ್. ಬಂಗಾರಪ್ಪ ಅವಧಿಯಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿದ್ದರು. ಮಂಗಳವಾರ ಮಧ್ಯಾಹ್ನ 12ಕ್ಕೆ ಧುಂಡಶಿ ತಾಂಡಾ ಗ್ರಾಮದ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬ ಮೂಲ ತಿಳಿಸಿದೆ.

ಕಿಸಾನ್ ಕಾಂಗ್ರೆಸ್ ಸಂಚಾಲಕ ಅಕ್ಮಲ್ ಮನೆಗೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಿಸಾನ್ ಕಾಂಗ್ರೆಸ್ ರಾಜ್ಯ ಘಟಕದ ಸಂಚಾಲಕ ಸಿ.ಎನ್. ಅಕ್ಮಲ್ ಅವರ ಮನೆ, ಕಚೇರಿ, ಕಾಫಿ ಕ್ಯೂರಿಂಗ್ ಘಟಕಗಳ ಮೇಲೆ ಐ.ಟಿ ಅಧಿಕಾರಿಗಳ ತಂಡ ಸೋಮವಾರ ದಾಳಿ ನಡೆಸಿ ಪರಿಶೀಲನೆ ನಡೆಸಿತು.

ಎಂಟು ವಾಹನಗಳಲ್ಲಿ ಬೆಳಿಗ್ಗೆಯೇ ಬಂದ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು, ಷರೀಫ್ ಗಲ್ಲಿಯ ಅಕ್ಮಲ್ ಮನೆ, ಕಚೇರಿ, ಕರ್ತಿಕೆರೆಯ ಕಾಫಿ ಕ್ಯೂರಿಂಗ್ ಘಟಕಗಳಲ್ಲಿ ದಾಖಲೆ ಪರಿಶೀಲನೆ ನಡೆಸಿದ್ದಾರೆ.

ರಾಜಕೀಯ ಪ್ರೇರಿತ: 'ಈ ದಾಳಿ ರಾಜಕೀಯ ಪ್ರೇರಿತ. ಈ ಮೂಲಕ ಕಾಂಗ್ರೆಸ್ ನಾಯಕರನ್ನು ಹತ್ತಿಕ್ಕಲು ಬಿಜೆಪಿ ಯತ್ನಿಸುತ್ತಿದೆ. ಸಿ.ಟಿ.ರವಿ ಕುತಂತ್ರದಿಂದ ದಾಳಿ ಮಾಡಿಸಿದ್ದಾರೆ' ಎಂದು ಕರ್ನಾಟಕ ಕಿಸಾನ್ ಕಾಂಗ್ರೆಸ್ ಘಟಕದ ಅಧ್ಯಕ್ಷ ಸಚಿನ್ ಮೀಗಾ ಟೀಕಿಸಿದ್ದಾರೆ.

ಪ್ರತಿಭಟನೆ: ಐಟಿ ದಾಳಿ ಖಂಡಿಸಿ ಅಕ್ಮಲ್ ಬೆಂಬಲಿಗರು ಪ್ರತಿಭಟನೆ ನಡೆಸಿದರು. ಷರೀಫ್ ಗಲ್ಲಿಯ ಅಕ್ಮಲ್ ಮನೆ ಮುಂದೆ ಸಂಜೆ ಜಮಾಯಿಸಿದ ಪ್ರತಿಭಟನಾಕಾರರು ಬಿಜೆಪಿ ವಿರುದ್ಧ ಘೋಷಣೆ ಕೂಗಿದರು.

ನೀಲ್‌ಗಾಯ್ ದಾಳಿ

ಅಯೋಧ್ಯ (ಉತ್ತರಪ್ರದೇಶ) (ಪಿಟಿಐ): ನಿರ್ಮಾಣ ಹಂತದಲ್ಲಿರುವ ರಾಮ ಮಂದಿರದ ಸ್ಥಳದಲ್ಲಿ ಕಾವಲುಗಾರರೊಬ್ಬರು ನೀಲ್‌ಗಾಯ್ ಆಕ್ರಮಣದಿಂದ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಸೋಮವಾರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಪ್ರಾಂತೀಯ ಸಶಸ್ತ್ರ ಪಡೆ 32ನೇ ಬೆಟಾಲಿಯನ್‌ನ ಕಮಾಂಡೊ ಮೊಹಮ್ಮದ್ ಹನೀಫ್ ಗಾಯಗೊಂಡವರು. 100 ಎಕರೆಗೂ ಹೆಚ್ಚಿರುವ ರಾಮಜನ್ಮಭೂಮಿಯ ಆವರಣದಲ್ಲಿ ಈ ಹಿಂದೆಯೂ ನೀಲ್‌ಗಾಯ್‌ಗಳು ಕಾಣಿಸಿದ್ದವು.

ಇನ್ನೂ ಸಿಗದ ಮೊಬೈಲ್ ಫೋನ್ ಸುಳಿವು

ಕೇಂದ್ರ ಸಚಿವ ಗಡ್ಕರಿಗೆ ಬೆದರಿಕೆ: ಮಹಾರಾಷ್ಟ್ರ ಪೊಲೀಸರಿಂದ ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ನಾಗ್ಪುರದ ಕಚೇರಿಗೆ ಬೆದರಿಕೆ ಕರೆ ಮಾಡಿದ್ದ ಕೈದಿ ಜಯೇಶ್ ಪೂಜಾರಿ ಕೈಗೆ ಮೊಬೈಲ್ ಫೋನ್ ಕೊಟ್ಟಿದ್ದು ಯಾರು? ಜೈಲಿನೊಳಗೆ ಮೊಬೈಲ್ ಫೋನ್ ಹೋಗಿದ್ದು ಹೇಗೆ? ಎಂಬ ಬಗ್ಗೆ ಅಧಿಕಾರಿಗಳಿಗೆ ಇನ್ನೂ ಸುಳಿವು ಸಿಕ್ಕಿಲ್ಲ.

ಹಿಂಡಲಗಾ ಜೈಲಿನಲ್ಲಿ ಇದ್ದುಕೊಂಡೇ ಶನಿವಾರ ಕರೆ ಮಾಡಿದ್ದ ಕೈದಿ, ತಾನು ಭೂಗತಪಾತಕಿ ದಾವೂದ್ ಇಬ್ರಾಹಿಂ ತಂಡದ ಸದಸ್ಯ, ₹100 ಕೋಟಿ ನೀಡುವಂತೆ ಬೆದರಿಕೆ ಒಡ್ಡಿದ್ದ. ಈ ಬಗ್ಗೆ ಮಹಾರಾಷ್ಟ್ರದ ಪೊಲೀಸರು ಪರಿಶೀಲಿಸಿದಾಗ ಅವನ 'ನಟೋರಿಯಸ್' ಚರಿತ್ರೆ ಹೊರಬಿದ್ದಿದೆ.

'ಜೈಲಿನೊಳಗೆ ಹಿರಿಯ ಅಧಿ-ಕಾರಿಗಳನ್ನು ಬಿಟ್ಟರೆ ಅನ್ಯರಿಗೆ ಮೊಬೈಲ್ ಅಥವಾ ಎಲೆಕ್ಟ್ರಾನಿಕ್ ಪರಿಕರ ಒಯ್ಯಲು ಅವಕಾಶವಿಲ್ಲ. ಹೀಗಾಗಿ, ಜಯೇಶ್‌ಗೆ ಮೊಬೈಲ್ ಸಿಕ್ಕಿದ್ದು ಹೇಗೆ? ಕರೆಗೆ ಬಳಸಿದ್ದ ಸಿಮ್ ಯಾರ ಹೆಸರಲ್ಲಿದೆ ಎಂದು ತನಿಖೆ ನಡೆದಿದೆ' ಎಂದು ಕಾರಾಗೃಹದ ಮುಖ್ಯ ಅಧೀಕ್ಷಕ ಕೃಷ್ಣಕುಮಾರ್ ತಿಳಿಸಿದರು.

'ಪ್ರಜಾವಾಣಿ'ಗೆ ಜೊತೆಗೆ ಮಾತನಾಡಿದ ಅವರು, 'ಕಾರಾಗೃಹದ ಗೋಡೆಗಳು ಕಿರಿದಾಗಿವೆ. ಹೊರಗಡೆ ನಿಂತು ಮೊಬೈಲ್ ಎಸೆದಿರುವ ಸಾಧ್ಯತೆ ಅಲ್ಲಗಳೆಯಲಾಗದು. ಸಿಬ್ಬಂದಿಯೇ ಒಯ್ದು ಕೊಟ್ಟಿರುವ ಆರೋಪವು ಇದೆ. ಒಟ್ಟು 68 ಸಿಸಿಟಿವಿ ಕ್ಯಾಮೆರಾಗಳಿ-ದ್ದು ಪರಿಶೀಲನೆ ಮಾಡಲಾಗುವುದು' ಎಂದೂ ಹೇಳಿದರು.

'ಇಲ್ಲಿ 900ಕ್ಕೂ ಹೆಚ್ಚು ಕೈದಿಗಳಿದ್ದಾರೆ. 120 ಸಿಬ್ಬಂದಿ ಇದ್ದೇವೆ. 50 ಸಿಬ್ಬಂದಿ ಕೊರತೆ ಇದೆ. ಬೇರೆ ಬೇರೆ ಕಡೆಯ ಅಪರಾಧಿಗಳನ್ನು ತಂದು ಇಲ್ಲಿಗೇ ಸೇರಿಸುತ್ತಾರೆ. ಅಪಾಯಕಾರಿ ಅಪರಾಧಿಗಳ ಮೇಲೆ ಪ್ರತ್ಯೇಕವಾಗಿ ಕಣ್ಣಿಡಬೇಕಾಗುತ್ತದೆ. ಸುರಕ್ಷತೆ ದೃಷ್ಟಿಯಿಂದ ಯಾವುದೇ ಲೋಪ ಆಗಿಲ್ಲ' ಎಂದರು.

ಜೈಲಿನೊಳಗೂ ಜೋರು: 'ಕೈದಿ ಜಯೇಶ್ ಜೈಲಿನಲ್ಲೂ ಹಲವರಿಗೆ ಬೆದರಿಕೆ ಹಾಕಿದ್ದ. ಆತನ ವರ್ತನೆಯೇ ಕ್ರೌರ್ಯದಿಂದ ಕೂಡಿದೆ' ಎಂದು ಜೈಲಿನ ಮೂಲಗಳು ತಿಳಿಸಿವೆ.

ಕೊಲೆ, ದರೋಡೆ ಸೇರಿ ಮೂರು ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾಗಿರುವ ಜಯೇಶ್ 16 ತಿಂಗಳ ಹಿಂದೆ ಹಿಂಡಲಗಾ ಜೈಲು ಸೇರಿದ್ದಾನೆ. ಜತೆಗಿದ್ದ ಇತರೆ ಕೈದಿಗಳ ಮೇಲೆ ದಬ್ಬಾಳಿಕೆ, ಅನುಚಿತ ವರ್ತನೆ ತೋರುವುದನ್ನು ಮುಂದುವರಿಸಿದ್ದ, ಆತನನ್ನು ಪ್ರತ್ಯೇಕ ಸೆಲ್‌ನಲ್ಲಿ ಇಡಲಾಗಿತ್ತು. ಜೈಲಿನ ಅಧಿಕಾರಿಗಳಿಗೂ ಆತ 'ಧಮ್ಕಿ' ಹಾಕಿದ್ದ ಎಂದು ಮೂಲಗಳು ಹೇಳಿವೆ.

ಹಿನ್ನೆಲೆ: ದಕ್ಷಿಣ ಕನ್ನಡ ಜಿಲ್ಲೆಯ ಕಡಬಾ ತಾಲ್ಲೂಕು ಶಿರಾಡಿ ನಿವಾಸಿಯಾದ ಈತ, 2008ರಲ್ಲಿ ಉಪ್ಪಿನಂಗಡಿ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರ ಕೊಲೆ ಮಾಡಿದ್ದ. ಮಂಗಳೂರು ಐದನೇ ಸೆಷನ್ಸ್ ಕೋರ್ಟ್ ಗಲ್ಲು ಶಿಕ್ಷೆ ವಿಧಿಸಿತ್ತು. 2019ರಲ್ಲಿ ಆತ ಮೈಸೂರು ಜೈಲಿಗೆ ಸ್ಥಳಾಂತರಗೊಂಡಿದ್ದ. 2021ರ ಸೆ. 14ರಂದು ಹಿಂಡಲಗಾ ಜೈಲಿಗೆ ಸ್ಥಳಾಂತರಿಸಲಾಗಿದೆ. ಸದ್ಯ ಮಹಾರಾಷ್ಟ್ರದ ಧನತೋಲಿ ಪೊಲೀಸ್ ಠಾಣೆಯಲ್ಲಿ ಜಯೇಶ್ ವಿರುದ್ಧ ಐಪಿಸಿ ಸೆಕ್ಷನ್ 1860ರ ಕಲಂ 385, 387, 506/2, 507 ಅಡಿ ಪ್ರಕರಣ ದಾಖಲಿಸಲಾಗಿದೆ.

> ಜೀವ ಬೆದರಿಕೆ ಹಾಕಿರುವ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಕೃತ್ಯದ ಹಿಂದಿರುವವರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ
>
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಮಹಾರಾಷ್ಟ್ರ ಪೊಲೀಸರು ತನಿಖೆ ಮುಂದುವರಿಸಿದೆ. ಕೋರ್ಟ್ ಅನುಮತಿ ಪಡೆದು ವಿಚಾರಣೆಗೆ ಕರೆದೊಯ್ಯುವ ಸಿದ್ಧತೆ ನಡೆಸಿದೆ
>
> **ಕೃಷ್ಣಕುಮಾರ,** ಮುಖ್ಯ ಅಧೀಕ್ಷಕ, ಹಿಂಡಲಗಾ ಕೇಂದ್ರ ಕಾರಾಗೃಹ, ಬೆಳಗಾವಿ

ಉತ್ತರಾಖಂಡ ಹೈಕೋರ್ಟ್ ಮೊರೆ ಹೋಗಲು ಅರ್ಜಿದಾರರಿಗೆ ಸೂಚನೆ

ಜೋಶಿಮಠ ಬಿಕ್ಕಟ್ಟು: ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಣೆ

ನವದೆಹಲಿ/ಶಿಮ್ಲಾ (ಪಿಟಿಐ): ಉತ್ತರಾಖಂಡದ ಭೂಕುಸಿತ ಪೀಡಿತ ಪಟ್ಟಣ ಜೋಶಿಮಠದ ದುರಂತವನ್ನು 'ರಾಷ್ಟ್ರೀಯ ವಿಪತ್ತು' ಎಂದು ಘೋಷಿಸಲು ನ್ಯಾಯಾಂಗ ಮಧ್ಯಪ್ರವೇಶಿಸಬೇಕು ಎಂದು ಕೋರಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ವಿಶಾಲ ವ್ಯಾಪ್ತಿಯ ಸಮಸ್ಯೆಗಳಿರುವ ಈ ಅರ್ಜಿ ಹೈಕೋರ್ಟ್ ವ್ಯಾಪ್ತಿಯಲ್ಲಿದ್ದು, ಅಲ್ಲಿಯೇ ವಿಚಾರಣೆ ಆಗಬೇಕಿರುವುದು ಸರಿಯಾದ ಕ್ರಮ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದೀವಾಲಾ ಅವರಿರುವ ತ್ರಿಸದಸ್ಯ ಪೀಠ ಹೇಳಿತು.

ಅರ್ಜಿದಾರರ ಪರ ವಕೀಲರು ಜೋಶಿಮಠದ ಜನರು ಸಾಯುತ್ತಿದ್ದಾರೆ ಎಂದಾಗ, 'ಸಾಮಾಜಿಕ ಮಾಧ್ಯಮದಲ್ಲಿ ಸದ್ದು ಮಾಡುವ ರೀತಿ ಅಂತಹ ಪದಗಳನ್ನು ವಿಚಾರಣಾ ಪ್ರಕ್ರಿಯೆಯಲ್ಲಿ ಬಳಸಬಾರದು' ಎಂದು ಪೀಠವು ತಾಕೀತು ಮಾಡಿತು.

ಅರ್ಜಿದಾರರಾದ ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ ಅವರಿಗೆ ತಮ್ಮ ಅರ್ಜಿಯನ್ನು ಉತ್ತರಾಖಂಡದ ಹೈಕೋರ್ಟ್‌ನಲ್ಲಿ ಸಲ್ಲಿಸಲು ಪೀಠವು ಸೂಚಿಸಿ, ಅನುಮತಿಸಿತು.

ಅಪಾಯ ವಲಯಗಳ ವರದಿಗೆ ಸುಖ್ಖು ಸೂಚನೆ: ಜೋಶಿಮಠದ ಭೂಕುಸಿತದ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಹಿಮಾಚಲ ಪ್ರದೇಶ ಮುಖ್ಯಮಂತ್ರಿ ಸುಖ್ವಿಂದರ್ ಸಿಂಗ್ ಸುಖ್ಖು ಅವರು ತಮ್ಮ ರಾಜ್ಯದಲ್ಲಿ ಭೂಕುಸಿತಗಳು ಮತ್ತು ಮುಳುಗುವ ಅಪಾಯವಿರುವ ವಲಯಗಳ ಸಮಗ್ರ ವರದಿ ಸಿದ್ಧಪಡಿಸುವಂತೆ ರಾಜ್ಯ ವಿಪತ್ತು ನಿರ್ವಹಣಾ ಅಧಿಕಾರಿಗಳಿಗೆ ಸೋಮವಾರ ನಿರ್ದೇಶನ ನೀಡಿದರು.

ಜೋಶಿಮಠದಲ್ಲಿ ಸೋಮವಾರ ಬಿರುಕು ಬಿಟ್ಟಿದ್ದ ಪಿಡಬ್ಲ್ಯುಡಿ ಅತಿಥಿಗೃಹದ ಎದುರೇ ಪುಟ್ಟ ಮಗುವೊಂದು ಆಟದಲ್ಲಿ ತೊಡಗಿತ್ತು – ಪಿಟಿಐ ಚಿತ್ರ

ಜಲವಿದ್ಯುತ್ ಯೋಜನೆ ಕೈಬಿಡಲು ಪ್ರಧಾನಿಗೆ ಪತ್ರ

ಜೋಶಿಮಠ: ಭೂಕುಸಿತ ಪೀಡಿತ ಜೋಶಿಮಠ ರಕ್ಷಿಸಲು ಎನ್‌ಟಿಪಿಸಿಯ ತಪೋವನ– ವಿಷ್ಣುಗಡ ಜಲವಿದ್ಯುತ್ ಯೋಜನೆ ರದ್ದುಪಡಿಸುವಂತೆ ಜೋಶಿಮಠ ಬಚಾವೋ ಸಂಘರ್ಷ ಸಮಿತಿ (ಜೆಬಿಎಸ್‌ಎಸ್) ಸೋಮವಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈ ಸಂಬಂಧ ಪತ್ರ ಬರೆದಿರುವ ಸಮಿತಿಯ ಜನಪ್ರತಿನಿಧಿಗಳು ಮತ್ತು ಹೋರಾಟಗಾರರು, ಪೀಡಿತ ಪ್ರದೇಶದಲ್ಲಿ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಕೆಲಸಗಳು ರಾಜ್ಯ ಸರ್ಕಾರದ ನೇತೃತ್ವದಲ್ಲಿ ತೆವಳುತ್ತಿವೆ. ತಕ್ಷಣವೇ ಕೇಂದ್ರ ಸರ್ಕಾರ ಜೋಶಿಮಠ ಮತ್ತು ನಿವಾಸಿಗಳ ಬದುಕನ್ನು ರಕ್ಷಿಸಬೇಕು ಎಂದು ಮನವಿ ಮಾಡಿದ್ದಾರೆ.

ಸನ್ನಿಹಿತ ದುರಂತದ ಬಗ್ಗೆ 14 ತಿಂಗಳ ಹಿಂದೆಯೇ ಮುನ್ನೆಚ್ಚರಿಕೆ ಸಿಕ್ಕಿದ್ದರೂ ರಾಜ್ಯ ಸರ್ಕಾರ ಇದನ್ನು ನಿರ್ಲಕ್ಷಿಸಿತು. ಐತಿಹಾಸಿಕ ಪಟ್ಟಣದ ಅಸ್ತಿತ್ವಕ್ಕೆ ಗಂಡಾಂತರ ಬಂದೊದಗಿದೆ. ಈಗ ಈ ವಿಪತ್ತನ್ನು ಮಂದಗತಿಯಲ್ಲಿ ರಾಜ್ಯ ಸರ್ಕಾರ ನಿಭಾಯಿಸುತ್ತಿದೆ ಎಂದು ಸಮಿತಿಯ ಸಂಚಾಲಕ ಅತುಲ್ ಸಾತಿ ಅವರು ಪತ್ರದಲ್ಲಿ ಆರೋಪಿಸಿದ್ದಾರೆ.

ಇದಕ್ಕೆ ಬದರೀನಾಥ ಕ್ಷೇತ್ರದ ಶಾಸಕ ರಾಜೇಂದ್ರ ಭಂಡಾರಿ ಮತ್ತು ಹಲವು ಹೋರಾಟಗಾರರು ಧ್ವನಿ ಗೂಡಿಸಿದ್ದಾರೆ.

ಎನ್‌ಟಿಪಿಸಿಯಿಂದ ₹20 ಸಾವಿರ ಕೋಟಿ ವಸೂಲಿ ಮಾಡಬೇಕು. ಈ ಹಣವನ್ನು ಎನ್‌ಟಿಪಿಸಿ ಯೋಜನೆಯಿಂದ ನೆಲೆ ಕಳೆದುಕೊಂಡ ಸಂತ್ರಸ್ತರಿಗೆ ವಿತರಿಸಬೇಕು ಎಂದು ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಇಲ್ಲಿ ನಡೆದ ಉನ್ನತ ಮಟ್ಟದ ವಿಪತ್ತು ನಿರ್ವಹಣಾ ಸಭೆ ಅಧ್ಯಕ್ಷತೆ ವಹಿಸಿದ್ದ ಸುಖ್ಖು, ಚಂಬಾ, ಕಾಂಗ್ರಾ, ಕುಲ್ಲು ಮತ್ತು ಕಿನ್ನೌರ್ ಜಿಲ್ಲೆಗಳಲ್ಲಿ ಭೂಕಂಪಗಳಿಗೆ ಒಳಗಾಗುವ ಪ್ರದೇಶಗಳನ್ನು ಗುರುತಿಸಲು ಇಲಾಖೆಗೆ ಸೂಚಿಸಿದರು. ವಿಪತ್ತುಗಳನ್ನು ತಗ್ಗಿಸಲು ಮತ್ತು ವಿಪತ್ತುಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ವಿಕೋಪಗಳ ಮುನ್ನೆಚ್ಚರಿಕೆ ನೀಡುವಂತಹ ಸುಧಾರಿತ ವ್ಯವಸ್ಥೆ ಅಭಿವೃದ್ಧಿಪಡಿಸಲು ಅವರು ಅಧಿಕಾರಿಗಳಿಗೆ ನಿರ್ದೇಶಿಸಿದರು.

ನವದೆಹಲಿಯಲ್ಲಿ ಸೋಮವಾರ ನಡೆದ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪಕ್ಷದ ಮುಖಂಡರು ಸ್ವಾಗತಿಸಿದರು. ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಜೆ.ಪಿ. ನಡ್ಡಾ ಇದ್ದರು –ಪಿಟಿಐ ಚಿತ್ರ

9 ರಾಜ್ಯಗಳಲ್ಲೂ ಗೆಲುವಿಗೆ ಬಿಜೆಪಿ ಕಾರ್ಯತಂತ್ರ

ಒಂದನೇ ಪುಟದಿಂದ

'ದುರ್ಬಲ ಮತಗಟ್ಟೆಗಳನ್ನು ಗುರುತಿಸಿ ಬಲವರ್ಧನೆ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಹಿಂದೆ ಸೂಚಿಸಿದ್ದರು. ಈಗಾಗಲೇ 70 ಸಾವಿರ ಮತಗಟ್ಟೆಗಳನ್ನು ಗುರುತಿಸಲಾಗಿದೆ. ಅಂತಹ ಬೂತ್‌ಗಳ ಸಂಖ್ಯೆ 1.30 ಲಕ್ಷ ಇದೆ. ಸಂಘಟನೆ ಬಲಪಡಿಸಿ ಅವುಗಳನ್ನು ಗೆಲ್ಲಲು ಕಾರ್ಯತಂತ್ರ ಹೆಣೆಯುವ ಬಗ್ಗೆಯೂ ಅಧ್ಯಕ್ಷರು ಸಲಹೆಗಳನ್ನು ನೀಡಿದರು' ಎಂದರು.

ಇತ್ತೀಚಿನ ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಗೆಲುವನ್ನು ಅಸಾಧಾರಣ ಹಾಗೂ ಐತಿಹಾಸಿಕ ಎಂದು ಬಣ್ಣಿಸಿದ ನಡ್ಡಾ, ಪಕ್ಷವು 182 ಸ್ಥಾನಗಳ ಪೈಕಿ 156 ಸ್ಥಾನಗಳಲ್ಲಿ ಜಯಭೇರಿ ಬಾರಿಸಿದೆ ಎಂದರು.

ಹಿಮಾಚಲ ಪ್ರದೇಶ ವಿಧಾನಸಭಾ ಚುನಾವಣೆಯ ಸೋಲಿನಿಂದ ಪಕ್ಷದ ಕಾರ್ಯಕರ್ತರು ಧೃತಿಗೆಡುವ ಅಗತ್ಯ ಇಲ್ಲ. ಅಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಡೆದ ಮತಗಳ ಅಂತರ ಶೇ 1ಕ್ಕಿಂತಲೂ ಕಡಿಮೆ ಇದೆ ಎಂದರು.

'ಭಾರತವು ವಿಶ್ವದ ಐದನೇ ಅತೀ ದೊಡ್ಡ ಆರ್ಥಿಕತೆ ಆಗಿದೆ. ಮೊಬೈಲ್ ಫೋನ್‌ಗಳ ಎರಡನೇ ಅತೀ ದೊಡ್ಡ ತಯಾರಕ ಹಾಗೂ ಆಟೋ ವಲಯದಲ್ಲಿ ಮೂರನೇ ದೊಡ್ಡ ತಯಾರಕ ಆಗಿದೆ. ಈ ಮೊದಲು ದಿನಕ್ಕೆ 12 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮಾಡಲಾಗುತ್ತಿತ್ತು. ಈಗ ಅದು 37 ಕಿ.ಮೀ.ಗೆ ಏರಿದೆ' ಎಂದು ಅವರು ಹೇಳಿದರು.

ಉಚಿತ ಧಾನ್ಯ ವಿತರಣೆ ಸೇರಿದಂತೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಬಡವರ ಶ್ರೇಯೋಭಿವೃದ್ಧಿಗೆ ಬಿಜೆಪಿ ಸರ್ಕಾರ ಶ್ರಮಿಸಿದೆ ಎಂದು ಅವರು ತಿಳಿಸಿದರು.

ಪಿಎಸ್‌ಐ ಅಕ್ರಮ ತನಿಖಾ ತಂಡಕ್ಕೆ 'ಸ್ಯಾಂಟ್ರೊ'

ಒಂದನೇ ಪುಟದಿಂದ...

'ರವಿ ವಿರುದ್ಧ ಅತ್ಯಾಚಾರ, ಕೊಲೆ ಬೆದರಿಕೆ, ಹಲ್ಲೆ, ವರದಕ್ಷಿಣೆ ಕಿರುಕುಳ ಆರೋಪವಿದೆ. ಇದರ ಜೊತೆಯಲ್ಲಿ ವರ್ಗಾವಣೆ ಹಾಗೂ ವೇಶ್ಯಾವಾಟಿಕೆಯೂ ತಳುಕು ಹಾಕಿಕೊಂಡಿದೆ. ಎಫ್‌ಐಆರ್‌ನಲ್ಲಿ ದಾಖಲಾಗಿರುವ ಅಂಶಗಳ ಜೊತೆಯಲ್ಲಿ ಉಳಿದೆಲ್ಲ ಆಯಾಮಗಳ ಬಗ್ಗೆಯೂ ಮಾಹಿತಿ ಕಲೆಹಾಕಲಾಗುವುದು' ಎಂದೂ ತಿಳಿಸಿವೆ.

ಕಸ್ಟಡಿಗೆ ಪಡೆದು ವಿಚಾರಣೆ: 'ರಾಜ್ಯ ಸರ್ಕಾರದ ನಿರ್ದೇಶನದಂತೆ ತನಿಖೆ ಆರಂಭಿಸಲಾಗಿದ್ದು, ಕಡತಗಳನ್ನು ಪರಿಶೀಲಿಸಲಾಗುತ್ತಿದೆ. ನ್ಯಾಯಾಂಗ ಬಂಧನದಲ್ಲಿರುವ ಸ್ಯಾಂಟ್ರೊ ರವಿಯನ್ನು ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ತಯಾರಿ ನಡೆಸಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ರವಿ ಕಸ್ಟಡಿಗೆ ಸಿಕ್ಕ ಬಳಿಕ ಹೆಚ್ಚಿನ ವಿಚಾರಣೆ ನಡೆಸಲಾಗುವುದು. ಆತ ನೀಡುವ ಹೇಳಿಕೆ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿವೆ.

'ಸಿಐಡಿಗೆ ವರ್ಗ- ಹಲವು ಅನುಮಾನ': ಗುಜರಾತ್‌ನಲ್ಲಿ ತಲೆಮರೆಸಿಕೊಂಡಿದ್ದ ಸ್ಯಾಂಟ್ರೊ ರವಿಯನ್ನು ಬಂಧಿಸುವಲ್ಲಿ ಮೈಸೂರು ಕಮಿಷನರೇಟ್ ಪೊಲೀಸರು ಯಶಸ್ವಿಯಾಗಿದ್ದಾರೆ. ಇದರ ಮಧ್ಯೆಯೇ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸಿದ್ದು, ಈ ಬಗ್ಗೆ ಸಾರ್ವಜನಿಕ ವಲಯದಲ್ಲಿ ಅನುಮಾನ ವ್ಯಕ್ತವಾಗಿದೆ.

'ಪತ್ನಿ ನೀಡಿದ್ದ ದೂರಿನಡಿ ರವಿ ವಿರುದ್ಧ ಪ್ರಕರಣ ದಾಖಲಾಗಿದೆ. ಇದೊಂದು ಕೌಟುಂಬಿಕ ಪ್ರಕರಣ. ಇದನ್ನು ಸಿಐಡಿಗೆ ವಹಿಸಿದ್ದು ಹೇಗೆ' ಎಂಬ ಪ್ರಶ್ನೆಯೂ ಮೂಡಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಿಐಡಿ ಅಧಿಕಾರಿಯೊಬ್ಬರು, 'ಪೊಲೀಸ್ ಇಲಾಖೆ ಮುಖ್ಯಸ್ಥರು, ರಾಜ್ಯ ಸರ್ಕಾರ ಹಾಗೂ ಹೈಕೋರ್ಟ್ ಅಥವಾ ಸುಪ್ರೀಂಕೋರ್ಟ್ ನಿರ್ದೇಶಿಸುವ ಎಲ್ಲ ಪ್ರಕರಣಗಳನ್ನು ಸಿಐಡಿ ತನಿಖೆ ನಡೆಸಬಹುದಾಗಿದೆ' ಎಂದರು.

'ವರ್ಗ, ಕೆಲ ರಾಜಕಾರಣಿ ನಂಟು': 'ಹಲವು ಪೊಲೀಸ್ ಅಧಿಕಾರಿಗಳಿಂದ ಹಣ ಪಡೆದಿದ್ದ ಸ್ಯಾಂಟ್ರೊ ರವಿ, ಕೆಲ ರಾಜಕಾರಣಿಗಳು ಹಾಗೂ ಅವರ ಸಂಬಂಧಿಕರ ಮೂಲಕ ವರ್ಗಾವಣೆ ಮಾಡಿಸಿಕೊಟ್ಟಿರುವ ಮಾಹಿತಿ ಇದೆ. ರಾಜರಾಜೇಶ್ವರಿನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ವರ್ಗಾವಣೆ ಬಗ್ಗೆ ರವಿ ಹೇಳಿಕೆ ನೀಡಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

25ರವರೆಗೆ ನ್ಯಾಯಾಂಗ ಬಂಧನ

ಮೈಸೂರು: ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಮಂಜುನಾಥ ಅಲಿಯಾಸ್ ಸ್ಯಾಂಟ್ರೊ ರವಿ ಹಾಗೂ ಅತನ ಸಹಚರರಾದ ರಾಮ್‌ಜಿ ಮತ್ತು ಶ್ರುತೇಶ್‌ಗೆ ಜ.25ರವರೆಗೆ ನ್ಯಾಯಾಂಗ ಬಂಧನ ವಿಧಿಸಿ ನಗರದ ಆರನೇ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯವು ಸೋಮವಾರ ಆದೇಶ ನೀಡಿತು.

'ಜಾಮೀನು ಮತ್ತು ಇತರ ಆಕ್ಷೇಪಣೆಗಳಿಗೆ ಜ.18ರಂದು ಮನವಿ ಸಲ್ಲಿಸ ಬಹುದು' ಎಂದು ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ್ ಆದೇಶಿಸಿದರು.

'ಸ್ಯಾಂಟ್ರೊ ರವಿ ಇತರೆ ಹಲವು ಕೃತ್ಯಗಳಲ್ಲಿ ಭಾಗಿಯಾದ ಆರೋಪವಿದೆ. ಆತನ ವಿಚಾರಣೆಗೆ ಕಾಲಾವಕಾಶ ದೊರೆತಿಲ್ಲ. ಅತ್ಯಾಚಾರ ಪ್ರಕರಣದಲ್ಲಿ ಪೊಲೀಸ್ ತನಿಖೆಗೆ ಆತ ಅವಶ್ಯ. ಈ ಹಂತದಲ್ಲಿ ಯಾವುದೇ ಜಾಮೀನು ನೀಡಬಾರದು' ಎಂದು ಸರ್ಕಾರಿ ವಕೀಲರು ಕೋರಿದರು.

'ಆರೋಪಿಗೆ ಜೀವ ಭಯವಿದೆ. ಬಂಧನಕ್ಕೆ ಕಾರಣವಾದ ಐಪಿಸಿ 376, 498ಕ್ಕೆ ಸಂಬಂಧಿಸಿ ಮಾತ್ರ ನ್ಯಾಯಾಲಯವು ವಾದವನ್ನು ಪರಿಗಣಿಸಬೇಕು. ಪ್ರಬಲ ಸಾಕ್ಷ್ಯವಿಲ್ಲದೇ ಪೊಲೀಸ್ ಕಸ್ಟಡಿಗೆ ಕೇಳುವುದನ್ನು ಒಪ್ಪಲಾಗದು. ಆರೋಪಿಗೆ ಆರೋಗ್ಯ ಸಮಸ್ಯೆ ಇದೆ' ಎಂದು ಆರೋಪಿ ಪರ ವಕೀಲರು ಮನವಿ ಮಾಡಿದರು.

ದೆಹಲಿ: 24ರಂದು ಮೇಯರ್ ಚುನಾವಣೆ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಯ (ಎಂಸಿಡಿ) ಮೇಯರ್, ಉಪಮೇಯರ್ ಚುನಾವಣೆ ಹಾಗೂ ಸ್ಥಾಯಿ ಸಮಿತಿಗೆ ಸದಸ್ಯರ ಆಯ್ಕೆ ಈ ತಿಂಗಳ 24ರಂದು ನಡೆಯಲಿದೆ.

24ಕ್ಕೆ ಸಭೆ ನಡೆಸಲು ಲೆಫ್ಟಿನಂಟ್ ಗವರ್ನರ್(ಎಲ್‌ಜಿ) ವಿ.ಕೆ. ಸಕ್ಸೇನಾ ಒಪ್ಪಿಗೆ ನೀಡಿದ್ದಾರೆ. ಹೊಸದಾಗಿ ಚುನಾಯಿತರಾದ ಕೌನ್ಸಿಲರ್‌ಗಳು ಮೊದಲಿಗೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಮೇಯರ್ ಆಯ್ಕೆಗಾಗಿ ಈ ಹಿಂದೆ ಸೇರಿದ್ದ ಸಭೆ ಗದ್ದಲದಲ್ಲಿ ಮುಕ್ತಾಯವಾದ ಕಾರಣ ಮೇಯರ್ ಆಯ್ಕೆ ನಡೆದಿರಲಿಲ್ಲ. ಹೀಗಾಗಿ 24ರಂದು ಸಭೆ ಕರೆಯಲಾಗಿದೆ.

ಭಾರತದಲ್ಲಿ ಎಕ್ಸ್‌ಬಿಬಿ.1.5 ತಳಿಯ 26 ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ಕೋವಿಡ್ ಉಲ್ಬಣಕ್ಕೆ ಕಾರಣವಾದ ಕೋವಿಡ್–19ರ ರೂಪಾಂತರಿ ಎಕ್ಸ್‌ಬಿಬಿ 1.5 ತಳಿಯ 26 ಪ್ರಕರಣಗಳು ಭಾರತದಲ್ಲಿ ಪತ್ತೆಯಾಗಿವೆ ಎಂದು ಕೇಂದ್ರ ಸರ್ಕಾರದ ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ ಐಎನ್‌ಎಸ್‌ಎಸಿಒಜಿ ಸೋಮವಾರ ತಿಳಿಸಿದೆ.

ದೆಹಲಿ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ 11 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ತಳಿ ಪತ್ತೆಯಾಗಿದೆ ಎಂದು ತಿಳಿಸಿದೆ. 'ಎಕ್ಸ್‌ಬಿಬಿ.1.5' ತಳಿಯು 'ಓಮೈಕ್ರಾನ್ ಎಕ್ಸ್‌ಬಿಬಿ' ತಳಿಗೆ ಸಂಬಂಧಿಸಿದ್ದು ಎಂದು ಹೇಳಲಾಗಿದೆ. ಚೀನಾದಲ್ಲಿ ಸೋಂಕು ಉಲ್ಬಣಕ್ಕೆ ಕಾರಣವಾಗಿರುವ ಬಿಎಫ್.7 ತಳಿಯ 14 ಪ್ರಕರಣಗಳು ಪತ್ತೆಯಾಗಿವೆ ಎಂದು ತಿಳಿಸಿದೆ.

'ಹೆಚ್ಚು ಮಕ್ಕಳು ಪಡೆಯಲು ಬುಡಕಟ್ಟು ಮಹಿಳೆಯರಿಗೆ ಪ್ರೋತ್ಸಾಹಧನ'

ಗ್ಯಾಂಗ್ಟಕ್ (ಪಿಟಿಐ): ಬುಡಕಟ್ಟು ಸಮುದಾಯದ ಮಹಿಳೆಯರು ಹೆಚ್ಚು ಮಕ್ಕಳನ್ನು ಹೆರುವುದನ್ನು ಉತ್ತೇಜಿಸಲು ಸಿಕ್ಕಿಂ ಸರ್ಕಾರವು ಪ್ರೋತ್ಸಾಹಧನವನ್ನು ಘೋಷಿಸಿದೆ.

ದಕ್ಷಿಣ ಸಿಕ್ಕಿಂನ ಜೊರೆಥಂಗ್ ನಗರದಲ್ಲಿ ನಡೆದ ಮಘೆ ಸಂಕ್ರಾಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ಅವರು ಈ ಘೋಷಣೆ ಮಾಡಿದರು. 'ಇತ್ತೀಚಿನ ವರ್ಷಗಳಲ್ಲಿ ಸಿಕ್ಕಿಂ ಮಹಿಳೆಯರ ಫಲವಂತಿಕೆ ದರವು ಕಡಿಮೆಯಾಗುತ್ತಿದೆ. ಒಬ್ಬ ಮಹಿಳೆಯು ಒಂದು ಮಗುವನ್ನು ಮಾತ್ರ ಹೆರುತ್ತಿದ್ದಾರೆ. ಆದ್ದರಿಂದ ಬುಡಕಟ್ಟು ಸಮುದಾಯದ ಜನಸಂಖ್ಯೆಯು ಕಡಿಮೆ ಯಾಗುತ್ತಿದೆ' ಎಂದರು.

'365 ದಿನದ ಮಾತೃತ್ವ ರಜೆಯನ್ನು ಸರ್ಕಾರ ಘೋಷಿಸಿದೆ. ಎರಡನೇ ಮಗು ಹೆರುವ ಉದ್ಯೋಗಸ್ಥ ಮಹಿಳೆಗೆ ವೇತನ ಬಡ್ತಿ ನೀಡಲಾಗುವುದು. ಮೂರನೇ ಮಗು ಪಡೆದರೆ, ಎರಡು ವೇತನ ಬಡ್ತಿ ನೀಡುವ ಪ್ರಸ್ತಾವವಿದೆ. ಆದರೆ, ಒಂದು ಮಗು ಹೆರುವ ಮಹಿಳೆಯರಿಗೆ ಈ ಹಣಕಾಸಿನ ನೆರವು ನೀಡಲಾಗುವುದಿಲ್ಲ. ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲೂ ಕೃತಕ ಗರ್ಭಧಾರಣೆ ಸೌಲಭ್ಯ ಒದಗಿಸಲಾಗಿದೆ. ಈ ಸೌಲಭ್ಯದ ಮೂಲಕ ಮಕ್ಕಳನ್ನು ಪಡೆಯುವ ಎಲ್ಲಾ ಮಹಿಳೆಯರಿಗೆ ₹ 3 ಲಕ್ಷ ಸಹಾಯಧನ ನೀಡಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

ಆರ್‌ವಿಎಂ ಪ್ರಾತ್ಯಕ್ಷಿಕೆ ಕೈಬಿಟ್ಟ ಚುನಾವಣಾ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ವಲಸಿಗ ಮತದಾರರು ತಾವಿರುವ ಸ್ಥಳದಿಂದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಅಭಿವೃದ್ಧಿಪಡಿಸಿರುವ ದೂರನಿಯಂತ್ರಿತ ವಿದ್ಯುನ್ಮಾನ ಮತಯಂತ್ರದ (ಆರ್‌ವಿಎಂ) ಪ್ರಾತ್ಯಕ್ಷಿಕೆ ಕಾರ್ಯವನ್ನು ಕೇಂದ್ರ ಚುನಾವಣಾ ಆಯೋಗವು ಸೋಮವಾರ ಕೈಬಿಟ್ಟಿದೆ.

ಆರ್‌ವಿಎಂ ಕಾರ್ಯಸ್ಥಿತಿ ಕುರಿತು ರಾಜಕೀಯ ಪಕ್ಷಗಳಿಗೆ ಆಯೋಗವು ಸೋಮವಾರ ಹಮ್ಮಿಕೊಂಡಿದ್ದ ಸಭೆಯಲ್ಲಿ ವಿರೋಧ ಪಕ್ಷಗಳು ಇದರ ಅಗತ್ಯತೆಯನ್ನು ತೀವ್ರವಾಗಿ ಪ್ರಶ್ನಿಸಿದವು. ಹೀಗಾಗಿ ಆಯೋಗವು ಈ ತೀರ್ಮಾನ ಕೈಗೊಂಡಿದೆ.

ರಾಜಕೀಯ ಪಕ್ಷಗಳು ಯಾವಾಗ ಪ್ರಾತ್ಯಕ್ಷಿಕೆ ವೀಕ್ಷಿಸಲು ಸಿದ್ಧವಾಗುತ್ತವೋ ಆಗ ಆಯೋಗವು ಅದನ್ನು ಹಮ್ಮಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಸಭೆಯಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಕಾಂಗ್ರೆಸ್ ನಾಯಕ ದಿಗ್ವಿಜಯ್ ಸಿಂಗ್, 'ಆರ್‌ವಿಎಂ ಕುರಿತ ಪ್ರಾತ್ಯಕ್ಷಿಕೆ ವೀಕ್ಷಿಸಬೇಕೆಂದು ಯಾವ ವಿರೋಧ ಪಕ್ಷವೂ ಬಯಸಿರಲಿಲ್ಲ. ಇವು ಏಕೆ ಬೇಕು ಎಂಬ ಪ್ರಶ್ನೆ ಉದ್ಭವಿಸಿದ್ದು, ಆಯೋಗವು ಸ್ಪಷ್ಟನೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಆರ್‌ವಿಎಂ ಕಲ್ಪನೆಯು ಒಪ್ಪತಕ್ಕದ್ದಲ್ಲ. ನಗರ ನಿವಾಸಿಗಳು ಮತದಾನ ಪ್ರಕ್ರಿಯೆ ಕುರಿತು ನಿರಾಸಕ್ತಿ ಹೊಂದಿರುವುದು ಏಕೆ ಎಂಬುದರ ಕುರಿತು ಆಯೋಗ ವಿವರಣೆ ನೀಡಬೇಕು. ಎಲೆಕ್ಟ್ರಾನಿಕ್ ಮತಯಂತ್ರಗಳ ಬಗ್ಗೆ ಜನರು ಎತ್ತಿರುವ ಪ್ರಶ್ನೆಗಳಿಗೂ ಉತ್ತರ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

ಆಯೋಗವು ರಾಜ್ಯಗಳಲ್ಲಿ ಪ್ರಾತ್ಯಕ್ಷಿಕೆ ಏರ್ಪಡಿಸಬೇಕು ಎಂದು ಕೆಲವು ರಾಜಕೀಯ ಪಕ್ಷಗಳು ಆಗ್ರಹಿಸಿವೆ. ಪ್ರಾತ್ಯಕ್ಷಿಕೆ ವೀಕ್ಷಣೆಗಾಗಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಮಾನ್ಯತೆ ಹೊಂದಿರುವ 8 ರಾಷ್ಟ್ರೀಯ ಪಕ್ಷಗಳು ಹಾಗೂ 40 ಪ್ರಾದೇಶಿಕ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಇಸಿಐ) ಆರ್‌ವಿಎಂ ಅಭಿವೃದ್ಧಿಪಡಿಸಿದೆ.

ಬಲವಾದ ಪ್ರಕರಣದಲ್ಲಿ ಜಾಮೀನು ರದ್ದು ಮಾಡಬಹುದು: ಸುಪ್ರೀಂ

ನವದೆಹಲಿ (ಪಿಟಿಐ): 'ಆರೋಪ ಪಟ್ಟಿಯಲ್ಲಿ (ಚಾರ್ಜ್‌ಶೀಟ್) ವಿಶೇಷ ಮತ್ತು ಬಲವಾದ ಪ್ರಕರಣವನ್ನು ಉಲ್ಲೇಖಿಸಿದ್ದಲ್ಲಿ ಆರೋಪಿಗೆ ನೀಡಿರುವ ಜಾಮೀನು ರದ್ದುಮಾಡಬಹುದು' ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಆಂಧ್ರಪ್ರದೇಶದ ಹಾಲಿ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ ಅವರ ಚಿಕ್ಕಪ್ಪ ವೈ.ಎಸ್. ವಿವೇಕಾನಂದ ರೆಡ್ಡಿ ಹತ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಆರೋಪಿ ಎರ್ರಾ ಗಂಗಿ ರೆಡ್ಡಿಗೆ ನೀಡಿರುವ ಜಾಮೀನು ರದ್ದು ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದು, ನ್ಯಾಯಮೂರ್ತಿ ಎಂ.ಆರ್.ಶಾ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯ ಪೀಠ ಇದರ ವಿಚಾರಣೆ ನಡೆಸಿತು.

'ಆರೋಪ ಪಟ್ಟಿ ಸಲ್ಲಿಸದ ಕಾರಣ ಆರೋಪಿಯು ಜಾಮೀನು ಪಡೆದಿದ್ದರೆ, ಆರೋಪ ಪಟ್ಟಿ ಸಲ್ಲಿಕೆಯಾದ ನಂತರ ಜಾಮೀನು ರದ್ದು ಮಾಡಲು ಆಗುವುದಿಲ್ಲ. ಚಾರ್ಜ್‌ಶೀಟ್‌ನಲ್ಲಿ ಬಲವಾದ ಪ್ರಕರಣ ಉಲ್ಲೇಖಿಸಿರಬೇಕು. ಅದು ಜಾಮೀನು ರಹಿತ ಅಪರಾಧ ಎಂಬುದು ನ್ಯಾಯಾಲಯಕ್ಕೆ ಮನದಟ್ಟಾಗಬೇಕು. ಹಾಗಾದಾಗ ಮಾತ್ರ ಜಾಮೀನು ರದ್ದು ಮಾಡಬಹುದು' ಎಂದು ನ್ಯಾಯಪೀಠ ಹೇಳಿತು.

'ಸಿಬಿಐ ಸಲ್ಲಿಸಿರುವ ಅರ್ಜಿಯಲ್ಲಿ ವಿಶೇಷ ಪ್ರಕರಣ ಅಥವಾ ಅಂಶಗಳನ್ನು ಉಲ್ಲೇಖಿಸಿದ್ದರೆ ಅರ್ಹತೆಗಳ ಪರಿಗಣಿಸಿ' ಎಂದು ತೆಲಂಗಾಣ ಹೈಕೋರ್ಟ್‌ಗೆ ಸೂಚಿಸಿತು.

ವೈವಾಹಿಕ ಅತ್ಯಾಚಾರ: ಪ್ರತಿಕ್ರಿಯಿಸಲು ಕೇಂದ್ರಕ್ಕೆ ಸೂಚನೆ

ನವದೆಹಲಿ (ಪಿಟಿಐ): ವೈವಾಹಿಕ ಅತ್ಯಾಚಾರ ಅಪರಾಧಕ್ಕೆ ಸಂಬಂಧಿಸಿ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಇದಕ್ಕೆ ಸಂಬಂಧಿಸಿದ ಮೊದಲ ಬ್ಯಾಚ್ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದಿವಾಲಾ ಅವರಿದ್ದ ಪೀಠವು, ಫೆಬ್ರುವರಿ 15ರೊಳಗೆ ಪ್ರತಿಕ್ರಿಯೆ ಸಲ್ಲಿಸಲು ಸೂಚಿಸಿತು. ಮಾರ್ಚ್ 21ರಿಂದ ಅಂತಿಮ ವಿಚಾರಣೆ ಆರಂಭಿಸುವುದಾಗಿ ಪ್ರಕಟಿಸಿತು.

ಭಾರತೀಯ ದಂಡ ಸಂಹಿತೆಯ ಸೆಕ್ಷನ್ 375ರ ಅಡಿ ವೈವಾಹಿಕ ಅತ್ಯಾಚಾರವನ್ನು ಅಪರಾಧ ಮುಕ್ತಗೊಳಿಸುವ 2ನೇ ವಿನಾಯಿತಿಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಸಂಬಂಧಿಸಿ ದೆಹಲಿ ಹೈಕೋರ್ಟ್ ಕಳೆದ ವರ್ಷ ಮೇ 11ರಂದು ಭಿನ್ನ ತೀರ್ಪು ನೀಡಿತ್ತು. ಇದರ ವಿರುದ್ಧ ಖುಷ್ಬೂ ಸೈಫಿ ಸಲ್ಲಿಸಿರುವ ಮೇಲ್ಮನವಿಯೂ ಈ ಅರ್ಜಿಗಳಲ್ಲಿದೆ.

ನ್ಯಾಯಮೂರ್ತಿಗಳಿಬ್ಬರ ತೀರ್ಪು ಭಿನ್ನವಾಗಿರುವುದರಿಂದ ವೈವಾಹಿಕ ಅತ್ಯಾಚಾರ ಪ್ರಕರಣವನ್ನು ಮೂವರು ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸಿ, ಈ ಪ್ರಕರಣದಲ್ಲಿ ಕಾನೂನಾತ್ಮಕ ಅಂಶಗಳು ಅಡಕವಾಗಿರುವುದರಿಂದ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ನ್ಯಾಯಮೂರ್ತಿಗಳು ಅನುಮತಿಸಿದ್ದರು.

ತಮಿಳುನಾಡಿನಲ್ಲಿ ಹೋರಿ ನಿಯಂತ್ರಿಸುವ ವೇಳೆ ಇಬ್ಬರ ಸಾವು

ಮದುರೈನ ಪಲಮೇಡುವಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಲ್ಲಿಕಟ್ಟು ಕ್ರೀಡೆಯ ವೇಳೆ ವ್ಯಕ್ತಿಯೊಬ್ಬರು ಹೋರಿಯನ್ನು ನಿಯಂತ್ರಿಸಲು ಯತ್ನಿಸಿದರು –ಪಿಟಿಐ ಚಿತ್ರ

ಮದುರೈ (ಪಿಟಿಐ): ತಮಿಳುನಾಡಿನಲ್ಲಿ ಜಲ್ಲಿಕಟ್ಟು ಕ್ರೀಡೆಯ ವೇಳೆ ನಡೆದ ಪ್ರತ್ಯೇಕ ದುರ್ಘಟನೆಗಳಲ್ಲಿ ಹೋರಿ ಪಳಗಿಸುವ ವ್ಯಕ್ತಿ ಸೇರಿದಂತೆ ಇಬ್ಬರು ಸೋಮವಾರ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಲಮೇಡುವಿನ ಹೋರಿ ಪಳಗಿಸುವ ವ್ಯಕ್ತಿ ಅರವಿಂದರಾಜ್ (26) ಮತ್ತು ಪುದುಕೋಟ್ಟೆ ಜಿಲ್ಲೆಯಲ್ಲಿ ಪ್ರೇಕ್ಷಕ ಎ. ಅರವಿಂದ್ (25) ಎಂಬುವವರು ಹೋರಿ ತಿವಿದ ಪರಿಣಾಮ ಮೃತಪಟ್ಟಿದ್ದಾರೆ ಎಂದು ವಿವರಿಸಿದ್ದಾರೆ.

ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ಮೃತರ ಕುಟುಂಬಗಳಿಗೆ ತಲಾ ₹3 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಅವನಿಯಾಪುರಂನಲ್ಲಿ ನಡೆದ ಜಲ್ಲಿಕಟ್ಟು ವೇಳೆ ಹೋರಿ ಪಳಗಿಸುವವರು, ಮಾಲೀಕರು ಸೇರಿದಂತೆ 75 ಮಂದಿ ಹಾಗೂ ಪಲಮೇಡುವಿನಲ್ಲಿ 34 ಮಂದಿ ಗಾಯಗೊಂಡಿದ್ದಾರೆ.

ಹೋರಿ ಬೆದರಿಸುವ ಹಬ್ಬ: ಇಬ್ಬರ ಸಾವು

ಶಿವಮೊಗ್ಗ: ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದ ಹೋರಿ ಬೆದರಿಸುವ ಹಬ್ಬದ ಪ್ರತ್ಯೇಕ ಸ್ಪರ್ಧೆಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಶಿವಮೊಗ್ಗ ತಾಲ್ಲೂಕಿನ ಕೊನಗವಳ್ಳಿ ಗ್ರಾಮದಲ್ಲಿ, ಶಿವಮೊಗ್ಗದ ಆಲ್ಕೊಳ ನಿವಾಸಿ ಲೋಕೇಶ್ (42) ಎದೆಗೆ ಹೋರಿ ತಿವಿದಿದ್ದರಿಂದ ಸಾವನ್ನಪ್ಪಿದ್ದಾರೆ. ಇದೇ ವೇಳೆ ಆರು ಜನ ಗಾಯಗೊಂಡರು.

ಕುಸಿದುಬಿದ್ದು ಸಾವು: ಸೊರಬ ತಾಲ್ಲೂಕಿನ ಕುಪ್ಪಗಡ್ಡೆಯಲ್ಲಿ ಹೋರಿ ಬೆದರಿಸುವ ಹಬ್ಬದಲ್ಲಿ ಪಾಲ್ಗೊಂಡಿದ್ದ ತವರೆಹಳ್ಳ ಗ್ರಾಮದ ಯುವಕ ಹರೀಶ್ (22) ಸ್ಥಳದಲ್ಲೇ ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಕುಪ್ಪಗಡ್ಡೆಗೆ ಸ್ನೇಹಿತರೊಂದಿಗೆ ಬಂದಿದ್ದ ಹರೀಶ್, ಮಧ್ಯಾಹ್ನ ಸುಡುಬಿಸಿಲು ತಾಳಲಾರದೆ ನಿತ್ರಾಣಗೊಂಡು ಕುಸಿದುಬಿದ್ದಿದ್ದಾರೆ. ಕೂಡಲೇ ಪ್ರಾಥಮಿಕ ಚಿಕಿತ್ಸಾ ಕೇಂದ್ರಕ್ಕೆ ಕರೆತಂದಿದ್ದು, ಆ ವೇಳೆಗೆ ಹರೀಶ್ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

'ಚಿಕಿತ್ಸಾ ವೆಚ್ಚ ಭರಿಸಿದ್ದು ಇಎಸ್‌ಐ'

ಕುಕ್ಕರ್ ಬಾಂಬ್: ಸಂತ್ರಸ್ತ ಪುರುಷೋತ್ತಮ ಪೂಜಾರಿ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಖಾಸಗಿ ಉದ್ಯೋಗಿಯಾಗಿರುವ ಮಗಳ ಇಎಸ್‌ಐ ಸೌಲಭ್ಯದಿಂದ ಚಿಕಿತ್ಸೆ ಪಡೆದಿದ್ದೇನೆ. ಇನ್ನು ದೇವರೇ ಗತಿ. ಸರ್ಕಾರದವರು ಚಿಕಿತ್ಸೆ ವೆಚ್ಚ ಭರಿಸುವುದಾಗಿ ಹೇಳಿದ್ದರು. ಇನ್ನೂ ಹಣ ಬಂದಿಲ್ಲ'.

ನಗರದಲ್ಲಿ ನ.19ರಂದು ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟದಲ್ಲಿ ಗಾಯಗೊಂಡ ರಿಕ್ಷಾ ಚಾಲಕ ಪುರುಷೋತ್ತಮ ಪೂಜಾರಿ (60), ಘಟನೆಯ ಬಳಿಕ ಕುಟುಂಬಕ್ಕೆ ಒದಗಿದ ಸ್ಥಿತಿಯನ್ನು ಎಳೆಎಳೆಯಾಗಿ ಬಿಚ್ಚಿಟ್ಟರು. ಸೋಮವಾರ ತಮ್ಮನ್ನು ಭೇಟಿಯಾದ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಸರ್ಕಾರ ಪರಿಹಾರ ಕೊಡುವುದಾಗಿ ಭರವಸೆ ನೀಡಿದೆ. ಯಾವಾಗ ಬರುತ್ತದೆ ಗೊತ್ತಿಲ್ಲ. ಇವತ್ತು ನನ್ನನ್ನು ನೋಡಲು ಬಂದ ಕೆಲವರು ಸ್ವಲ್ಪ ಹಣ ಕೊಟ್ಟರು' ಎಂದು ತಿಳಿಸಿದರು.

'ನಾನು 1 ವರ್ಷ ದುಡಿಯುವಂತಿಲ್ಲ ಎಂದು ವೈದ್ಯರು ಸೂಚಿಸಿದ್ದಾರೆ. ವರ್ಷದ ಜೀವನ ಹೇಗೋ ಗೊತ್ತಿಲ್ಲ' ಎಂದು ಕಣ್ಣೀರಾದರು.

'ಮಗಳಿಗೆ (ಮೇಘಶ್ರೀ) ಮೇ 3ಕ್ಕೆ ಮದುವೆ ನಿಗದಿಯಾಗಿದೆ. ಗುರುಬೆಳದಿಂಗಳು ಟ್ರಸ್ಟ್‌ನ ಪದ್ಮರಾಜ್ ಆರ್. ಅವರು ನಮ್ಮ ಮನೆ ನವೀಕರಿಸುತ್ತಿದ್ದಾರೆ. ನಾವು ಈಗ ಗೆಳೆಯರೊಬ್ಬರ ಮನೆಯಲ್ಲಿ ಉಳಿದುಕೊಂಡಿದ್ದೇವೆ. ಅವರು ನಮ್ಮಿಂದ ಬಾಡಿಗೆ ಕೇಳಿಲ್ಲ' ಎಂದು ಅವರು ನೆರವನ್ನು ಸ್ಮರಿಸಿದರು.

'ರಿಕ್ಷಾ ಹೊಸತು ಕೊಡಿಸುತ್ತೇವೆ ಎಂದು ಬಿಜೆಪಿಯವರು ಭರವಸೆ ನೀಡಿದ್ದಾರೆ. ಯಾವಾಗ ಕೊಡುತ್ತಾರೋ ಗೊತ್ತಿಲ್ಲ. ಕೊಟ್ಟ ಮೇಲೆ ಕೊಟ್ಟರು ಎನ್ನಬಹುದು' ಎಂದರು.

ಮೊತ್ತ ಭರಿಸಿದ್ದೇವೆ: 'ಚಿಕಿತ್ಸೆ ವೆಚ್ಚವನ್ನು ಸರ್ಕಾರದ ಇಎಸ್‌ಐ ಮೂಲಕವೇ ಭರಿಸಿದ್ದೇವೆ. ಕುಟುಂಬದವರು ವ್ಯಯಿಸಿದ ಮೊತ್ತವನ್ನೆಲ್ಲ ಭರಿಸಿದ್ದೇವೆ' ಎಂದು ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ಪ್ರತಿಕ್ರಿಯಿಸಿದರು.

'ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡುವ ಬಗ್ಗೆ ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಬಂದಿಲ್ಲ' ಎಂದು ಜಿಲ್ಲಾಡಳಿತ ಮೂಲಗಳು ತಿಳಿಸಿವೆ.

'ರಿಕ್ಷಾದಿಂದ ಇಳಿದು ಓಡಿದ್ದ ಆರೋಪಿ'

'ರಿಕ್ಷಾದಲ್ಲಿ ನಾಗುರಿ ಬಳಿ ಬರುತ್ತಿದ್ದಾಗ ಒಬ್ಬ ಕೈ ಅಡ್ಡ ಹಿಡಿದು ಪಂಪ್‌ವೆಲ್‌ನತ್ತ ಕರೆದೊಯ್ಯುವಂತೆ ಹೇಳಿದ. ಪಂಪ್‌ವೆಲ್ ಕಡೆಗೆ ಹೋಗುತ್ತಿದ್ದಾಗ ಡಬ್ ಎಂದು ಸದ್ದಾಯಿತು. ಸುತ್ತೆಲ್ಲಾ ಹೊಗೆ ಆವರಿಸಿ ಸಂಪೂರ್ಣ ಕತ್ತಲಾಯಿತು. ರಿಕ್ಷಾವನ್ನ ಮುಂದಕ್ಕೊಯ್ಯಲು ಆಗಿಲ್ಲ. ಸ್ವಲ್ಪ ಮುಂದಕ್ಕೆ ಹೋಗಿ ರಿಕ್ಷಾ ನಿಲ್ಲಿಸಿದೆ. ಅಷ್ಟರಲ್ಲಿ ಪ್ರಯಾಣಿಕ ರಿಕ್ಷಾದಿಂದ ಇಳಿದು ಓಡುತ್ತಿದ್ದ. ಆತನಿಗೂ ಬೆಂಕಿ ತಗುಲಿತ್ತು' ಎಂದು ಪುರುಷೋತ್ತಮ ಪೂಜಾರಿ ಘಟನೆಯ ಬಗ್ಗೆ ವಿವರಿಸಿದರು.

'ಆತನ ಕೈಯಲ್ಲಿ ಚೀಲ ಇತ್ತು. ಅದರಲ್ಲಿ ಬಾಂಬ್ ಇದೆ ಎಂದು ಗೊತ್ತಾಗಲಿಲ್ಲ. ಆತನ ಜೊತೆ ನಾನು ಮಾತನಾಡಿಯೂ ಇಲ್ಲ. ಜನರನ್ನು ಕರೆದುಕೊಂಡು ಹೋಗುವುದು ಬಿಡುವುದು ಅಷ್ಟೇ ನಮ್ಮ ಕೆಲಸ. ಅವ ಕಳ್ಳನಾ ಎಂತ ನಮಗೆ ಗೊತ್ತುಂಟಾ' ಎಂದರು.

ಕಳಸಾ ನಾಲಾ ತಿರುವು ಯೋಜನೆ

20ರಂದು ಅರಣ್ಯ ಅನುಮೋದನೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಯೋಜನೆಯ ಭಾಗವಾದ ಕಳಸಾ ನಾಲಾ ತಿರುವು ಯೋಜನೆಗೆ 26.92 ಹೆಕ್ಟೇರ್ ಮೀಸಲು ಅರಣ್ಯ ಬಳಕೆಗೆ ಪರಿಸರ ಅನುಮೋದನೆ ನೀಡುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಪ್ರಾದೇಶಿಕ ಉನ್ನತಾಧಿಕಾರಿ ಸಮಿತಿಯ (ಆರ್‌ಇಸಿ) ಸಭೆ ಇದೇ 20ರಂದು ಮಧ್ಯಾಹ್ನ 2.30ಕ್ಕೆ ನಿಗದಿಯಾಗಿದೆ.

ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ 33.05 ಹೆಕ್ಟೇರ್ ಅರಣ್ಯ ಬಳಸಲು (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್‌ಗೆ) ಒಪ್ಪಿಗೆ ನೀಡುವಂತೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಸಚಿವಾಲಯಕ್ಕೆ 2022ರ ಡಿಸೆಂಬರ್ 30ರಂದು ಪ್ರಸ್ತಾವನೆ ಸಲ್ಲಿಸಿದ್ದರು. ಈ ವಿಷಯದ ಬಗ್ಗೆ ಇನ್ನಷ್ಟು ವಿವರಣೆ ನೀಡುವಂತೆ ಎಸಿಎಸ್ ಅವರಿಗೆ ಸಚಿವಾಲಯವು ಜನವರಿ 5ರಂದು ಸೂಚಿಸಿತ್ತು.

ಈ ಯೋಜನೆಗೆ ಅರಣ್ಯ ಪ್ರದೇಶದಲ್ಲಿ ಓವರ್‌ಹೆಡ್ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ. ಹೀಗಾಗಿ, ಕಡಿಮೆ ಅರಣ್ಯ ಭೂಮಿ ಬಳಕೆ ಹಾಗೂ ಮರ ಕಡಿಯುವುದನ್ನು ಕಡಿಮೆಗೊಳಿಸಲು ಭೂಗತ ವಿದ್ಯುತ್ ಮಾರ್ಗ ನಿರ್ಮಿಸುವ ಕುರಿತು ಯೋಜನಾ ಪ್ರಾಧಿಕಾರ ಪರಿಶೀಲನೆ ನಡೆಸಬೇಕು ಎಂದೂ ಹೇಳಿತ್ತು. ಬಳಿಕ ಸಚಿವಾಲಯದ ಉನ್ನತ ಅಧಿಕಾರಿಗಳ ತಂಡವು ಯೋಜನಾ ಪ್ರದೇಶಕ್ಕೆ ತೆರಳಿ ಪರಿಶೀಲನೆ ನಡೆಸಿತ್ತು.

ನಂತರ ಅರಣ್ಯ ಸಚಿವಾಲಯವು ಪರಿಷ್ಕೃತ ಪ್ರಸ್ತಾವವನ್ನು ಸಚಿವಾಲಯಕ್ಕೆ ಸಲ್ಲಿಸಿತ್ತು. ಅದರಲ್ಲಿ ಯೋಜನೆಗೆ ಅರಣ್ಯ ಬಳಕೆ ಪ್ರಮಾಣ 33 ಹೆಕ್ಟೇರ್‌ನಿಂದ 26.92 ಹೆಕ್ಟೇರ್‌ಗೆ ಇಳಿಸಲಾಗಿದೆ.

'ಪರಿಸರ ಸಚಿವಾಲಯ ಕೇಳಿರುವ ಎಲ್ಲ ವಿವರಣೆಗಳಿಗೆ ಉತ್ತರ ನೀಡಲಾಗಿದೆ. ಇದೇ 20ರಂದು ನಡೆಯುವ ಸಭೆಯಲ್ಲಿ ಅರಣ್ಯ ಅನುಮೋದನೆ ಸಿಗುವ ವಿಶ್ವಾಸ ಇದೆ' ಎಂದು ಕರ್ನಾಟಕ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ವಿಶ್ವಾಸ ವ್ಯಕ್ತಪಡಿಸಿದರು.

ಗೋವಾ: ಕಲಾಪಕ್ಕೆ ಪ್ರತಿಪಕ್ಷಗಳ ಅಡ್ಡಿ

ಪಣಜಿ (ಪಿಟಿಐ): ಮಹದಾಯಿ ನದಿ ನೀರು ತಿರುವು ವಿವಾದ ಬಗ್ಗೆ ಸರ್ಕಾರದ ಹೇಳಿಕೆಗೆ ಪಟ್ಟುಹಿಡಿದ ಪ್ರತಿಪಕ್ಷಗಳು ಸೋಮವಾರ ಗೋವಾ ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದವು.

ಅಡ್ಡಿಪಡಿಸಿದ ಸದಸ್ಯರನ್ನು ಸ್ಪೀಕರ್ ಸೂಚನೆಯಂತೆ ಮಾರ್ಷಲ್‌ಗಳು ಹೊರಗೆ ಕರೆದೊಯ್ದರು. ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಯುರಿ ಅಲೆಮಾವೋ ಅವರು ಸರ್ಕಾರದ ಹೇಳಿಕೆಗೆ ಒತ್ತಾಯಿಸಿದರು.

ಅಧಿವೇಶನದ ಮೊದಲ ದಿನ ಕಲಾಪ ಆರಂಭವಾಗುತ್ತಿದ್ದಂತೆಯೇ ರಾಜ್ಯಪಾಲ ಪಿ.ಎಸ್.ಶ್ರೀಧರನ್ ಪಿಳ್ಳೈ ಭಾಷಣ ಮಾಡಲು ಆರಂಭಿಸಿದರು. ಕಪ್ಪುಪಟ್ಟಿ ಧರಿಸಿದ್ದ ಗೋವಾ ಫಾರ್ವರ್ಡ್ ಪಾರ್ಟಿ ಮತ್ತು ಆಮ್ ಆದ್ಮಿ ಪಕ್ಷ, ಕಾಂಗ್ರೆಸ್ ಪಕ್ಷಗಳ ಸದಸ್ಯರು ಎದ್ದುನಿಂತು ಭಾಷಣಕ್ಕೆ ಅಡ್ಡಿಪಡಿಸಿ ಘೋಷಣೆ ಕೂಗಿದರು.

ಮಹದಾಯಿ ವಿಷಯದಲ್ಲಿ ಗೋವಾದ ಹಿತಾಸಕ್ತಿ ರಕ್ಷಿಸಲು ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು. ಕಳಸಾ– ಬಂಡೂರಿಯಲ್ಲಿ ಜಲಾಶಯವನ್ನು ನಿರ್ಮಿಸಲು ಕರ್ನಾಟಕ ಸರ್ಕಾರ ಚಿಂತನೆ ನಡೆಸಿದೆ. ಇದು ಉಭಯ ರಾಜ್ಯಗಳ ನಡುವೆ ವಿವಾದಕ್ಕೆ ಕಾರಣವಾಗಿದೆ.

ಯತ್ನಾಳಗೆ ಬಿಜೆಪಿ ನೋಟಿಸ್

ನವದೆಹಲಿ: ಕರ್ನಾಟಕ ಸಚಿವರಾದ ಸಿ.ಸಿ.ಪಾಟೀಲ ಹಾಗೂ ಮುರುಗೇಶ ನಿರಾಣಿ ಅವರ ವಿರುದ್ಧ ಹೇಳಿಕೆ ನೀಡಿದ್ದಕ್ಕಾಗಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬಿಜೆಪಿ ಕೇಂದ್ರ ಶಿಸ್ತು ಸಮಿತಿ ನೋಟಿಸ್ ನೀಡಿದೆ. ಆದರೆ, 'ನನಗೆ ಯಾವುದೇ ನೋಟಿಸ್ ಸಿಕ್ಕಿಲ್ಲ' ಎಂದು ಯತ್ನಾಳ ಪ್ರತಿಕ್ರಿಯಿಸಿದ್ದಾರೆ.

ಪಕ್ಷದ ಹಿರಿಯ ನಾಯಕರಾದ ಅವಿನಾಶ್ ರಾಯ್ ಖನ್ನಾ ಮತ್ತು ಓಂ ಪಾಠಕ್ ಅವರನ್ನೊಳಗೊಂಡ ಕೇಂದ್ರ ಬಿಜೆಪಿ ಶಿಸ್ತು ಸಮಿತಿ ಯತ್ನಾಳ್ ಅವರಿಗೆ ಸೋಮವಾರ ನೋಟಿಸ್ ಜಾರಿ ಮಾಡಿದ್ದು, ಒಂದು ವಾರದೊಳಗೆ ಉತ್ತರಿಸುವಂತೆ ಸೂಚಿಸಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದ ಕೆಲವು ಸಚಿವರ ವಿರುದ್ಧ ಯತ್ನಾಳ ಅವರು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹೇಳಿಕೆ ನೀಡಿದ್ದರು. ಈ ಬಗ್ಗೆ ಪಕ್ಷದ ರಾಜ್ಯ ಘಟಕವು ಕೇಂದ್ರ ನಾಯಕರ ಗಮನಕ್ಕೆ ತಂದಿತ್ತು. ಚುನಾವಣೆಗೆ ಕೆಲವೇ ತಿಂಗಳು ಉಳಿದಿರುವ ಸಮಯದಲ್ಲಿ ನೀಡುತ್ತಿರುವ ಹೇಳಿಕೆಯಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ ಎಂದೂ ರಾಜ್ಯ ಘಟಕವು ತಿಳಿಸಿತ್ತು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಜರಂಗ ದಳ ಕಾರ್ಯಕರ್ತರ ಹತ್ಯೆ: ಇಂದಿನಿಂದ ಪ್ರತಿಭಟನೆ

ನವದೆಹಲಿ: 'ಜಿಹಾದಿಗಳು ಕಳೆದ ಎರಡು ವರ್ಷಗಳಲ್ಲಿ ಬಜರಂಗ ದಳದ 9 ಕಾರ್ಯಕರ್ತರನ್ನು ಹತ್ಯೆ ಮಾಡಿದ್ದು, 32 ಮಂದಿಯ ಮೇಲೆ ದಾಳಿ ನಡೆಸಿದ್ದಾರೆ. ಇದನ್ನು ಖಂಡಿಸಿ ಬಜರಂಗ ದಳವು ದೇಶದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಇದೇ 17 ಮತ್ತು 18ರಂದು ಪ್ರತಿಭಟನೆ ನಡೆಸಲಿದೆ' ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸೋಮವಾರ ಪ್ರಕಟಣೆಯಲ್ಲಿ ತಿಳಿಸಿದೆ.

'ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಯವರಿಗೆ ಮನವಿ ಪತ್ರ ಸಲ್ಲಿಸಲಾಗುವುದು' ಎಂದಿದೆ.

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ
ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು – 560 009.
ಫೋನ್ : 080–22341230 / 35

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–02/57/2022–23 ದಿನಾಂಕ: 16.01.2023

ಸಾರ್ವಜನಿಕ ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಸರವಣ ಪ್ರಸಾದ್, ನಿರ್ದೇಶಕರು, ಇ.ಸಿ ಸ್ಪೋರ್ಟ್ಸ್ ಪ್ರೈ.ಲಿ ಇವರು ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕನ್ನಮಂಗಲ ಗ್ರಾಮದ ಸರ್ವೆ ಸಂಖ್ಯೆ: 261ರ 01ಎ–21 ಗು ಮತ್ತು ಸರ್ವೆ ಸಂಖ್ಯೆ: 262ರ 02ಎ–19ಗು ಒಟ್ಟು 04ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ವ್ಯವಸಾಯ ಮತ್ತು ವಸತಿ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಗಳು ಬರುತ್ತವೆ. ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4. ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಅವುಗಳನ್ನು ಈ ಪ್ರಕಟಣೆಯ ದಿನಾಂಕದಿಂದ 16 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು

DIPR/CP/AAA/4125/2022-23

ಕರ್ನಾಟಕ ಸರ್ಕಾರ
Govt of Karnataka
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103
OFFICE OF THE DEPUTY COMMISSIONER, DISTRICT URBAN DEVELOPMENT CELL,
BAGALKOTE DISTRICT, BAGALKOTE- 587103 Ph: 08354-235776
E-mail:dudc_bgk@yahoo.co.in, Itstaff dudc_bagalkote@yahoo.co.in

ಸಂಖ್ಯೆ:ಜಿನಕೋಬಾ: ನಗರೋತ್ಥಾನ ಹಂತ–4:2022–23 ದಿನಾಂಕ: 12.01.2023.

ಟೆಂಡರ್ ಪ್ರಕಟಣೆ
E-Proceurement portal ಮುಖಾಂತರ

ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಮಾನ್ಯ ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ ಹಂತ–4 ಕಾಮಗಾರಿಗಳಿಗೆ e-protal:https://eproc.karnataka.gov.in ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಇಂಡೆಂಟನಂ:(1)DMA/2022-23/OW/WORK_INDENT145037, (2)DMA/2022-23/OW/WORK_INDENT145035,(3)DMA/2022-23/OW/WORK_INDENT145021, (4)DMA/2022-23/OW/WORK_INDENT145001, (5)DMA/2022-23/OW/WORK_INDENT145036, (6)DMA/2022-23/OW/WORK_INDENT145018

ಸೂಚನೆಗಳು: (1) Last Date & Time for receipt of tenders :20.01.2023. At 16.30 pm. (2) Opening of Technical bid is on Dtd:23.01.2023 at 11.30 am. (3) Date & Time for Opening of Financial Bid Dtd 27.01.2023 at 11.30 am.

ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಬಂದಲ್ಲಿ ಇ–ಪೋರ್ಟಲ್‌ನಲ್ಲಿ ತಿಳಿಸಲಾಗುವದು ಮತ್ತು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ ಎಂದು ಸೂಚಿಸಿದೆ.

ಸಹಿ/–ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿಕೋಶ, ಬಾಗಲಕೋಟೆ.

DIPR/BGK/RO-NO-781/MCA/2022-23

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://eproc.karnataka.gov.in ಮೂಲಕ)

ಕರ್ನಾಟಕ ಸರ್ಕಾರವು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು ಇದರ ಪಕ್ಕದಲ್ಲಿ **'ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ (ಬಿಎಸ್‌ಬಿಪಿ)'ಗೆ** ಪ್ರಮುಖ ಮೂಲಸೌಲಭ್ಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದೆ. ಕೆಎಸ್‌ಐಐಡಿಸಿಯು **'ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ನ ಉದ್ದೇಶಿತ 66/11ಕೆವಿ ಉಪಕೇಂದ್ರ–1ಕ್ಕೆ ಹಾಲಿಯಿರುವ 220/66/11ಕೆವಿ ಬಿಐಎಎಲ್ ಉಪಕೇಂದ್ರದಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 5.98 ಕಿ.ಮೀ ದೂರಕ್ಕೆ 66ಕೆ.ವಿ. 1C 1000 ಮಿ.ಮೀ ಭೂಗತ ಕೇಬಲ್ ಅಳವಡಿಸುವುದಕ್ಕೆ (ಪ್ಯಾಕೇಜ್–2).'** ಕೆಪಿಟಿಸಿಎಲ್/ಕೆಪಿಡಬ್ಲ್ಯೂಡಿ/ಎನ್‌ಹೆಚ್/ಎನ್‌ಹೆಚ್‌ಎಐ/ಸಿಪಿಡಬ್ಲ್ಯೂಡಿ/ ಅಥವಾ ಇತರೆ ಕೇಂದ್ರ/ ರಾಜ್ಯ ಸರ್ಕಾರದ ಉದ್ದಿಮೆ, ಸಂಸ್ಥೆಗಳಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರುಗಳಿಂದ ಐಟಂ ದರದ ಆಧಾರದ ಮೇಲೆ ಟೆಂಡರುಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ನ ಅಂದಾಜು ಮೊತ್ತ : **ರೂ.49.49 ಕೋಟಿ.** ಇಎಂಡಿ ಮೊತ್ತ: **ರೂ.49.49 ಲಕ್ಷ. ಪ್ರಮುಖ ದಿನಾಂಕಗಳು:** ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **17.01.2023ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ: **25.1.2023 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ ದಿನಾಂಕ: **16.02.2023 ರಂದು ಸಂಜೆ 5.30 ಗಂಟೆವರೆಗೆ.** ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ **https://eproc.karnataka.gov.in** ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು. ಸಂಪರ್ಕ ಸಂ.ಎಜಿಎಂ (ಐಪಿಡಿ–II), 080–22258131/132 ಇ–ಮೇಲ್: **bic3@ksiidc.com,ipd-2@ksiidc.com** ಮತ್ತು **info@ksiidc.com**

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಐಪಿಡಿ–II),
ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಬೆಂಗಳೂರು ವಿಭಾಗ, 2ನೇ ಮಹಡಿ, ಲೋ. ಇ. ಪೂರಕ ಕಟ್ಟಡ, ಕೆ. ಆರ್. ವೃತ್ತ,
ಬೆಂಗಳೂರು - 560 001. ದೂ.: 080-22133370 ಫ್ಯಾಕ್ಸ್: 080-22133365
ಇ-ಮೇಲ್: eepwdbngdn@yahoo.com Web: http/www.kpwd.gov.in

ಟೆಂಡರ್ ಪ್ರಕಟಣೆ ಸಂಖ್ಯೆ : 43/2022–23 ದಿನಾಂಕ : 13–01–2023

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ** ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ಹೊಸಕೋಟೆ ಉಪವಿಭಾಗ ಸಂಬಂಧಿಸಿದಂತೆ 01 ಸಂಖ್ಯೆಯ (ರೂ. 175.00 ಲಕ್ಷಗಳು) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

(1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ **ದಿನಾಂಕ : 13–01–2023** ರಿಂದ. **(2)** ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ **ದಿನಾಂಕ : 27–01–2023 ಸಂಜೆ 4.00 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ **ದಿನಾಂಕ : 30–01–2023 ಬೆಳಿಗ್ಗೆ 11.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

ವಾಸಾಇ/ಬೆಂ.ನ./4069/ಮಣಿಪಾಲ್/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕನೀನಿನಿ,
ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1,
ಮುಂಡರಗಿ, ಗದಗ ಜಿಲ್ಲೆ. Ph No: 08371 – 295016
e-mail: eeslis1mdg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ONLY THROUGH "e-Procurement" SYSTEM)

ಉಲ್ಲೇಖ :
1) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1556/2022–23 ದಿನಾಂಕ: 11.01.2023
2) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1557/2022–23 ದಿನಾಂಕ: 11.01.2023
3) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1558/2022–23 ದಿನಾಂಕ: 11.01.2023

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ವಿಭಾಗ–1 ಕಛೇರಿ ವ್ಯಾಪ್ತಿಯಲ್ಲಿ ಬರುವ ಹಾಗೂ ಲೆಕ್ಕಶೀರ್ಷಿಕೆ–4701ರಡಿ ಕೈಗೊಳ್ಳುವ ಮೂರು ರಸ್ತೆ ನಿರ್ಮಿಸುವ ಕಾಮಗಾರಿಗಳಿಗೆ ಉಲ್ಲೇಖ(1) ರಿಂದ ಉಲ್ಲೇಖ(3) ಗಳಲ್ಲಿನ ಅಲ್ಪಾವಧಿ ಟೆಂಡರ್ ಪ್ರಕಟಣೆಗಳಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ e-Portal Work **Indent No.35456, Indent No.35457** ಮತ್ತು **Indent No.35458** ರಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಗಳ ಟೆಂಡರ್‌ಗೆ ಇಟ್ಟ ಮೊತ್ತವು ಕ್ರಮವಾಗಿ ರೂ. **49.46** ಲಕ್ಷ, ರೂ. **49.46** ಲಕ್ಷ ಮತ್ತು ರೂ. **499.93** ಲಕ್ಷ ಆಗಿರುತ್ತವೆ ಹಾಗೂ ಸದರಿ ಕಾಮಗಾರಿಗಳ ಇ.ಎಂ.ಡಿ. ಮೊತ್ತವು ಕ್ರಮವಾಗಿ ರೂ. **99000/–**, ರೂ. **99000/–** ಮತ್ತು ರೂ. **750000/–** ಆಗಿರುತ್ತವೆ.

ಇನ್ನುಳಿದಂತೆ, ಸದರಿ ಟೆಂಡರಿಗಳಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ : **16.01.2023** ರ ನಂತರ "**eproc.karnataka.gov.in**", ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟಗಳನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **25.01.2023** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **27.01.2023** ಎಂದು ನಿಗದಿಪಡಿಸಲಾಗಿದೆ. ಅದರಂತೆ, Indent No.35458 ರ ಟೆಂಡರ್ ಕುರಿತು **Pre-bid** ಸಭೆಯನ್ನು ದಿನಾಂಕ : **19.01.2023** ರಂದು ಮುಖ್ಯ ಇಂಜನೀಯರರ ಕಛೇರಿ, ನೀರಾವರಿ ಕೇಂದ್ರ ವಲಯ, ಮುನಿರಾಬಾದ್‌ನಲ್ಲಿ ನಿಗದಿಪಡಿಸಲಾಗಿರುತ್ತದೆ ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone Numbers: +91-80-46010000, +91-80-68948777** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಸಿಂ.ಏ.ನೀ.ಯೋ., ವಿಭಾಗ–01,
ಮುಂಡರಗಿ, ಗದಗ ಜಿಲ್ಲೆ

ವಾಸಾಸಂಇ/ಗದಗ/ಎಂ.ಸಿ.ಎ/577/2022–23

ಪ್ರಧಾನ ಇಂಜನಿಯರ್ ರವರ ಕಛೇರಿ, ಪಿ.ಆರ್.ಎ.ಎಂ.ಸಿ.,
4ನೇ ಮಹಡಿ, ಪಿ.ಡಬ್ಲ್ಯೂ.ಡಿ., ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001

ಸಂಖ್ಯೆ. ಲೋಇ/02/ಪಿಆರ್‌ಎಎಂಸಿ/2022–23 ದಿನಾಂಕ : 16–01–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಹಾಸನ ಜಿಲ್ಲೆಯ 02 ರಸ್ತೆ ಸುರಕ್ಷತಾ ಕಾಮಗಾರಿ, ಉತ್ತರಕನ್ನಡ ಜಿಲ್ಲೆಯ 03 ರಸ್ತೆ ಸುರಕ್ಷತಾ ಕಾಮಗಾರಿ ಮತ್ತು ಧಾರವಾಡ ಜಿಲ್ಲೆಯ 01 ರಸ್ತೆ ಸುರಕ್ಷತಾ ಕಾಮಗಾರಿ ಒಟ್ಟು 06 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜನಿಯರ್, ಪಿ.ಆರ್.ಎ.ಎಂ.ಸಿ., ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್‌ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್‌ನಿಂದ **(www.eproc.karnataka.gov.in)** ದಿನಾಂಕ : **17–01–2023** ಸಂಜೆ **05:30** ನಂತರ ಪಡೆಯಬಹುದಾಗಿರುತ್ತದೆ.

ವಾಸಾಸಂಇ/ವಾ.ಪ್ರ/4115/ಶ್ರೇಷ್ಠ/2022–23 ಸಹಿ/– ಕಾರ್ಯಪಾಲಕ ಇಂಜನಿಯರ್, ಪಿಆರ್‌ಎಎಂಸಿ

ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ
ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ, ಪರಪ್ಪನ ಅಗ್ರಹಾರ
ಎಲೆಕ್ಟ್ರಾನಿಕ್ ಸಿಟಿ ಪೋಸ್ಟ್, ಬೆಂಗಳೂರು–560100

ಸಂಖ್ಯೆ: ಕೇಕಾಬೆಂ/ದರಖಾಸ್ತು/181/ಎ/2022–23 ದಿನಾಂಕ: 09.01.2023

ಇ–ಟೆಂಡರ್ ಪ್ರಕಟಣೆ

2023–24 ನೇ ಸಾಲಿಗೆ ಬೆಂಗಳೂರು ಕೇಂದ್ರ ಕಾರಾಗೃಹ ಹಾಗೂ ಅಧೀನ ಕಾರಾಗೃಹಗಳಿಗೆ ಅವಶ್ಯಕವಿರುವ ಆಹಾರ ಪದಾರ್ಥಗಳು / ತರಕಾರಿಗಳು / ಮಾಂಸ ಮತ್ತು ಮೊಟ್ಟೆ / ಇತರೆ ವಸ್ತುಗಳನ್ನು ಖರೀದಿಸುವ ಸಲುವಾಗಿ ಕೆ.ಟಿ.ಪಿ.ಪಿ ನಿಯಮದನ್ವಯ ಇ–ದರಖಾಸ್ತು ಮೂಲಕ ಖರೀದಿಸಲು ನಿರ್ಧರಿಸಿದೆ.

ದರಖಾಸ್ತು ವಿವರ: (1) ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–1, 2, 3, 4, 5, 6, 7 & 8 ರಲ್ಲಿ ಬರುವ ಆಹಾರ ಪದಾರ್ಥಗಳನ್ನು ಖರೀದಿಸುವ ಬಗ್ಗೆ. (2) ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–9 & 10 ರಲ್ಲಿ ಬರುವ ಹಣ್ಣು ಮತ್ತು ತರಕಾರಿಗಳನ್ನು ಖರೀದಿಸುವ ಬಗ್ಗೆ. (3) ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–11 ರಲ್ಲಿ ಬರುವ ಗಂಡು ಕುರಿಯ ಮೂಳೆ ರಹಿತ ಮಾಂಸ, ಚಿಕನ್ ಮತ್ತು ಮೊಟ್ಟೆ ಖರೀದಿಸುವ ಬಗ್ಗೆ. (4) ಕೇಂದ್ರ ಕಾರಾಗೃಹ, ಬೆಂಗಳೂರು ಮತ್ತು ಬೆಂಗಳೂರು ವಲಯದ ಕಾರಾಗೃಹಗಳಿಗೆ ಭಾಗ–12 ರಲ್ಲಿ ಬರುವ ಇತರೇ ವಸ್ತುಗಳನ್ನು ಖರೀದಿಸುವ ಬಗ್ಗೆ.

ಟೆಂಡರ್ ಇಂಡೆಂಟ್ ಸಂಖ್ಯೆ: **ಇ–ಪೋರ್ಟಲ್‌ನಂತೆ.** ಇಎಂಡಿ ಮೊತ್ತ (ರೂ.ಗಳಲ್ಲಿ): **ಇ–ಪೋರ್ಟಲ್‌ನಂತೆ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **ಇ–ಪೋರ್ಟಲ್‌ನಂತೆ.**

ದರಖಾಸ್ತುದಾರರು ಇ–ಪೋರ್ಟಲ್ ದೂರವಾಣಿ 080–25501227, 25501216 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ **https://eproc.karnataka.gov.in** or Helpline No.: **080-25501227, 25501216** ಗಳಿಗೆ ಸಂಪರ್ಕಿಸತಕ್ಕದ್ದು.

ಸಹಿ/– ಮುಖ್ಯ ಅಧೀಕ್ಷಕರು
ಕೇಂದ್ರ ಕಾರಾಗೃಹ, ಬೆಂಗಳೂರು

DIPR/CP/4036/GREENFMC/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹದೇವಪುರ ವಿಭಾಗ,
ವೈಟ್‌ಫೀಲ್ಡ್ ರಸ್ತೆ, ಫೀನಿಕ್ಸ್ ಮಾಲ್ ಎದುರು, ಬೆಂಗಳೂರು – 560048.

ಸಂಖ್ಯೆ: ಕಾಅ/ಮಪು/ಟೆಂಡರ್/15/2022–23 ದಿನಾಂಕ: 16–01–2023

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿ / ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಯಾವುದೇ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಸೂಕ್ತ ದರ್ಜೆಯಲ್ಲಿ ನೋಂದಾಯಿಸಿರುವ ಅರ್ಹ ಟೆಂಡರ್‌ದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಯಾವುದೇ ಅಥವಾ ಎಲ್ಲಾ ಕಾಮಗಾರಿಗಳಿಗೂ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಪ್ಯಾಕೇಜ್ ಕಾಮಗಾರಿಗಳ ಹೆಸರು	ಕಾಮಗಾರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಬಿಎಂಪಿ ಅನುದಾನಗಳು 2022–23 ರ ಲೆಕ್ಕ ಶೀರ್ಷಿಕೆ ಪಿ–0190 ಅನ್ವಯ ವಾರ್ಡ್ ಸಂಖ್ಯೆ. 114 ಮಾರತ್ತಹಳ್ಳಿ, ವಾರ್ಡ್ ಸಂಖ್ಯೆ. 115 ಬೆಳ್ಳಂದೂರು ಮತ್ತು ವಾರ್ಡ್ ಸಂಖ್ಯೆ. 116 ದೊಡ್ಡಕನ್ನಹಳ್ಳಿ ಇಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್ ಸಂಖ್ಯೆ: 01/2022–23 (5 ಕಾಮಗಾರಿಗಳು)**	**600.00**	**ರೂ. 9,00,000/–** (ಇ–ಪಾವತಿ ಮೂಲಕ **ರೂ. 1.00 ಲಕ್ಷ** ಮತ್ತು ಬಿಜಿ ಮೂಲಕ **ರೂ. 8,00,000/–** ಉಳಿಕೆ ಮೊತ್ತ ಪಾವತಿಸಬೇಕು. ಬಿಜಿಯನ್ನು ತಾಂತ್ರಿಕ ಬಿಡ್ ತೆರೆಯುವುದಕ್ಕೆ ಮುಂಚಿತವಾಗಿ ಸಲ್ಲಿಸಬೇಕು.
2	ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಬಿಬಿಎಂಪಿ ಅನುದಾನಗಳು 2022–23 ರ ಲೆಕ್ಕ ಶೀರ್ಷಿಕೆ ಪಿ–0190 ಅನ್ವಯ ವಾರ್ಡ್ ಸಂಖ್ಯೆ. 105 ಬೆಳತೂರು ಮತ್ತು ವಾರ್ಡ್ ಸಂಖ್ಯೆ. 113 ಮುನ್ನೆಕೊಳಾಲ ಇಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಪ್ಯಾಕೇಜ್ ಸಂಖ್ಯೆ: 02/2022–23 (2 ಕಾಮಗಾರಿಗಳು)**	**200.00**	**ರೂ. 3,00,000/–** (ಇ–ಪಾವತಿ ಮೂಲಕ **ರೂ. 1.00 ಲಕ್ಷ** ಮತ್ತು ಬಿಜಿ ಮೂಲಕ **ರೂ. 2,00,000/–** ಉಳಿಕೆ ಮೊತ್ತ ಪಾವತಿಸಬೇಕು. ಬಿಜಿಯನ್ನು ತಾಂತ್ರಿಕ ಬಿಡ್ ತೆರೆಯುವುದಕ್ಕೆ ಮುಂಚಿತವಾಗಿ ಸಲ್ಲಿಸಬೇಕು.

ಟೆಂಡರ್ ವೇಳಾಪಟ್ಟಿ: 1) ಪ್ರಸ್ತಾವನೆಗಾಗಿ ಮನವಿ (ಆರ್‌ಎಫ್‌ಪಿ) ದಸ್ತಾವೇಜನ್ನು ದಿನಾಂಕ: **23–01–2023ರ ಸಂಜೆ 4.00 ಗಂಟೆಯಿಂದ** ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **24–01–2023ರಂದು ಮಧ್ಯಾಹ್ನ 3.00 ಗಂಟೆಯೊಳಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **25–01–2023ರಂದು ಮಧ್ಯಾಹ್ನ 3.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹದೇವಪುರ ವಿಭಾಗ, ಬೆಂಗಳೂರು – 560048 ಇಲ್ಲಿ ನಡೆಯುವುದು.** 4) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **30–01–2023ರಂದು ಸಂಜೆ 4.00 ಗಂಟೆವರೆಗೆ.** 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **31–01–2023ರಂದು ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ, ಬಿಬಿಎಂಪಿ.

ಕ್ಷೇಮ ಕುಶಲ

ದುಃಖದ ಬಗ್ಗೆಯೂ ಮಾತಾಡೋಣ...

ದುಃಖವು ಎಲ್ಲರಿಗೂ ಇರುವಂಥದ್ದೇ ಎಂಬ ತಿಳಿವಳಿಕೆ ನಮ್ಮನ್ನು ಮತ್ತೆ ಪ್ರಪಂಚದೊಟ್ಟಿಗೆ ಬೆಸೆಯುತ್ತದೆ.

ರಮ್ಯಾ ಶ್ರೀಹರಿ

ದುಃಖ, ಬೇಸರ, ಚಿಂತೆ, ಆತಂಕ, ಒಂಟಿತನ - ಇಂತಹ ಭಾವಗಳು ಉಂಟಾದಾಗ ನಾವು ಅದನ್ನು ಹೇಗೆ ಸ್ವೀಕರಿಸುತ್ತೇವೆ? ಹೇಗೆ ಅರ್ಥೈಸುತ್ತೇವೆ? ಜೀವನದಲ್ಲಿ ಅನೇಕ ಬಾರಿ ಇಂತಹ ನಕಾರಾತ್ಮಕ ಭಾವಗಳನ್ನು ಹಾದುಬಂದ ಅನುಭವವಿದ್ದರೂ, ವರ್ತಮಾನದಲ್ಲಿ ಇವು ಕಾಡಿಸುವಾಗ ಹಿಂದೆ ಕಲಿತ ಪಾಠವೆಲ್ಲಾ ಮರೆತುಹೋಗಿ, ಏನೂ ಉಪಯೋಗಕ್ಕೆ ಬಾರದಂತಾಗಿ ಮತ್ತೆ ಮತ್ತೆ ಉಸಿರುಗಟ್ಟಿಸುವ ಸುಳಿಯೊಳಗೆ ಸಿಕ್ಕಂತೆ ಒದ್ದಾಡುತ್ತೇವೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ನಾವು ಬುದ್ಧಿಯಿಂದ ಕಲಿತದ್ದು ಮರೆತುಹೋಗುತ್ತದೆ; ಅನುಭವಗಳನ್ನು ಅಂತರ್ಗತಗೊಳಿಸಿಕೊಂಡು ಹೊಸ ವರ್ತನೆಗಳನ್ನು ಮೈಗೂಡಿಸಿಕೊಂಡಿದ್ದು ಉಳಿಯುತ್ತದೆ. ಹಾಗಾದರೆ ದುಃಖವು ನಮ್ಮನ್ನು ಆವರಿಸಿದಾಗ ನಾವೇನನ್ನು ಸಾಧಾರಣವಾಗಿ ಮರೆಯುತ್ತೇವೆ? ಏನನ್ನು ರೂಢಿಸಿಕೊಂಡರೆ ನಿರಾಳವಾಗಿರುವುದು ಸುಲಭವಾಗುತ್ತದೆ?

ದುಃಖದಿಂದ ಹೊರತಾದವರು ಯಾರೂ ಇಲ್ಲ ಎಂಬ ಅರಿವಿರುತ್ತದೆ. ಆದರೆ ನಾವು ದುಃಖದಲ್ಲಿರುವಾಗ ದುಃಖವನ್ನು ವೈಯಕ್ತಿಕವಾಗಿ ತೆಗೆದುಕೊಂಡು 'ನಾನು ಮಾತ್ರ ಕಷ್ಟದಲ್ಲಿರೋದು, ಇದು ನನಗೆ ಮಾತ್ರ ಬಂದಿರುವ ಸಮಸ್ಯೆ' ಎಂಬಂತಾಡುತ್ತೇವೆ. 'ಎಲ್ಲರೂ ಸುಖದಲ್ಲಿದ್ದಾರೆ; ನಾನು ಮಾತ್ರ ದುಃಖದಲ್ಲಿರುವುದು' ಎಂಬ ಭ್ರಮೆಯುಂಟಾದಾಗ ಮತ್ತಷ್ಟು ಸಂಕಟಪಡುತ್ತೇವೆ. ಸುತ್ತಲಿನ ಸಮಾಜದಿಂದ, ಕುಟುಂಬದಿಂದ, ಸಮುದಾಯದಿಂದ ನಮ್ಮನ್ನು ನಾವು ಬೇರೆಯಾಗಿಸಿಕೊಂಡು ತೊಳಲಾಡುತ್ತೇವೆ. ದುಃಖವು ಎಲ್ಲರಿಗೂ ಇರುವಂಥದ್ದೇ ಎಂಬ ತಿಳಿವಳಿಕೆ ನಮ್ಮನ್ನು ಮತ್ತೆ ಪ್ರಪಂಚದೊಟ್ಟಿಗೆ ಬೆಸೆಯುತ್ತದೆ. ಇದಕ್ಕಾಗಿ ನಾವು ಮಾಡಬೇಕಾದ್ದೆಂದರೆ: ನಾವು ನಂಬಿಕೆಗೆ ಅರ್ಹರು, ಸ್ನೇಹಿತರು ಎಂದು ತಿಳಿದುಕೊಂಡವರ ಎದುರು ನಮ್ಮ ದುಃಖವನ್ನು ಬಿಚ್ಚಿಡುವುದು. ಮೊದಲಿಗೆ ಇದು ಸ್ವಲ್ಪ ಕಷ್ಟವೆನಿಸಬಹುದು. ನಾವು ನಮ್ಮ ಚಿಂತೆ, ಸಂಕಟಗಳನ್ನು ತೋರ್ಪಡಿಸಿಕೊಂಡರೆ ನಮ್ಮನ್ನು ಕನಿಕರದಿಂದ ನೋಡುತ್ತಾರೆ; ನಮಗೆ ಸಲಹೆಗಳನ್ನು ಕೊಡಲು ಅಥವಾ ನಮ್ಮನ್ನು ಟೀಕಿಸಲು ಮುಂದಾಗುತ್ತಾರೆ; ಅಥವಾ ಅವರಿಂದ ಸಹಾಯದ ನಿರೀಕ್ಷೆಯಿದೆ ಎಂದು ತಪ್ಪು ತಿಳಿದು ದೂರಾಗುತ್ತಾರೆ ಎಂಬೆಲ್ಲಾ ಭಯಗಳಿಂದ ಹೊರಬಂದು ದುಃಖದ ಬಗ್ಗೆ, ಬೇಸರದ ಬಗ್ಗೆ ಮಾತನಾಡಬೇಕು.

ನಾವು ತೆರೆದುಕೊಂಡಾಗ ನಾವು ಅವರಲ್ಲಿಟ್ಟ ನಂಬಿಕೆ, ವಿಶ್ವಾಸದಿಂದ ಪ್ರಭಾವಿತರಾಗಿ ಅವರೂ ತಮ್ಮ ದುಃಖವನ್ನು ತೋಡಿಕೊಳ್ಳಬಹುದು. ಒಂದು ವೇಳೆ ಅವರು ನಮ್ಮ ವಿಶ್ವಾಸವನ್ನು ದುರುಪಯೋಗಪಡಿಸಿಕೊಂಡು ನಮ್ಮನ್ನು ಹೀನಾಯವಾಗಿ ಕಾಣುತ್ತಲೋ, ನಮ್ಮ ನೋವಿಗೆ ಸಂತಸಪಡುತ್ತಲೋ ಇದ್ದರೆ ಅದು ಅವರ ಅಪ್ರಬುದ್ಧತೆಯೆ ಹೊರತು ನಮ್ಮ ತಪ್ಪಲ್ಲ. ನಾವು ಮಾನವೀಯತೆಯಲ್ಲಿ ನಂಬಿಕೆ ಇಟ್ಟು ಸಹೃದಯತೆಯನ್ನು ತೋರಿಸಿದೆವು; ಅವರು ಅದಕ್ಕೆ ಯೋಗ್ಯರಲ್ಲ ಎಂದು ತಿಳಿದು ಮುಂದುವರೆದರಾಯಿತು.

ದುಃಖದ ಬಗ್ಗೆ ಆತ್ಮೀಯರ ಜೊತೆ ಮಾತನಾಡಬೇಕು, ನಿಜ. ಆದರೆ ಅದು ತಕ್ಷಣಕ್ಕೆ ಸಾಧ್ಯವಾಗದಿರಬಹುದು. ನಮ್ಮ ಆತ್ಮೀಯರನ್ನು ಪ್ರತಿಕ್ಷಣವೂ ತಲುಪುವುದು ಅಸಾಧ್ಯ. ಹಾಗಿದ್ದಾಗಲೂ ದುಃಖದ ಬಗ್ಗೆ ಮಾತನಾಡಬಹುದು. ಯಾರೊಡನೆ ಎಂಬ ಪ್ರಶ್ನೆಯೇಕೆ? ನಮ್ಮ ಪರಮಾಪ್ತರು ನಾವೇ ಅಲ್ಲವೇ? ನಮ್ಮೊಂದಿಗೇ ನಾವು ಮಾತನಾಡಬಹುದು. ದುಃಖದ ಬಗ್ಗೆ ಮಾತನಾಡುವುದೆಂದರೆ ನಮ್ಮ ಕಷ್ಟಗಳ ವಿವರಗಳನ್ನು, ತೊಂದರೆಗಳನ್ನು ಕುರಿತು ಗೋಳಾಡುವುದಲ್ಲ. ಪರಿಸ್ಥಿತಿಯನ್ನೋ ಅಥವಾ ಬೇರೆ ಯಾರನ್ನೋ ದೂಷಿಸುವುದೂ ಅಲ್ಲ. ಅದು ದುಃಖದ ಅನುಭವವನ್ನು ಪ್ರಜ್ಞಾಪೂರ್ವಕವಾಗಿ ದಾಖಲಿಸುವುದು. ಯಾವ ಹಿಂಜರಿಕೆಯೂ ಇಲ್ಲದೆ ದುಃಖವನ್ನು ಮನಃಪೂರ್ವಕವಾಗಿ ಅನುಭವಿಸುವುದು ಎಂದರ್ಥ.

ಆತ್ಮೀಯ ಹಿರಿಯರೊಬ್ಬರು ಸಮಾಧಾನ ಮಾಡುವಂತಿದ್ದರೆ ಅದು ಹೇಗಿರುತ್ತದೆಯೋ, ಯಾವ ಮಾತುಗಳಲ್ಲಿ ಅದು ಅಭಿವ್ಯಕ್ತಗೊಳ್ಳುತ್ತದೆಯೋ, ಅದನ್ನು ನಮಗೆ ನಾವೇ ಹೇಳಿಕೊಳ್ಳುವುದು ದುಃಖದಿಂದ ಹೊರಬರುವುದಕ್ಕೆ ಸಹಾಯಕವಾಗುತ್ತದೆ. ನಮ್ಮ ದುಃಖಕ್ಕೊಂದು ಮುಖವಿದ್ದರೆ, ದುಃಖವನ್ನು ಒಂದು ಭೂಪ್ರದೇಶವಾಗಿ ಚಿತ್ರಿಸುವಂತಿದ್ದರೆ ಅದು ಹೇಗಿರುತ್ತದೆ? ಅಂತಹ ಚಿತ್ರವೊಂದನ್ನು ರಚಿಸಿ ಅದರೊಡನೆ ಮಾತಿಗಿಳಿಯಬಹುದು. ನಮ್ಮ ದುಃಖವನ್ನು ಅದರ ಎಲ್ಲ ಸೂಕ್ಷ್ಮತೆಗಳೊಂದಿಗೆ ಹಿಡಿದಿಡುತ್ತದೆ ಎಂದೆನಿಸುವ ಸಾಹಿತ್ಯವನ್ನು ಓದುವುದರಿಂದ ಕೂಡ ಮನಸ್ಸು ಹಗುರಾಗುತ್ತದೆ.

ದುಃಖದ ಬಗ್ಗೆ ನಾವು ಏಕೆ ಮಾತನಾಡಬೇಕು? ದುಃಖದ ಕುರಿತು ಮಾತನಾಡುವ ಮೂಲಕ ನಾವು ಅದಕ್ಕೆ ಒಂದು ಪ್ರತ್ಯೇಕ ಸ್ಥಾನವನ್ನು ಕೊಟ್ಟಂತಾಗುತ್ತದೆ, ದುಃಖದ ಅಭಿವ್ಯಕ್ತಿಗೆ ಸುರಕ್ಷಿತ ನೆಲೆಯೊಂದನ್ನು ಒದಗಿಸಿದಂತಾಗುತ್ತದೆ. ಯಾವುದೇ ಭಾವವನ್ನು ನಾವು ಪ್ರತಿರೋಧಿಸಿದಷ್ಟೂ ಅದರ ಬಲ ಹೆಚ್ಚಾಗುತ್ತದೆ. ದುಃಖವನ್ನೂ ಅನುಭವಿಸಲು ಅವಕಾಶ ನೀಡಿದಾಗ ಅದು ತಾನೇ ತಾನಾಗಿ ಉಪಶಮನವನ್ನೂ ಕಾಣುತ್ತದೆ.

ನಾವು ದುಃಖವನ್ನನುಭವಿಸುವಾಗ ಅದು ನಿರಂತರವೇನೋ ಎಂಬ ಭ್ರಮೆಯುಂಟಾಗಿ ಕಣ್ಣ ಮುಂದೆ ಕತ್ತಲ ಪರದೆಯೊಂದನ್ನು ಎಳೆದಂತಾಗುತ್ತದೆ. ಆದರೆ ವಾಸ್ತವದಲ್ಲಿ ಹಾಗಿರುವುದಿಲ್ಲ. ದುಃಖಕ್ಕೆ ಯಾವ ಪ್ರತಿಕ್ರಿಯೆಯನ್ನೂ ತೋರದೆ ದುಃಖದ ಸಂವೇದನೆಗಳಾದ ಖಾಲಿತನ, ನಿರುತ್ಸಾಹ ಮುಂತಾದುವನ್ನು ಗಮನಿಸುತ್ತಾ ಹೋದರೆ ಕೆಲವು ನಿಮಿಷಗಳಲ್ಲೇ ನಮ್ಮ ಅನುಭವದಲ್ಲೇನೋ ಬದಲಾವಣೆ ಆದಂತೆನಿಸುತ್ತದೆ. ಎಲ್ಲ ಭಾವನೆಗಳ ಮೂಲತತ್ವವೇ ಬದಲಾವಣೆ. ಸಕಾರಾತ್ಮಕವಿರಲಿ, ನಕಾರಾತ್ಮಕವಿರಲಿ - ಎಲ್ಲಾ ಭಾವಗಳೂ ಕಾಲದೊಡನೆಯ ಸಂಬಂಧವನ್ನೇ ಸಾರುತ್ತವೆ.

ದುಃಖ, ಭಯ, ಚಿಂತೆಗಳನ್ನೊಳಗೊಂಡ ಆಲೋಚನೆಗಳನ್ನು ನಾವು ತಾರ್ಕಿಕ, ಸಕಾರಾತ್ಮಕ ಆಲೋಚನೆಗಳಿಂದ ನಿಯಂತ್ರಿಸಬಹುದು ಎಂಬುದು ತಪ್ಪುಗ್ರಹಿಕೆ. ಆಲೋಚನೆಗಳನ್ನು ನಿಯಂತ್ರಿಸಲು ಹೊರಡುವ ಕ್ಷಣದಲ್ಲೇ ನಾವು ಆಲೋಚನೆಗಳಿಂದ ನಿಯಂತ್ರಿತರಾಗುತ್ತೇವೆ. ದುಃಖದಿಂದ ಹುಟ್ಟುವ ಭಯಮಿಶ್ರಿತ ಆಲೋಚನೆಗಳಿಗೆ ನಿಜವಾದ ಮದ್ದು ಎಂದರೆ ದೇಹದಲ್ಲಿ ಶಾಂತಿ ನೆಲೆಸುವಂತೆ ಮಾಡುವ ಕ್ರಿಯೆಗಳಾದ ನಡಿಗೆ, ವ್ಯಾಯಾಮ, ಧ್ಯಾನ, ಕ್ರೀಡೆ, ನೃತ್ಯ, ಚಾರಣ, ಪ್ರವಾಸ ಮುಂತಾದವು.

ದುಃಖವು ಸಂವೇದನಾಶೀಲತೆಯ ಪ್ರತೀಕ. ಬದುಕಿನ ಕ್ಷಣಿಕತೆಯನ್ನು, ದುರ್ಭರತೆಯನ್ನು ಗ್ರಹಿಸಿದ್ದೇವೆ ಎಂಬುದರ ಸಂಕೇತ. ಅದು ಮನುಷ್ಯತ್ವದ ಗುರುತೂ ಹೌದು. ದುಃಖವಿದೆ ಎಂದಮಾತ್ರಕ್ಕೆ ನಾವು ಅದರಲ್ಲೇ ಮುಳುಗಿಹೋಗಿ ಜೀವನದ ಸಂಭ್ರಮಕ್ಕೆ ವಿಮುಖರಾಗಬೇಕಿಲ್ಲ. ❖

ಮಕ್ಕಳಿಗೆ ಬೇಕು ಆಟೋಟ

ಡಾ. ಕಿರಣ್ ವಿ. ಎಸ್.

ಕೆಲದಶಕಗಳ ಹಿಂದೆ 'ಮಕ್ಕಳಿಗೆ ವ್ಯಾಯಾಮ' ಎಂದರೆ ಅಚ್ಚರಿ ಪಡಬೇಕಿತ್ತು. ಶಾಲೆ ಮುಗಿಸಿ, ಎಷ್ಟೋ ಅಷ್ಟು ಹೋಂವರ್ಕ್ ಮಾಡಿ, ಆಟಕ್ಕೆಂದು ಇಳಿದರೆ ಮತ್ತೆ ಊಟದ ವೇಳೆಗೆ ಮನೆಗೆ ಬನ್ನಿರೆಂದು ಹಿರಿಯರು ಗೋಗರೆಯಬೇಕಿತ್ತು. ಇನ್ನು ಭಾನುವಾರಗಳು, ರಜೆಯ ದಿನಗಳು ಕೇಳುವುದೇ ಬೇಡ. ಹೀಗಿರುವಾಗ ಮಕ್ಕಳ ವಿಶ್ರಾಂತಿಯ ಬಗ್ಗೆ ಹಿರಿಯರು ಆಲೋಚಿಸಬೇಕಿತ್ತೇ ಹೊರತು, ವ್ಯಾಯಾಮದ ಬಗ್ಗೆ ಅಲ್ಲ. ಆದರೆ ಈಗ ನಗರಗಳ ಪರಿಸ್ಥಿತಿ ಬದಲಾಗಿದೆ. ಮಕ್ಕಳಿಗೆ ಆಡಲು ಸುರಕ್ಷಿತ ತಾಣಗಳು ಕಡಿಮೆಯಾಗಿವೆ. ಸಂಚಾರ ದಟ್ಟಣೆಯ ಕಾರಣದಿಂದ ಮಕ್ಕಳು ಶಾಲೆಯಿಂದ ಮನೆಗೆ ಬರುವುದು ತಡವಾಗುತ್ತಿದೆ. ಅದರ ಮೇಲೆ ಓದಿನ ಒತ್ತಡ, ಶಾಲೆಯಲ್ಲಿ ನೀಡುವ ಪ್ರಾಜೆಕ್ಟ್‌ಗಳು, ಮನೆಪಾಠ, ಪಠ್ಯೇತರ ಚಟುವಟಿಕೆಗಳು ಮೊದಲಾದುವು ಮಕ್ಕಳ ದೈಹಿಕ ಆಟದ ಸಮಯವನ್ನು ನುಂಗಿಹಾಕುತ್ತಿವೆ. ಇದರ ಸ್ಥಾನವನ್ನು ದೂರದರ್ಶನಗಳು, ಕಂಪ್ಯೂಟರ್ ಆಟಗಳು, ಮೊಬೈಲ್ ಫೋನುಗಳು ಆಕ್ರಮಿಸಿವೆ. ಒಟ್ಟಿನಲ್ಲಿ ಆಟಗಳ ಮೂಲಕ ಹಿಂದೆ ಅನಾಯಾಸವಾಗಿ ಸಿಗುತ್ತಿದ್ದ ದೈಹಿಕ ವ್ಯಾಯಾಮ ಪ್ರಸ್ತುತ ಪೀಳಿಗೆಯ ಮಕ್ಕಳಿಗೆ ಸುಲಭವಾಗಿ ದಕ್ಕುತ್ತಿಲ್ಲ. ಪರಿಣಾಮವಾಗಿ ಮಕ್ಕಳಲ್ಲಿ ಬೊಜ್ಜು ಮತ್ತು ಅದರ ಸಂಬಂಧಿ ಕಾಯಿಲೆಗಳು ಏರುತ್ತಿವೆ.

ಮಕ್ಕಳ ದೈಹಿಕ ಬೆಳವಣಿಗೆಯಲ್ಲಿ ಶರೀರ ಚಟುವಟಿಕೆಯಿಂದ ಇರುವುದು ಅತ್ಯಗತ್ಯ. ಮೂಳೆಗಳ ವಿಕಾಸಕ್ಕೆ, ಸ್ನಾಯುಗಳ ಬಲವರ್ಧನೆಗೆ, ಚರ್ಮದ ಆರೋಗ್ಯಕ್ಕೆ, ತಾರ್ಕಿಕ ಶಕ್ತಿಯ ಅಭಿವೃದ್ಧಿಗೆ, ಕಲ್ಪನೆ ಅರಳುವುದಕ್ಕೆ ಮಕ್ಕಳು ಆಟಗಳಂತಹ ದೈಹಿಕ ಕ್ರಿಯೆಗಳಲ್ಲಿ ಪಾಲುಗೊಳ್ಳಬೇಕು. ಮೂರರಿಂದ ಐದು ವರ್ಷಗಳ ವಯಸ್ಸಿನ ಮಕ್ಕಳು ಎಚ್ಚರವಾಗಿರುವಾಗ ಯಾವುದೋ ಒಂದು ಭೌತಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರಬೇಕು. ಆಟ, ಕುಣಿತ, ಪಲ್ಟಿ ಹೊಡೆಯುವುದು, ಏನನ್ನಾದರೂ ಹತ್ತಿ ಇಳಿಯುವುದು ಮೊದಲಾದ ಚಟುವಟಿಕೆಗಳು ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ರಹದಾರಿ. ದಿನವಿಡೀ ಚಟುವಟಿಕೆಯಿಂದ ಇರುವ ಮಕ್ಕಳು ರಾತ್ರಿ ಚೆನ್ನಾಗಿ ನಿದ್ರಿಸುತ್ತಾರೆ. ಇದು ಅವರ ಆರೋಗ್ಯದ ಮೇಲೆ ಧನಾತ್ಮಕ ಪರಿಣಾಮವನ್ನು ಬೀರುತ್ತದೆ.

ಐದು ವರ್ಷಗಳ ವಯಸ್ಸಿನ ನಂತರ 17 ವರ್ಷಗಳ ವಯಸ್ಸಿನವರೆಗೆ ಮಕ್ಕಳು ಪ್ರತಿದಿನ ಕನಿಷ್ಠ ಒಂದು ಗಂಟೆಯ ಕಾಲ ದೈಹಿಕ ವ್ಯಾಯಾಮ ಮಾಡಬೇಕು. ಇದರಲ್ಲಿ ವಾರಕ್ಕೆ ಕನಿಷ್ಠ ಮೂರು ದಿನ ಹೃದಯದ ಬಡಿತವನ್ನು ಹೆಚ್ಚಿಸುವ, ಉಸಿರಾಟದ ವೇಗವನ್ನು ಮತ್ತು ಆಳವನ್ನು ಅಧಿಕಗೊಳಿಸುವ ವೇಗದ ನಡಿಗೆ ಅಥವಾ ಓಟದಂತಹ ವ್ಯಾಯಾಮಗಳು ಇರಬೇಕು. ಇದರ ಜೊತೆಗೆ ವಾರಕ್ಕೆ ಮೂರು ದಿನ ಮೂಳೆ ಮತ್ತು ಸ್ನಾಯುಗಳ ಬಲವನ್ನು ವೃದ್ಧಿಸುವ ಜಿಗಿತ ಮತ್ತು ಮಾಂಸಖಂಡಗಳ ಮೇಲೆ ಒತ್ತಡ ಹಾಕುವಂತಹ ಚಟುವಟಿಕೆಗಳು ಇರಬೇಕು. ಈ ರೀತಿಯ ವ್ಯಾಯಾಮಗಳನ್ನು ಆಯಾ ವಯಸ್ಸಿಗೆ ತಕ್ಕ ರೀತಿಯಲ್ಲಿ ಮಾಡಬಹುದು.

ಮಕ್ಕಳ ವ್ಯಾಯಾಮ ಹಲವಾರು ಬಗೆಯದ್ದಾಗಿರಬಹುದು. ಕಾಲ್ಚೆಂಡಿನಾಟದ ತರಬೇತಿ, ಈಜು, ಹಗ್ಗಜಿಗಿತ, ನೃತ್ಯ, ಸ್ಕೇಟಿಂಗ್, ಬೈಸಿಕಲ್ ಸವಾರಿ ಮೊದಲಾದುವು ಅವರ ವ್ಯಾಯಾಮದ ಅಗತ್ಯವನ್ನು ಪೂರೈಸುತ್ತವೆ. ಈ ಬಗ್ಗೆ ಆಸಕ್ತಿಯಿಲ್ಲದ ಮಕ್ಕಳಿಗೆ ದೈನಂದಿನ ಕ್ರಿಯೆಗಳಲ್ಲಿಯೇ ಭೌತಿಕ ಚಟುವಟಿಕೆಗಳನ್ನು ಒಗ್ಗೂಡಿಸಬೇಕಾಗುತ್ತದೆ. ಉದಾಹರಣೆಗೆ, ಕಲೆಯಲ್ಲಿ ಉತ್ಸುಕರಾದ ಮಕ್ಕಳಿಗೆ ನಿಸರ್ಗದ ಉದಾಹರಣೆಗಳನ್ನು ತೋರಲು ಮನೆಯಿಂದ ಅನತಿ ದೂರದಲ್ಲಿರುವ ತಾಣಗಳನ್ನು ಭೇಟಿ ನೀಡುವಂತೆ ಉತ್ತೇಜಿಸಬಹುದು. ಪುಸ್ತಕ ಓದುವುದರಲ್ಲಿ ಮೈಮರೆಯುವ ಮಕ್ಕಳಿಗೆ ಮನೆಗೆ ಸ್ವಲ್ಪ ದೂರದಲ್ಲಿರುವ ಗ್ರಂಥಾಲಯಕ್ಕೆ ಚಂದಾದಾರರನ್ನಾಗಿಸಿ, ಪುಸ್ತಕ ಬದಲಾಯಿಸುವಾಗ ಅಲ್ಲಿಗೆ ನಡಿಗೆಯಲ್ಲೋ, ಬೈಸಿಕಲ್ ಬಳಸಿಯೋ ಹೋಗಿಬರುವಂತೆ ಪ್ರೇರೇಪಿಸಬಹುದು. ಗಿಡಗಳ ಮೇಲೆ ಪ್ರೀತಿ ಇರುವ ಮಕ್ಕಳಿಗೆ ಮನೆಯಂಗಳದಲ್ಲಿನ ಗಿಡಗಳ ಜವಾಬ್ದಾರಿ ನೀಡಬಹುದು; ಇಲ್ಲವೇ ಸಮೀಪದ ಉದ್ಯಾನಗಳಲ್ಲಿ ಇರುವ ಗಿಡ-ಮರಗಳ ಬಗ್ಗೆ ಹೆಚ್ಚು ಅರಿಯಲು ತೊಡಗಿಸಬಹುದು. ನರ್ತನದ ಬಗ್ಗೆ ಆಸಕ್ತಿ ಇರುವ ಮಕ್ಕಳಿಗೆ ದಿನವೂ ಯಾವುದಾದರೂ ಸಂಗೀತಕ್ಕೆ ಕುಣಿಯುವಂತಹ ಸಲಹೆ ನೀಡಬಹುದು. ಒಟ್ಟಿನಲ್ಲಿ, ವ್ಯಾಯಾಮದಲ್ಲಿ ಅನಾಸಕ್ತರಾದ ಮಕ್ಕಳಿಗೆ ಅವರವರ ಇತರ ಆಸಕ್ತಿಗಳಿಗೆ ತಕ್ಕಂತೆ ದೈಹಿಕ ಚಟುವಟಿಕೆಗಳನ್ನು ಜಾಣ್ಮೆಯಿಂದ ವಿನ್ಯಾಸ ಮಾಡಲು ಸಾಧ್ಯ.

ಹಿರಿಯರ ಉದಾಹರಣೆಗಿಂತಲೂ ಹೆಚ್ಚಿನ ಉತ್ತೇಜನವನ್ನು ಮಕ್ಕಳಿಗೆ ನೀಡಲು ಸಾಧ್ಯವಿಲ್ಲ. ಮಕ್ಕಳು ಲವಲವಿಕೆಯಿಂದ ಇರಬೇಕೆಂದು ಬಯಸುವ ಹಿರಿಯರು ಮೊದಲು ತಾವೇ ಒಂದು ಉದಾಹರಣೆಯಾಗಿ ನಿಲ್ಲಬೇಕಾಗುತ್ತದೆ. ಮುಂಜಾನೆಯೋ ಸಂಜೆಯೋ ಮಕ್ಕಳ ಜೊತೆಯಲ್ಲಿ ಓಡಾಟಕ್ಕೆ ಹೋಗಿಬರುವುದು, ಮನೆಯನ್ನು ಶುಚಿಗೊಳಿಸುವ ಪ್ರಕ್ರಿಯೆಯಲ್ಲಿ ಎಲ್ಲರೂ ತೊಡಗಿಕೊಳ್ಳುವುದು, ಸಣ್ಣ-ಪುಟ್ಟ ದುರಸ್ತಿ ಕಾರ್ಯಗಳನ್ನು ಮಾಡುವುದು, ಮನೆಯ ಅಂಗಳದಲ್ಲೋ, ಹಿತ್ತಲಿನಲ್ಲೋ ಸಣ್ಣ ತೋಟವನ್ನು ನಿರ್ಮಿಸುವುದು ಮೊದಲಾದುವು ಮಕ್ಕಳಲ್ಲಿ ದೈಹಿಕ ಚಟುವಟಿಕೆಯ ಬಗ್ಗೆ ಶಿಸ್ತನ್ನು ಬೆಳೆಸುವುದಲ್ಲದೆ, ಹಿರಿಯರ ಬಗೆಗಿನ ಪ್ರೀತಿ, ಆದರಗಳನ್ನು ಹಿಗ್ಗಿಸಬಲ್ಲವು.

ವಸತಿ ಸಮುಚ್ಚಯಗಳಂತಹ ಸಮುದಾಯದಲ್ಲಿ ಒಟ್ಟಾಗಿ ವಾಸಿಸುವ ಕುಟುಂಬಗಳಲ್ಲಿ ಹಲವಾರು ಮಕ್ಕಳ ಗುಂಪು ಇರಬಲ್ಲದು. ಇಂತಹ ಗುಂಪುಗಳಲ್ಲಿ ಮಕ್ಕಳು ಕೂಡಿ ಆಡಬಹುದಾದ ಆಟಗಳನ್ನು ವಿನ್ಯಾಸಗೊಳಿಸುವುದು ಸುಲಭ. ಮಕ್ಕಳು ಬೆಳೆದಂತೆಲ್ಲಾ ನಿಯಮಿತ ವೇಳೆಯಲ್ಲಿ ಮಾಡಬಲ್ಲ ಯೋಗಾಸನದಂತಹ ಚಟುವಟಿಕೆಗಳನ್ನು ನಿಯೋಜಿಸಬಹುದು. ಮಗುವೊಂದು ಒಂಟಿಯಾಗಿ ಮಾಡುವ ಚಟುವಟಿಕೆಗಿಂತಲೂ ಗುಂಪಿನಲ್ಲಿ ಕಲಿಯುವ ಅವಕಾಶಗಳು ಅಧಿಕವಾಗಿರುತ್ತವೆ. ಜೊತೆಗೆ ಇದರ ಪರೋಕ್ಷ ಲಾಭಗಳೂ ಹೆಚ್ಚು. ಸಮುಚ್ಚಯದ ಯಾರಾದರೂ ಹಿರಿಯರು ಆಸಕ್ತಿ ವಹಿಸಿ ಮಕ್ಕಳನ್ನು ಇಂತಹ ಚಟುವಟಿಕೆಗಳಲ್ಲಿ ತೊಡಗಿಸಿದರೆ ಅದಕ್ಕಿಂತ ಹೆಚ್ಚಿನ ಸಮಾಜಸೇವೆ ಇರಲಿಕ್ಕಿಲ್ಲ.

ಮಕ್ಕಳಲ್ಲಿ ಭೌತಿಕ ಚಟುವಟಿಕೆ ಅವರ ಜೀವನಶೈಲಿಯ ಅವಿಭಾಜ್ಯ ಅಂಗವಾಗಿರಬೇಕು. ಆಧುನಿಕ ಜಗತ್ತಿನ ಧಾವಂತದಲ್ಲಿ ನಾವು ಮಕ್ಕಳ ಹಲವಾರು ಅಗತ್ಯಗಳನ್ನು ಪೂರೈಸಲಾಗುತ್ತಿಲ್ಲ. ಅಂತಹ ಪಟ್ಟಿಯಲ್ಲಿ ದೈಹಿಕ ವ್ಯಾಯಾಮ ಇರಬಾರದು. ಜಾಣ್ಮೆಯ ಆಲೋಚನೆಗೆ ಅವಕಾಶ ನೀಡಿದರೆ ಇದನ್ನು ಹಲವಾರು ಕ್ರಿಯಾತ್ಮಕ ರೀತಿಗಳಲ್ಲಿ ರಚಿಸಲು ಸಾಧ್ಯ. ಮಕ್ಕಳ ವ್ಯಾಯಾಮ ಆಯ್ಕೆಯಲ್ಲ; ಕಡ್ಡಾಯ ಅವಶ್ಯಕತೆ ಎಂಬುದು ಪ್ರತಿಯೊಬ್ಬ ಪೋಷಕರ ಗಮನದಲ್ಲಿರಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ

1) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.



1) ಚಿತ್ರದಲ್ಲಿರುವವರನ್ನು ಗುರುತಿಸಿ. ಇವರು ಬರೆದಿರುವ ಯಾವುದಾದರೂ ಒಂದು ಪುಸ್ತಕವನ್ನು ಹೆಸರಿಸಿ
ಎ) ಬಾಲಗಂಗಾಧರ್ ತಿಲಕ್- ಗೀತಾ ರಹಸ್ಯ
ಬಿ) ಮಹಾತ್ಮ ಗಾಂಧಿ- ಎಕ್ಸ್‌ಪರಿಮೆಂಟ್ ವಿಥ್ ಟ್ರೂಥ್
ಸಿ) ಜವಾಹರ್ ಲಾಲ್ ನೆಹರೂ- ಡಿಸ್ಕವರಿ ಆಫ್ ಇಂಡಿಯಾ
ಡಿ) ಮೇಲಿನ ಯಾವುದೂ ಸರಿಯಾಗಿಲ್ಲ
ಉತ್ತರ:(ಸಿ)ಜವಾಹರ್ ಲಾಲ್ ನೆಹರು- ಡಿಸ್ಕವರಿ ಆಫ್ ಇಂಡಿಯಾ

2) ರಾಸಾಯನಿಕ ಗೊಬ್ಬರಗಳಿಗೆ ಬದಲಾಗಿ ಜೈವಿಕ ಗೊಬ್ಬರ, ರಾಸಾಯನಿಕ ಕ್ರಿಮಿನಾಶಕಗಳಿಗೆ ಬದಲಾಗಿ ಜೈವಿಕ ಕ್ರಿಮಿನಾಶಕಗಳ ಬಳಕೆಗೆ ಪ್ರೋತ್ಸಾಹಿಸಿ. ಕೃಷಿಯಲ್ಲಿ ಎಲ್ಲ ರೀತಿಯ ಪರಸರ ಸ್ನೇಹಿ ತಂತ್ರಗಳನ್ನು ಬಳಸಿ, ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸುವುದನ್ನು ಏನೆಂದು ಗುರುತಿಸಲಾಗುತ್ತಿದೆ.?
ಎ) ಮೂರನೇ ಹಸಿರು ಕ್ರಾಂತಿ
ಬಿ) ಪ್ರಥಮ ಹಸಿರು ಕ್ರಾಂತಿ
ಸಿ) ಸದಾ ಹಸಿರು ಕ್ರಾಂತಿ
ಡಿ) ಮುಂದುವರಿದ ಹಸಿರು ಕ್ರಾಂತಿ
ಉತ್ತರ:- (ಸಿ) ಸದಾ ಹಸಿರು ಕ್ರಾಂತಿ

3) ಮೊದಲನೇ ಆಂಗ್ಲೋ ಮರಾಠ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ
ಎ) ಬಸ್ಸೈನ್ ಒಪ್ಪಂದ ಬಿ) ಸಾಲ್ಬಾಯಿ ಒಪ್ಪಂದ
ಸಿ) ಅಲಹಾಬಾದ್ ಒಪ್ಪಂದ ಡಿ) ಲಾಹೋರ್ ಒಪ್ಪಂದ
ಉತ್ತರ:- ಬಿ) ಸಾಲ್ಬಾಯಿ ಒಪ್ಪಂದ

4) ಗಾಡ್ವಿನ್‌ಆಸ್ಟಿನ್ ಅಥವಾ ಕೆ2 ಶಿಖರದ ಎತ್ತರ ಎಷ್ಟು?
ಎ) 8848 ಮೀ ಬಿ) 7233 ಮೀ
ಸಿ) 8611 ಮೀ ಡಿ) 4567 ಮೀ
ಉತ್ತರ:- (ಸಿ) 8,611 ಮೀ.

5) ಭಾರತದ ಉತ್ತರದ ತುತ್ತತುದಿ..........
ಎ) ಇಂದಿರಾ ಪಾಯಿಂಟ್
ಬಿ) ನೆಹರೂ ಪಾಯಿಂಟ್
ಸಿ) ನೆಹರೂ ಜಾಯಿಂಟ್ ಡಿ) ಇಂದಿರಾಕೂಲ್
ಉತ್ತರ:- (ಡಿ) ಇಂದಿರಾಕೂಲ್

6) ಪಶ್ಚಿಮ ಬಂಗಾಳದಲ್ಲಿ ಕಾಲ ಬೈಸಾಕಿ;
ಉತ್ತರ ಪ್ರದೇಶದಲ್ಲಿ ಆಂಡೀಸ್ ; :
ಕರ್ನಾಟಕದಲ್ಲಿ ಕಾಫಿ ತುಂತುರು :
ಕೇರಳದಲ್ಲಿ ....
ಎ) ಚಹಾ ತೋಟ ಬಿ) ಮಾವಿನ ಹೊಯ್ಲು
ಸಿ) ಉಪ್ಪಿನ ಹೊಯ್ಲು ಡಿ) ಅಕ್ಕಿಯ ಕೊದಲು
ಉತ್ತರ:-(ಬಿ) ಕೇರಳದಲ್ಲಿ 'ಮಾವಿನ ಹೊಯ್ಲು'

7) 'ಭಾರತಕ್ಕೆ ಯೋಜಿತ ಅರ್ಥವ್ಯವಸ್ಥೆ' '(Planned Economy for India) ಎಂಬ ಪುಸ್ತಕ ಯಾರಿಗೆ ಸಂಬಂಧಿಸಿದೆ.?
ಎ) ಮಹಾತ್ಮ ಗಾಂಧಿ ಬಿ) ಜವಾಹರ ಲಾಲ್ ನೆಹರೂ
ಸಿ) ಸರ್ ಎಂ ವಿಶ್ವೇಶ್ವರಯ್ಯ ಡಿ) ಸರೋಜಿನಿ ನಾಯ್ಡು
ಉತ್ತರ:- (ಸಿ) ಸರ್ ಎಂ ವಿಶ್ವೇಶ್ವರಯ್ಯ

8) ಡಾ. ನಾರ್ಮನ್ ಬೋರ್ಲಾಗ್ ನಡೆಸಿದ ಪ್ರಯೋಗದ ಫಲವಾಗಿ ಗೋಧಿಯಲ್ಲಿ ಹೆಚ್ಚು ಇಳುವರಿ ಬೀಜಗಳ ಸಂಶೋಧನೆಯಾಯಿತು. ಇದರ ಪ್ರಯೋಗವನ್ನು ಎಲ್ಲಿ ಬಳಸಿ ಇಳುವರಿಯನ್ನು ಹೆಚ್ಚಿಸಲಾಯಿತು?
ಎ) ತೈವಾನ್ ಮತ್ತು ಮೆಕ್ಸಿಕೋ
ಬಿ) ರಷ್ಯಾ ಮತ್ತು ಜರ್ಮನಿ ಸಿ) ನೇಪಾಳ ಮತ್ತು ಜಪಾನ್ ಡಿ) ಮ್ಯಾನ್ಮಾರ್ ಮತ್ತು ಭೂತಾನ್
ಉತ್ತರ:- (ಎ) ತೈವಾನ್ ಮತ್ತು ಮೆಕ್ಸಿಕೋ

9) ಬ್ಯಾಂಕುಗಳ ಬ್ಯಾಂಕ್ _________ ಆಗಿದೆ.
ಎ) ಭಾರತೀಯ ಸ್ಟೇಟ್ ಬ್ಯಾಂಕ್
ಬಿ) ಕೆನರಾ ಬ್ಯಾಂಕ್ ಸಿ) ಯೂನಿಯನ್ ಬ್ಯಾಂಕ್
ಡಿ) ಭಾರತೀಯ ರಿಸರ್ವ್ ಬ್ಯಾಂಕ್
ಉತ್ತರ(ಡಿ) ಭಾರತೀಯ ರಿಸರ್ವ್ ಬ್ಯಾಂಕ್

10) ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ಯಾರು?
ಎ) ವಾರನ್ ಹೇಸ್ಟಿಂಗ್ ಬಿ) ಲಾರ್ಡ್ ಕಾರ್ನ್ವಾಲೀಸ್
ಸಿ) ಲಾರ್ಡ್ ಮಿಂಟೊ ಡಿ) ಲಾರ್ಡ್ ಕರ್ಜನ್
ಉತ್ತರ:- (ಬಿ) ಲಾರ್ಡ್ ಕಾರ್ನ್ವಾಲೀಸ್

2) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಯಾವ ವರ್ಷದ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು?
ಉತ್ತರ:- 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು

2) ಮೈಸೂರಿನಲ್ಲಿ ನವರಾತ್ರಿ ಉತ್ಸವ ಆರಭಿಸಿದವರು ಯಾರು?
ಉತ್ತರ:- ರಾಜ ಒಡೆಯರು

3) ಎರಡನೆಯ ಆಂಗ್ಲೋ-ಮೈಸೂರು ಯುದ್ಧ ಯಾವ ಒಪ್ಪಂದ ಮೂಲಕ ಅಂತ್ಯಗೊಳಿಸಲಾಯಿತು?
ಉತ್ತರ: 1784ರ 'ಮಂಗಳೂರು ಒಪ್ಪಂದ'

4) ಯಾವ ವರ್ಷ ಬ್ರಿಟಿಷ್ ಸರ್ಕಾರವು ಮೈಸೂರಿನ ಸಿಂಹಾಸನವನ್ನು ಮೈಸೂರಿನ ಅರಸರಿಗೆ(ಒಡೆಯರಿಗೆ) ಬಿಟ್ಟುಕೊಟ್ಟರು?
ಉತ್ತರ:- ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ವಹಿಸಿತು

5) ಕೊಡಗಿನಲ್ಲಿ ಆದ ರಾಜಕೀಯ ಅಸಮಾಧಾನವನ್ನು ಬಳಸಿ ಬಂಡಾಯವನ್ನು ಸಂಘಟಿಸಿದವರು ಯಾರು?
ಉತ್ತರ:- ಸ್ವಾಮಿ ಅಪರಂಪಾರ, ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಸಶಸ್ತ್ರ ಬಂಡಾಯವನ್ನು ಸಂಘಟಿಸಿದರು.

6) 1861ರ ಭಾರತೀಯ ಪರಿಷತ್ ಕಾಯ್ದೆಯಲ್ಲಿರುವ ಅಂಶಗಳು ಯಾವುವು?
ಉತ್ತರ. 1861ರ ಭಾರತೀಯ ಪರಿಷತ್ ಕಾಯ್ದೆಯ ಪ್ರಮುಖ ಅಂಶಗಳು
(1). ವೈಸರಾಯ್ ಕೌನ್ಸಿಲ್‌ಗೆ ಭಾರತೀಯರನ್ನು ಅಧಿಕಾರೇತರ ಸದಸ್ಯರಾಗಿ ನಾಮಕರಣ ಮಾಡಲಾಯಿತು.
(2) ತುರ್ತು ಸಂದರ್ಭದಲ್ಲಿ ಸುಗ್ರೀವಾಜ್ಞೆ ಹೊರಡಿಸಲು ಅಧಿಕಾರವನ್ನು ಗವರ್ನರ್ ಜನರಲ್‌ಗೆ ನೀಡಲಾಯಿತು.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಭೌತವಿಜ್ಞಾನ

ಪಿಯುಸಿ

41) ದ್ಯುತಿ ವಿದ್ಯುತ್ ಕೋಶವು ಹಾಗೂ ಅದರ ಉಪಯೋಗಗಳ ಬಗ್ಗೆ ಬರೆಯಿರಿ

ಉತ್ತರ:- (.........ಹಿಂದಿನ ಸಂಚಿಕೆಯಿಂದ)

ದ್ಯುತಿವಿದ್ಯುತ್ತಿನಲ್ಲಾಗುವ ಹಠಾತ್ ಬದಲಾವಣೆಯು ಬಾಗಿಲನ್ನು ಸ್ವಯಂಚಾಲಿತವಾಗಿ ತೆರೆಯುವ ಯಂತ್ರ ಕಾರ್ಯನಿರ್ವಹಿಸುವಂತೆ ಮಾಡುತ್ತದೆ ಮತ್ತು ಬಾಗಿಲು ತೆರೆಯಲ್ಪಡುತ್ತದೆ. ಕಿರಣದ ಅಡ್ಡವಾಗಿ ಹಾದುಹೋಗುವ ವ್ಯಕ್ತಿ ಅಥವಾ ವಸ್ತುವಿನಿಂದ ಉಂಟಾಗುವ ಬೆಳಕಿನ ಕಿರಣ ತಡೆಯನ್ನು ಎಣಿಕೆ ದಾಖಲಿಸುವ ಸಾಧನದ ನಿಯಂತ್ರಣದಲ್ಲಿ ಬಳಸಲಾಗುತ್ತದೆ. ಒಂದು ವೇಳೆ ವ್ಯಕ್ತಿಗಳು ಒಬ್ಬೊಬ್ಬರಾಗಿ ಆಗಮಿಸಿದಲ್ಲಿ ಈ ದ್ಯುತಿಕೋಶಗಳು ಸಭಾಂಗಣಕ್ಕೆ ಬರುವ ವ್ಯಕ್ತಿಗಳನ್ನು ಎಣಿಸಲು ಸಹಕಾರಿಯಾಗುತ್ತದೆ ಅಲಾರಾಮ್‌ನ ಮೇಲೆ ಬೀಳುತ್ತಿರುವ ವಿಕಿರಣಗಳಿಗೆ ಅಡ್ಡಿಯಾಗಿ ಇವುಗಳು ಶಬ್ದವನ್ನು ಉಂಟುಮಾಡುವ ಮೂಲಕ ಸಂಚಾರಿ ನಿಯಮಗಳನ್ನು ಉಲ್ಲಂಘನೆ ಮಾಡುವವರನ್ನು ಗುರುತಿಸಬಹುದಾಗಿದೆ.
ಬರ್ಗಲರ್ ಎಚ್ಚರಿಕೆ ಗಂಟೆಯಲ್ಲಿ ಕಣ್ಣಿಗೆ ಕಾಣಿಸದ ನೇರಳಾತೀತ ವಿಕಿರಣಗಳನ್ನು ನಿರಂತರವಾಗಿ ಬಾಗಿಲಿಗೆ ತಗಲಿಸಿದ ದ್ಯುತಿವಿದ್ಯುತ್‌ಕೋಶದ ಮೇಲೆ ಬೀಳುವಂತೆ ಮಾಡುತ್ತಾರೆ ಬಾಗಿಲಿನಿಂದ ವ್ಯಕ್ತಿಯು ಪ್ರವೇಶಿಸುವಾಗ ದ್ಯುತಿಕೋಶದ ಮೇಲೆ ಬೀಳುವ ಬೆಳಕಿಗೆ ಅಡ್ಡಿಯುಂಟಾಗುತ್ತದೆ. ದ್ಯುತಿವಿದ್ಯುತ್‌ನಲ್ಲಾಗುವ ಅನಿರೀಕ್ಷಿತ ಬದಲಾವಣೆಗಳು, ವಿದ್ಯುತ್‌ಗಂಟೆ ಕೂಗುವಂತೆ ಮಾಡುತ್ತದೆ ಬೆಂಕಿ ಎಚ್ಚರಿಕೆ ಗಂಟೆಗಳಲ್ಲಿಯೂ ಸುಮಾರು ದ್ಯುತಿಕೋಶಗಳನ್ನು ಆಯ-ಕಟ್ಟಿನ ಸ್ಥಳಗಳಲ್ಲಿ ಜೋಡಿಸಿಡಲಾಗುತ್ತದೆ. ಒಂದು ವೇಳೆ ಬೆಂಕಿ ಸಂಭವಿಸಿದರೆ, ಬೆಳಕಿನ ವಿಕರಣಗಳು ಈ ದ್ಯುತಿಕೋಶಗಳ ಮೇಲೆ ಬೀಳುತ್ತವೆ ಇದರಿಂದ ವಿದ್ಯುತ್‌ಮಂಡಲವು ಪೂರ್ಣಗೊಂಡು, ಎಚ್ಚರಿಕೆಯ ಸಂಕೇತವಾಗಿ ವಿದ್ಯುತ್‌ಗಂಟೆ ಅಥವಾ ಸೈರನ್ ಮೊಳಗುತ್ತದೆ. ಚಲನಚಿತ್ರಗಳಲ್ಲಿ ಶಬ್ದದ ಪುನರ್ ಸೃಷ್ಟಿಗೆ ಈ ದ್ಯುತಿಕೋಶಗಳನ್ನು ಬಳಸುತ್ತಾರೆ. ಅಂತೆಯೇ ಟೆಲಿವಿಷನ್ ಕ್ಯಾಮೆರಾಗಳಲ್ಲಿಯೂ ಪ್ರಸಾರಧ್ವನಿಯ ಉತ್ಪತ್ತಿಗೆ ಇವುಗಳು ಬಳಕೆಯಾಗುತ್ತವೆ ಕೈಗಾರಿಕೆಗಳಲ್ಲಿ ಲೋಹದ ಹಾಳೆಗಳ ಸಣ್ಣ ದೋಷಗಳನ್ನು, ಬಿರುಕುಗಳನ್ನು ಮತ್ತು ರಂಧ್ರಗಳನ್ನು ಪತ್ತೆಮಾಡಲು ಇವುಗಳನ್ನು ಬಳಸಲಾಗುತ್ತದೆ.

44) ಪ್ರಕೃತಿಯಲ್ಲಿ ಪೂರ್ಣಾಂತರಿಕ ಪ್ರತಿಫಲನ ಮತ್ತು ಅದರ ತಾಂತ್ರಿಕ ಉಪಯೋಗಗಳಲ್ಲಿ ಒಂದಾದ ಮರೀಚಿಕೆ ಕುರಿತು ಬರೆಯಿರಿ
ಉತ್ತರ:- ಸುಡು ಬೇಸಿಗೆಯ ದಿನಗಳಲ್ಲಿ ಭೂಮಿಯ ಮೇಲ್ಮೈಗೆ ತಾಗಿಕೊಂಡಿರುವ ಗಾಳಿಯ ಪದರವು ತನ್ನ ಮೇಲಿನ ಪದರಕ್ಕಿಂತ ಹೆಚ್ಚು ಬಿಸಿಯಾಗುತ್ತದೆ. ಗಾಳಿಯ ವಕ್ರೀಭವನಾಂಕವು ಅದರ ರಾಶಿ ಸಾಂದ್ರತೆಯೊಂದಿಗೆ ಹೆಚ್ಚಾಗುತ್ತಾ ಹೋಗುತ್ತದೆ. ಬಿಸಿಗಾಳಿಯು ಕಡಿಮೆ ಸಾಂದ್ರತೆಯನ್ನು ಹೊಂದಿರುತ್ತದೆ ಹಾಗೂ ತಣ್ಣಗಿನ ಗಾಳಿಗಿಂತ ಕಡಿಮೆ ವಕ್ರೀಭವನಾಂಕವನ್ನು ಹೊಂದಿರುತ್ತದೆ. ಗಾಳಿಯ ಪ್ರವಾಹವು ಕಡಿಮೆ ಇದ್ದಂತೆ, ಅಂದರೆ ಗಾಳಿಯು ನಿಶ್ಚಲವಾಗಿದ್ದಾಗ ಗಾಳಿಯ ವಿವಿಧ ಪದರಗಳ ದ್ಯುತಿ ಸಾಂದ್ರತೆಯು ಭೂಮಿಯಿಂದ ಎತ್ತರ ಹೆಚ್ಚಾದಂತೆ, ಹೆಚ್ಚಾಗುತ್ತಾ ಹೋಗುತ್ತದೆ. ಇದರಿಂದಾಗಿ, ಮರದಂತಹ ಉದ್ದನೆಯ ವಸ್ತುಗಳಿಂದ ಬಂದ ಬೆಳಕು ನೆಲದ ಕಡೆ ಕಡಿಮೆಯಾಗುತ್ತಿರುವ ವಕ್ರೀಭವನಾಂಶ ಹೊಂದಿದ್ದ ಮಾಧ್ಯಮದ ಮೂಲಕ ಹಾದು ಹೋಗುವುದು. ಹೀಗೆ, ಇಂತಹ ವಸ್ತುಗಳಿಂದ ಬಂದ ಕಿರಣಗಳು ನಿರಂತರವಾಗಿ ಲಂಬದಿಂದ ದೂರ ಬಾಗುತ್ತಾ ಆಪಾತ ಕೋನವು ಕ್ರಾಂತಿಕೋನವನ್ನು ಮೀರಿದಾಗ ಪೂರ್ಣಾಂತರಿಕ ಪ್ರತಿಫಲನ ಹೊಂದುತ್ತದೆ. ಚಿತ್ರ (b)ಯಲ್ಲಿ ಇದನ್ನು ತೋರಿಸಲಾಗಿದೆ. ದೂರದಿಂದ ನೋಡುವ ವ್ಯಕ್ತಿಗೆ ಈ ಬೆಳಕಿನ ಕಿರಣಗಳು



ಭೂಮಿಯ ತಳಭಾಗದಿಂದ ಬಂದಂತೆ ಭಾಸವಾಗುತ್ತದೆ. ಆದ್ದರಿಂದ, ಆ ವ್ಯಕ್ತಿಯು ಬೆಳಕು ಭೂಮಿಯ ಮೇಲ್ಮೈಯಲ್ರಿರುವ ನೀರಿನ ಕೊಳದಿಂದ ಪ್ರತಿಫಲನಗೊಂಡಿದೆ ಎಂದು ಭಾವಿಸುತ್ತಾನೆ. ಅಂತಹ ವಿಶೇಷತಾ, ದೂರದ ವಸ್ತುಗಳ ತಲೆಕಳಗಾದ ಪ್ರತಿಬಿಂಬವು ಅವನಲ್ಲಿ ಈ ತರದ ಭ್ರಮೆಯನ್ನು ಉಂಟುಮಾಡುತ್ತದೆ. ಇದನ್ನು ಮರೀಚಿಕೆ ಎನ್ನುತ್ತಾರೆ (mirage). ಇಂತಹ ಮರೀಚಿಕೆಗಳು ಬಿಸಿ ಮರುಭೂಮಿಯಲ್ಲಿ ಸಾಮಾನ್ಯ. ಹಾಗೆಯೇ ಬೇಸಿಗೆಯಲ್ಲಿ ಕಾರು ಅಥವಾ ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ದೂರದ ರಸ್ತೆಯಲ್ಲಿ ನೀರು ಚೆಲ್ಲಿದ ಹಾಗೆ ಇರುವ ಅನುಭವವು ನಿಮಗೂ ಆಗಿರಬಹುದಲ್ಲವೇ? ಆ ಪ್ರದೇಶದ ಹತ್ತಿರ ಬಂದಾಗ ನೀರು ಇರುವುದಿಲ್ಲ ಎಂಬ ನಿಜ ತಿಳಿಯುತ್ತದೆ. ಇದೂ ಕೂಡಾ ಮರೀಚಿಕೆಯಿಂದ ಆಗಿರುತ್ತದೆ.

(A) ನೆಲದ ಮೇಲಿನ ಗಾಳಿಯ ಉಷ್ಣತೆ ಏ ಪ್ರಕಾರವಾಗಿದ್ದಾಗ ಒಬ್ಬ ನೋಡುಗನು ಮರವೊಂದನ್ನು ಅದರ ಸ್ಥಾನದಲ್ಲೇ ಕಾಣುವನು
(b) ನೆಲಕ್ಕೆ ಸಮೀಪದ ಗಾಳಿ ಹೆಚ್ಚು ಬಿಸಿಯಾಗಿದ್ದು ಅದರ ಮೇಲಿನ ಪದರಗಳು ಬೇರೆ ಬೇರೆ ಉತ್ಪನ್ನಗಳನ್ನು ಹೊಂದಿದಾಗ, ದೂರದ ಮರದಿಂದ ಬರುವ ಬೆಳಕು ಪೂರ್ಣಾಂತರಿಕ ಪ್ರತಿಫಲನ ಹೊಂದಬಹುದು ಮತ್ತು ಮರದ ಮಿಥ್ಯ ಬಿಂಬವು ಮರವು ನೀರಿನ ಕೆರೆಯ ಬಳಿ ಇರುವಂತೆ ನೋಡುಗನಿಗೆ ಭ್ರಮೆಯುಂಟು ಮಾಡಬಹುದು.

45) ಹೈಗನ್‌ನ ತತ್ವ ವಿವರಿಸಿ
ಉತ್ತರ:- ನಿಶ್ಚಲವಾಗಿ ನಿಂತಿರುವ ಕೊಳದಲ್ಲಿರುವ ನೀರಿಗೆ ಒಂದು ಕಲ್ಲನ್ನು ಎಸೆದಾಗ ಕಲ್ಲು ನೀರಿಗೆ ತಾಗಿದಲ್ಲಿಂದ ತರಂಗಗಳು ಹರಡುತ್ತವೆ. ಮೇಲ್ಮೈಯ ಎಲ್ಲಾ ಬಿಂದುಗಳು ಸಮಯದೊಂದಿಗೆ ಕಂಪಿಸಲು ಆರಂಭಿಸುತ್ತದೆ. ಯಾವುದೇ ಸಂದರ್ಭದಲ್ಲಿ, ಮೇಲ್ಮೈಯ ಛಾಯಾ ಪ್ರತಿಯು ವೃತ್ತಾಕಾರದ ಉಂಗುರಗಳನ್ನು ತೋರಿಸುತ್ತದೆ. ಮತ್ತು ಇಲ್ಲಿ ಕ್ಷೋಭೆಯು ಗರಿಷ್ಠವಾಗಿರುತ್ತದೆ. ಅಂದರೆ ವೃತ್ತಾಕಾರದ ಎಲ್ಲಾ ಬಿಂದುವಿನಲ್ಲಿ ಎಲ್ಲವೂ ಒಂದೇ ಪ್ರಾವಸ್ಥೆಯಲ್ಲಿ ಕಂಪಿಸುತ್ತದೆ. ಯಾಕೆಂದರೆ ಆ ಎಲ್ಲಾ ಬಿಂದುಗಳು ಆಕರದಿಂದ ಸಮಾನ ದೂರದಲ್ಲಿರುತ್ತವೆ. ಈ ರೀತಿಯಾಗಿ ಒಂದೇ ಕಂಪನಾವಸ್ಥೆಯಲ್ಲಿರುವ ಬಿಂದುಗಳ ಪಥವನ್ನು ತರಂಗ ಮುಖ ಎಂದು ಕರೆಯುತ್ತಾರೆ. ಯಾವ ವೇಗದಲ್ಲಿ ಈ ತರಂಗ ಮುಖವು ಆಕರದಿಂದ ಹೊರಗಡೆ ಚಲಿಸುತ್ತವೆಯೋ ಇದನ್ನು ತರಂಗದ ಜವ ಎಂದು ಕರೆಯುತ್ತಾರೆ. ಇಲ್ಲಿ ಶಕ್ತಿಯು ತರಂಗ ಮುಖಕ್ಕೆ ಲಂಬವಾಗಿ ಚಲಿಸುತ್ತದೆ.

(ಮುಂದುವರಿಯುವುದು........)

ಪ್ರಜಾವಾಣಿ ನೋಡಿಯೊ
ಪಿಯುಸಿ ಗಣಿತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಗೆ 10 ಕೋಟಿ ದಾಖಲೆಗಳ ಜೋಡಣೆ

ನವದೆಹಲಿ (ಪಿಟಿಐ): ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ (ಎಬಿಡಿಎಂ) ಅಡಿಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಗೆ 10 ಕೋಟಿಗೂ ಅಧಿಕ ಆರೋಗ್ಯ ದಾಖಲೆಗಳನ್ನು ಜೋಡಣೆ ಮಾಡಲಾಗಿದೆ.

'ಎಬಿಡಿಎಂ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದೆ. 10 ಕೋಟಿಗೂ ಅಧಿಕ ಆರೋಗ್ಯ ದಾಖಲೆಗಳನ್ನು ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಯೊಂದಿಗೆ ಜೋಡಿಸಲಾಗಿದೆ. ನಮ್ಮ ಕಾರ್ಯಕ್ಕೆ ಕೈಜೋಡಿಸಿದ ದೇಶದ ಎಲ್ಲಾ ನಾಗರಿಕರಿಗೂ ನಾವು ಆಭಾರಿಯಾಗಿದ್ದೇವೆ. ದೇಶದಲ್ಲಿನ ಆರೋಗ್ಯ ಸೇವಾ ಸಂಸ್ಥೆಗಳಿಗೆ ಸಮಗ್ರ ವೈದ್ಯಕೀಯ ಮಾಹಿತಿ ಒದಗಿಸಲು ಇದರಿಂದ ಸಹಕಾರಿ ಆಗಲಿದೆ' ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ (ಎನ್‌ಎಚ್‌ಎ) ಸಿಇಒ ಡಾ.ಆರ್.ಎಸ್.ಶರ್ಮಾ ಸೋಮವಾರ ಟ್ವೀಟ್ ಮಾಡಿದ್ದಾರೆ.

ಈವರೆಗೂ 30 ಕೋಟಿಗೂ ಅಧಿಕ ಮಂದಿ ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಗಳನ್ನು (ಎಬಿಎಚ್‌ಎ) ತೆರೆದಿದ್ದಾರೆ ಎಂದು ಹೇಳಲಾಗಿದೆ.

ಗುಜರಾತ್: ಕುತ್ತಿಗೆಗೆ ಗಾಳಿಪಟ ದಾರ ಸಿಲುಕಿ 6 ಮಂದಿ ಸಾವು

ಅಹಮದಾಬಾದ್ (ಪಿಟಿಐ): 'ಗುಜರಾತ್‌ನಲ್ಲಿ ಉತ್ತರಾಯಣ ಹಬ್ಬದ ವೇಳೆ ನಡೆದ ಪ್ರತ್ಯೇಕ ಘಟನೆಗಳಲ್ಲಿ ಗಾಳಿಪಟ ಹಾರಿಸುವಾಗ ಅದರ ದಾರದಿಂದ ಕುತ್ತಿಗೆ ಸೀಳಿ ಮೂವರು ಮಕ್ಕಳು ಸೇರಿದಂತೆ ಕನಿಷ್ಠ 6 ಜನ ಮೃತರಾಗಿದ್ದು, 176 ಮಂದಿ ಗಾಯಗೊಂಡಿದ್ದಾರೆ' ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

'ಮನೆಯ ಮೇಲ್ಛಾವಣಿ ಮೇಲೆ ಗಾಳಿಪಟಗಳನ್ನು ಹಾರಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರು. ಕೆಲವರು ಪಟಕ್ಕೆ ಹರಿತವಾದ ದಾರ ಬಳಸಿದ್ದರು. ಅದು ಕುತ್ತಿಗೆಗೆ ಸಿಲುಕಿ ಕೊಂಡಿದ್ದರಿಂದ ಅಮಾಯಕರು ಪ್ರಾಣ ಕಳೆದುಕೊಂಡಿದ್ದಾರೆ' ಎಂದು ಹೇಳಿದ್ದಾರೆ.

'ಭಾವನಗರದಲ್ಲಿ ತಂದೆಯೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ 2 ವರ್ಷದ ಕೀರ್ತಿ ಎಂಬಾಕೆಯ ಕುತ್ತಿಗೆಗೆ ಗಾಳಿಪಟದ ದಾರ ಸುತ್ತಿಕೊಂಡಿತ್ತು. ಆಕೆ ಚಿಕಿತ್ಸೆಗೆ ಸ್ಪಂದಿಸದೆ ಆಸ್ಪತ್ರೆಯಲ್ಲಿ ಭಾನುವಾರ ಅಸುನೀಗಿದ್ದಾಳೆ. ಗಾಳಿಪಟದ ದಾರದಿಂದಾಗಿ ವಿಸ್ ನಗರದಲ್ಲಿ ತಾಯಿಯೊಂದಿಗೆ ನಡೆದುಕೊಂಡು ಹೋಗುತ್ತಿದ್ದ 3 ವರ್ಷದ ಕಿಸ್ಮತ್‌ಳ ಕುತ್ತಿಗೆ ಸೀಳಿ ಮೃತಳಾಗಿದ್ದಾಳೆ. ರಾಜ್‌ಕೋಟ್‌ನಲ್ಲಿ ಪಾಲಕರೊಂದಿಗೆ ಗಾಳಿಪಟ ಹಿಡಿದು ಬೈಕ್‌ನಲ್ಲಿ ತೆರಳುತ್ತಿದ್ದ 7 ವರ್ಷದ ರಿಷಭ್ ವರ್ಮಾನ ಕುತ್ತಿಗೆಗೆ ದಾರ ಸುತ್ತಿಕೊಂಡು ಆತ ಮೃತನಾಗಿದ್ದಾನೆ. ವಡೋದರ, ಕಚ್, ಗಾಂಧಿನಗರ ಜಿಲ್ಲೆಗಳಲ್ಲೂ ನಡೆದ ಇಂಥ ಘಟನೆಗಳಲ್ಲಿ ಮೂವರು ಪುರುಷರು ಮೃತರಾಗಿದ್ದಾರೆ' ಎಂದೂ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕುಲ್‌ದೀಪ್ ಸೆಂಗರ್‌ಗೆ ಮಧ್ಯಂತರ ಜಾಮೀನು

ನವದೆಹಲಿ(ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ದೋಷಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲ್‌ದೀಪ್ ಸಿಂಗ್ ಸೆಂಗರ್‌ಗೆ ಮಗಳ ಮದುವೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ದೆಹಲಿ ಹೈಕೋರ್ಟ್ ಸೋಮವಾರ ಮಧ್ಯಂತರ ಜಾಮೀನು ನೀಡಿದೆ.

ನ್ಯಾಯಾಧೀಶರಾದ ಮುಕ್ತಾ ಗುಪ್ತಾ ಮತ್ತು ಪೂನಂ ಎ. ಬಂಬಾ ಅವರಿದ್ದ ಪೀಠವು ಈ ಜಾಮೀನು ಮಂಜೂರು ಮಾಡಿದೆ. ಜಾಮೀನು ಅವಧಿಯು ಜನವರಿ 27ರಿಂದ ಫೆಬ್ರುವರಿ 10 ರವರೆಗೆ ಇರಲಿದೆ.

2017ರಲ್ಲಿ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದ ಪ್ರಕರಣದಲ್ಲಿ ಕುಲ್‌ದೀಪ್ ಅಪರಾಧಿ ಎಂಬುದು ಸಾಬೀತಾಗಿತ್ತು. ಆತನನ್ನು ಜೀವಾವಧಿ ಶಿಕ್ಷೆಗೆ ಒಳಪಡಿಸಲಾಗಿತ್ತು.

ಅತ್ಯಾಚಾರ ಪ್ರಕರಣ: ಶಹನವಾಜ್ ಹುಸೇನ್ ಮೇಲ್ಮನವಿ ವಜಾ

ನವದೆಹಲಿ (ಪಿಟಿಐ): ಮಹಿಳೆ ದೂರು ಆಧರಿಸಿ ಅತ್ಯಾಚಾರ ಪ್ರಕರಣ ದಾಖಲಿಸಲು ದೆಹಲಿ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಬಿಜೆಪಿ ನಾಯಕ, ಕೇಂದ್ರದ ಮಾಜಿ ಸಚಿವ ಸೈಯದ್ ಶಹನವಾಜ್ ಹುಸೇನ್ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾ ಮಾಡಿದೆ.

'ಈ ಬಗ್ಗೆ ನ್ಯಾಯಯುತ ತನಿಖೆ ಆಗಲಿದೆ. ಆರೋಪದಲ್ಲಿ ಹುರುಳಿಲ್ಲ ಎಂದಾದರೆ ದೋಷಮುಕ್ತರಾಗುತ್ತೀರಿ' ಎಂದು ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್, ದೀಪಂಕರ್ ದತ್ತ ಅವರಿದ್ದ ಪೀಠ ಹೇಳಿತು.

ಭಾರತ-ಫ್ರಾನ್ಸ್ ನೌಕಾಪಡೆಯ ಜಂಟಿ ಕವಾಯಿತು ಆರಂಭ

ನವದೆಹಲಿ: ಭಾರತ ಮತ್ತು ಫ್ರಾನ್ಸ್ ನೌಕಾಪಡೆಯ 21ನೇ ಜಂಟಿ ಕವಾಯಿತು ಪಶ್ಚಿಮ ಸಮುದ್ರತೀರದಲ್ಲಿ ಸೋಮವಾರ ಆರಂಭಗೊಂಡಿದೆ ಎಂದು ನೌಕಾಪಡೆ ಹೇಳಿದೆ.

1993ರಲ್ಲಿ ಆರಂಭವಾದ ಈ ಜಂಟಿ ಕವಾಯತಿಗೆ 2001ರಲ್ಲಿ 'ವರುಣಾ' ಎಂದು ನಾಮಕರಣ ಮಾಡಲಾಯಿತು. ಇದು ಭಾರತ ಮತ್ತು ಫ್ರಾನ್ಸ್ ನಡುವಿನ ದ್ವಿಪಕ್ಷೀಯ ಸಹಕಾರ ವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿದೆ ಎಂದೂ ಹೇಳಿಕೆಯಲ್ಲಿ ತಿಳಿಸಿದೆ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಕೆ.ಪಿ.ಸಿ. ವಿಭಾಗ ನಂ–2 ಭಾಲ್ಕಿ

ಸಂಖ್ಯೆ: ಕಾ.ನಿಅ/ಕ.ನೀ.ನಿ.ನಿ/ವಿಭಾಗ/ಭಾಲ್ಕಿ/ಪಿಬಿ/2022–23/1521 ದಿನಾಂಕ:16.01.2023

ತಿದ್ದುಪಡಿ/ಅವಧಿ ವಿಸ್ತರಣೆ–1
(ಇ–ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ).

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ, ವಿಭಾಗದಿಂದ ಉಲ್ಲೇಖ(1)ರನ್ವಯ ಅಲ್ಪಾವಧಿ ಟೆಂಡರ್ ಅಧಿಸೂಚನೆ ಹೊರಡಿಸಲಾಗಿತ್ತು. ತಾಂತ್ರಿಕ ಕಾರಣಗಳಿಂದ ಸದರಿ ಅಧಿಸೂಚನೆಯಲ್ಲಿ ಈ ಇಂಡೆಂಟಗಳಿಗೆ 1) 34644/Call-2, 2) 34645/Call-2, 3) 34646/Call-2, 4) 34647/Call-2, 5) 33974/Call-3, 6) 33975/Call-3 & 7) 33986/Call-3 ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ

Previous Cut of Dates as follow:
The Contractor can have access to the e-tender document 07-01-2023 @ 17.00Hrs. The Last date of Submission of completed tender documents 16-01-2023 @ 16.30 Hrs. Date of Opening of Technical Bid 17-01-2023 @17.00Hrs The Financial bid of pre-qualified Contractors will be opened on i.e.,18-01-2023 @17.00 Hrs

Modified Cut of Dates as follow:
The Last date of Submission of completed tender documents: 23-01-2023 @ 16.30 Hrs.Date of Opening of Technical Bid: 24-01-2023 @17.00Hrs. The Financial bid of pre-qualified Contractors will be opened on: 25-01-2023@17.10 Hrs

ಹೆಚ್ಚಿನ ಮಾಹಿತಿಗಾಗಿ website www.eproc.karnataka.gov.in ನಲ್ಲಿ ನೋಡಬಹುದಾಗಿದೆ. ಅಥವಾ ಈ ಕೆಳಗೆ ಸಹಿ ಮಾಡಿದವರಿಗೆ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ08484–262257 ಸಂಪರ್ಕಿಸುವುದು

ಸಹಿ/– ಕಾರ್ಯಪಾಲಕ ಅಭಿಯಂತರರು,
ವಾ.ಸಾ.ಸಂ.ಇ/ಬೀದರ/410–1/ಎಂಸಿ&ಎ/2022–23 ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ–2/ಟೆಂಡರ್ ಪ್ರಕಟಣೆ–ಐ.ಎಫ್.ಟಿ–43/2022–23/ ದಿನಾಂಕ: 16.01.2023

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರ ಪ್ರಕಾರ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. (https://eproc.karnataka.gov.in) ಕರ್ನಾಟಕ ಸರ್ಕಾರದ ಇ ಪ್ರಕ್ಯೂರ್‌ಮೆಂಟ್‌ನ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕವೇ ಸಲ್ಲಿಸತಕ್ಕದ್ದು ಹಾಗೂ ಇ–ಪ್ರಕ್ಯೂರ್‌ಮೆಂಟ್‌ನ ಪೋರ್ಟಲ್‌ನ ಮಾರ್ಗದರ್ಶನದಂತೆ ಟೆಂಡರ್‌ಗಳನ್ನು ತೆರೆಯಲಾಗುವುದು. ಉಳಿದ ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ವಿಭಾಗ, ಚಿತ್ರದುರ್ಗ ಇವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಟೆಂಡರ್ ಪ್ರೊಸೆಸಿಂಗ್ ಶುಲ್ಕ: ಇ–ಪೋರ್ಟಲ್‌ನಲ್ಲಿ ಕಾಣಿಸಿದಂತೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 06.02.2023 ಸಂಜೆ 05:30ರ ವರೆಗೆ. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 08.02.2023 ಸಂಜೆ 04:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ (ಸಾಧ್ಯವಾದಲ್ಲಿ): 09.02.2023 ಸಂಜೆ 04:30 ಗಂಟೆಗೆ. ಆರ್ಥಿಕ ಬಿಡ್ ತರೆಯುವ ದಿನಾಂಕ ಮತ್ತು ವೇಳೆ (ಸಾಧ್ಯವಾದಲ್ಲಿ): 10.02.2023 ಬೆಳಿಗ್ಗೆ 10:30 ಗಂಟೆಗೆ.

ಕಾಮಗಾರಿ ವಿವರ: (1) ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ದಾಗಿನಕಟ್ಟೆ ಗ್ರಾಮದ ಶ್ರೀಶಂಕರ ನಾಯ್ಕ ತಂದೆ ಪೂರ್ಯನಾಯ್ಕ, ಎ.ಕೆ. ಮಂಜಪ್ಪ ತಂದೆ ಎ.ಕೆ. ದುರುಗಪ್ಪ ಹಾಗೂ ಇತರೆ ಪರಿಶಿಷ್ಟ ಜಾತಿಯ ಜಮೀನುಗಳಿಗೆ ತುಂಗಭದ್ರ ನದಿಯಿಂದ ಸೂಕ್ಷ್ಮ ನೀರಾವರಿ ಸೌಲಭ್ಯ ಕಾಮಗಾರಿ (2ನೇ ಕರೆ). **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 850.23 ಲಕ್ಷಗಳು. **ಮುಂಗಡ ಠೇವಣಿ:** ರೂ. 12.76 ಲಕ್ಷಗಳು. **ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ (ಮಳೆಗಾಲ ಸೇರಿ):** 11 ತಿಂಗಳು. **ಗುತ್ತಿಗೆದಾರರ ದರ್ಜೆ:** ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ. (2) ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು, ನಿಲೋಗಲ್ ಗ್ರಾಮದ ಶ್ರೀಮತಿ ಪ್ರಮೀಳಮ್ಮ ಕೋಂ ಭೂತಪ್ಪ ಹಾಗೂ ಇತರೆ ಪರಿಶಿಷ್ಟ ಪಂಗಡದ ಜಮೀನುಗಳಿಗೆ ತುಂಗಭದ್ರ ನದಿಯಿಂದ ಸೂಕ್ಷ್ಮ ನೀರಾವರಿ ಸೌಲಭ್ಯ ಕಾಮಗಾರಿ (2ನೇ ಕರೆ). **ಟೆಂಡರ್‌ಗಿಟ್ಟಿರುವ ಮೊತ್ತ:** ರೂ. 855.36 ಲಕ್ಷಗಳು. **ಮುಂಗಡ ಠೇವಣಿ:** ರೂ. 12.83 ಲಕ್ಷಗಳು. **ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ (ಮಳೆಗಾಲ ಸೇರಿ):** 11 ತಿಂಗಳು. **ಗುತ್ತಿಗೆದಾರರ ದರ್ಜೆ:** ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ.

ಸೂಚನೆ: ಈ ಮೇಲ್ಕಂಡ ಕಾಮಗಾರಿಗಳ ಮುಂದೆ ನಮೂದಿಸಿದ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ) ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಟೆಂಡರಿಗಿಟ್ಟ ಮೊತ್ತ ಮತ್ತು ಮುಂಗಡ ಹಣ ಠೇವಣಿ (ಇ.ಎಂ.ಡಿ.) ಮೊತ್ತವು ಅಂತಿಮವಾಗಿರುತ್ತದೆ. ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: 16.01.2023ರ ನಂತರ ನಿಗದಿತ ಮೊತ್ತವನ್ನು ಪಾವತಿಸಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216 ಹಾಗೂ 080–25501227ರಿಂದ ಮಾಹಿತಿ ಪಡೆಯಬಹುದು.

RO No. 884: DIPR/CTA/MCA/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್

ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ
ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ) ರವರ ಕಚೇರಿ (ಬಿಎಸ್‌ಡಬ್ಲ್ಯೂಎಂಎಲ್), 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560052.

No: CGM (TECH)/ BSWML/ TEND/ 07/ 2022-23 Date: 16-01-2023

ಪ್ರಸ್ತಾವನೆಗಳಿಗಾಗಿ ವಿನಂತಿ (ಆರ್‌ಎಫ್‌ಪಿ)
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1) ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಕೆಳಗಿನ ಕೋಷ್ಟಕದಲ್ಲಿರುವ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬೇಕು. ಟೆಂಡರ್‌ದಾರರು ಒಪ್ಪಂದದ ಪ್ರಧಾನಕ್ಕೆ ಅರ್ಹತೆ ಪಡೆಯಲು ಟೆಂಡರ್‌ದಾರರಿಗೆ ಸೂಚನೆಗಳ ಕ್ಲಾಸ್ 3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ.
2) ಗುತ್ತಿಗೆದಾರರ ಲಾಗಿನ್ ಅಡಿಯಲ್ಲಿ ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಪೋರ್ಟಲ್ ಮೂಲಕ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು: ಗುತ್ತಿಗೆದಾರರಿಗೆ ಲಾಗಿನ್ ಆದ ನಂತರ, ಟೆಂಡರ್‌ದಾರರ ಪಟ್ಟಿಯನ್ನು ನೋಡಲು ಬಲಗಡೆಗೆ ಸ್ಕ್ರೋಲ್ ಡೌನ್ ಮಾಡಬೇಕು. ಅಲ್ಲಿ ಆರ್‌ಎಫ್‌ಪಿ ವಿವರಗಳನ್ನು ತಿಳಿಯಲು ಕ್ಲಿಕ್ ಮಾಡಬೇಕು ಹಾಗೂ ಟೆಂಡರ್‌ನ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ದಾಖಲೆಗಳನು ದಿನಾಂಕ: 18.01.2023ರಿಂದ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಲಾಗಿನ್ ಆದ ನಂತರ ಸೇವೆ ಒದಗಿಸಲು ಆಸಕ್ತಿಯುಳ್ಳ ಟೆಂಡರ್‌ದಾರರು ಬಯಸುತ್ತಾರೋ ಅಂತಹವರು ಅನ್‌ಲೈನ್ ಮೂಲಕ ಟ್ರಾನ್ಸಾಕ್ಷನ್ ಫೀ ಪಾವತಿ ಮಾಡಬೇಕು. ಟ್ರಾನ್ಸಾಕ್ಷನ್ ಫೀ ಹಿಂತಿರುಗಿಸಲಾಗುವುದಿಲ್ಲ.
3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: **04.02.2023 ರ ಸಂಜೆ 16:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ** ಸಲ್ಲಿಸತಕ್ಕದ್ದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿ ಪ್ರಕಾರ ಟೆಂಡರ್ ತೆರೆಯಲಾಗುವುದು.
4) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಟೆಂಡರ್ ದಾಖಲೆ ವೆಚ್ಚ	ಗುತ್ತಿಗೆ ಕಾಲಾವಧಿ
1	ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಟ್ರಾನ್ಸಿಟ್	572.00	7.80	As per e-Portal	9 Months
2	ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿ ಡಿಡಬ್ಲ್ಯೂಸಿಸಿ ಕೇಂದ್ರ, ಸೆಗ್ರಿಗೇಷನ್ ಕೇಂದ್ರ ಹಾಗೂ ಟ್ರಾನ್ಸಿಟ್ ಪಾಯಿಂಟ್‌ಗಳ ಸ್ಥಾಪನೆ	519.00	7.80	As per e-Portal	9 Months
3	ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಒಣ ತ್ಯಾಜ್ಯ ಸಂಗ್ರಹಣೆ ಕೇಂದ್ರ (ಡಿಡಬ್ಲ್ಯೂಸಿಸಿ) ಸುಧಾರಣೆ ಹಾಗೂ ಅಭಿವೃದ್ಧಿ.	420.00	6.30	As per e-Portal	9 Months

ಸೂಚನೆ: 1) ಪೂರ್ವಭಾವಿ ಸಭೆಯನ್ನು **ದಿನಾಂಕ: 24–01–2023 ರ ಮಧ್ಯಾಹ್ನ 3:00 ಗಂಟೆಗೆ** ಮುಪ್ರವ್ಯ(ತಾಂ) ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು –560026, ಇಲ್ಲಿ ನಡೆಸಲಾಗುವುದು.
2) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮತ್ತು ತಾಂತ್ರಿಕತೆಯನ್ನು ಒಳಗೊಂಡಿರುವ ಮೊದಲ ಫೋಲ್ಡರ್‌ಗೆ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ **04.02.2023 ರಂದು 16:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ** ಅಪ್‌ಲೋಡ್ ಮಾಡಬೇಕು. ತಾಂತ್ರಿಕ ದಾಖಲೆಗಳನ್ನು ನಿಗದಿತ ಸ್ಥಳದಲ್ಲಿ, ಹಾಜರಾಗಲು ಬಯಸುವ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಬಿಡ್ ಅನ್ನು ಇ–ಪೋರ್ಟಲ್ ಮೂಲಕ ದಿನಾಂಕ: **06.02.2023ರಂದು 16:30 ಗಂಟೆಯ ನಂತರ** ತೆರೆಯಲಾಗುತ್ತದೆ. ನಿರ್ದಿಷ್ಟಪಡಿಸಿದಂತೆ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಟೆಂಡರ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ತೆರೆಯಲಾಗುತ್ತದೆ.
3) ತನ್ನ ನಿಯಂತ್ರಣಕ್ಕೆ ಮೀರಿ ಯಾವುದೇ ತಂತ್ರಜ್ಞಾನದ ವಿಫಲದಿಂದ ವಿಳಂಬವಾದಲ್ಲಿ ನಿಯಮಿತವು ಜವಾಬ್ದಾರಿ ವಹಿಸುವುದಿಲ್ಲ. ಯಾವುದೇ ಟೆಂಡರ್‌ನ ಅಪ್‌ಡೇಟ್‌ಗಳನ್ನು ಟೆಂಡರ್‌ದಾರರಿಗೆ ತಂತ್ರಜ್ಞಾನದಿಂದ ಸೂಚಿಸಲು ಪ್ರಯತ್ನಿಸುವ ವಿಧಾನಗಳಿದ್ದರೂ ಸಹ ಒಂದು ವೇಳೆ ಟೆಂಡರ್‌ದಾರರಿಗೆ ಮಾಹಿತಿಗಳು ತಲುಪದಿದ್ದಲ್ಲಿ ನಿಯಮಿತದ ಹೊಣೆಯಲ್ಲ. ಟೆಂಡರಿಗೆ ಸಂಬಂಧಿಸಿದಂತೆ ಟೆಂಡರ್‌ದಾರರು ನೂತನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಗೆ ನಿಯಮಿತವಾಗಿ ಭೇಟಿ ನೀಡಬೇಕು. ಸಹಾಯವಾಣಿ ಇ–ಮೇಲ್ ವಿಳಾಸ: **hphelpdesk.blr@intarvo.com** ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯಕ್ಕೆ ಮುಂಚಿತವಾಗಿ ತಮ್ಮ ಕಂಪ್ಯೂಟರ್ ಬ್ರೌಸರ್ ಸಾಮರ್ಥ್ಯವನ್ನು ಸೂಕ್ತವಾಗಿ ಇರಿಸಲು ಜಾಗ್ರತೆ ವಹಿಸಬೇಕು. ಇಂಟರ್‌ನೆಟ್ ವಿಫಲದ ಕಾರಣದಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರತಿಕ್ರಿಯಿಸಲು ಅಥವಾ ಯಾವುದೇ ತಾಂತ್ರಿಕ ಅಡಚಣೆ ಉಂಟಾದಲ್ಲಿ ನಿಯಮಿತವು ಜವಾಬ್ದಾರಿ ಹೊರುವುದಿಲ್ಲ.
4) ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
5) ಜಿಎಸ್‌ಟಿಯನ್ನು ಪ್ರತ್ಯೇಕವಾಗಿ ಪಾವತಿಸಬೇಕು.

Time Schedule/Calendar of events:

1	ಅರ್ಹತಾ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:	:	04.02.2023ರ ಸಂಜೆ 4:00 ಗಂಟೆಯವರೆಗೆ.
2	ಪೂರ್ವಭಾವಿ ಸಭೆ	:	24.01.2023ರ ಮಧ್ಯಾಹ್ನ 3:00 ಗಂಟೆಗೆ.
3	ಟೆಂಡರ್ ತೆರೆಯುವ ದಿನಾಂಕ	:	06.02.2023ರ ಸಂಜೆ 4:30 ಗಂಟೆಗೆ.

DIPR/CP/4124/AAA/22-23 ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೇ, ಬೆಂಗಳೂರು–560065.

ಸಂಖ್ಯೆ.ಆಅ/21ನೇ ಅಗ್ರಿ ಯುನಿಫೆಸ್ಟ್/ಗಾಕೃವಿಕೆ/2022–23 ದಿನಾಂಕ: 11.01.2023

ಟೆಂಡರ್ ಪ್ರಕಟಣೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ **ದಿನಾಂಕ : 13 ರಿಂದ 17ರವರೆಗೆ ಮಾರ್ಚ್ 2023ರಲ್ಲಿ (5 ದಿನಗಳು) ನಡೆಯುವ 21ನೇ ಅಗ್ರಿ ಯುನಿಫೆಸ್ಟ್‌ಗೆ ಆಗಮಿಸುವ ಕನಿಷ್ಟ 2500 ಜನರಿಗೆ ಭೋಜನವನ್ನು ಒದಗಿಸಲು ಕಾರ್ಮಿಕ ಇಲಾಖೆಯಿಂದ ಅನುಮೋದಿತ ಏಜೆನ್ಸಿಯಿಂದ ತಾಂತ್ರಿಕ ಬಿಡ್ಡನ್ನು ಕರೆಯಲಾಗಿದೆ.** ಟೆಂಡರ್‌ದಾರರು ತಾಂತ್ರಿಕ ಬಿಡ್ಡನ್ನು **ದಿನಾಂಕ : 02.02.2023ರಂದು ಮಧ್ಯಾಹ್ನ 2.00 ಗಂಟೆಗೆ** ಮುಚ್ಚಿದ ಲಕೋಟೆಯೊಂದಿಗೆ ಆಸ್ತಿ ಅಧಿಕಾರಿಗಳಿಗೆ ಸಲ್ಲಿಸುವುದು. ಅರ್ಹ ಏಜೆನ್ಸಿಯವರು ತಾಂತ್ರಿಕ ಬಿಡ್ಡಿನಲ್ಲಿ **(1)** ನೋಂದಣಿ ಪ್ರಮಾಣ ಪತ್ರ, **(2)** ಇದೇ ತರಹದ ಕೆಲಸವನ್ನು ನಿರ್ವಹಿಸಿರುವ ಬಗ್ಗೆ ಅನುಭವದ ಪ್ರಮಾಣ ಪತ್ರ, **(3)** ಕಂಪನಿಯ ವಿವರ ಮತ್ತು ಕೆಲಸ ಮಾಡುತ್ತಿರುವ ಸಿಬ್ಬಂದಿಗಳ ವಿವರ, **(4)** ರೂ.5.00 ಲಕ್ಷಗಳ ಸಾಲ್ವೆನ್ಸಿ ಪ್ರಮಾಣ ಪತ್ರ, ಜಿ.ಎಸ್.ಟಿ. ಪ್ರಮಾಣ ಪತ್ರ, ಜಿ.ಎಸ್.ಟಿ. ಪಾವತಿಸಿರುವ ದಾಖಲೆಗಳು ಮತ್ತು ಹಿಂದಿನ 3 ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿರುವ ವಿವರಗಳು, (ಗುತ್ತಿಗೆದಾರರು ಮೇಲಿನ ದಾಖಲೆಗಳ ಮೂಲ ಪ್ರತಿಯನ್ನು ಪರಿಶೀಲನೆಗಾಗಿ ಹಾಜರುಪಡಿಸತಕ್ಕದ್ದು.) ಪ್ರಿ–ಬಿಡ್ ಮೀಟಿಂಗ್ ಅನ್ನು **ದಿನಾಂಕ: 30.01.2023ರಂದು ಬೆಳಿಗ್ಗೆ 10:30 ಗಂಟೆಗೆ** ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸುವುದು. ಕೃಷಿ ವಿಶ್ವವಿದ್ಯಾನಿಲಯವು ಈ ಟೆಂಡರನ್ನು ಯಾವುದೆ ಕಾರಣ ನೀಡದೆ ಅನುಮೋದಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ತಾಂತ್ರಿಕ ಬಿಡ್ ಅನ್ನು **ದಿನಾಂಕ: 02.02.2023ರಂದು ಮಧ್ಯಾಹ್ನ 2:30 ಗಂಟೆಗೆ ತೆರೆಯಲಾಗುವುದು**. ಟೆಂಡರ್ ಪರಿಶೀಲನಾ ಸಮಿತಿಯು ತಾಂತ್ರಿಕ ಬಿಡ್ಡನ್ನು ಪರಿಶೀಲಿಸಿ ಅರ್ಹ ಏಜೆನ್ಸಿಯನ್ನು ಆಯ್ಕೆ ಮಾಡುತ್ತದೆ. ಮುಂದುವರೆದು ಅರ್ಹ ಏಜೆನ್ಸಿಯವರಿಂದ ಹಣಕಾಸಿನ ಬಿಡ್ಡನ್ನು ಷೆಡ್ಯೂಲ್ ಎ ಮತ್ತು ಷೆಡ್ಯೂಲ್ ಬಿ ಮೂಲಕ ಪಡೆಯಲಾಗುವುದು. ಹಣಕಾಸಿನ ಬಿಡ್ಡನ್ನು **ದಿನಾಂಕ: 09.02.2023ರಂದು ತೆರೆಯಲಾಗುವುದು.**

ವಾಸಾಸಂಇ/ವಾಪ್ರ/ಜಿಎ/4121/2022–23 ಸಹಿ/– ಆಸ್ತಿ ಅಧಿಕಾರಿಗಳು.

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ. (ಜಿಲ್ಲಾ ನಗರಾಭಿವೃದ್ಧಿ ಕೋಶ)
E-Mail-dudc_ctg@yahoo.co.in Ph. & Fax :- 08194-225713
ನಂ./ಜಿನಕೋ(1)/ಸಿಬ್ಬಂದಿ/ಸಿ.ಆರ್–74/22–23 ದಿನಾಂಕ:12/01/2023

ಅಧಿಸೂಚನೆ

ಚಿತ್ರದುರ್ಗ ಜಿಲ್ಲೆಯ ನಗರಸಭೆ / ಪುರಸಭೆ/ ಪಟ್ಟಣ ಪಂಚಾಯಿತಿಗಳಲ್ಲಿ ನೇರಪಾವತಿ, ಅಥವಾ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ ಅಥವಾ ಕ್ಲೀನರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಖಾಲಿ ಇರುವ ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳಿಗೆ ವಿಶೇಷ ನೇಮಕಾತಿ ನಿಯಮಗಳ ರೀತ್ಯಾ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 176 ಜಿಇಎಲ್ 2022 (ಭಾ–2)(ಇ) ದಿ:23/11/2022ರಂತೆ ನಗರಸಭೆಗಳಲ್ಲಿ ಶೇ.50% ರಷ್ಟು ಹಾಗೂ ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಶೇ.100% ರಷ್ಟು ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿ ಹುದ್ದೆಗಳೆಂದು ಆದೇಶಿಸಿರುವಂತೆ, ನೇರ ನೇಮಕಾತಿ ಪೌರಕಾರ್ಮಿಕರ ಖಾಲಿ ಹುದ್ದೆಗಳಿಗೆ ಮಾತ್ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 02 ಸಹಿಮ 2022 ದಿ:28/12/2022 ರ ಪರಿಷ್ಕೃತ ಮೀಸಲಾತಿ ರೋಷ್ಟರ್ ಬಿಂದುಗಳನ್ನು ಅಳವಡಿಸಿಕೊಂಡು, ವಿಶೇಷ ನೇಮಕಾತಿ ನಿಯಮಗಳ ರೀತ್ಯಾ ಪೌರಕಾರ್ಮಿಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.
(1) ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಾಲಿ ನೇರಪಾವತಿ, ಅಥವಾ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ ಅಥವಾ ಕ್ಲೀನರ್‌ಗಳು 02 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮ ಜಾರಿಗೆ ಬಂದ ದಿನಾಂಕದಲ್ಲಿಯೂ ಕರ್ತವ್ಯ ನಿರ್ವಹಿಸುತ್ತಿರುವ ಅರ್ಹ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
(2) ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರಿರುವ ಮೀಸಲಾತಿ / ಎಲ್ಲಾ ಸಂಬಂಧಿತ ಪ್ರಮಾಣ ಪತ್ರಗಳನ್ನು ನಿಗಧಿತ ನಮೂನೆಗಳಲ್ಲಿಯೇ ಕಡ್ಡಾಯವಾಗಿ ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಸಲ್ಲಿಸತಕ್ಕದ್ದು.
(3) ಅರ್ಜಿ ನಮೂನೆ ಪಡೆಯುವ ಹಾಗೂ ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸುವ ಕಾಲಮಿತಿ ಹಾಗೂ ವಿಳಾಸ

ವಿವರ	ದಿನಾಂಕ	ಅರ್ಜಿ ನಮೂನೆ ಪಡೆಯುವ ಹಾಗೂ ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸುವ ವಿಳಾಸ
ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ	12–01–2023 ಕಛೇರಿ ವೇಳೆಯಲ್ಲಿ	1. ಚಿತ್ರದುರ್ಗ ಜಿಲ್ಲೆಯ ನಗರಸಭೆ / ಪುರಸಭೆ / ಪಟ್ಟಣ ಪಂಚಾಯಿತಿಗಳಲ್ಲಿ ಅರ್ಜಿಯನ್ನು ಪಡೆಯುವುದು 2. ಭರ್ತಿ ಮಾಡಿದ ಅರ್ಜಿಯನ್ನು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರಿಗೆ ಸಲ್ಲಿಸುವುದು.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	13–02–2023 ಕಛೇರಿ ವೇಳೆಯಲ್ಲಿ	

ಕ್ರ. ಸಂ.	ಹುದ್ದೆಯ ಹೆಸರು	ಖಾಲಿ ಇರುವ ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳ ಸಂಖ್ಯೆ		ಕನಿಷ್ಠ ವಿದ್ಯಾರ್ಹತೆ / ಅರ್ಹತೆ
1	ಪೌರಕಾರ್ಮಿಕ 17000–28950	ಚಿತ್ರದುರ್ಗ ನಗರಸಭೆ	30	1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ 2. ಕನ್ನಡ ಮಾತನಾಡಲು ಗೊತ್ತಿರಬೇಕು 3. ಹಾಲಿ ನೇರಪಾವತಿ ಅಥವಾ ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ ಅಥವಾ ಕ್ಲೀನರ್ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಮಾತ್ರ 4. ವಯೋಮಿತಿ ಕನಿಷ್ಠ 18 ವರ್ಷ ಗರಿಷ್ಠ 55 ವರ್ಷ
		ಹಿರಿಯೂರು ನಗರಸಭೆ	22	
		ಹೊಸದುರ್ಗ ಪುರಸಭೆ	23	
		ಹೊಳಲ್ಕೆರೆ ಪುರಸಭೆ	15	
		ಮೊಳಕಾಲ್ಮೂರು ಪ.ಪಂ	18	
		ನಾಯಕನಹಟ್ಟಿ ಪ.ಪಂ	12	

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಅಧಿಕೃತ ವೆಬ್ ಸೈಟ್ ಸಂಪರ್ಕಿಸುವುದು http://chitradrugadudc.mrc.gov.in

ಸಹಿ/– ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.
DIPR/CTA/KSMCA/888/2022-23

ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2ರವರ ಕಚೇರಿ (ಬಿಎಸ್‌ಡಬ್ಲ್ಯೂಎಂಎಲ್), 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು – 560052. ದೂರವಾಣಿ ಸಂಖ್ಯೆ: 080–6362975012.

No:DGM-2/BSWML/TEND/14/2022-23 Date:16.01.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1) ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ, ಇವರು ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು ಇವರ ಪರವಾಗಿ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ದಿನಾಂಕ: **31.01.2023ರ ಸಂಜೆ 4:00 ಗಂಟೆಯೊಳಗೆ** ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸಬಹುದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮಾರ್ಗದರ್ಶನದಂತೆ ತೆರೆಯಲಾಗುವುದು.
4) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ವೀಕ್ಷಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ವೆಚ್ಚ ರೂ. ಲಕ್ಷಗಳಲ್ಲಿ	ಇಎಂಡಿ ರೂ.ಗಳಲ್ಲಿ
1.	ಒ & ಎಂ ಸೇರಿದಂತೆ ಆಹಾರ ತ್ಯಾಜ್ಯ ಕಾಂಪೋಸ್ಟ್ ಪದ್ಧತಿ ಪೂರೈಕೆ ಹಾಗೂ ಅನುಸ್ಥಾಪನೆ	200.00	ಇ–ಪಾವತಿ ಅಡಿಯಲ್ಲಿ ಆನ್‌ಲೈನ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ಒಟಿಸಿ ಮೂಲಕ ರೂ. 1,00,000/– ಹಾಗೂ ಉಳಿಕೆ ರೂ.3,00,000/– ರಾಷ್ಟ್ರೀಕೃತ ಬ್ಯಾಂಕ್/ಷೆಡ್ಯೂಲ್ಡ್ ಬ್ಯಾಂಕ್‌ನ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ.

ಸೂಚನೆ:
1) ಆಸಕ್ತ ಅರ್ಹ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು ಮತ್ತು ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕು. ಬೇರೆ ಯಾವುದೇ ರೀತಿಯಲ್ಲಿ ಸಲ್ಲಿಸಿದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್‌ದಾರರು ಗೊತ್ತುಪಡಿಸಿದ ಸಂಸ್ಥೆಗಳಿಂದ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಲಭ್ಯವಿದೆ) ಹಂತ III ಡಿಜಿಟಲ್ ಸಹಿಯನ್ನು ಪಡೆಯಬೇಕು ಮತ್ತು ನಂತರ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಹಾಗೂ ಅವರ ಐಡಿ ಮತ್ತು ಡಿಜಿಟಲ್ ಸಹಿ ಉಪಯೋಗಿಸಿ ಟೆಂಡರ್‌ನ್ನು ಸಲ್ಲಿಸಬೇಕು.
2) ಪೂರ್ವಭಾವಿ ಸಭೆಯನ್ನು **ದಿನಾಂಕ: 23–01–2023 ರ ಮಧ್ಯಾಹ್ನ 3:00 ಗಂಟೆಗೆ** ಮುಅ&ಮುಪ್ರವ್ಯ(ತಾಂ) ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಬೆಂಗಳೂರು –560026, ಇಲ್ಲಿ ನಡೆಸಲಾಗುವುದು.
3) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮತ್ತು ತಾಂತ್ರಿಕತೆಯನ್ನು ಒಳಗೊಂಡಿರುವ ಮೊದಲ ಫೋಲ್ಡರ್‌ಗೆ ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ **31.01.2023 ರಂದು 16:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ** ಅಪ್‌ಲೋಡ್ ಮಾಡಬೇಕು. ತಾಂತ್ರಿಕ ದಾಖಲೆಗಳನ್ನು ನಿಗದಿತ ಸ್ಥಳದಲ್ಲಿ, ಹಾಜರಾಗಲು ಬಯಸುವ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಬಿಡ್ ಅನ್ನು ಇ–ಪೋರ್ಟಲ್ ಮೂಲಕ ದಿನಾಂಕ: **01.02.2023ರಂದು 16:30 ಗಂಟೆಯ ನಂತರ** ತೆರೆಯಲಾಗುತ್ತದೆ. ನಿರ್ದಿಷ್ಟಪಡಿಸಿದಂತೆ ಟೆಂಡರ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಟೆಂಡರ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ತೆರೆಯಲಾಗುತ್ತದೆ.
4) ತನ್ನ ನಿಯಂತ್ರಣಕ್ಕೆ ಮೀರಿ ಯಾವುದೇ ತಂತ್ರಜ್ಞಾನದ ವಿಫಲದಿಂದ ವಿಳಂಬವಾದಲ್ಲಿ ನಿಯಮಿತವು ಜವಾಬ್ದಾರಿ ವಹಿಸುವುದಿಲ್ಲ. ಯಾವುದೇ ಟೆಂಡರ್‌ನ ಅಪ್‌ಡೇಟ್‌ಗಳನ್ನು ಟೆಂಡರ್‌ದಾರರಿಗೆ ತಂತ್ರಜ್ಞಾನದಿಂದ ಸೂಚಿಸಲು ಪ್ರಯತ್ನಿಸುವ ವಿಧಾನಗಳಿದ್ದರೂ ಸಹ ಒಂದು ವೇಳೆ ಟೆಂಡರ್‌ದಾರರಿಗೆ ಮಾಹಿತಿಗಳು ತಲುಪದಿದ್ದಲ್ಲಿ ನಿಯಮಿತದ ಹೊಣೆಯಲ್ಲ. ಟೆಂಡರಿಗೆ ಸಂಬಂಧಿಸಿದಂತೆ ಟೆಂಡರ್‌ದಾರರು ನೂತನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಗೆ ನಿಯಮಿತವಾಗಿ ಭೇಟಿ ನೀಡಬೇಕು. ಸಹಾಯವಾಣಿ ಇ–ಮೇಲ್ ವಿಳಾಸ: **hphelpdesk.blr@intarvo.com** ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರನ್ನು ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯಕ್ಕೆ ಮುಂಚಿತವಾಗಿ ತಮ್ಮ ಕಂಪ್ಯೂಟರ್ ಬ್ರೌಸರ್ ಸಾಮರ್ಥ್ಯವನ್ನು ಸೂಕ್ತವಾಗಿ ಇರಿಸಲು ಜಾಗ್ರತೆ ವಹಿಸಬೇಕು. ಇಂಟರ್‌ನೆಟ್ ವಿಫಲದ ಕಾರಣದಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪ್ರತಿಕ್ರಿಯಿಸಲು ಅಥವಾ ಯಾವುದೇ ತಾಂತ್ರಿಕ ಅಡಚಣೆ ಉಂಟಾದಲ್ಲಿ ನಿಯಮಿತವು ಜವಾಬ್ದಾರಿ ಹೊರುವುದಿಲ್ಲ.
5) ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
6) ಜಿಎಸ್‌ಟಿಯನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್
DIPR/CP/4101/AAA/22-23

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
"ವಾರ್ತಾ ಸೌಧ", #17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು–560001.
ದೂರವಾಣಿ: 080–22028078 ಇಮೇಲ್ : dipr.films@gmail.com

2020ನೇ ಕ್ಯಾಲೆಡಂರ್ (ದಿನದರ್ಶಿ) ವರ್ಷದ ಕನ್ನಡ ಮತ್ತು ಕರ್ನಾಟಕದ ಇತರೆ ಪ್ರಾದೇಶಿಕ ಭಾಷೆಯ ಗುಣಾತ್ಮಕ ಚಲನಚಿತ್ರಗಳ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಮತ್ತು ಸಹಾಯಧನಕ್ಕಾಗಿ ಆಹ್ವಾನಿಸಲಾಗಿದ್ದ ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ಅವಕಾಶ

ದಿನಾಂಕ 01.12.2022 ರಂದು 2020 ರ ಕ್ಯಾಲೆಂಡರ್ ವರ್ಷದ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಹಾಗೂ ಸಹಾಯಧನಕ್ಕಾಗಿ ಆನ್‌ಲೈನ್ (sevasindhuservices.karnataka.gov.in ವೆಬ್‌ಸೈಟ್) ಮೂಲಕ ಆಹ್ವಾನಿಸಲಾಗಿದ್ದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 17.01.2023 ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ: 18.01.2023 ಸಂಜೆ 6.00 ಗಂಟೆವರೆಗೆ ಅವಕಾಶ ಕಲ್ಪಿಸಲಾಗಿದೆ. ಭೌತಿಕ ದಾಖಲೆಗಳನ್ನು ಖುದ್ದಾಗಿ ಕಛೇರಿಗೆ ದಿನಾಂಕ: 25.01.2023. ಬುಧವಾರ ಸಂಜೆ 5.00 ಒಳಗಾಗಿ ಸಲ್ಲಿಸಬೇಕು. ಇನ್ನುಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಸಹಿ/– ಉಪ ನಿರ್ದೇಶಕರು
ವಾಸಾಸಂಇ/ವಾಪ್ರ/4102/ಆಕಾರ್/2022–23 ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ರೈಲು ಗಾಲಿ ಕಾರ್ಖಾನೆ, ಯಲಹಂಕ, ಬೆಂಗಳೂರು–560 064 G20

ಟೆಂಡರ್ ಸೂಚನೆ ಸಂ. ಆರ್‌ಡಬ್ಲ್ಯೂಎಫ್/ಎಸ್/146/2022–23/08 ದಿನಾಂಕ: 14.01.2023

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ ಪ್ರಧಾನ ಮುಖ್ಯ ಸಾಮಾಗ್ರಿ ಪ್ರಬಂಧಕರು/ರೈಗಾಕಾ ಇವರು ಅನುಭವಿ/ಪ್ರತಿಷ್ಠಿತ ಗುತ್ತಿಗೆದಾರರಿಂದ http://www.ireps.gov.in ವೆಬ್‌ಸೈಟ್ ಮೂಲಕ ಎಲೆಕ್ಟ್ರಾನಿಕ್ ಟೆಂಡರ್ ಅನ್ನು ಆನ್‌ಲೈನ್ ಮೂಲಕ ಆಹ್ವಾನಿಸುತ್ತಿದ್ದಾರೆ.

ಟೆಂಡರ್ ಸಂ.	ಆರ್‌ಡಬ್ಲ್ಯೂಎಫ್‌ಎಸ್‌ಟಿಪಿಟಿ_ಸಿಡಬ್ಲ್ಯೂಎಸ್_0–500_22–24	ಆರ್‌ಡಬ್ಲ್ಯೂಎಫ್‌ಎಸ್‌ಟಿಪಿಟಿ_ಸಿಎ__1000–2224ರ ಮೇಲೆ
ಕೆಲಸದ ವ್ಯಾಪ್ತಿ	ಭಾರತದ ವಿವಿಧ ರೈಲ್ವೆ ಘಟಕಗಳಿಂದ ಖಂಡಿಸಿದ ರೈಲು ಗಾಲಿಸೆಟ್‌ಗಳನ್ನು ರೈಗಾಕಾ, ಯಲಹಂಕ, ಬೆಂಗಳೂರಿಗೆ ರಸ್ತೆ ಹಾದಿಯ ಮೂಲಕ ಸಾಗಿಸುವುದು. ಲೋಡಿಂಗ್ ಮತ್ತು ಅನ್‌ಲೋಡಿಂಗ್ ರೈಲ್ವೆ ವತಿಯಿಂದ ಉಚಿತ. ಕನಿಷ್ಠ ದರದ ಅಂತರ 100 ಕಿಮೀಗಳು.	ಭಾರತದ ವಿವಿಧ ರೈಲ್ವೆ ಘಟಕಗಳಿಂದ ಖಂಡಿಸಿದ ಆಕ್ಸೆಲ್‌ಗಳನ್ನು ರೈಗಾಕಾ, ಯಲಹಂಕ, ಬೆಂಗಳೂರಿಗೆ ರಸ್ತೆ ಹಾದಿಯ ಮೂಲಕ ಸಾಗಿಸುವುದು. ಲೋಡಿಂಗ್ ಮತ್ತು ಅನ್‌ಲೋಡಿಂಗ್ ರೈಲ್ವೆ ವತಿಯಿಂದ ಉಚಿತ.
ಸ್ಲ್ಯಾಬ್ ಅಂತರ	0-500 ಕಿಮೀಗಳು	1000 ಕಿಮೀಗಳ ಮೇಲೆ (ಸರಾಸರಿ ದೂರ 2500 ಕಿಮೀಗಳು)
ಪ್ರಮಾಣ	400 ಎಂಟಿ (ಅಂದಾಜು)	9500 ಎಂಟಿ (ಅಂದಾಜು)
ಅಂದಾಜು ಟೆಂಡರ್ ಮೌಲ್ಯ	ರೂ.8,74,000/-	ರೂ.5,79,50,000/-
ಇಎಂಡಿ ಮೊತ್ತ	ರೂ.17,500/-	ರೂ.4,39,800/-
ಒಪ್ಪಂದದ ಅವಧಿ	ಸ್ವೀಕಾರ ಪತ್ರದ ವಿತರಣೆಯ ದಿನಾಂಕದಿಂದ 12 (ಹನ್ನೆರಡು) ತಿಂಗಳುಗಳು.	
ಅಂತಿಮ ದಿನಾಂಕ ಮತ್ತು ಸಮಯ	20.02.2023, 14:15 ಗಂಟೆಗೆ ಟೆಂಡರ್ ಮುಕ್ತಾಯ.	

ಪ್ರಧಾನ ಮುಖ್ಯ ಸಾಮಾಗ್ರಿ ಪ್ರಬಂಧಕರು

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
KARNATAKA POWER CORPORATION LTD.
CIN: U85110KA1970SGC001919

ಸಂಖ್ಯೆ: A1P1A/3127 ದಿನಾಂಕ: 13.01.2023

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಬೆಂಗಳೂರಿನಲ್ಲಿರುವ ಶಕ್ತಿಭವನ ಕಛೇರಿ ಸಂಕೀರ್ಣ ಮತ್ತು ಗ್ರೀನ್ ಬಿಲ್ಡಿಂಗ್ ಕಛೇರಿ ಸಂಕೀರ್ಣದಲ್ಲಿ ಗುತ್ತಿಗೆ ಆಧಾರದ ಮೇಲೆ ಅವಶ್ಯವಿರುವ 08 ಡ್ರೈವರ್ ಮತ್ತು 30 ಅಟೆಂಡರ್‌ಗಳ ಸೇವೆಯನ್ನು ತೊಡಗಿಸಿಗೊಳ್ಳಲು 2 ವರ್ಷದ ಅವಧಿಗೆ ಹಾಗೂ ಈ ಗುತ್ತಿಗೆದಾರರ ಸೇವೆಯು ತೃಪ್ತಿಕರವಾಗಿದ್ದಲ್ಲಿ ಮತ್ತೊಂದು ವರ್ಷ ಮುಂದುವರಿಸುವ ಷರತ್ತಿಗೊಳಪಟ್ಟು ಎರಡು ಲಕೋಟೆಯ ನಿಯಮದಂತೆ ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಈ ಟೆಂಡರ್‌ಗೆ ಭಾಗವಹಿಸುವ ಗುತ್ತಿಗೆದಾರರು ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ನಿಗದಿತ ದಿನಾಂಕ ಮತ್ತು ಸಮಯದಲ್ಲಿ ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕವೇ ಸಲ್ಲಿಸಲು ಹಾಗೂ **ಇ.ಎಂ.ಡಿ ಮೊತ್ತ ರೂ.2,42,000/–** ಗಳಾಗಿದ್ದು, ಆನ್‌ಲೈನ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **27.01.2023 ಸಂಜೆ 5.00 ಗಂಟೆಯವರೆಗೆ.** ಟೆಂಡರ್‌ನ **ಭಾಗ–1ನ್ನು ದಿನಾಂಕ: 30.01.2023 ಬೆಳಿಗ್ಗೆ 11.00 ಘಂಟೆಗೆ** ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು **https://eproc.karnataka.gov.in** ವೆಬ್‌ಸೈಟ್‌ನಿಂದ ಪಡೆಯಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ **ಪ್ರಧಾನ ಪ್ರಭಂದಕರು (ಆ&ಮಾ.ಸಂ)**, ಕ.ವಿ.ನಿ.ನಿ, ನಂ. 82, ಶಕ್ತಿಭವನ, 4ನೇ ಮಹಡಿ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001, ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 080–22201820.

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಕ್ರಮಾಂಕ:ಶಿಮನಪಾಶಿ:ಕಾವಿ–1:ಟೆಂಡರ್:25/2022–23 ದಿ: 12.01.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಏಕ–ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ WWW.eproc karnataka.gov.inನಲ್ಲಿ ಪಡೆದುಕೊಳ್ಳಬಹುದು.

1. ಇ–ಪ್ರೊಕ್ಯೂರ್‌ಮೆಂಟ್ ನಮೂನೆಗಳಿಗಾಗಿ ಆನ್‌ಲೈನ್‌ನಲ್ಲಿ ಇ–ಪೇಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:27.01.2023(ಸಂಜೆ 4.00ರವರೆಗೆ) **2.** ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ: 28.01.2023 ಸಂಜೆ:4.30 ಗಂಟೆಯನಂತರ **3.** ಹೆಚ್ಚಿನ ವಿವರಗಳನ್ನು ಇ–ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. **4.** ಕಾಮಗಾರಿ ಪೂರೈಸುವ ಅವಧಿ: 3 ತಿಂಗಳು. ಗುತ್ತಿಗೆದಾರರ ದರ್ಜೆ: Class IV and above, for sl no.3 Class III and above **5.** ಅನುಧಾನ: 2022–23ನೇ ಸಾಲಿನ ಮಹಾನಗರ ಪಾಲಿಕೆ ಸಾಮಾನ್ಯ ನಿಧಿ ಅನುದಾನ.

ಕ್ರ.ಸಂ. 1. ಇಂಡೆಂಟ್ ಸಂಖ್ಯೆ: 144931 **ಕಾಮಗಾರಿಯ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ.06 ರ ಪೋಸ್ಟಲ್ ಲೇಔಟ್‌ಗೆ ರಸ್ತೆ ಅಭಿವೃದ್ಧಿ ಕಾಮಗಾರಿ. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 10.00 **ಇ.ಎಂ.ಡಿ (ರೂ.ಗಳಲ್ಲಿ):** 25000 **ಮೀಸಲಾತಿ:** ಇತರೆ

ಕ್ರ.ಸಂ. 2. ಇಂಡೆಂಟ್ ಸಂಖ್ಯೆ: 144933 **ಕಾಮಗಾರಿಯ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ.06 ರ ಪೋಸ್ಟಲ್ ಲೇಔಟ್‌ಗೆ ಸಿ.ಸಿ. ಬಾಕ್ಸ್ ಚರಂಡಿ ಕಾಮಗಾರಿ. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 10.00 **ಇ.ಎಂ.ಡಿ (ರೂ.ಗಳಲ್ಲಿ):** 12500 **ಮೀಸಲಾತಿ:** ಪರಿಶಿಷ್ಟ ಜಾತಿ

ಕ್ರ.ಸಂ. 3. ಇಂಡೆಂಟ್ ಸಂಖ್ಯೆ: 145179 **ಕಾಮಗಾರಿಯ ವಿವರ:** ವಾರ್ಡ್ ನಂ. 02ರ ಎಲ್.ಬಿ.ಎಸ್ ಮುಖ್ಯ ರಸ್ತೆಯ ಡಾಂಬರೀಕರಣ ಕಾಮಗಾರಿ (ಎಲ್.ಬಿ.ಎಸ್ ಆರ್ಚ್ ನಿಂದ ಬೊಮ್ಮಕಟ್ಟೆ ರೈಲ್ವೆ ಗೇಟ್ ವರೆಗೆ)**ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 50.00 **ಇ.ಎಂ.ಡಿ (ರೂ.ಗಳಲ್ಲಿ) :** 50000 **ಮೀಸಲಾತಿ:** ಪರಿಶಿಷ್ಟ ಜಾತಿ

ಕ್ರ.ಸಂ. 4. ಇಂಡೆಂಟ್ ಸಂಖ್ಯೆ: 145273 **ಕಾಮಗಾರಿಯ ವಿವರ:** ಶಿವಮೊಗ್ಗ ಮಹಾನಗರಪಾಲಿಕೆ ವ್ಯಾಪ್ತಿಯ ವಾರ್ಡ್ ನಂ 14ರ ಇಸ್ಲಾಪುರ ಸರ್ವೆ ನಂ.8/2,3,4 12/2,3,4 ಶಿವಮೊಗ್ಗ–ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರದ ಸಾರ್ವಜನಿಕ ಉಪಯೋಗಿ ನಿವೇಶನದಲ್ಲಿ ಕೊಳವೆ ಬಾವಿ ಕೂರೆಯಿಸುವ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 3.45 **ಇ.ಎಂ.ಡಿ (ರೂ.ಗಳಲ್ಲಿ) :** 8625 **ಮೀಸಲಾತಿ:**ಇತರೆ

ಕ್ರ.ಸಂ. 5. ಇಂಡೆಂಟ್ ಸಂಖ್ಯೆ: 145281 **ಕಾಮಗಾರಿಯ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ.06ರ ಗಾಡಿಕೂಪ್ಪ ಆಲ್ಕೋಳ ವ್ಯಾಪ್ತಿಯಲ್ಲಿ ಬರುವ ಬಸವಣ್ಣ ಲೇಔಟ್‌ಗೆ ಸಿ.ಸಿ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 19.95 **ಇ.ಎಂ.ಡಿ (ರೂ.ಗಳಲ್ಲಿ):** 49900 **ಮೀಸಲಾತಿ:** ಇತರೆ

ಕ್ರ.ಸಂ. 6. ಇಂಡೆಂಟ್ ಸಂಖ್ಯೆ: 145274 **ಕಾಮಗಾರಿಯ ವಿವರ:** ಶಿವಮೊಗ್ಗ ನಗರದ ವಾರ್ಡ್ ನಂ.7ರ ಲಕ್ಷ್ಮೀಪುರ ಬಡಾವಣೆಯಲ್ಲಿ ಸಿ.ಸಿ ಬಾಕ್ಸ್ ಚರಂಡಿ ನಿರ್ಮಾಣ ಕಾಮಗಾರಿ **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 7.90 **ಇ.ಎಂ.ಡಿ (ರೂ.ಗಳಲ್ಲಿ):** 19750 **ಮೀಸಲಾತಿ:** ಇತರೆ

ಸೂಚನೆ: ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ–ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿಭಾಗ–1),
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.
ವಾ.ಸಾ.ಸಂ.ಇ/ಎಂಸಿಎ/ಶಿ/101/01/22–23/1676

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನನ್ನೊಳಗಿನ ಉತ್ತಮವಾದುದನ್ನು ಹೊರತೆಗೆಯುವವನೇ ನನ್ನ ನಿಜವಾದ ಸ್ನೇಹಿತ.

–ಹೆನ್ರಿ ಫೋರ್ಡ್

ಜೋಶಿಮಠ: ಮಾಹಿತಿ ಹಂಚಿಕೊಳ್ಳುವುದಕ್ಕೆ ಎನ್‌ಡಿಎಂಎ ಸಲ್ಲದ ನಿರ್ಬಂಧ

ಜೋಶಿಮಠದಲ್ಲಿನ ಪರಿಸ್ಥಿತಿ ಕುರಿತು ಮಾಹಿತಿ ಹಂಚಿಕೊಳ್ಳಬಾರದು ಎಂದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎನ್‌ಡಿಎಂಎ) ಸರ್ಕಾರಿ ಸಂಸ್ಥೆಗಳು ಮತ್ತು ಅಲ್ಲಿ ಕೆಲಸ ಮಾಡುವ ತಜ್ಞರಿಗೆ ತಾಕೀತು ಮಾಡಿರುವುದು ತಪ್ಪು. ಇದರಿಂದ ಒಳಿತಾಗುವುದು ಏನೂ ಇಲ್ಲ. ಜೋಶಿಮಠದಲ್ಲಿ ಭೂಕುಸಿತ ಆಗುತ್ತಿರುವ ಬಗ್ಗೆ ಮಾಧ್ಯಮಗಳ ಜೊತೆ ಮಾತನಾಡಬಾರದು ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಅನಿಸಿಕೆ ಹಂಚಿಕೊಳ್ಳಬಾರದು ಎಂದು ಸರ್ಕಾರಿ ಸಂಸ್ಥೆಗಳು ಮತ್ತು ಅಲ್ಲಿನ ತಜ್ಞರಿಗೆ ಎನ್‌ಡಿಎಂಎ ಸೂಚನೆ ನೀಡಿದೆ. ಈ ಸೂಚನೆಯನ್ನು ಸರಿಸುಮಾರು ಒಂದು ಡಜನ್ ಸರ್ಕಾರಿ ಸಂಸ್ಥೆಗಳಿಗೆ ನೀಡಲಾಗಿದೆ. ಪರಿಸ್ಥಿತಿ ಕುರಿತು ಜನರು ನೀಡುತ್ತಿರುವ ವ್ಯಾಖ್ಯಾನಗಳು ಜೋಶಿಮಠದಲ್ಲಿ ತೊಂದರೆಗೆ ಒಳಗಾಗಿರುವ ನಿವಾಸಿಗಳಲ್ಲಿ ಮಾತ್ರವೇ ಅಲ್ಲದೆ ದೇಶದ ಇತರೆಡೆ ಇರುವ ಪ್ರಜೆಗಳಲ್ಲಿಯೂ ಗೊಂದಲ ಸೃಷ್ಟಿಸುತ್ತಿವೆ ಎಂದು ಎನ್‌ಡಿಎಂಎ ತನ್ನ ಸೂಚನೆಯಲ್ಲಿ ಹೇಳಿದೆ. ಜೋಶಿಮಠ ಕುರಿತ ಯಾವುದೇ ವರದಿಯು ಮೊದಲಿಗೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅನುಮೋದನೆ ಪಡೆದುಕೊಳ್ಳಬೇಕು ಎಂದು ಉತ್ತರಾಖಂಡ ಸರ್ಕಾರ ಹೇಳಿದ ನಂತರದಲ್ಲಿ ಈ ಬಗೆಯ ಸೂಚನೆ ಬಂದಿದೆ. ಏಳು ತಿಂಗಳ ಅವಧಿಯಲ್ಲಿ ಜೋಶಿಮಠವು ಸರಿಸುಮಾರು 9 ಸೆಂಟಿಮೀಟರ್‌ನಷ್ಟು ಕುಸಿದಿದೆ ಎಂದು ಹೇಳುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಉಪಗ್ರಹ ಆಧಾರಿತ ವರದಿಯೊಂದು ಈ ರೀತಿಯ ಸೂಚನೆಯನ್ನು ಹೊರಡಿಸುವುದಕ್ಕೆ ಕಾರಣ ಆಗಿರಬಹುದು. ಡಿಸೆಂಬರ್ 27ರ ನಂತರದಲ್ಲಿ 12 ದಿನಗಳ ಅವಧಿಯಲ್ಲಿ ಜೋಶಿಮಠ ಪ್ರದೇಶದಲ್ಲಿ ಭೂಮಿಯು 5 ಸೆಂಟಿಮೀಟರ್‌ನಷ್ಟು ಕುಸಿದಿದೆ ಎಂದು ಆ ವರದಿ ಹೇಳಿತ್ತು. ಇಸ್ರೊ ಈಗ ಆ ವರದಿಯನ್ನು ಹಿಂಪಡೆದಿದೆ.

ಸಾರ್ವಜನಿಕರೆಲ್ಲರ ಗಮನಕ್ಕೆ ಬಂದಿರುವ ವಿದ್ಯಮಾನವೊಂದನ್ನು, ಅದರಲ್ಲೂ ಒಂದು ದುರಂತವನ್ನು ಕೆಟ್ಟದ್ದಾಗಿ ಹೇಗೆ ನಿಭಾಯಿಸಬಹುದು ಎಂಬುದಕ್ಕೆ ಇದೊಂದು ನಿದರ್ಶನ. ವಿಪತ್ತು ನಿರ್ವಹಣೆಗೆ ಸಂಬಂಧಿಸಿದ ಆಧುನಿಕ ದೃಷ್ಟಿಕೋನಗಳ ಪ್ರಕಾರ, ಸಾರ್ವಜನಿಕರ ಜೊತೆ ಮಾಹಿತಿ ಹಂಚಿಕೊಳ್ಳಬೇಕಿರುವುದು ಮುಖ್ಯವಾದುದು. ವಿಪತ್ತಿನ ಪರಿಣಾಮಗಳನ್ನು ತಗ್ಗಿಸಲು ಇದು ಪರಿಣಾಮಕಾರಿ ಕೂಡ ಎಂದು ಪರಿಗಣಿಸಲಾಗಿದೆ. ವಿಪತ್ತಿನ ವಿಚಾರದಲ್ಲಿ ಪಾರದರ್ಶಕವಾಗಿ ಇಲ್ಲದೆ ಇರುವುದು, ಮಾಹಿತಿ ಹರಿವಿಗೆ ಅಡ್ಡಿಪಡಿಸುವುದು ಹಾಗೂ ತಪ್ಪು ಮಾಹಿತಿ ಹರಿಯುವುದಕ್ಕೆ ಅವಕಾಶ ಕೊಡುವುದರಿಂದ ವಿಪತ್ತು ನಿರ್ವಹಣೆ ಪ್ರಯತ್ನಗಳಿಗೆ ಅಡ್ಡಿ ಉಂಟಾಗುತ್ತದೆ ಎಂಬುದನ್ನು ಅಧ್ಯಯನಗಳು ಕಂಡುಕೊಂಡಿವೆ. ಜೋಶಿಮಠದಲ್ಲಿ ಇನ್ನಷ್ಟು ಬಿರುಕುಗಳು ಉಂಟಾಗುತ್ತಿರುವುದು ಹಾಗೂ ಭೂಕುಸಿತ ಇನ್ನಷ್ಟು ಆಗುವ ವರದಿಗಳು ಬರುತ್ತಿವೆ. ಇಂತಹವುಗಳ ಬಗ್ಗೆ ಅಧಿಕೃತ ಮಾಹಿತಿ ಇಲ್ಲದಿದ್ದಾಗ ಗಾಳಿಸುದ್ದಿಗಳು ಹಾಗೂ ಊಹೆಯನ್ನು ಆಧರಿಸಿದ ಸುದ್ದಿಗಳು ಹೆಚ್ಚು ಹರಡುತ್ತವೆ. ಜನರಲ್ಲಿ ಭೀತಿ ಉಂಟಾಗದೆ ಇರಲಿ ಎಂಬ ಉದ್ದೇಶದಿಂದ ಮಾಹಿತಿ ಹಂಚಿಕೊಳ್ಳುವುದರ ಮೇಲೆ ನಿರ್ಬಂಧ ವಿಧಿಸುವ ಆಲೋಚನೆ ಬಂತು ಎಂದು ಉತ್ತರಾಖಂಡ ಸರ್ಕಾರ ಹೇಳಿದೆ. ಆದರೆ ಸರಿಯಾದ ಮಾಹಿತಿ ಸಿಗದಿದ್ದರೆ ಜನರಲ್ಲಿ ಭೀತಿ ಹೆಚ್ಚು ಸೃಷ್ಟಿಯಾಗುತ್ತದೆ. ಪರಿಸ್ಥಿತಿ ಬಗ್ಗೆ ಎನ್‌ಡಿಎಂಎ ತಜ್ಞರ ಸಮಿತಿಯ ಅಂತಿಮ ವರದಿ ಬರುವವರೆಗೆ ಈ ನಿರ್ಬಂಧವು ಮುಂದುವರಿಯಲಿದೆ ಎಂದು ಹೇಳಲಾಗಿದೆ. ಅಂತಿಮ ವರದಿ ಬರುವವರೆಗೆ ತಪ್ಪು ಮಾಹಿತಿಗಳು ಹರಿದಾಡುವ ಅಪಾಯ ಇದೆ.

ಯಾವುದೇ ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಇಂತಹ ನಿರ್ಬಂಧಗಳು ಕೆಟ್ಟ ಪರಿಣಾಮ ಉಂಟುಮಾಡಬಹುದು. ಎನ್‌ಡಿಎಂಎ ತನ್ನ ಸೂಚನೆಯನ್ನು ಹಿಂದಕ್ಕೆ ಪಡೆಯಬೇಕು

ನಿರ್ಬಂಧವು ಎಷ್ಟರಮಟ್ಟಿಗೆ ಅರ್ಥಪೂರ್ಣ ಹಾಗೂ ಎಷ್ಟರಮಟ್ಟಿಗೆ ಪ್ರಯೋಜನಕಾರಿ ಎಂಬ ಪ್ರಶ್ನೆಯನ್ನು ತಜ್ಞರು ಮುಂದಿಟ್ಟಿದ್ದಾರೆ. ಜೋಶಿಮಠದಲ್ಲಿ ಆಗಿರುವ ಭೂಕುಸಿತದ ಕುರಿತು ವಿದೇಶದ ಸಂಸ್ಥೆಗಳು ಉಪಗ್ರಹದ ಮೂಲಕ ತೆಗೆದಿರುವ ಚಿತ್ರಗಳು ಲಭ್ಯವಾಗುತ್ತವೆ. ಹಾಗಾಗಿ, ದೇಶದ ಒಳಗೆ ಮಾತ್ರ ಅನ್ವಯವಾಗುವ ನಿರ್ಬಂಧಕ್ಕೆ ಹೆಚ್ಚಿನ ಅರ್ಥ ಇರುವುದಿಲ್ಲ ಎಂದು ತಜ್ಞರು ಹೇಳಿದ್ದಾರೆ. ಜೋಶಿಮಠದಲ್ಲಿ ಆಗಿರುವ ಭೂಕುಸಿತವು ದೇಶದ ಹೊರಗಿನವರಿಗೂ ಹೆಚ್ಚಿನ ಗಮನ ಸೆಳೆದಿದೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಮಾಹಿತಿ ಹಂಚಿಕೊಳ್ಳುವುದರ ವಿಚಾರವಾಗಿ ಜಾರಿಗೆ ತಂದ ಕೆಲವು ನಿರ್ಬಂಧಗಳು ಪರಿಸ್ಥಿತಿ ಬಿಗಡಾಯಿಸುವಂತೆ ಮಾಡಿದ್ದವು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಇಂತಹ ನಿರ್ಬಂಧಗಳು ಮಾಮೂಲಾಗಬಾರದು. ಇವು ಮಾಮೂಲು ಎಂಬಂತೆ ಆದರೆ, ಮುಂದೆ ಇವೇ ಒಂದು ನೀತಿಯಾಗಿ ಜಾರಿಗೆ ಬರಬಹುದು. ಕುಲಾಂತರಿ ಸಾಸಿವೆ ಕುರಿತ ಮಾಹಿತಿಗೆ ಈಚೆಗೆ ನಿರ್ಬಂಧ ಹೇರಲಾಗಿತ್ತು. ಯಾವುದೇ ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಇಂತಹ ನಿರ್ಬಂಧಗಳು ಕೆಟ್ಟ ಪರಿಣಾಮ ಉಂಟುಮಾಡಬಹುದು. ಎನ್‌ಡಿಎಂಎ ತನ್ನ ಸೂಚನೆಯನ್ನು ಹಿಂದಕ್ಕೆ ಪಡೆಯಬೇಕು.

ದಿನದ ಟ್ವೀಟ್

ತಂತ್ರಜ್ಞಾನ ಜನಸ್ನೇಹಿಯಾಗಿರಲಿ

ಭಾರತದಲ್ಲಿ ಒಟಿಪಿಯನ್ನು (ಒಂದು ಬಾರಿ ಬಳಸುವ ಪಾಸ್‌ವರ್ಡ್) ಅತಿಯಾಗಿ ಬಳಸುತ್ತಿರುವುದು ನೋವಿನ ಸಂಗತಿ. ನನ್ನ ತಂದೆ–ತಾಯಿ ಬ್ಯಾಂಕ್ ಖಾತೆಗೆ ಲಾಗ್ ಇನ್ ಆಗಲು ಒಟಿಪಿ ಬೇಕು, ಆಮೇಲೆ ವ್ಯವಹಾರವನ್ನು ದೃಢೀಕರಿಸಲು ಮತ್ತೊಮ್ಮೆ ಒಟಿಪಿ ಬೇಕು. ಈ ಒಟಿಪಿ ಅವಧಿ 30 ಸೆಕೆಂಡುಗಳು. ಒಂದು ಆ್ಯಪ್‌ನಿಂದ ಇನ್ನೊಂದು ಆ್ಯಪ್‌ಗೆ ಹೋಗುವುದು, ಅದನ್ನು ಓದುವುದು, ಕಾಲಮಿತಿಯೊಳಗೆ ಟೈಪ್ ಮಾಡುವುದು ಇವೆಲ್ಲಾ 65 ವರ್ಷ ದಾಟಿದವರಲ್ಲಿ ಒತ್ತಡ ಸೃಷ್ಟಿಸುತ್ತವೆ.

ದೀಪಾ ಗೋಯಲ್, ಪ್ರಾಡಕ್ಟ್ ಮ್ಯಾನೇಜರ್, ಪೇಪಾಲ್ ಕಂಪನಿ, ಸ್ಯಾನ್‌ಫ್ರಾನ್ಸಿಸ್ಕೊ

ಕಿಡಿನುಡಿ

ಕೊಲಿಜಿಯಂ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಸರ್ಕಾರಕ್ಕೆ ಯಾವ ಆಸಕ್ತಿಯೂ ಇಲ್ಲ ಎಂಬುದಕ್ಕೆ ಇದು ನಿದರ್ಶನ. ತನ್ನ 'ಹೌದಪ್ಪ'ಗಳನ್ನು ನೇಮಕ ಮಾಡುವುದಷ್ಟೇ ಅದಕ್ಕೆ ಬೇಕಾಗಿದೆ. ಪರಿಣಾಮಗಳ ಬಗ್ಗೆ ಆಲೋಚನೆ ಇಲ್ಲದೆ ಸರ್ಕಾರವು ಸಾರ್ವಜನಿಕವಾಗಿ ನ್ಯಾಯಾಂಗವನ್ನೇ ಬೆದರಿಸುವುದು ಇನ್ನಷ್ಟು ಚಿಂತೆಗೀಡುಮಾಡುವ ವಿಷಯ.

(ಕೊಲಿಜಿಯಂನಲ್ಲಿ ತನ್ನ ಪ್ರತಿನಿಧಿಗಳಿರಬೇಕು ಎಂದು ಸರ್ಕಾರವು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರಿಗೆ ಪತ್ರ ಬರೆದಿರುವುದಕ್ಕೆ ಪ್ರತಿಕ್ರಿಯೆ)

ಶ್ವೇತಾ ಕುಶೆ, ಕಾನೂನು ವಿದ್ಯಾರ್ಥಿನಿ

25 ವರ್ಷಗಳ ಹಿಂದೆ

ಶನಿವಾರ, 17-1-1998

• **ಅಲಿ ಸರ್ದಾರ್ ಜಫ್ರಿಗೆ ಜ್ಞಾನಪೀಠ ಪ್ರಶಸ್ತಿ**

ನವದೆಹಲಿ, ಜ.16 (ಪಿಟಿಐ)– ಖ್ಯಾತ ಉರ್ದು ಲೇಖಕ ಅಲಿ ಸರ್ದಾರ್ ಜಫ್ರಿ ಅವರನ್ನು 1997ನೇ ಸಾಲಿನ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಜ್ಞಾನಪೀಠ ಆಯ್ಕೆ ಸಮಿತಿಯ ಅಧ್ಯಕ್ಷ ಡಿ. ಕರಣ್‌ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಧಾರವನ್ನು ಕೈಗೊಳ್ಳಲಾಯಿತು.

ಪ್ರಶಸ್ತಿಯು ರೂ. 2.5 ಲಕ್ಷ ನಗದನ್ನು ಒಳಗೊಂಡಿದೆ.

ಅಲಿ ಸರ್ದಾರ್ ಜಫ್ರಿ ಅವರು 1977ರಿಂದ ಕೈಗೊಂಡಿರುವ ರಚನಾತ್ಮಕ ಬರಹಕ್ಕಾಗಿ ಅವರಿಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

• **ಕಾಂಗ್ರೆಸ್ ಸೇರಲು ಜಾಲಪ್ಪ ನಿರ್ಧಾರ**

ನವದೆಹಲಿ, ಜ. 16– ಕೇಂದ್ರ ಜವಳಿ ಖಾತೆಯ ಸಚಿವ ಆರ್.ಎಲ್. ಜಾಲಪ್ಪ ಅವರು ಜನತಾದಳಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿದ್ದು, ಕಾಂಗ್ರೆಸ್ ಸೇರಲು ಬಯಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಜತೆ ಸುಮಾರು 45 ನಿಮಿಷಗಳ ಕಾಲ ಮಾತುಕತೆ ನಡೆಸಿದ ನಂತರ ಅವರು ಈ ನಿರ್ಧಾರವನ್ನು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಬುಧವಾರ, 17-1-1973

• **ಆಂಧ್ರ ಮುಖ್ಯಮಂತ್ರಿಗೆ ದೆಹಲಿ ತುರ್ತು ಕರೆ; ರಾಷ್ಟ್ರಪತಿ ಆಳ್ವಿಕೆ ಖಚಿತ**

ನವದೆಹಲಿ, ಜ. 16– ತೀವ್ರ ತೊಂದರೆಗೆ ಗುರಿಯಾಗಿರುವ ಆಂಧ್ರಪ್ರದೇಶವನ್ನು ಸ್ವಲ್ಪ-ಕಾಲದವರೆಗಾದರೂ ರಾಷ್ಟ್ರಪತಿ ಆಡಳಿತಕ್ಕೆ ಒಳಪಡಿಸಬೇಕೆಂಬ ನಿರ್ಧಾರವನ್ನು ಇಂದು ಬೆಳಿಗ್ಗೆ ಇಲ್ಲಿ ಸಂಪುಟದ ರಾಜಕೀಯ ವ್ಯವಹಾರ ಸಮಿತಿ ಸಭೆಯಲ್ಲಿ ಎರಡು ಗಂಟೆಗಳ ದೀರ್ಘ ಚರ್ಚೆ ನಂತರ ಕೈಗೊಳ್ಳಲಾಯಿತೆಂದು ತಿಳಿದುಬಂದಿದೆ.

ಈ ಬಗೆಗೆ ರಾಷ್ಟ್ರಪತಿ ವಿ.ವಿ. ಗಿರಿ ಅವರಿಗೆ ಶಿಫಾರಸು ಮಾಡುವುದಕ್ಕೆ ಮುಂಚೆ ತುರ್ತು ಸಮಾಲೋಚನೆಗಾಗಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಪಿ.ವಿ. ನರಸಿಂಹ ರಾವ್ ಅವರು ದೆಹಲಿಗೆ ಧಾವಿಸಿದರು. ಅವರು ಉಮಾಶಂಕರ್ ದೀಕ್ಷಿತ್ ಅವರನ್ನು ಮೊದಲು ಭೇಟಿಯಾಗಿದ್ದರು.

ನಿರ್ಧಾರಕ್ಕೂ ಮುಂಚಿನ ಸಮಾಲೋಚನೆಯಲ್ಲಿ ಹಾಜರಿರುವುದಕ್ಕಾಗಿ ಇಂದು ರಾತ್ರಿ ಭೋಪಾಲ್ ಪ್ರವಾಸವನ್ನು ಕಾಂಗ್ರೆಸ್ ಅಧ್ಯಕ್ಷ ಡಾ. ಶಂಕರ ದಯಾಳ್ ಶರ್ಮ ಅವರು ರದ್ದು ಪಡಿಸಿದರು.

ಯಾವ ದೃಷ್ಟಿಯಿಂದ ನೋಡಿದರೂ ನಂದಿನಿ– ಅಮುಲ್ ವಿಲೀನ ಕಾರ್ಯಸಾಧುವಲ್ಲ

ಒಂದು ದೇಶ– ಒಂದೇ ಸಹಕಾರ ಸಂಘ?

ವಿಶ್ಲೇಷಣೆ

ಎಂ.ಎಸ್.ಶ್ರೀರಾಮ್

ಕೇಂದ್ರ ಸಹಕಾರ ಸಚಿವರೂ ಆಗಿರುವ ಗೃಹ ಸಚಿವ ಅಮಿತ್ ಶಾ ಅವರು ಕರ್ನಾಟಕದ ನಂದಿನಿ ಮತ್ತು ಗುಜರಾತ್ ಮಹಾಮಂಡಳಿಯ ಅಮುಲ್– ಎರಡೂ ಸಂಸ್ಥೆಗಳು ಜೊತೆಯಾಗಿ ಕೆಲಸ ಮಾಡಬಹುದೆನ್ನುವ ಮಾತನ್ನು ಈಚೆಗೆ ಆಡಿದರೆಂದು ಸುದ್ದಿ. ಎರಡೂ ಸಂಸ್ಥೆಗಳನ್ನು ವಿಲೀನ ಮಾಡಬೇಕೆಂದು ಸಹ ಹೇಳಿದ್ದರು ಎನ್ನುವ ಮಾತು ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬಿತ್ತು. ಒಂದು ರೀತಿಯಲ್ಲಿ ಇದು, ಕರ್ನಾಟಕ ಮಹಾಜನತೆಯ ಪ್ರತಿಕ್ರಿಯೆ ಹೇಗಿರುತ್ತದೋ ಪರೀಕ್ಷಿಸಿ ನೋಡೋಣ ಎಂದು ಗಾಳಿಯಲ್ಲಿ ಬಿಟ್ಟ ಬಲೂನಿರಬಹುದು. ಆದರೆ ಈ ಮಾತನ್ನು ನಾವು ಲಘುವಾಗಿ ಪರಿಗಣಿಸಬಾರದು. ಯಾವುದೇ ಚರ್ಚೆಯಿಲ್ಲದೆ ಮೂರು ಕೃಷಿ ಕಾನೂನುಗಳನ್ನು ಜಾರಿ ಮಾಡಿ, ಒಂದು ವರ್ಷಕಾಲ ಹಟದಿಂದ ಕಣ್ಣುಮಿಟುಕಿಸದೇ ರೈತರೊಂದಿಗೆ ದೃಷ್ಟಿಯುದ್ಧ ಮಾಡಿದ ಸರ್ಕಾರವಿದು ಎನ್ನುವುದನ್ನು ನಾವು ನೆನಪಿಡಬೇಕು. ಸಿನಿಮಾ ಸಂಭಾಷಣೆಯಂತೆ ಹೇಳಿದ್ದನ್ನು ಹೇಳಿದಂತೆ ಮಾಡುವ, ಹೇಳದ್ದನ್ನೂ ಅಷ್ಟೇ ಗತ್ತಿನಿಂದ ಮಾಡುವುದನ್ನು ಈ ಸರ್ಕಾರ ಬಹಳಷ್ಟು ಬಾರಿ ತೋರಿಸಿಕೊಟ್ಟಿದೆ.

ತಾಂತ್ರಿಕವಾಗಿ ವಿಲೀನದ ಪ್ರಕ್ರಿಯೆ ಹೀಗಿರುತ್ತದೆ: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಮತ್ತು ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಮಹಾಮಂಡಳವು (ಜಿಸಿಎಂಎಂಎಫ್– ಅಮುಲ್) ರಾಜ್ಯದ ಸಹಕಾರಿ ಕಾನೂನಿನಿಂದ ಹೊರಬಿದ್ದು, ಕೇಂದ್ರದ ಬಹುರಾಜ್ಯ ಸಹಕಾರಿ ಕಾನೂನಿನಲ್ಲಿ ನೋಂದಣಿ ಆಗಬೇಕಾಗುತ್ತದೆ. ಇಂಥ ಪ್ರಕ್ರಿಯೆಯನ್ನು ಸರಳಗೊಳಿಸಲು ಸಂಸತ್ತಿನಲ್ಲಿ ಇತ್ತೀಚೆಗೆ ಬಹುರಾಜ್ಯ ಸಹಕಾರಿ ಕಾನೂನಿಗೆ ವ್ಯಾಪಕವಾದ ತಿದ್ದುಪಡಿಗಳನ್ನು ತರಲಾಗಿದೆ. ಗುಜರಾತ್ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಆರ್.ಎಸ್. ಸೋಧಿ ಅವರನ್ನು ಇತ್ತೀಚೆಗೆ ಹಠಾತ್ತಾಗಿ ಬರ್ಖಾಸ್ತು ಮಾಡಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಯನ್ ಮೆಹ್ತಾ ಅವರಿಗೆ ತಾತ್ಕಾಲಿಕವಾಗಿ ಆ ಹೊಣೆಯನ್ನು ವಹಿಸಲಾಗಿದೆ. ಉರ್ಜಿತ್ ಪಟೇಲ್ ಅವರು ಆರ್‌ಬಿಐ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದ ಹೊಸದರಲ್ಲಿ ನೋಟು ರದ್ದತಿ ತೀರ್ಮಾನ ಕೈಗೊಳ್ಳಲಾಯಿತು ಎನ್ನುವುದನ್ನು ನಾವು ಮರೆಯಬಾರದು.

ಹೊಸ ತಿದ್ದುಪಡಿಯ ಪ್ರಕಾರ, ಯಾವುದೇ ಸಹಕಾರ ಸಂಘದ ಮಹಾಸಭೆಯಲ್ಲಿ ಹಾಜರಿದ್ದ ಮೂರನೇ ಎರಡರಷ್ಟು ಸದಸ್ಯರು ಈ ವಿಲೀನವನ್ನು ಒಪ್ಪಿ ಠರಾವಿಗೆ ವೋಟು ಹಾಕಿದರೆ, ವಿಲೀನ ಪ್ರಕ್ರಿಯೆಯನ್ನು ಕೈಗೊಳ್ಳಬಹುದು. ಕೇಂದ್ರೀಯ ರಿಜಿಸ್ಟ್ರಾರ್ ಅವರು ವಿಲೀನ ಪ್ರಕ್ರಿಯೆಯನ್ನು ಮಂಜೂರು ಮಾಡಿ ನೋಂದಣಿಗೊಳಿಸಿದ ದಿನದಿಂದಲೇ ರಾಜ್ಯದ ನೋಂದಣಿ ರದ್ದಾಗುತ್ತದೆ.

ಈ ಪ್ರಕ್ರಿಯೆಯಲ್ಲಿ ವೋಟು ಹಾಕುವವರು ಗ್ರಾಮ ಸ್ತರದಲ್ಲಿ ಕೆಎಂಎಫ್‌ಗೆ ಹಾಲು ಸರಬರಾಜು ಮಾಡುತ್ತಿರುವ ಸರ್ವಸದಸ್ಯರಲ್ಲ. ಬದಲಿಗೆ ಅವರ ಪ್ರತಿನಿಧಿಗಳ ಪ್ರತಿನಿಧಿಗಳು. ಗ್ರಾಮ ಸ್ತರದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಂದ ಆಯ್ಕೆಯಾದ ಅಧ್ಯಕ್ಷರು ಈಗಿರುವ ಹದಿನಾರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳ ಮಹಾಸಭೆಯ ಸದಸ್ಯರಾಗುತ್ತಾರೆ. ಈ ಮಹಾಸಭೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಒಕ್ಕೂಟದ ಅಧ್ಯಕ್ಷರೇ ಮಹಾಮಂಡಳಿಯ ಆಡಳಿತ ಮಂಡಳಿಯ ಸದಸ್ಯರೂ ಆಗುತ್ತಾರೆ. ಈ ಹದಿನಾರು ಮಂದಿ ಪ್ರತಿನಿಧಿಗಳಲ್ಲಿ ಮೂರನೇ ಎರಡು ಭಾಗದಷ್ಟು ಜನ ವಿಲೀನ ಪ್ರಕ್ರಿಯೆಗೆ ತಮ್ಮ ಸಮ್ಮತಿಯನ್ನು ಸೂಚಿಸಿದರೆ ಪ್ರಕ್ರಿಯೆಯನ್ನು ತಾಂತ್ರಿಕವಾಗಿ ಸಂಪನ್ನಗೊಳಿಸಬಹುದು. ಒಂದು ಮಹಾಮಂಡಳಿಯ ದೀರ್ಘಕಾಲಿಕ ಭವಿಷ್ಯವನ್ನು ನಿರ್ದೇಶಿಸುವ ಈ ಕ್ರಿಯೆಯನ್ನು ಬರೀ ಹನ್ನೊಂದು ಜನರ ಒಪ್ಪಿಗೆಯಿಂದ ಕೈಗೊಳ್ಳಬಹುದು. ಈ ಪ್ರಕ್ರಿಯೆ ಪ್ರಜಾತಾಂತ್ರಿಕವಾಗಿದ್ದರೂ ಮಿತಿಗಳಿಂದ ಕೂಡಿದೆ ಎನ್ನುವುದನ್ನು ನಾವು ಗಮನಿಸಬೇಕು.

ಇನ್ನು ವ್ಯಾವಹಾರಿಕವಾದ ಚರ್ಚೆಗೆ ಮುಂದಾಗೋಣ. ಮಾರುಕಟ್ಟೆಯ ನಿಯಮಾವಳಿಗೆ ತಲೆಬಾಗುವ ಸಂಸ್ಥೆಗಳು ಈ ರೀತಿಯ ವಿಲೀನ ಪ್ರಕ್ರಿಯೆಯನ್ನು ಕೈಗೊಳ್ಳುತ್ತವೆ. ಕೋಕಾಕೋಲಾ ನಮ್ಮ ದೇಶಕ್ಕೆ ಬಂದ ಹೊಸದರಲ್ಲಿ ಥಮ್ಸ್ ಅಪ್ ಮತ್ತು ಅದಕ್ಕೆ ಸಂಬಂಧಿಸಿದ ಇತರ ಪೇಯಗಳ ಬ್ರ್ಯಾಂಡುಗಳನ್ನು ಕೈವಶ ಮಾಡಿಕೊಂಡಿತು. ಹೀಗೆ ದೊಡ್ಡ ಬ್ರ್ಯಾಂಡುಗಳು ಸಣ್ಣ ಬ್ರ್ಯಾಂಡುಗಳನ್ನು ಕಬಳಿಸುವುದು ಸಹಜವೇ. ಆದರೆ ಪ್ರತಿಬಾರಿಯೂ ಯಶಸ್ಸು ಸಿಗುತ್ತದೆ ಎಂದು ಹೇಳಲಾಗದು. ದೇಶವ್ಯಾಪಿ ಖ್ಯಾತಿ ಪಡೆದಿರುವ ಅಮುಲ್ ಬ್ರ್ಯಾಂಡು ದೊಡ್ಡದೆನ್ನುವುದರಲ್ಲಿ ಅನುಮಾನವಿಲ್ಲ. ಹಾಗೆಂದು ನಂದಿನಿ ಅದಕ್ಕೆ ಶರಣಾಗಬೇಕೇ? ಮಾರುಕಟ್ಟೆಯಲ್ಲಿ ಇತರ ಬ್ರ್ಯಾಂಡುಗಳ ಜೊತೆ ನಂದಿನಿ ಪೈಪೋಟಿ ಮಾಡಲಾಗದೇ ಹೈರಾಣಾಗುವ ಸಂದರ್ಭ ಬಂದರೆ ಮಾತ್ರ ಈ ಪ್ರಶ್ನೆ ಪ್ರಸ್ತುತವಾಗುತ್ತದೆ. ಆ ಸಂದರ್ಭ ಈಗ ಬಂದಿದೆಯೇ? ಇಲ್ಲ. ಹೀಗಾಗಿ ವ್ಯಾವಹಾರಿಕ ದೃಷ್ಟಿಯಿಂದಲೂ ವಿಲೀನ ಪ್ರಕ್ರಿಯೆಯ ಅವಶ್ಯಕತೆ ಕಾಣುತ್ತಿಲ್ಲ.

ಎರಡೂ ಸಂಸ್ಥೆಗಳು ಒಟ್ಟಿಗೆ ಕೆಲಸ ಮಾಡುವ ಸಾಧ್ಯತೆಯಿದೆಯೇ? ಖಂಡಿತವಾಗಿಯೂ ಇದೆ. ಸಹಕಾರಿ ಸಂಸ್ಥೆಗಳು ಪರಸ್ಪರ ಸಹಕರಿಸುವುದು ಸರಿಯಾದ ಮಾರ್ಗವೇ. ಆದರೆ ಸ್ವಹಿತಾಸಕ್ತಿಗಳನ್ನು ಕಾಪಾಡಿಕೊಂಡ ನಂತರವೇ ಪರಸ್ಪರ ಸಹಕಾರ ಸಾಧ್ಯ. ಅಮುಲ್ ಪಾರ್ಲರುಗಳಲ್ಲಿ ನಂದಿನಿಯ ಉತ್ಪನ್ನಗಳನ್ನು ಮಾರುವ ಮೂಲಕ ಈ ಸಹಕಾರ ಕೈಗೊಳ್ಳಬಹುದು. ಆದರೆ ಪಾರ್ಲರುಗಳಿಂದೀಚೆಗೆ, ಅಮುಲ್‌ನ ಪದಾರ್ಥಗಳನ್ನು ನಂದಿನಿಯ ಫ್ಯಾಕ್ಟರಿಗಳಲ್ಲಿ ಸಿದ್ಧಪಡಿಸುವ ಅವಕಾಶವಿದ್ದಲ್ಲಿ ಹಾಗೆ ಮಾಡುವುದರಲ್ಲಿ ವ್ಯಾವಹಾರಿಕ ಜಾಣ್ಮೆಯಿದೆ. ಆದರೆ ಗುಜರಾತ್ ಮಹಾಮಂಡಳಿ ಮಿಕ್ಕ ಸಂಸ್ಥೆಗಳೊಂದಿಗೆ ಸಹಕರಿಸುವ ಉತ್ಸುಕತೆಯನ್ನು ಈವರೆಗೆ ತೋರಿಸಿಲ್ಲ. ಅದು ಮತ್ತು ಜಿಲ್ಲಾ ಸ್ತರದ ಒಕ್ಕೂಟಗಳು ಅನೇಕ ರಾಜ್ಯಗಳನ್ನು ಹೊಕ್ಕು ತಮ್ಮದೇ ಹಾಲು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಿ, ಸಹಕಾರ ವ್ಯವಸ್ಥೆಯ ಸಿದ್ಧಾಂತಗಳನ್ನು ಪಾಲಿಸದ, ಸದಸ್ಯರಲ್ಲದ ರೈತರಿಂದ ಹಾಲು ಸ್ವೀಕರಿಸುತ್ತಾ, ಆಯಾ ರಾಜ್ಯದ ಸ್ಥಳೀಯ ಸಹಕಾರ ವ್ಯವಸ್ಥೆಯನ್ನು ದುರ್ಬಲಗೊಳಿಸಿವೆ. ಕರ್ನಾಟಕದಲ್ಲಿ ನಂದಿನಿ ಪ್ರಬಲವಾಗಿರುವುದರಿಂದ ಹಾಗೂ ಪ್ರತೀ ಲೀಟರ್‌ಗೆ ಇಂತಿಷ್ಟೆಂದು ಉತ್ಪಾದಕರಿಗೆ ರಾಜ್ಯ ಸರ್ಕಾರವು ಸಹಾಯಧನ ನೀಡುತ್ತಿರುವುದರಿಂದ ನಮ್ಮ ನಾಡಿನಲ್ಲಿ ಈ ಪ್ರಕ್ರಿಯೆ ಕಷ್ಟದ್ದಾಗಿ ಕಂಡಿರಬಹುದು. ಹಾಲು ಕೊಳ್ಳಲು ಸಾಧ್ಯವಾಗದಿದ್ದರೇನು, ಮಹಾಮಂಡಳಿಯನ್ನೇ ಕಬಳಿಸಬಹುದೋ ಎನ್ನುವ ಆಲೋಚನೆ ಇರಬಹುದೇ?

ಗ್ರಾಮಮಟ್ಟದಲ್ಲಿ ಸಹಕಾರ ಸಂಘಗಳನ್ನು ರಚಿಸುವ ಮಾತನ್ನು ಶಾ ಆಡಿದರಂತೆ. ಈ ಮಾತನ್ನು ಅವರು 40 ವರ್ಷ ತಡವಾಗಿ ಆಡುತ್ತಿದ್ದಾರೆ. 80ರ ದಶಕದಲ್ಲಿಯೇ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ 'ಆಪರೇಷನ್ ಫ್ಲಡ್' ಕಾರ್ಯಕ್ರಮದಲ್ಲಿ ಈ ಕೆಲಸವನ್ನು ಸಂಪನ್ನಗೊಳಿಸಲಾಗಿದೆ. ಇಂದಿನ ನಂದಿನಿಯ ಪ್ರಗತಿಗೆ ಆಗ ಹೂಡಿದ ಭದ್ರ ಬುನಾದಿಯೇ ಕಾರಣ ಎನ್ನುವುದರಲ್ಲಿ ಅನುಮಾನವಿಲ್ಲ. 'ಕ್ಷೀರ ಪಿತಾಮಹ' ಎಂದೇ ಗುರುತಿಸಲಾಗುವ ಡಾ. ವರ್ಗೀಸ್ ಕುರಿಯನ್ ಅವರು ಅಮುಲ್‌ನ ಅಧ್ಯಕ್ಷರೂ ಮತ್ತು ಅದೇ ಕಾಲಕ್ಕೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ಹೀಗಿದ್ದೂ ಅವರು ರಾಜ್ಯಗಳಲ್ಲಿ ವಿಕೇಂದ್ರೀಕೃತವಾದ ಸಹಕಾರ ವ್ಯವಸ್ಥೆ ಬೆಳೆಸುವುದನ್ನು ಪ್ರೋತ್ಸಾಹಿಸುತ್ತಿದ್ದರು. ಸಹಕಾರ ಕ್ಷೇತ್ರದಲ್ಲಿರುವ ಸಂಸ್ಥೆಗಳು ಒಟ್ಟಾಗಿ, ಖಾಸಗಿ ಡೈರಿಗಳ ಜೊತೆ ಪೈಪೋಟಿ ಮಾಡಲು ಸಾಧ್ಯ. ಆದರೆ ಕರ್ನಾಟಕದಲ್ಲಿ ಆ ಸಾಧ್ಯತೆಯೂ ಕಾಣಿಸುತ್ತಿಲ್ಲ. ರಾಜ್ಯದ ಬೊಕ್ಕಸದಿಂದ ಬೇಜವಾಬ್ದಾರಿಯಾಗಿ ರೈತರಿಗೆ ಕೊಡುತ್ತಿರುವ, ಯಾವುದೋ ತ್ವರಿತ ರಾಜಕೀಯ ಕಾರಣಕ್ಕಾಗಿ ರೂಪಿಸಿದ ಸಹಾಯಧನವೇ ಈಗ ಈ ಸಂಸ್ಥೆಗೆ ಶ್ರೀರಕ್ಷೆಯಾಗಿ ಪರಿಣಮಿಸಬಹುದು.

ಒಂದು ರಾಷ್ಟ್ರ ಒಂದು ಭಾಷೆ, ಒಂದು ರಾಷ್ಟ್ರ ಒಂದು ಚುನಾವಣೆ, ಒಂದು ರಾಷ್ಟ್ರ ಒಂದು ತೆರಿಗೆ– ಹೀಗೆ ಎಲ್ಲವನ್ನೂ ಕೇಂದ್ರೀಕರಿಸುತ್ತಿರುವ ಈ ಸಮಯದಲ್ಲಿ ನಮಗೆ ಒಂದು ರಾಷ್ಟ್ರ ಒಂದು ಸಹಕಾರ ಮಹಾಮಂಡಳಿಯ ಅವಶ್ಯಕತೆಯಿಲ್ಲ. ಕೇಂದ್ರ ಸರ್ಕಾರ ವಿಕೇಂದ್ರೀಕರಣದ ವಿರೋಧಿಯಾಗಿದೆ ಎನ್ನುವುದಕ್ಕೆ ಹೆಚ್ಚಿನ ಪುರಾವೆ ಕೊಡಬೇಕಿಲ್ಲ. ಕರ್ನಾಟಕ ಮಹಾಮಂಡಳಿಯಲ್ಲಿರುವ ರೈತ ಪ್ರತಿನಿಧಿಗಳು ರಾಜ್ಯದ ಹಿತದೃಷ್ಟಿಯನ್ನು ಕಾಪಾಡುತ್ತಾರೆಯೇ ಅಥವಾ ರಾಜಕೀಯವಾಗಿ ದೆಹಲಿಯಿಂದ ಮತ್ತು ಅಹಮದಾಬಾದಿನಿಂದ ಬರುವ ಆದೇಶವನ್ನು ಶಿರಸಾವಹಿಸಿ ಪಾಲಿಸುತ್ತಾರೆಯೇ ಎನ್ನುವುದನ್ನು ಗಮನಿಸಬೇಕು. ಆ ಆದೇಶ ಪಾಲಿಸಿದರೆ, ಮುಂದೆ ಸಾಗಲಿರುವ ಕಾಲಚಕ್ರವನ್ನು ಹಿಂದಕ್ಕೆಳೆಯುವುದು ಅಸಾಧ್ಯ. ಹೀಗಾಗಿಯೇ ಮಹಾಮಂಡಳಿಯ ಆಡಳಿತ ಮಂಡಳಿ ಸದಸ್ಯರ ಮೇಲೆ ಈಗಿನಿಂದಲೇ ಸ್ಥಳೀಯರು ಒತ್ತಡ ಹೇರಿ, ಬರಲಿರುವ ಕಂಟಕ ಎದುರಿಸಲು ಅವರನ್ನು ಸಿದ್ಧರಾಗಿಸಬೇಕು. ಇದು ಪಕ್ಷದ ವಿಚಾರವಲ್ಲ, ರಾಜ್ಯದ ವಿಚಾರ, ವಿಕೇಂದ್ರೀಕರಣದ ವಿಚಾರ ಎನ್ನುವುದನ್ನು ನಾವು ಎಂದಿಗೂ ಮರೆಯಬಾರದು.

ಚುರುಮುರಿ

ಸಂಕ್ರಾಂತಿ ಫಲಗಳು

• ಲಿಂಗರಾಜು ಡಿ.ಎಸ್.

ಸಂಕ್ರಾಂತಿ ಪುರುಷನು ಈ ಚುನಾವಣಾ ವರ್ಷದಲ್ಲಿ ಭೂತವಿಜಯ, ಪ್ರಜಾನಿಧಿ ಮತ್ತು ಪಂಚ್ ರತ್ನ ಎಂಬ ಹೆಸರಿನಲ್ಲಿ ಮತದಾರರ ಬಕರ ರಾಶಿಗೆ ಪ್ರವೇಶಿಸುವನು. ಆತನು ಕೇಸರಿ ರುಮಾಲು ಧರಿಸಿ, ಹಸ್ತ ಪ್ರದರ್ಶನ ಮಾಡುತ್ತಾ, ತೆನೆಯನ್ನು ಹೊತ್ತು ದಕ್ಷಿಣ ದಿಕ್ಕಿಗೆ ಪ್ರಯಾಣ ಬೆಳೆಸುವನು. ಆತನ ಪ್ರಭಾವದಿಂದ ರಾಜ್ಯದಲ್ಲಿ ಪ್ರಧಾನ ಪಕ್ಷಗಳಲ್ಲಿ ವೇಷದ್ರೋಹಿಗಳ ಸಂಖ್ಯೆ ಉಲ್ಬಣಿಸಿ ಒಳಜಗಳ, ಕಚ್ಚಾಟ, ಹುಚ್ಚಾಟ, ಬೈಸರ್ಗಿಕ ಪ್ರಕೋಪಗಳು ಹೆಚ್ಚುವುವು. ತ್ರಿಪಕ್ಷಗಳು ನಿರುದ್ಯೋಗ ಭೀತಿಯ ನಿವಾರಣೆಗಾಗಿ ಮತ್ತು ಅಧಿಕಾರ ಪ್ರಾಪ್ತಿಗಾಗಿ ಜನತಾ ಜನಾರ್ದನನ ಭಜನೆ ಮಾಡುವುದು ಸೂಕ್ತವು.

ಪಕ್ಷಗಳು ಉಚಿತ ಕೊಡುಗೆಗಳ ಆಶ್ವಾಸನೆಯ ಮಹಾಪೂರ ಹರಿಸುವುದರಿಂದ ಮತದಾರರಿಗೆ ಕುಂದುಮತಿ ಆವರಿಸಲಿದೆ. ಆರ್ಥಿಕ ಶೀತದಿಂದಾಗಿ ಮಧ್ಯಮ ವರ್ಗದ ಮೂಗು ಕಟ್ಟಿ ಉಸಿರಾಟ ಕಷ್ಟವು. ರೈತರು ನುಡಿಮದ್ದುಗಳನ್ನು ನಂಬುವುದರಿಂದ ಧನವ್ಯಯವು. ಅಕಾರಣವಾಗಿ ಬೆಲೆಗಳು ಗಗನಕ್ಕೇರಲಿವೆ. ಬಿಪಿಎಲ್ಲುಗಳಿಗೆ ಧನ-ಧಾನ್ಯ ಭಾಗ್ಯ ಹೆಚ್ಚಳವು. ಗುಂಡೋದರರು ತೀರ್ಥಪಾನದ ಮಹತ್ವ ಅರಿತು ಸರ್ಕಾರದ ವರಮಾನ ಹೆಚ್ಚಿಸುವರು. ಜನ ತಮ್ಮನ್ನು ಗುಂಡಿಗಳು, ಟೋಲುಗಳು ಮತ್ತು ಮೆಟ್ರೊ ಪಿಲ್ಲರುಗಳು ಕಾಡದಿರಲಿ ಎಂದು ಕಷ್ಟದೇವತೆಗಳನ್ನು ಬೇಡಿಕೊಳ್ಳುವುದು. ಬಿಡಿಎ, ಬಿಬಿಎಂಪಿಯ ಬೀಸ್ಟ್ ಇಂಡಿಯಾ ಆಳ್ವಿಕೆಯಿಂದ ಜನ ಹೈರಾಣ.

ರಾಜ್ಯದ ಹಗರಣಗಳು ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯಗಳಂತೆ ದೀರ್ಘನಿದ್ರೆಯನ್ನು ಹೊಂದುವುವು. ಮೀಸಲಾತಿ ಬಿರುಸಿನಿಂದ ಸರ್ಕಾರಕ್ಕೆ ಇಬ್ಬಂದಿತನವು. ನಿರಂತರ ಪ್ರತಿಭಟನೆ, ರಸ್ತೆತಡೆಗಳಿಂದ ಸಾಮಾನ್ಯರ ಬದುಕಿನಲ್ಲಿ ನೆಮ್ಮದಿ ನಾಶ. ಸ್ಯಾಂಟ್ರೋವರಿ ಇಲ್ಲದಿದ್ದರೂ ವರ್ಗಾವಣೆ ದಂಧೆ ಮುಂದುವರಿಯಲಿದೆ. ಅಪರಾಧಿಗಳನ್ನು ಹಿಡಿದುಕೊಡುವಂತೆ ದೇವರಿಗೆ ಹರಕೆ ಹೊರುವ ಸಲುವಾಗಿ ಪೊಲೀಸು ಇಲಾಖೆಗೆ ಸರ್ಕಾರದಿಂದ ವಿಶೇಷ ಅನುದಾನ ಸಾಧ್ಯತೆ.

ಇಡೀ ವರ್ಷದಲ್ಲಿ ರಾಜಕೀಯಕ್ಕೆ ಚಾಟುದೋಷದ ತೊಂದರೆ. ಮೇಲ್ವರ್ಗದ ಪುಟ್ಟ ಮಕ್ಕಳಿಗೆ ಸಿಂಥೆಟಿಕ್ ಡ್ರಗ್ಸ್ ಕಾಟ. ಮಧ್ಯಮ ವರ್ಗಕ್ಕೆ ಕ್ಯಾಶಿಲ್ಲದೆ ನೆಮ್ಮದಿ ನಾಸ್ತಿ.

ಸಂಗತ

ಉತ್ತಮ ಶಾಲೆಗೆ ಉತ್ಸಾಹವೇ ಮುನ್ನುಡಿ

ಮಹಾರಾಷ್ಟ್ರದ ಶಿಕ್ಷಕರೊಬ್ಬರು ಸರ್ಕಾರಿ ಶಾಲೆಯಲ್ಲಿ ತಂದಿರುವ ಉತ್ತಮ ಬದಲಾವಣೆ ಹಲವಾರು ಶಾಲೆಗಳಿಗೆ ಪ್ರೇರಣಾದಾಯಿಯಾಗಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಶಿಕ್ಷಕರು ತಮ್ಮಲ್ಲಿರುವ ಉತ್ಸಾಹ, ಆಸಕ್ತಿ, ಬಿಡದೇ ಮುನ್ನುಗ್ಗುವ ಛಲ, ಬದಲಾವಣೆಗೆ ತೆರೆದುಕೊಳ್ಳುವ ತುಡಿತದಿಂದ ಶಾಲೆಯನ್ನೇ ಬದಲಾಯಿಸಿದ ಅನೇಕ ಕತೆಗಳನ್ನು ನಾವು ನೋಡಿದ್ದೇವೆ, ಕೇಳಿದ್ದೇವೆ. ಆದರೆ ಇಂತಹುದೇ ತುಡಿತ ಮತ್ತು ಬದ್ಧತೆಯಿಂದ ಶಾಲೆಯನ್ನೇ ಆಮೂಲಾಗ್ರವಾಗಿ ಬದಲಾಯಿಸುವುದರ ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಶಿಕ್ಷಕರೊಬ್ಬರ ಯಶಸ್ಸಿನ ಕತೆಯ ಅವಲೋಕನ ನಮ್ಮೆಲ್ಲರಲ್ಲಿಯೂ ಹುಮ್ಮಸ್ಸು ಹೆಚ್ಚಿಸಬಲ್ಲದು.

ವಿದ್ಯಾರ್ಥಿಗಳನ್ನು ಪರಿಣಾಮಕಾರಿ ಕಲಿಕೆಯೆಡೆಗೆ ಕೊಂಡೊಯ್ಯಲು ಶಾಲೆಯನ್ನು ಸಂಪೂರ್ಣ ಡಿಜಿಟಲೀಕರಣ ಮಾಡುವ ಪ್ರಯತ್ನವನ್ನು ಅನೇಕ ಖಾಸಗಿ ಶಾಲೆಗಳು ಮಾಡುತ್ತಿವೆ. ಆದಾಗ್ಯೂ ದೇಶ, ವಿದೇಶಗಳೇ ತಿರುಗಿ ನೋಡುವಂತೆ ತಮ್ಮ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಡಿಜಿಟಲೀಕರಣ ಮಾಡಿದ್ದು ಸಂದೀಪ್ ಗುಂಡ್ ಎಂಬ ಉತ್ಸಾಹಿ ಶಿಕ್ಷಕ. ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಶಹಾಪುರ ತಾಲ್ಲೂಕಿನ ಪಶ್ಚೆಪಡ ಗ್ರಾಮದಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸಂದೀಪ್ ಅವರು ಮಾಡಿರುವ ಸಾಧನೆ ಕಡಿಮೆಯೇನಲ್ಲ. ಇಲ್ಲಿನ ವಿದ್ಯಾರ್ಥಿಗಳು ಪಠ್ಯಪುಸ್ತಕ, ನೋಟ್‌ಪುಸ್ತಕಗಳನ್ನು ಶಾಲೆಗೆ ತೆಗೆದುಕೊಂಡು ಹೋಗುವುದಿಲ್ಲ. ಪಾಠಗಳನ್ನು ಪ್ರೊಜೆಕ್ಟರ್ ಬಳಸಿ ಬೋಧನೆ ಮಾಡಲಾಗುತ್ತದೆ.

ವಿದ್ಯಾರ್ಥಿಗಳು ತಮ್ಮಲ್ಲಿರುವ ಟ್ಯಾಬ್‌ಗಳಲ್ಲಿ ಶೇಖರವಾಗಿರುವ ಪಠ್ಯಪುಸ್ತಕಗಳನ್ನು ತೆರೆದು, ಓದುತ್ತಾರೆ. ಡಿಜಿಟಲ್ ಪೆನ್ ಬಳಸಿ ಟ್ಯಾಬ್‌ಗಳಲ್ಲಿಯೇ ಬರೆಯುತ್ತಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳನ್ನು ಸ್ಮಾರ್ಟ್ ಬೋರ್ಡ್ ಬಳಿ ಕರೆದು ವಿಷಯವನ್ನು ವಿವರಿಸಲು ಅಥವಾ ಲೆಕ್ಕ ಬಿಡಿಸಲು ತಿಳಿಸುತ್ತಾರೆ. ಈ ರೀತಿ ಪ್ರತೀ ವಿದ್ಯಾರ್ಥಿ ತನ್ನ ಟ್ಯಾಬ್ಲೆಟ್ ಅಥವಾ ಸ್ಮಾರ್ಟ್ ಬೋರ್ಡ್‌ನಲ್ಲಿ ಬರೆದ ಪ್ರತೀ ಮಾಹಿತಿಯು ವಿದ್ಯಾರ್ಥಿಯ ಹೆಸರಿನಲ್ಲಿ ಶೇಖರವಾಗುತ್ತದೆ. ಶಿಕ್ಷಕರು ನೀಡುವ ಕಿರು ಪರೀಕ್ಷೆ, ಪರೀಕ್ಷೆಗಳಿಗೆ ಉತ್ತರಗಳನ್ನು ವಿದ್ಯಾರ್ಥಿಗಳು ತಮ್ಮ ಟ್ಯಾಬ್‌ಗಳ ಮೂಲಕವೇ ಮಾಡುತ್ತಾರೆ. ವಿದ್ಯಾರ್ಥಿಗಳು ಬರೆದ ಉತ್ತರಗಳನ್ನು ಶಿಕ್ಷಕರು ಡಿಜಿಟಲ್ ವ್ಯವಸ್ಥೆಯಲ್ಲಿಯೇ ಮೌಲ್ಯಮಾಪನ ಮಾಡಿ, ಫಲಿತಾಂಶ ಘೋಷಿಸುತ್ತಾರೆ.

ಎಲ್ಲಾ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಯಾವ ರೀತಿ ಮುಂದುವರಿಯುತ್ತಿದ್ದಾರೆ ಎಂಬುದನ್ನು ವಿಶ್ಲೇಷಣೆ ಮಾಡಿ, ವರದಿಯನ್ನು ಶಿಕ್ಷಕರು ಸುಲಭವಾಗಿ ತಯಾರು ಮಾಡಿ, ಕಲಿಕೆಯಲ್ಲಿ ನಿಧಾನವಾಗಿರುವ ಮಕ್ಕಳ ಕಡೆ ವಿಶೇಷ ಗಮನ ನೀಡುತ್ತಾರೆ. ಟ್ಯಾಬ್‌ಗಳನ್ನು ಸೋಲಾರ್ ಬ್ಯಾಟರಿಗಳ ಮೂಲಕ ಚಾರ್ಜ್ ಮಾಡುವುದರಿಂದ ವಿದ್ಯುತ್ ಮೇಲೆ ಯಾವುದೇ ರೀತಿಯ ಅವಲಂಬನೆ ಇಲ್ಲ. ಈ ರೀತಿ ಶಾಲೆಯ ಸಂಪೂರ್ಣ ಡಿಜಿಟಲೀಕರಣವನ್ನು ಸರ್ಕಾರದಿಂದ ಒಂದು ರೂಪಾಯಿಯನ್ನೂ ಪಡೆಯದೆ ಸಂಪೂರ್ಣವಾಗಿ ಗ್ರಾಮಸ್ಥರು, ಪೋಷಕರು, ಕೊಡುಗೈ ದಾನಿಗಳ ನೆರವಿನಿಂದ ಮಾಡಿರುವುದು ವಿಶೇಷ ಸಂಗತಿ.

ಸಂದೀಪ್ ಗುಂಡ್ ಅವರ ಯಶಸ್ಸಿನ ಕಥನ ಕುತೂಹಲಕಾರಿಯಾಗಿದೆ. 2009ರಲ್ಲಿ ಕೆಲಸಕ್ಕೆ ಸೇರಿದಾಗ ಅವರು ಶಾಲೆಯ ಪರಿಸ್ಥಿತಿ ನೋಡಿ, ಬೇರೆ ಶಾಲೆಗೆ ಪೋಸ್ಟಿಂಗ್ ಮಾಡಿಕೊಡಲು ಇಲಾಖೆಯ ಅಧಿಕಾರಿಗಳಿಗೆ ಕೋರಿಕೆ ಸಲ್ಲಿಸಿದ್ದರು. ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸಿ, ಶಾಲೆಯನ್ನು ಅಭಿವೃದ್ಧಿ ಮಾಡು ಎಂಬ ಇಲಾಖಾ ಅಧಿಕಾರಿಗಳ ಸಲಹೆಗೆ ಕಿವಿಯಾದ ಗುಂಡ್, ಬದಲಾವಣೆಗೆ ಮನಸ್ಸು ಮಾಡುತ್ತಾರೆ. ವಿದ್ಯಾರ್ಥಿಗಳು ಪದೇ ಪದೇ ಗೈರುಹಾಜರಾಗುವುದು, ಕಲಿಕೆಯಲ್ಲಿ ನಿರಾಸಕ್ತಿ, ಮನೆಯಲ್ಲಿ ಟಿ.ವಿ., ಮೊಬೈಲ್‌ಗಳಲ್ಲಿ ಸಕ್ರಿಯರಾಗಿದ್ದುದನ್ನು ಅರಿತ ಅವರು, ಶಾಲೆಯಲ್ಲಿ ಮಾಡಬಹುದಾದ ಬದಲಾವಣೆಗಳನ್ನು ಪಟ್ಟಿ ಮಾಡಿ, ಗ್ರಾಮಸ್ಥರ ಸಭೆ ಕರೆಯುತ್ತಾರೆ.

ಶಾಲೆಯ ಕುರಿತಾದ ತಮ್ಮ ಕನಸನ್ನು ಸಭೆಯಲ್ಲಿ ಉತ್ಸಾಹದಿಂದ ವಿವರಿಸುವುದನ್ನು ಕಂಡ ಒಬ್ಬ ಮಹಿಳೆ, 'ನೀವು ಹೇಳಿದ ವಿಷಯ ನನಗೇನೂ ಅರ್ಥವಾಗಿಲ್ಲ. ಆದರೆ ನೀವೇನೋ ಮಾಡುವಿರಿ ಎಂಬ ನಂಬಿಕೆ ನನ್ನಲ್ಲಿ ಇದೆ' ಎನ್ನುತ್ತಾ ತನ್ನ ಬೆವರಿನ ದುಡಿಮೆಯ ₹ 1,000 ಕೊಡುತ್ತಾಳೆ. ಇನ್ನೊಬ್ಬ

ಗ್ರಾಮಸ್ಥ ₹ 50,000 ನೀಡುತ್ತಾರೆ. ಆ ಹಣವನ್ನು ಒಟ್ಟು ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಶಾಲೆಯ ಖಾತೆ ತೆರೆದು, ಸಹಾಯಕ್ಕೆ ವಿನಂತಿಸಿದ ಕರೆಗೆ ನೆರವಿನ ಮಹಾಪೂರವೇ ಹರಿದುಬರುತ್ತದೆ. ತಾನೂ ಕಲಿಯುತ್ತ, ಕಲಿಸುತ್ತ ಶಾಲೆಯನ್ನು ಹಂತ ಹಂತವಾಗಿ ಸಂಪೂರ್ಣ ಡಿಜಿಟಲೀಕರಣ ಮಾಡುತ್ತಾರೆ.

ಇವರ ಯಶಸ್ಸಿನ ಕತೆಯಿಂದ ಪ್ರೇರಿತವಾದ ರಾಜ್ಯ ಸರ್ಕಾರವು ವಿಶಿಷ್ಟವಾದ 'ಗುಂಡ್ ಮಾದರಿ'ಯನ್ನು ರಾಜ್ಯದ 11,000 ಶಾಲೆಗಳಲ್ಲಿ ಅಳವಡಿಸುತ್ತಿದೆ. ಉಳಿದ 50 ಸಾವಿರ ಶಾಲೆಗಳು ಬದಲಾವಣೆಯ ಹಾದಿಯಲ್ಲಿವೆ ಎನ್ನಲಾಗಿದೆ. ಅಸ್ಸಾಂ ಮತ್ತು ಗುಜರಾತ್ ರಾಜ್ಯಗಳ ಅಧಿಕಾರಿಗಳು ಮತ್ತು ಶಿಕ್ಷಕರು ಗುಂಡ್ ಅವರ ಪ್ರಯೋಗವನ್ನು ನೋಡಿ, ತಿಳಿಯಲು ಅವರ ಶಾಲೆಗೆ ಭೇಟಿ ನೀಡುತ್ತಾರೆ. ಗುಂಡ್ ಅವರು ರಾಜ್ಯದಾದ್ಯಂತ ಓಡಾಡಿ ಅನೇಕ ಶಿಕ್ಷಕರ ಸಭೆಗಳಲ್ಲಿ ಮಾತನಾಡಿ, ತಮ್ಮ ಪ್ರಯತ್ನದ ಕುರಿತು ವಿವರಣೆ ನೀಡಿ, ಇತರ ಶಾಲೆಗಳಲ್ಲಿಯೂ ಸಾಧನೆಯ ಕಿಡಿ ಹೊತ್ತಿಸಿದ್ದಾರೆ. ಈ ಮೂಲಕ ಎಲ್ಲರಿಗೂ ಪ್ರೇರಣೆಯಾಗಿದ್ದಾರೆ. ವ್ಯಕ್ತಿಯೊಳಗಿನ ಸಾಧನೆಯ ತುಡಿತ ಹೇಗೆ ಎಲ್ಲೆಡೆ ಹಬ್ಬಬಹುದು ಎಂಬುದಕ್ಕೆ ಗುಂಡ್ ಅವರ ಕಥನ ಒಂದೊಳ್ಳೆ ಉದಾಹರಣೆ.

ವಾಚಕರ ವಾಣಿ

ಭದ್ರತಾ ವೈಫಲ್ಯ ಆಘಾತಕಾರಿ

ಪ್ರಧಾನಿ ಭದ್ರತೆ ಎಂದರೆ ಒಂದು ಕೀಟವೂ ನುಸುಳಬಾರದು. ಪ್ರಧಾನಿಯವರ ಹುಬ್ಬಳ್ಳಿ ರ್‍ಯಾಲಿಯಲ್ಲಿ ಒಬ್ಬ ಸಾಮಾನ್ಯ ಹುಡುಗ ಖಾಕಿ ಭದ್ರಕೋಟೆ ಭೇದಿಸಿ ಹಾರ ಹಾಕಲು ಪ್ರಧಾನಿ ಬಳಿ ಬಂದ! ಇದು ಆಘಾತಕಾರಿ. ಹುಡುಗ ಯಾರು, ಏಕೆ ಬಂದ ಎಂಬ ಚರ್ಚೆ ಅನವಶ್ಯಕ ಮತ್ತು ಅಪ್ರಸ್ತುತ. ಹೇಗೆ ಬಂದ ಎಂಬ ಬಗ್ಗೆ ಭದ್ರತಾ ಅಧಿಕಾರಿಗಳು ಗಂಭೀರವಾಗಿ ಚರ್ಚೆ ನಡೆಸಬೇಕು. ಇಂತಹ ವೈಫಲ್ಯ ಮತ್ತೆಂದೂ ನುಸುಳದಂತೆ ನೋಡಿಕೊಳ್ಳುವುದು ಅತಿ ಮುಖ್ಯ.

ಸತ್ಯಬೋಧ, ಬೆಂಗಳೂರು

ಗಣ್ಯ- ನಗಣ್ಯ

ಚುನಾವಣೆಗೂ ಮೊದಲು
ನಾ ಗಣ್ಯ,
ಚುನಾವಣೆಯ ನಂತರ
ನಗಣ್ಯ!

ಡಾ. ವಸಂತ ಕುಮಾರ
ಯರಬಳ್ಳಿ, ಹಿರಿಯೂರು

ಎಲ್ಲ ಆರೋಪಿಗಳ ಪತ್ತೆಗೂ ಹರಕೆ ಹೊರಲಿ!

ಅತ್ಯಾಚಾರ ಆರೋಪದ ಮೇಲೆ ಸ್ಯಾಂಟ್ರೊ ರವಿಯನ್ನು ಬಂಧಿಸಲಾಗಿದ್ದು, ಈ ಸಂಬಂಧ ಎಡಿಜಿಪಿ ಅಲೋಕ್ ಕುಮಾರ್ ಅವರು ದೇವಾಲಯವೊಂದಕ್ಕೆ ತೆರಳಿ ಪೂಜೆ ಸಲ್ಲಿಸಿದ್ದಾರೆ. ರವಿಯ ಬಂಧನಕ್ಕಾಗಿ ತಾವು ಹೊತ್ತಿದ್ದ ಹರಕೆ ಫಲಪ್ರದವಾಗಿದ್ದಕ್ಕೆ ಈ ಪೂಜೆ ಎಂದು ಅವರು ಸ್ವತಃ ಕಾರಣ ನೀಡಿದ್ದಾರೆ! ಸ್ಯಾಂಟ್ರೊ ರವಿ ಹಲವು ಪೊಲೀಸ್ ಅಧಿಕಾರಿಗಳ ವರ್ಗಾವಣೆ ಮಾಡಿಸಿಕೊಟ್ಟಿದ್ದಾರೆ ಎಂಬುದು ಆತನದು ಎನ್ನಲಾದ ಆಡಿಯೊ ಕ್ಲಿಪಿಂಗ್‌ಗಳಿಂದ ತಿಳಿದುಬರುತ್ತದೆ. ಹೀಗಿದ್ದೂ ಆತನ ಬಂಧನ ಅಷ್ಟೊಂದು ಕ್ಲಿಷ್ಟಕರವಾಗಿತ್ತೇ ಎಂಬ ಅನುಮಾನ ಮೂಡದಿರದು.

ಇತರ ಅನೇಕ ಪ್ರಕರಣಗಳಲ್ಲಿ ಹಲವಾರು ದಿನಗಳು ಕಳೆದರೂ ಆರೋಪಿಗಳ ಬಂಧನ ಆಗಿರುವುದಿಲ್ಲ. ಇಂತಹ ಪ್ರಕರಣಗಳಲ್ಲೂ ಆರೋಪಿಗಳು ಬೇಗ ಪೊಲೀಸರಲ್ಲಿ ಶರಣಾಗಲೆಂದು ಅಥವಾ ಅವರ ಬಂಧನವಾಗಲೆಂದು ಪೊಲೀಸ್ ಅಧಿಕಾರಿಗಳು ದೇವರಿಗೆ ಹರಕೆ ಹೊರಲಿ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಅಸಹಾಯಕತೆ ಸಲ್ಲ, ನಿಷ್ಠುರತೆ ಮೈಗೂಡಲಿ

ಸ್ಯಾಂಟ್ರೊ ರವಿಯಂಥವರಿಂದ ಹಣ ತೆಗೆದುಕೊಳ್ಳುವ ಸಂದರ್ಭ ಬಂದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಗೃಹ ಸಚಿವರು ಹೇಳಿದ್ದಾಗಿ ವರದಿಯಾಗಿದೆ (ಪ್ರ.ವಾ., ಜ. 16). ಸಚಿವರು ಪ್ರಾಮಾಣಿಕರಿರಬಹುದು, ಇಲ್ಲವೆಂದಲ್ಲ. ಆದರೆ ಅವರ ಬಾಯಿಂದ ಇಂಥ ಅಸಹಾಯಕತೆಯ ಮಾತೇಕೆ? ಇಲಾಖೆಯ ಆಡಳಿತದಲ್ಲಿ ಬೇರೆ ಮೂಲಗಳಿಂದ ಹಸ್ತಕ್ಷೇಪವೇನಾದರೂ ಇದೆಯೇ? ಇಲ್ಲವೇ, ಪ್ರಥಮ ಬಾರಿಗೆ ಮಂತ್ರಿಯಾಗಿರುವ ಅವರಿಗೆ, ಇಲಾಖೆಯ ಅಧಿಕಾರಿಗಳು ನಿರೀಕ್ಷಿತ ಸಹಕಾರ ನೀಡದೆ, ಕೆಲ ವಿಷಯಗಳಲ್ಲಿ ಅವರನ್ನು ಕತ್ತಲಲ್ಲಿ ಇಟ್ಟಿರುವರೇ? ಅಥವಾ ಅವರನ್ನು ಸುತ್ತವರಿದಿರುವವರು ಅವರ ಅರಿವಿಗೇ ಬರದಂತೆ ದಿಕ್ಕುತಪ್ಪಿಸುತ್ತಿರುವರೇ? ಇಲ್ಲದಿದ್ದರೆ, ಅತ್ಯಾಚಾರದ ಆರೋಪ ಹೊತ್ತಿರುವ ವ್ಯಕ್ತಿಯೊಬ್ಬ ಗೃಹ ಇಲಾಖೆಯ ಆಡಳಿತದಲ್ಲಿ ಇಷ್ಟು ಸಲೀಸಾಗಿ ಕೈಯಾಡಿಸಬಲ್ಲಷ್ಟು ಮತ್ತು ತನ್ನ 'ದಂಧೆ'ಗೆ ಸರ್ಕಾರಿ ಅತಿಥಿಗೃಹವನ್ನೇ 'ಅಡ್ಡ'ವನ್ನಾಗಿಸಿಕೊಳ್ಳುವಷ್ಟು ಪ್ರಭಾವಿ ಹಾಗೂ ಸಶಕ್ತನಾಗಲು ಸಾಧ್ಯವಾದದ್ದಾದರೂ ಹೇಗೆ?

ಇಲಾಖೆಯಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು ಈ ಆರೋಪಗಳು ಎತ್ತಿ ತೋರಿಸುವುದಿಲ್ಲವೇ? ಒಂದು ವೇಳೆ ಇಲಾಖೆಯ ಗಮನಕ್ಕೇ ವಿಷಯ ಬಂದಿಲ್ಲವೆಂದರೆ, ಅದು ಸಂಬಂಧಿಸಿದವರ ಅಸಾಮರ್ಥ್ಯ ಮತ್ತು ಕರ್ತವ್ಯಲೋಪ ಎನಿಸುವುದಿಲ್ಲವೇ? ಆತನಿಂದ ಉಪಕೃತರಾಗಿರಬಹುದಾದ, ಆತನ ಉಪಕಾರ ಪಡೆಯಲು ಬಯಸಿರಬಹುದಾದ ಇಲಾಖೆಯಲ್ಲಿನ ಹೆಗ್ಗಣಗಳೇ ಆತನಿಗೆ ಸಹಕರಿಸಿರುವ ಸಾಧ್ಯತೆಯನ್ನು ಸುಲಭವಾಗಿ ಅಲ್ಲಗಳೆಯಲಾಗುವುದೇ? ಇಂತಹ ಗುರುತರ ಲೋಪಗಳ ಹೊಣೆಯನ್ನು ಯಾರು ಹೊರಬೇಕು? ತಮ್ಮ ಅಸಹಾಯಕತೆಯನ್ನು ಪ್ರದರ್ಶಿಸದೆ, ಪ್ರಾಮಾಣಿಕತೆಯ ಜೊತೆಗೆ ದಕ್ಷತೆ ಮತ್ತು ನಿಷ್ಠುರತೆಯನ್ನು ಸಹ ಮೈಗೂಡಿಸಿಕೊಂಡು, ಇಲಾಖೆಯನ್ನು ಸಮರ್ಥವಾಗಿ ಮುನ್ನಡೆಸುವ ಜವಾಬ್ದಾರಿ ಗೃಹ ಸಚಿವರ ಮೇಲಿದೆ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಸರಿಯಾದ ಸವಾಲು, ಆದರೆ...

ನ್ಯಾಯಾಂಗ ಮತ್ತು ಶಾಸಕಾಂಗ– ಸಂಸತ್ ನಡುವಣ ಅಧಿಕಾರ ವ್ಯಾಪ್ತಿ ಕುರಿತಂತೆ, ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರು ಇತ್ತೀಚೆಗೆ ಮಾಡಿರುವ ಆಕ್ರಮಣಕಾರಿ ವಾಗ್ಧೋರಣೆ ಸಂಬಂಧ ಪ್ರಧಾನಮಂತ್ರಿಯವರು ಸ್ಪಷ್ಟೀಕರಣ ನೀಡಲಿ ಎಂಬ ಸಂಪಾದಕೀಯದ ಸವಾಲು (ಪ್ರ.ವಾ., ಜ. 16) ಸಮಂಜಸವೇನೋ ಹೌದು. ಶಾಸನಸಭೆಗಳಲ್ಲಿ ಬಹುಮತವನ್ನು ಪ್ರಾಯೋಜಿಸಿ ವ್ಯಾವಹಾರಿಕಗೊಳಿಸುತ್ತಿರುವ ಈ ದಿನಗಳಲ್ಲಂತೂ ಸಕಾಲಿಕವೂ ಸರಿ. ಆದರೆ ಈ ಆಶಯ ಈಡೇರುವಂಥದ್ದೇ? ಸಂಸದೀಯ ಪ್ರಜಾಸತ್ತೆಯಲ್ಲಿ ಶಾಸಕಾಂಗವೇ ಸರ್ವೋಚ್ಚ ಎನ್ನುವ ಉಪರಾಷ್ಟ್ರಪತಿಯವರ ಧೋರಣೆ ತಪ್ಪಲ್ಲ. ಆದರದು ಆದರ್ಶಾತ್ಮಕ ಸನ್ನಿವೇಶದಲ್ಲಿ ಮಾತ್ರ ಆದರಣೀಯವಾದೀತು!

ಅಂತಹ ಸನ್ನಿವೇಶವೊಂದು ಎಂದಾದರೂ ಇರುತ್ತಿದ್ದಲ್ಲಿ, ಸ್ವತಂತ್ರ ನ್ಯಾಯಾಂಗದ ಆವಶ್ಯಕತೆಯಾದರೂ ಎಲ್ಲಿರುತ್ತಿತ್ತು? ಈಗಲಾದರೋ ಸ್ವತಂತ್ರ ನ್ಯಾಯಾಂಗವಿದೆ (ಹೌದೇ?!). ಹಾಗಿದ್ದಮೇಲೆ, ಸಾಂವಿಧಾನಿಕ ಮುಖ್ಯ ಕಾರ್ಯಕಾರಿಗಳಲ್ಲೊಬ್ಬರಾದ ಉಪರಾಷ್ಟ್ರಪತಿಯವರ ಹೇಳಿಕೆಯನ್ನು ಪರಿಗಣಿಸುವ ಅಥವಾ ಕೈಬಿಡುವ ನಿರೀಕ್ಷೆಯನ್ನು ಪ್ರಧಾನಿಯವರಲ್ಲೇಕೆ ಇಟ್ಟುಕೊಳ್ಳಬೇಕು?

ಆರ್.ಕೆ.ದಿವಾಕರ, ಬೆಂಗಳೂರು

ತ್ವರಿತ ಪರಿಹಾರವು ಬದುಕಿಗೆ ಸಂಜೀವಿನಿ

ಹವಾಮಾನ ವೈಪರೀತ್ಯ ಮತ್ತು ನೇಟೆ ರೋಗದ ಕಾರಣದಿಂದಾಗಿ, 'ತೊಗರಿ ಕಣಜ' ಕಲಬುರಗಿ ಭಾಗದಲ್ಲಿ ತೊಗರಿ ಬೆಳೆ ಹಾನಿಗೆ ಒಳಗಾಗಿದೆ. ಹೀಗಾಗಿ, ಈ ಬೆಳೆಗಾಗಿ ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ದೇಶಿ ಮಾರುಕಟ್ಟೆಯಲ್ಲಿ ತೊಗರಿಯ ಕೊರತೆ ನೀಗಲು ವಿದೇಶಗಳಿಂದ ತೊಗರಿ ಆಮದಿಗೆ ನಿರ್ಧರಿಸಿರುವ ಸರ್ಕಾರ, ಸ್ಥಳೀಯ ತೊಗರಿ ಬೆಳೆಗಾರರಿಗೆ ಪರಿಹಾರ ನೀಡುವುದರ ಕುರಿತಾಗಿಯೂ ಚಿಂತನೆ ನಡೆಸಬೇಕು. ಸರ್ಕಾರದ ಶೀಘ್ರ ಪರಿಹಾರ ಅದೆಷ್ಟೋ ರೈತರ ಬದುಕಿಗೆ ಸಂಜೀವಿನಿ ಆಗಲಿದೆ.

ನಿರ್ಮಲ ನಾಗೇಶ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾರ್ಪೊರೇಟ್ ಕಂಪನಿಗಳಿಗೆ ತೆರಿಗೆ ಕಡಿತ, ಭತ್ಯೆ: ಆಕ್ಸ್‌ಫಾಮ್ ಅಧ್ಯಯನ ವರದಿ

ಬಡವರಿಗೆ ಹೆಚ್ಚು ತೆರಿಗೆ

ಅಸಮಾನತೆ ಹೆಚ್ಚಳ

ಭಾರತದಲ್ಲಿ ಅಸಮಾನತೆ ಹೆಚ್ಚುತ್ತಲೇ ಇದೆ ಎಂಬುದನ್ನು ಸರ್ಕಾರ ಸಿದ್ಧಪಡಿಸಿದ ವರದಿಗಳೇ ಹೇಳಿವೆ. ಪರಿಣತರು ಕೂಡ ಅದನ್ನೇ ಹೇಳಿದ್ದಾರೆ. ಸಮಾಜದ ಶೋಷಿತ ವರ್ಗಗಳ ಮೇಲೆ ಈ ಅಸಮಾನತೆಯ ಪರಿಣಾಮ ಹೆಚ್ಚು. ವಿಶೇಷವಾಗಿ ಪರಿಶಿಷ್ಟ ಪಂಗಡಗಳ ಜನರು ಹೆಚ್ಚು ತೊಂದರೆಗೆ ಒಳಗಾಗಿದ್ದಾರೆ. ಬಡತನವನ್ನು ತೊಡೆದು ಶ್ರೀಮಂತಿಕೆಯತ್ತ ಸಾಗಲು ಇವರಿಗೆ ಸಾಧ್ಯವಾಗುತ್ತಿಲ್ಲ. ಜಾತಿ ವ್ಯವಸ್ಥೆಗೆ ಅನುಗುಣವಾಗಿಯೇ ಸಂಪತ್ತು ಕ್ರೋಡೀಕರಣವಾಗುತ್ತಿದೆ. ಚಾರಿತ್ರಿಕವಾಗಿ ಹಿಂದುಳಿದವರು ಹಿಂದೆಯೇ ಉಳಿಯುವಂತೆ ಆಗಿದೆ ಎಂದು ಆಕ್ಸ್‌ಫಾಮ್ ವರದಿಯು ಹೇಳಿದೆ.

- ಸಂಪತ್ತಿನ ಹಂಚಿಕೆಯ ಪಿರಮಿಡ್‌ನ ತಳಭಾಗದಲ್ಲಿರುವ ಶೇ 50ರಷ್ಟು ಮಂದಿ ಕೋವಿಡ್ ಸಾಂಕ್ರಾಮಿಕದ ಬಳಿಕ ಸಂಪತ್ತು ನಷ್ಟ ಮಾಡಿಕೊಂಡಿದ್ದಾರೆ. ದೇಶದಲ್ಲಿನ ಬಡವರ ಸಂಖ್ಯೆ 22.89 ಕೋಟಿ
- ದೇಶದ ಅತಿ ಶ್ರೀಮಂತ 100 ಜನರ ಸಂಪತ್ತಿನ ಮೌಲ್ಯವು ₹54.12 ಲಕ್ಷ ಕೋಟಿಯಷ್ಟಿದೆ
- ಅತಿ ಶ್ರೀಮಂತ 10 ಜನರ ಸಂಪತ್ತು ₹27.52 ಕೋಟಿಯಷ್ಟಿದೆ

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಬೆಳಗಾವಿಯ ಹಿಂಡಲಗಾ ಕಾರಾಗೃಹದಿಂದ ಕೈದಿಯೊಬ್ಬ ಕೇಂದ್ರ ಸಚಿವ ನಿತಿನ್ ಗಡ್ಕರಿಯ ಕಚೇರಿಗೆ ಬೆದರಿಕೆ ಕರೆ ಮಾಡಿರುವುದು, ಕಾರಾಗೃಹದಲ್ಲಿನ ಲೋಪವನ್ನು ಎತ್ತಿ ತೋರಿಸುತ್ತದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಪ್ರಜಾವಾಣಿ ವಾರ್ತೆ

‘ಪ್ರತಿಗಾಮಿ ತೆರಿಗೆ ಪದ್ಧತಿ’

ದೇಶದಲ್ಲಿ ಈಗ ಇರುವ ತೆರಿಗೆ ಪದ್ಧತಿಯು ಪ್ರತಿಗಾಮಿ ಸ್ವರೂಪದ್ದು ಎಂದು ಆಕ್ಸ್‌ಫಾಮ್ ಆರೋಪಿಸಿದೆ. ‘ಭಾರತದಲ್ಲಿ ಕಳೆದ ಹಲವು ವರ್ಷಗಳಿಂದ ಕಾರ್ಪೊರೇಟ್ ತೆರಿಗೆಯನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಜತೆಗೆ ಕಾರ್ಪೊರೇಟ್ ಕಂಪನಿಗಳಿಗೆ ಹಲವು ಭತ್ಯೆ ಮತ್ತು ವಿನಾಯಿತಿಗಳನ್ನು ಘೋಷಿಸಲಾಗಿದೆ. 2020–21ನೇ ಆರ್ಥಿಕ ವರ್ಷದಲ್ಲಿ ತೆರಿಗೆ ಕಡಿತ ಮತ್ತು ಭತ್ಯೆಗಳ ಕಾರಣ ಸರ್ಕಾರದ ಬೊಕ್ಕಸಕ್ಕೆ ₹1.03 ಲಕ್ಷ ಕೋಟಿ ಖೋತಾ ಆಗಿದೆ. ನಷ್ಟವಾದ ಈ ಆದಾಯವನ್ನು ತುಂಬಿಸಿಕೊಳ್ಳಲು ಕೇಂದ್ರ ಸರ್ಕಾರವು ಜಿಎಸ್‌ಟಿ ಮತ್ತು ಇಂಧನಗಳ ಮೇಲಿನ ಮೌಲ್ಯವರ್ಧಿತ ತೆರಿಗೆಗಳ ದರವನ್ನು ಏರಿಕೆ ಮಾಡಿದೆ’ ಎಂದು ಆಕ್ಸ್‌ಫಾಮ್ ವಿಶ್ಲೇಷಿಸಿದೆ.

ಇಂತಹ ಆರೋಪಗಳನ್ನು ಸರ್ಕಾರ ನಿರಾಕರಿಸುತ್ತಲೇ ಬಂದಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗಷ್ಟೇ, ‘ನಾನೂ ಮಧ್ಯಮ ವರ್ಗದಿಂದ ಬಂದವಳು, ಈ ವರ್ಗದ ಕಷ್ಟಗಳನ್ನು ಅರ್ಥಮಾಡಿಕೊಳ್ಳಬಲ್ಲೆ. ಹೀಗಾಗಿಯೇ ಈ ವರ್ಗದ ಮೇಲೆ ನಮ್ಮ ಸರ್ಕಾರವು ಹೊಸ ತೆರಿಗೆಗಳನ್ನು ಹೇರಿಲ್ಲ’ ಎಂದು ಹೇಳಿದ್ದರು. ಆದಾಯ ತೆರಿಗೆಯನ್ನು ಮಾತ್ರ ಗುರಿಯಾಗಿಸಿಕೊಂಡು ಅವರು ಈ ಮಾತು ಹೇಳಿದ್ದರು. ಆದರೆ, ‘ಪರೋಕ್ಷ ತೆರಿಗೆಗಳು ಏರಿಕೆ ಗತಿಯಲ್ಲೇ ಇವೆ’ ಎಂದು ಆಕ್ಸ್‌ಫಾಮ್ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ.

‘ಕಾರ್ಪೊರೇಟ್ ತೆರಿಗೆ ಕಡಿತದ ಪರಿಣಾಮವಾಗಿ, 2020–21ನೇ ಸಾಲಿನಲ್ಲಿ ಸಂಗ್ರಹವಾದ ಕಾರ್ಪೊರೇಟ್ ತೆರಿಗೆಯ ಒಟ್ಟು ಮೊತ್ತದಲ್ಲಿ ಶೇ 8ರಷ್ಟು ಇಳಿಕೆಯಾಗಿದೆ. ಅದೇ ವರ್ಷ ಸಂಗ್ರಹವಾದ ನೇರ ತೆರಿಗೆಯ ಒಟ್ಟು ಮೊತ್ತದಲ್ಲಿ ಶೇ 5ರಷ್ಟು ಇಳಿಕೆಯಾಗಿದೆ. ಆ ವರ್ಷದ ಬಜೆಟ್‌ನ ಒಟ್ಟು ಮೊತ್ತದಲ್ಲಿ ಖೋತಾ ಆದ ತೆರಿಗೆ ಆದಾಯದ ಪ್ರಮಾಣ ಶೇ 2.8ರಷ್ಟು. ಆದರೆ, ಕಾರ್ಪೊರೇಟ್ ತೆರಿಗೆ ಹೆಚ್ಚಿಸುವ ಬಗ್ಗೆ ಸರ್ಕಾರ ಆಸಕ್ತಿ ತೋರುತ್ತಿಲ್ಲ. ಬದಲಿಗೆ ಪರೋಕ್ಷ ತೆರಿಗೆಯನ್ನು ಹೆಚ್ಚಿಸುವ ಮೂಲಕ ತನ್ನ ಆದಾಯವನ್ನು ಭದ್ರಪಡಿಸಿಕೊಳ್ಳುವತ್ತ ಗಮನ ಕೇಂದ್ರೀಕರಿಸಿದೆ’ ಎಂದು ಆಕ್ಸ್‌ಫಾಮ್ ತನ್ನ ವರದಿಯಲ್ಲಿ ವಿಶ್ಲೇಷಿಸಿದೆ.

ಕಾರ್ಪೊರೇಟ್ ತೆರಿಗೆ ಕಡಿತದಿಂದ ದೇಶದಲ್ಲಿ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿ ಹೆಚ್ಚಾಗುತ್ತದೆ. ತೆರಿಗೆಯನ್ನು ವಿಧಿಸಿದರೆ ಅದರಿಂದ ಆರ್ಥಿಕತೆಗೆ ಧಕ್ಕೆಯಾಗುತ್ತದೆ ಎಂಬ ವಾದವನ್ನು ಮುಂದಿಟ್ಟು, ತೆರಿಗೆ ಕಡಿತ ಮಾಡಲಾಗುತ್ತಿದೆ. ಕಾರ್ಪೊರೇಟ್ ತೆರಿಗೆ ಹೇರದೇ ಇರುವುದಕ್ಕೂ ಇದೇ ವಾದವನ್ನು ಮುಂದಿರಿಸಲಾಗುತ್ತಿದೆ. ಆದರೆ, ಇದೇ ಸಂದರ್ಭದಲ್ಲಿ ಬಡವರು ಮತ್ತು ಕೆಳ ಮಧ್ಯಮ ವರ್ಗದವರು ನಿತ್ಯಬಳಕೆಯ ವಸ್ತು ಮತ್ತು ಪದಾರ್ಥಗಳ ಮೇಲೆ ಹೆಚ್ಚಿನ ದರದ ಜಿಎಸ್‌ಟಿ ತೆರಬೇಕಾಗಿದೆ. ತಮ್ಮ ದುಡಿಮೆಯ ಹೆಚ್ಚಿನ ಭಾಗವನ್ನು ಈ ರೀತಿ ತೆರಿಗೆ ಪಾವತಿಸಲೇ ಈ ವರ್ಗವು ಬಳಸುತ್ತಿದೆ. ಇದರಿಂದ ಈ ಜನರ ವೆಚ್ಚದ ಸಾಮರ್ಥ್ಯ ಇಳಿಕೆಯಾಗಿದೆ. ಪರಿಣಾಮವಾಗಿ ಆರ್ಥಿಕ ಚಟುವಟಿಕೆಗಳಲ್ಲಿ ನಿರೀಕ್ಷಿತ ಪ್ರಗತಿ ಸಾಧ್ಯವಾಗಿಲ್ಲ. ಈ ತೆರಿಗೆ ಪದ್ಧತಿಯು ದೇಶದ ಆರ್ಥಿಕತೆಗೆ ಪ್ರತಿಕೂಲವಾಗಿ ಪರಿಣಮಿಸಿದೆ’ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.



ಸಂಪತ್ತಿನ ಅಸಮಾನ ಹಂಚಿಕೆ

ದೇಶದ ಒಟ್ಟು ಜನಸಂಖ್ಯೆಯ ಶೇ 1ರಷ್ಟಿರುವ ಅತಿಶ್ರೀಮಂತರ ಬಳಿ ದೇಶದ ಒಟ್ಟು ಸಂಪತ್ತಿನ ಶೇ 40ರಷ್ಟು ಸಂಪತ್ತು ಇದೆ. ಆದರೆ, 70 ಕೋಟಿಗೂ ಹೆಚ್ಚು ಜನರಿರುವ ಬಡವ ಮತ್ತು ಕೆಳಮಧ್ಯಮ ವರ್ಗದ ಬಳಿ ಇರುವ ಸಂಪತ್ತು, ದೇಶದ ಒಟ್ಟು ಸಂಪತ್ತಿನ ಶೇ 3ರಷ್ಟಾಗುತ್ತದೆ. ಈಚಿನ ವರ್ಷಗಳಲ್ಲಿ ಈ ಅಂತರ ಹೆಚ್ಚಾಗುತ್ತಲೇ ಬಂದಿದೆ. ದೇಶದ ಒಟ್ಟು ಜನಸಂಖ್ಯೆಯ ಶೇ 50ರಷ್ಟಿರುವ ಬಡವರು ಮತ್ತು ಕೆಳಮಧ್ಯಮ ವರ್ಗದ ಜನರ ವಾರ್ಷಿಕ ಆದಾಯವು 2020–21ರಲ್ಲಿ, ದೇಶದ ಒಟ್ಟು ಆದಾಯದ ಶೇ 13ರಷ್ಟಕ್ಕೆ ಕುಸಿದಿತ್ತು. 2019–20ರಲ್ಲಿ ಈ ಪ್ರಮಾಣವು ಶೇ 16ರಷ್ಟಿತ್ತು. ಅದಕ್ಕೂ ಹಿಂದಿನ ವರ್ಷಗಳಲ್ಲಿ ಈ ಪ್ರಮಾಣವು ಹೆಚ್ಚೇ ಇತ್ತು. ಅತಿಶ್ರೀಮಂತರ ಪರವಾದ ತೆರಿಗೆ ನೀತಿಯ ಪರಿಣಾಮವಾಗಿ ಈ ಜನರ ಆದಾಯ ಇಳಿಕೆಯಾಗುತ್ತಲೇ ಇದೆ. ಪರಿಣಾಮವಾಗಿ ದೇಶದ ಒಟ್ಟು ಸಂಪತ್ತಿನಲ್ಲಿ ಈ ಜನರ ಸಂಪತ್ತಿನ ಪಾಲು ಕುಸಿಯುತ್ತಿದೆ. ಇದೇ ಸಂದರ್ಭದಲ್ಲಿ ಅತಿಶ್ರೀಮಂತರ ಪಾಲು ಏರಿಕೆಯಾಗುತ್ತಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಜಿಎಸ್‌ಟಿ ಹೊರೆ ಬಡವರ ಮೇಲೆ

ದೇಶದಲ್ಲಿ ಜಿಎಸ್‌ಟಿ ಸ್ವರೂಪದ ಪರೋಕ್ಷ ತೆರಿಗೆಯಿಂದ ಸಂಗ್ರಹವಾಗುವ ಆದಾಯ ಹೆಚ್ಚು. 2021–22ನೇ ಆರ್ಥಿಕ ವರ್ಷದಲ್ಲಿ ಜಿಎಸ್‌ಟಿಯಿಂದ ಒಟ್ಟು ₹ 14.83 ಲಕ್ಷ ಕೋಟಿಯಷ್ಟು ತೆರಿಗೆ ಸಂಗ್ರಹವಾಗಿದೆ. ಆದರೆ, ಇದರಲ್ಲಿ ಹೆಚ್ಚು ತೆರಿಗೆ ಪಾವತಿಸಿರುವುದು ಸಂಪತ್ತಿನ ಹಂಚಿಕೆ ಪಿರಮಿಡ್‌ನಲ್ಲಿ ತಳದಲ್ಲಿರುವ ಶೇ 50ರಷ್ಟು ಮಂದಿ. ಕಡಿಮೆ ಸಂಪತ್ತು ಹೊಂದಿರುವ ಮತ್ತು ಕಡಿಮೆ ಆದಾಯ ಹೊಂದಿರುವ ಜನವರ್ಗವು ತನ್ನ ಗಳಿಕೆಯ ದೊಡ್ಡ ಭಾಗವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸುತ್ತಿದೆ.

ಆದರೆ ದೇಶದ ಶೇ 10ರಷ್ಟಿರುವ ಅತಿಶ್ರೀಮಂತರು ಜಿಎಸ್‌ಟಿ ರೂಪದಲ್ಲಿ ಪಾವತಿಸಿದ ತೆರಿಗೆ ಪ್ರಮಾಣ ಶೇ 3ರಷ್ಟು ಮಾತ್ರ. ಈ ವರ್ಗವು ಕಡಿಮೆ ಪ್ರಮಾಣದ ತೆರಿಗೆ ಪಾವತಿಸುತ್ತಿರುವ ಕಾರಣ, ಅವರ ಸಂಪತ್ತು ಏರಿಕೆಯಾಗುತ್ತಲೇ ಇದೆ. ಬಡವರು ಹೆಚ್ಚು ತೆರಿಗೆ ಪಾವತಿ ಮಾಡುತ್ತಿರುವ ಕಾರಣ, ಅವರ ಸಂಪತ್ತು ಏರಿಕೆಯಾಗುತ್ತಿಲ್ಲ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಸಿರಿವಂತಿಕೆ ಏರಿಕೆ ಬಗೆ

ಭಾರತದಲ್ಲಿ ಸಿರಿವಂತರ ಸಂಖ್ಯೆ ಜಾಸ್ತಿಯಾಗುತ್ತಿದೆ. ಸಿರಿವಂತರೇ ಮತ್ತೆ ಸಿರಿವಂತರಾಗುತ್ತಿದ್ದಾರೆ ಹಾಗೂ ಸಿರಿವಂತರ ಬಳಗಕ್ಕೆ ಇನ್ನಷ್ಟು ಜನ ಸೇರ್ಪಡೆಯಾಗುತ್ತಿದ್ದಾರೆ. 2020ರಲ್ಲಿ 102 ಜನರು 100 ಕೋಟಿ ಡಾಲರ್‌ಗಿಂತಲೂ (₹8,200 ಕೋಟಿ) ಅಧಿಕ ಸಂಪತ್ತು ಹೊಂದಿದ್ದರು. ಇವರ ಸಂಖ್ಯೆ ಕೇವಲ 2 ವರ್ಷಗಳಲ್ಲಿ 162ಕ್ಕೆ ಏರಿಕೆಯಾಗಿದೆ. 60 ಹೊಸ ಶ್ರೀಮಂತರು ಎರಡು ವರ್ಷಗಳ ಅವಧಿಯಲ್ಲಿ ಈ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಕೋವಿಡ್ ನಂತರದ ವರ್ಷಗಳಲ್ಲಿ ಆಗಿರುವ ಈ ಬೆಳವಣಿಗೆಯ ಮೇಲೆ ಆಕ್ಸ್‌ಫಾಮ್ ವರದಿ ಬೆಳಕು ಚೆಲ್ಲಿದೆ.

ಭಾರತದ ಅಗ್ರ 100 ಕೋಟ್ಯಧೀಶರ ಒಟ್ಟು ಸಂಪತ್ತಿನ ಮೌಲ್ಯ ₹54.12 ಲಕ್ಷ ಕೋಟಿಗೆ ತಲುಪಿದೆ. 100 ಶ್ರೀಮಂತರ ಪಟ್ಟಿಯಲ್ಲಿ ಮೊದಲ ಹತ್ತು ಸ್ಥಾನದಲ್ಲಿರುವ ಶ್ರೀಮಂತರ ಒಟ್ಟು ಆಸ್ತಿ ಮೌಲ್ಯವೇ ₹27.52 ಲಕ್ಷ ಕೋಟಿಯಷ್ಟಿದೆ. 2021ಕ್ಕೆ ಹೋಲಿಸಿದರೆ, ಒಂದು ವರ್ಷದ ಅವಧಿಯಲ್ಲಿ ಈ ಸಂಪತ್ತಿನ ಮೌಲ್ಯ ಶೇ 32.8ರಷ್ಟು ಜಿಗಿದಿದೆ ಎಂದು ವರದಿ ಹೇಳಿದೆ.

ದೇಶದಲ್ಲಿ ಕೋವಿಡ್ ಸಾಂಕ್ರಾಮಿಕ ಬಾಧಿಸಿದ್ದ ಅವಧಿಯಲ್ಲಿ ಜನಸಾಮಾನ್ಯರು ಚಿಕಿತ್ಸೆ, ಔಷಧಿ ಹಾಗೂ ಹೊತ್ತಿನ ಊಟಕ್ಕೂ ಪರದಾಡಿದ್ದರು. ಇದಕ್ಕೆ ವ್ಯತಿರಿಕ್ತವೆಂಬಂತೆ, ಶ್ರೀಮಂತರ ಆಸ್ತಿ ಬೆಟ್ಟದಂತೆ ಬೆಳೆಯುತ್ತಲೇ ಇತ್ತು. ದೇಶದ ಶ್ರೀಮಂತ ಉದ್ಯಮಿಗಳಲ್ಲಿ ಮೊದಲ ಸ್ಥಾನದಲ್ಲಿರುವ, ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಅವರ ಆಸ್ತಿಯ ಪ್ರಮಾಣವು ಕೋವಿಡ್ ಅವಧಿಯಲ್ಲಿ ಎಂಟು ಪಟ್ಟು ಹೆಚ್ಚಳವಾಗಿದೆ. ಒಂದೇ ವರ್ಷದ ಅವಧಿಯಲ್ಲಿ ಇವರ ಆಸ್ತಿ ಮೌಲ್ಯವು ಮತ್ತೆ ಒಂದು ಪಟ್ಟು ಜಿಗಿಯಿತು. 2022ರ ಅಕ್ಟೋಬರ್ ವೇಳೆಗೆ ಅದು ₹10.96 ಲಕ್ಷ ಕೋಟಿ ತಲುಪಿತು. ಅದುವರೆಗೂ ಶ್ರೀಮಂತರಲ್ಲಿ ಮೊದಲಿಗರಾಗಿದ್ದ ಮುಕೇಶ್ ಅಂಬಾನಿ ಸ್ಥಾನವನ್ನು ಅದಾನಿ ಗಿಟ್ಟಿಸಿಕೊಂಡರು.

ಕೋವಿಡ್ ತಡೆ ಲಸಿಕೆಗಳನ್ನು ಪೂರೈಸಿದ್ದ ಪುಣೆಯ ಸೀರಂ ಇನ್‌ಸ್ಟಿಟ್ಯೂಟ್‌ನ ಮುಖ್ಯಸ್ಥ ಸೈರಸ್ ಪೂನಾವಾಲಾ ಅವರ ಆಸ್ತಿ ಮೌಲ್ಯವು 2021ರಿಂದ 2022ರ ನಡುವೆ ಶೇ 91ರಷ್ಟು ಏರಿಕೆ ಕಂಡಿದೆ ಎಂಬುದು ಗಮನಾರ್ಹ. ಕೋಟ್ಯಧೀಶರಾದ ಶಿವ ನಾಡಾರ್, ರಾಧಾಕೃಷ್ಣ ದಮಾನಿ, ಕುಮಾರ ಮಂಗಲಂ ಬಿರ್ಲಾ ಅವರು ಆಸ್ತಿಗೆ ಶೇ 20ರಷ್ಟು ಸಂಪತ್ತು ಹರಿದುಬಂದಿದೆ.

ಕೋಟ್ಯಧೀಶರನ್ನು ಸೃಷ್ಟಿಸಿದ ಕೋವಿಡ್!: ಕೋವಿಡ್–19 ಸಾಂಕ್ರಾಮಿಕ ಶುರುವಾದ ಬಳಿಕ ಆರೋಗ್ಯ ಮತ್ತು ಔಷಧ ಕ್ಷೇತ್ರಕ್ಕೆ ಭಾರಿ ಮಹತ್ವ ಬಂದಿತು. ಈ ವಲಯದಲ್ಲಿ ಭಾರಿ ಲಾಭವಿದೆ ಎಂಬ ಕಾರಣಕ್ಕೆ ಸಾಕಷ್ಟು ಹೂಡಿಕೆಯೂ ಆಗಿದೆ. ಈ ವಲಯದಲ್ಲಿ ತೊಡಗಿಸಿಕೊಂಡಿದ್ದ ಉದ್ಯಮಿಗಳು ನಿರೀಕ್ಷೆಯಂತೆ ಕೋಟ್ಯಧೀಶರಾಗಿ ಬದಲಾಗಿದ್ದಾರೆ. 166 ಭಾರತೀಯ ಕೋಟ್ಯಧೀಶರ ಪೈಕಿ ಶೇ 19ರಷ್ಟು ಕೋಟ್ಯಧೀಶರು ಆರೋಗ್ಯ ಮತ್ತು ಔಷಧ ವಲಯದಲ್ಲೇ ಇರುವುದು, ಈ ಕ್ಷೇತ್ರಕ್ಕೆ ಹಣದ ಹೊಳೆ ಹರಿದಿರುವುದನ್ನು ಸೂಚಿಸುತ್ತದೆ. 2021ರಲ್ಲಿ ಒಂದೇ ವರ್ಷದಲ್ಲಿ 7 ಮಂದಿ ಹೊಸ ಕೋಟ್ಯಧೀಶರು ಆರೋಗ್ಯ ಮತ್ತು ಔಷಧ ಕ್ಷೇತ್ರದಿಂದ ಹೊರಹೊಮ್ಮಿದ್ದಾರೆ. ಈ ಏಳು ಜನರ ಒಟ್ಟಾರೆ ಸಂಪತ್ತಿನ ಮೌಲ್ಯ ₹4.3 ಲಕ್ಷ ಕೋಟಿ ಎಂದು ಆಕ್ಸ್‌ಫಾಮ್ ವರದಿ ತಿಳಿಸಿದೆ. 2004–2019ರ ಅವಧಿಯಲ್ಲಿ ದೇಶದ ಆರ್ಥಿಕ ಪ್ರಗತಿಯು ಶೇ 5.2ರಿಂದ ಶೇ 8.5ರ ನಡುವೆ ಇತ್ತು. ಈಗಾಗಲೇ ಅಧಿಕ ಶ್ರೀಮಂತರಾಗಿ ಅಗ್ರ ಸ್ಥಾನದಲ್ಲಿರುವ ಗಣ್ಯರ ನಡುವೆಯೇ ಈ ಪ್ರಗತಿಯ ಲಾಭವು ಹಂಚಿಕೆಯಾಗಿದೆ. ಕೋವಿಡ್‌ನಿಂದಾಗಿ ಹೇರಲಾದ ಲಾಕ್‌ಡೌನ್‌ನಿಂದ ಅಗ್ರ ಶ್ರೀಮಂತರ ಗಳಿಕೆಯಲ್ಲಿ ಒಂದಿಷ್ಟು ಇಳಿಕೆಯಾಗಿದ್ದರೂ, ಸಂಪತ್ತಿನ ಸ್ಥಾನ ಭದ್ರವಾಗಿತ್ತು. ಸರ್ಕಾರದ ಹಲವು ನೀತಿಗಳು ಈ ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿಸಿವೆ.

ಆರೋಗ್ಯ, ತಯಾರಿಕೆ ವಲಯದಲ್ಲಿ ಹೆಚ್ಚು ಕೋಟ್ಯಧೀಶರು: ಶ್ರೀಮಂತರು ಹೆಚ್ಚಾಗಿ ಕಂಡುಬರುವ ಎರಡು ಮಹತ್ವದ ವಲಯಗಳನ್ನು ಆಕ್ಸ್‌ಫಾಮ್ ಗುರುತಿಸಿದೆ. ಆರೋಗ್ಯ ಹಾಗೂ ತಯಾರಿಕಾ ವಲಯದಲ್ಲೇ ಹೆಚ್ಚು ಶ್ರೀಮಂತರು ಕೇಂದ್ರೀಕೃತವಾಗಿದ್ದಾರೆ. ಸೈರಸ್ ಪೂನಾವಾಲಾ, ದಿಲೀಪ್ ಸಂಘವಿ, ಮುರಳಿ ದಿವಿ ಸೇರಿದಂತೆ 32 ಕೋಟ್ಯಧೀಶರು ಆರೋಗ್ಯ ವಲಯದಲ್ಲಿದ್ದಾರೆ. 31 ಕೋಟ್ಯಧೀಶರು ತಯಾರಿಕೆ ವಲಯದಲ್ಲಿದ್ದಾರೆ.

ಅಶ್ವಿನಿ ದನಿ, ಬೇನು ಗೋಪಾಲ್, ಮಹೇಂದ್ರ ಚೋಕ್ಸಿ ಅವರು ಈ ವಲಯದಲ್ಲಿ ಮೊದಲ ಮೂರು ಸ್ಥಾನಗಳಲ್ಲಿದ್ದಾರೆ. 16 ಮಂದಿ ತಂತ್ರಜ್ಞಾನ, 15 ಮಂದಿ ಫ್ಯಾಷನ್ ಮತ್ತು ರಿಟೇಲ್ ವಲಯ ಹಾಗೂ ಬಹು ವಲಯದ ಉದ್ಯಮಗಳಲ್ಲಿ 16 ಕೋಟ್ಯಧೀಶರು ಗುರುತಿಸಿಕೊಂಡಿದ್ದಾರೆ. ಮುಕೇಶ್ ಅಂಬಾನಿ, ಗೌತಮ್ ಅದಾನಿ, ಕುಮಾರ ಮಂಗಲಂ ಬಿರ್ಲಾ, ಬಜಾಜ್ ಸಹೋದರರು ವೈವಿಧ್ಯಮಯ ಉದ್ಯಮಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ವಿವಿಧ ವಲಯಗಳಲ್ಲಿ ಕೋಟ್ಯಧೀಶರ ಸಂಖ್ಯೆ

ಹುಲಿ ಸಂತತಿ ನಿಯಂತ್ರಣ ಕೇರಳದಲ್ಲಿ ಜಟಾಪಟಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಹುಲಿಗಳೂ ಸೇರಿದಂತೆ ಹಲವು ವನ್ಯಜೀವಿಗಳ ಸಂತತಿಗೆ ಕಡಿವಾಣ ಹಾಕಲು ಮುಂದಾಗಿರುವ ಕೇರಳ ಸರ್ಕಾರದ ನಡೆಗೆ ಪರಿಸರವಾದಿಗಳಿಂದ ವ್ಯಾಪಕ ಟೀಕೆ ವ್ಯಕ್ತವಾಗಿದೆ. ವನ್ಯಜೀವಿಗಳ ಸಂಖ್ಯೆಯನ್ನು ನಿಯಂತ್ರಿಸುವ ಮೂಲಕ, ಹೆಚ್ಚುತ್ತಿರುವ ಮಾನವ–ಪ್ರಾಣಿ ಸಂಘರ್ಷದ ಘಟನೆಗಳನ್ನು ಕಡಿಮೆ ಮಾಡುವುದು ಸರ್ಕಾರದ ಉದ್ದೇಶವಾಗಿದೆ.

ವಯನಾಡ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಒಂದಾದ ಮೇಲೊಂದು ಹುಲಿ ದಾಳಿ ಘಟನೆಗಳು ವರದಿಯಾಗಿವೆ. ಹುಲಿ ಸಂತತಿಯನ್ನು ನಿಯಂತ್ರಿಸುವ ವಿಚಾರವನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತರಲಿದ್ದೇವೆ ಎಂದು ರಾಜ್ಯದ ಅರಣ್ಯ ಎ.ಕೆ. ಶಶೀಧರನ್ ಅವರು ಇತ್ತೀಚೆಗೆ ಹೇಳಿಕೆ ನೀಡಿದ್ದರು. ಆದರೆ, ವಯನಾಡ್ ಅಥವಾ ಇತರೆ ಅರಣ್ಯದಲ್ಲಿ ಹುಲಿಗಳು ಅಥವಾ ಇತರೆ ವನ್ಯಜೀವಿಗಳ ಸಂಖ್ಯೆ ವಿಪರೀತ ಹೆಚ್ಚಳವಾಗಿರುವ ಬಗ್ಗೆ ಯಾವುದೇ ವೈಜ್ಞಾನಿಕ ಅಧ್ಯಯನಗಳು ನಡೆದಿಲ್ಲ ಎಂದು ಪರಿಸರವಾದಿಗಳು ಹೇಳಿದ್ದಾರೆ.

ಹುಲಿ ಸಂರಕ್ಷಣೆ ಬಗ್ಗೆ ನಡೆಸಿದ್ದ ವ್ಯಾಪಕ ಅಭಿಯಾನದಿಂದಾಗಿ ರಾಜ್ಯದಲ್ಲಿ ಹುಲಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. 2006ರಲ್ಲಿ 46 ಹುಲಿಗಳು ರಾಜ್ಯದಲ್ಲಿದ್ದವು. 2018ರಲ್ಲಿ ಇವುಗಳ ಸಂಖ್ಯೆ 190ಕ್ಕೆ ಏರಿಕೆಯಾಗಿದೆ. 344 ಚದರ ಕಿಲೋಮೀಟರ್ ವ್ಯಾಪ್ತಿಯ ವಯನಾಡ್ ಅಭಯಾರಣ್ಯದಲ್ಲಿ 120 ಹುಲಿಗಳಿವೆ.

ರಾಜ್ಯದ ಅರಣ್ಯಾಧಿಕಾರಿಗಳ ಪ್ರಕಾರ, ವಯನಾಡ್‌ನಲ್ಲಿ ಹುಲಿಗಳ ಸಂತತಿ ವ್ಯಾಪಕವಾಗಿ ಹೆಚ್ಚಳ ಆಗಿಲ್ಲದಿದ್ದರೂ, ಸ್ಥಳಾಂತರ ಅಥವಾ ಕೊಲ್ಲುವ ಮೂಲಕ ಅವುಗಳ ಸಂಖ್ಯೆ ನಿಯಂತ್ರಿಸಲು ಸರ್ಕಾರ ಮುಂದಾಗಿದೆ. ಹುಲಿಗಳ ಸಂಖ್ಯೆ ನಿಯಂತ್ರಿಸುವ ಕ್ರಮಗಳ ಬಗ್ಗೆ ಚರ್ಚಿಸಲು ಸೋಮವಾರ ಅರಣ್ಯಾಧಿಕಾರಿಗಳ ಸಭೆ ನಡೆಸಲಾಗಿದೆ.

ನೈಜ ಕಾರಣಗಳನ್ನು ಮುಚ್ಚಿಹಾಕಲು, ಮಾನವ–ಪ್ರಾಣಿ ಸಂಘರ್ಷವನ್ನು ಮುಂದಿಟ್ಟುಕೊಂಡು ಹುಲಿ ಸಂತತಿ ನಿಯಂತ್ರಿಸುವ ಕ್ರಮಕ್ಕೆ ಸರ್ಕಾರ ಮುಂದಾಗಿದೆ ಎಂದು ಪರಿಸರವಾದಿಗಳಾದ ಎಂ.ಎನ್. ಜಯಚಂದ್ರನ್ ಹಾಗೂ ಎನ್.ಬಾದುಶಾ ಅವರು ಆರೋಪಿಸಿದ್ದಾರೆ.

‘ವಯನಾಡ್ ಅಭಯಾರಣ್ಯವು ಬಂಡೀಪುರ, ಮಧುಮಲೈ, ನಾಗರಹೊಳೆ, ಕಾವೇರಿ ಅಭಯಾರಣ್ಯಗಳು ಹಾಗೂ ಹುಲಿ ಸಂರಕ್ಷಿತ ಅರಣ್ಯಗಳನ್ನು ಸಂಪರ್ಕಿಸುತ್ತದೆ. ಹುಲಿಗಳು ಹಾಗೂ ಇತರೆ ವನ್ಯಜೀವಿಗಳು ಈ ಎಲ್ಲ ಪ್ರದೇಶಗಳಲ್ಲಿ ಸುತ್ತಾಡುತ್ತವೆ. ಹೀಗಿರುವಾಗ, ವಯನಾಡ್ ಅಭಯಾರಣ್ಯವು ಹುಲಿಗಳಿಂದ ತುಂಬಿಹೋಗಿದೆ ಎಂದು ವಾದಿಸುವುದು ಅತಾರ್ಕಿಕ. ಕೇರಳದಲ್ಲಿ ಹುಲಿಗಳ ಸಂತತಿಯನ್ನು ನಿಯಂತ್ರಿಸುವ ಕ್ರಮಗಳನ್ನು ಜಾರಿಗೊಳಿಸುವುದರ ವಿರುದ್ಧ ನಾವು ಕಾನೂನಾತ್ಮಕ ಹೋರಾಟ ಮಾಡುತ್ತೇವೆ’ ಎಂದು ವಯನಾಡ್ ಪ್ರಕೃತಿ ಸಂರಕ್ಷಣ ಸಮಿತಿಯ ಅಧ್ಯಕ್ಷ ಬಾದುಶಾ ಅವರು ಹೇಳಿದ್ದಾರೆ.

‘ಪ್ರವಾಸೋದ್ಯಮ ಚಟುವಟಿಕೆಗಳು, ಅರಣ್ಯದ ಜಾಗ ಒತ್ತುವರಿ ಹಾಗೂ ಅರಣ್ಯದ ಸಮೀಪದಲ್ಲಿ ಆಗುತ್ತಿರುವ ಬೆಳೆ ಬದಲಾವಣೆ ವಿಚಾರಗಳ ಬಗ್ಗೆ ಸಚಿವರು ಮಾತನಾಡುತ್ತಿಲ್ಲ. ಹುಲಿಗಳ ನಿಯಂತ್ರಣಕ್ಕೆ ಸರ್ಕಾರ ಮುಂದಾಗುವ ಮುನ್ನ, ಪ್ರಾಣಿಗಳು ಜನವಸತಿ ಪ್ರದೇಶಕ್ಕೆ ಏಕೆ ಬರುತ್ತಿವೆ ಎಂಬ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಬೇಕು’ ಎಂದು ಪ್ರಾಣಿ ಸಂರಕ್ಷಣಾ ಮಂಡಳಿಯ ಮಾಜಿ ಸದಸ್ಯ ಜಯಚಂದ್ರನ್ ಅವರು ಆಗ್ರಹಿಸಿದ್ದಾರೆ.

ಅತಿಶ್ರೀಮಂತರ ಮೇಲೆ ತೆರಿಗೆ ವಿಧಿಸಿ: ಆಕ್ಸ್‌ಫಾಮ್

ದೇಶದಲ್ಲಿ 2016ರ ನಂತರ ಸಂಪತ್ತು ತೆರಿಗೆಯನ್ನು ಕೈಬಿಡಲಾಗಿದೆ. ಬದಲಿಗೆ ಕೆಲವಾರು ಸ್ವರೂಪದ ಸಂಪತ್ತುಗಳಿಗೆ ಮಾತ್ರ ಅಲ್ಪ ಪ್ರಮಾಣದ ತೆರಿಗೆ ವಿಧಿಸಲಾಗುತ್ತಿದೆ. ದೇಶದ ಅತಿಶ್ರೀಮಂತರ ಸಂಪತ್ತಿನ ಮೇಲೆ ಅಲ್ಪ ಪ್ರಮಾಣದ ತೆರಿಗೆ ವಿಧಿಸಿದರೂ, ಸರ್ಕಾರದ ತೆರಿಗೆ ಆದಾಯ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಲಿದೆ ಎಂದು ಆಕ್ಸ್‌ಫಾಮ್ ಅಭಿಪ್ರಾಯಪಟ್ಟಿದೆ.

- 2017–2021ರ ನಡುವೆ ಉದ್ಯಮಿ ಗೌತಮ್ ಅದಾನಿ ಅವರಿಗೆ ದೊರೆತಿರುವ ತೆರಿಗೆ ವಿನಾಯಿತಿ ಮತ್ತು ವಿವಿಧ ನೆರವುಗಳ ಮೊತ್ತ ₹1.79 ಲಕ್ಷ ಕೋಟಿಯಷ್ಟಾಗುತ್ತದೆ. ಇಷ್ಟು ತೆರಿಗೆ ಸಂಗ್ರಹವಾಗಿದ್ದರೆ, ದೇಶದ ಪ್ರಾಥಮಿಕ ಶಾಲೆಗಳ 50 ಲಕ್ಷಕ್ಕೂ ಹೆಚ್ಚು ಶಿಕ್ಷಕರಿಗೆ ಒಂದು ವರ್ಷದಷ್ಟು ವೇತನ ನೀಡಬಹುದಾಗಿತ್ತು
- ದೇಶದ ಅತಿಶ್ರೀಮಂತ ಶೇ 10ರಷ್ಟು ಮಂದಿಯ ಸಂಪತ್ತಿನ ಮೇಲೆ ಶೇ 5ರಷ್ಟು ಒಂದು ಬಾರಿಯ ತೆರಿಗೆ ವಿಧಿಸಿದರೆ ₹1.37 ಲಕ್ಷ ಕೋಟಿ ಸಂಗ್ರಹವಾಗುತ್ತದೆ. ದೇಶದ ಆರೋಗ್ಯ ಸಚಿವಾಲಯದ ವಾರ್ಷಿಕ ಬಜೆಟ್ (₹86,200 ಕೋಟಿ) ಮತ್ತು ಆಯುಷ್ ಇಲಾಖೆಯ (ಒಟ್ಟು ₹3,050 ಕೋಟಿ) ಬಜೆಟ್ ಮೊತ್ತವನ್ನು ಭರಿಸಿ, ಇನ್ನೂ ಆರು ತಿಂಗಳ ವೆಚ್ಚವನ್ನು ಭರಿಸಬಹುದಾಗಿದೆ
- ದೇಶದ ಮೊದಲ 100 ಅತಿ ಶ್ರೀಮಂತರ ಸಂಪತ್ತಿನ ಮೇಲೆ ಶೇ 2.5ರಷ್ಟು ತೆರಿಗೆ ವಿಧಿಸಿದರೆ, ದೇಶದ ಸರ್ವಶಿಕ್ಷಣ ಅಭಿಯಾನಕ್ಕೆ ಅಗತ್ಯವಿರುವ ಒಂದು ವರ್ಷದ ವೆಚ್ಚವನ್ನು ಭರಿಸಬಹುದು
- ದೇಶದ ಎಲ್ಲಾ ಅತಿಶ್ರೀಮಂತರ ಸಂಪತ್ತಿನ ಮೇಲೆ ಶೇ 3ರಷ್ಟು ತೆರಿಗೆ ವಿಧಿಸಿದರೆ, ದೇಶದ ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಐದು ವರ್ಷಗಳಿಗೆ ಅಗತ್ಯವಿರುವಷ್ಟು ಮೊತ್ತವನ್ನು ಸಂಗ್ರಹಿಸಬಹುದು

ಆಧಾರ: ಆಕ್ಸ್‌ಫಾಮ್‌ನ ‘ಸರ್ವೈವಲ್ ಆಫ್ ದಿ ರಿಚ್ಚೆಸ್ಟ್: ದಿ ಇಂಡಿಯಾ ಸ್ಟೋರಿ’ ವರದಿ, ಪಿಟಿಐ

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಉದಾರದ ಮನಸ್ಸು

ಕೋಡುಗಲ್ಲನು ಹತ್ತಿ ದೂರವನು ನೋಳ್ಪಂಗೆ |
ಗೋಡೆಗೊತ್ತುಗಳೇನು? ಮೇಡುಕುಳಿಯೇನು ?||
ನೋಡು ನೀನುನ್ನತದಿ ನಿಂತು ಜನ ಜೀವಿತವ |
ಮಾಡುದಾರದ ಮನವ – ಮಂಕುತಿಮ್ಮ || 801 ||

ಪದ-ಅರ್ಥ: ಕೋಡುಗಲ್ಲನು = ಬೆಟ್ಟದ ತುದಿಯ ಮೇಲಿನ ಬಂಡೆಯನ್ನು, ನೋಳ್ಪಂಗೆ = ನೋಡುವವನಿಗೆ, ಗೋಡೆಗೊತ್ತುಗಳೇನು = ಗೋಡೆ+ಗೊತ್ತುಗಳು (ಮೇರೆಗಳು) + ಏನು, ಮೇಡು ಕುಳಿಯೇನು = ಗುಡ್ಡ ಹಳ್ಳಗಳೇನು, ನೀನುನ್ನತದಿ = ನೀನು + ಉನ್ನತದಿ(ಎತ್ತರದಲ್ಲಿ), ಮಾಡುದಾರದ = ಮಾಡು + ಉದಾರದ.

ವಾಚ್ಯಾರ್ಥ: ಪರ್ವತದ ತುದಿಯ ಬಂಡೆಯನ್ನೇರಿ ದೂರದಿಂದ ನೋಡುವವನಿಗೆ ಕೆಳಗಿರುವ ಗೋಡೆ, ಮೇರೆಗಳು, ಬೆಟ್ಟ, ಹಳ್ಳಗಳು ಹೇಗೆ ಒಂದೇ ಎಂದು ತೋರುತ್ತವೊ ಹಾಗೆ ನೀನು ಬದುಕಿನ ಎತ್ತರದಲ್ಲಿ ನಿಂತು ಜನರ ಬದುಕನ್ನು ಕಾಣು. ಮನಸ್ಸನ್ನು ಉದಾರವಾಗಿಸು.

ವಿವರಣೆ: ಈಗ ಸುಮಾರು ಐವತ್ತು ವರ್ಷಗಳ ಹಿಂದೆ ನಾಲ್ಕಾರು ಹುಡುಗರು ಸೇರಿ ಕೇದಾರ ಯಾತ್ರೆಗೆ ಹೋಗಿದ್ದೆವು. ಅದು ಯಾತ್ರೆ ಎನ್ನುವದಕ್ಕಿಂತ, ಸಾಹಸದ, ನಿಸರ್ಗವೀಕ್ಷಣೆಯ ಪ್ರವಾಸೋತ್ಸಾಹ. ಕೇದಾರೇಶ್ವರ ದರ್ಶನವಾದ ಮೇಲೆ ನಮಗೊಬ್ಬ ಕುರುಬ ತರುಣ ಸಿಕ್ಕ. ಮೇಲೆ ಪಾಂಚಗಣ ತೋರಿಸುತ್ತೇನೆ, ಬರುತ್ತೀರಾ ಎಂದು ಕೇಳಿದ. ಅವನ ಪ್ರಶ್ನೆ ಒಂದು ಆಹ್ವಾನದಂತೆ ಕಂಡು, ನಾವು ಒಪ್ಪಿ ಹೊರಟೆವು. ಅದೊಂದು ಅತ್ಯಂತ ಕಡಿದಾದ ದಾರಿ. ಪ್ರಾಣಿಗಳ ಹಾಗೆ ಕೈ, ಮೊಣಕಾಲುಗಳನ್ನು ಊರಿ, ಪ್ರಾಣಗಳನ್ನು ಕೈಯಲ್ಲಿ ಹಿಡಿದು ಅವನನ್ನು ಹಿಂಬಾಲಿಸಿದೆವು. ಉಸಿರುಕಟ್ಟುತ್ತಿತ್ತು. ಚಳಿಯಲ್ಲೂ ಮೈಬೆವರು. ಅರ್ಧ ಆಯಾಸದಿಂದ, ಅರ್ಧ ಭಯದಿಂದ. ಕೊನೆಗೊಂದು ಎತ್ತರದ ಕಟ್ಟೆಯಂಥ ಸ್ಥಳ ಬಂತು. ಆ ಹುಡುಗ ಛಕ್ಕೆಂದು ಹಾರಿ ಮೇಲೆ ಹೋದ. ನಮಗೆ ಮೇಲೆ ಏನಿದೆ ಎನ್ನುವುದು ಕಾಣುತ್ತಿಲ್ಲ. ಮುಂದೆ ಪ್ರಪಾತವೋ ಇಳಿಜಾರಿಕೆಯೋ ತಿಳಿಯದು. ಅವನು ಮೇಲಿನಿಂದ ಒಬ್ಬೊಬ್ಬರನ್ನೇ ಕೈ ಹಿಡಿದು ಎಳೆದುಕೊಂಡ. ಮೇಲೆ ಹೋದಾಗ ನಮ್ಮ ಎದೆಬಡಿತ ನಿಂತು ಹೋಯಿತು. ಅದು ಕಲ್ಪನೆಗೂ ಮೀರಿದ ದೃಶ್ಯ. ಸುಮಾರು ಎರಡುಮೂರು ಫುಟ್‌ಬಾಲ್ ಮೈದಾನದಷ್ಟು ಅತ್ಯಂತ ಸಮತಟ್ಟಾದ ಪ್ರದೇಶ! ಪರ್ವತದ ತುದಿಯ ಮೇಲೆ ಆ ತರಹದ ಮೈದಾನವಿದ್ದಿರಬಹುದೆಂಬುದು ಊಹಿಸಲೂ ಸಾಧ್ಯವಿಲ್ಲ. ಮುಂದೆ ಮೈದಾನದ ತುದಿಯ ಕಡೆಗೆ ಆತ ನಮ್ಮನ್ನು ಕರೆದೊಯ್ದ. ರ್‍ರೆಂದು ಚಳಿಗಾಳಿ ನುಗ್ಗಿ ಬರುತ್ತಿದೆ. ಆದರೆ ಅಲ್ಲಿಂದ ಕಂಡ ದೃಶ್ಯ ಬದುಕಿನ ಕೊನೆಯ ಕ್ಷಣದವರೆಗೂ ಉಳಿದೇ ಇರುತ್ತದೆ. ಅಲ್ಲಿಂದ ಕೆಳಗಿನ ದೃಶ್ಯ ಅದ್ಭುತ. ನೂರಾರು ಮೈಲಿಗಳ ಕಣಿವೆಯಲ್ಲಿ ಕೋಟ್ಯಾಂತರ ಹೂವುಗಳು! ಆಗಾಗ ಬಂದು ಮರೆಯಾಗುವ ಮೋಡಗಳು. ಎಲ್ಲೆಲ್ಲಿಯೂ ಹಸಿರಿನ ಸಡಗರ. ಇದು ಮೇಲಿನಿಂದ ಕಂಡ ನೋಟ. ಹಾಗಾದರೆ ಕಣಿವೆಯಲ್ಲಿ ಬೆಟ್ಟ, ಹಳ್ಳಗಳಿಲ್ಲವೇ? ಹಳ್ಳಿ ಹಳ್ಳಿಗಳ ನಡುವೆ ಮೇರೆಗಳಿಲ್ಲವೆ? ಅವೆಲ್ಲ ಇವೆ. ಆದರೆ ಎತ್ತರದಿಂದ ಆ ಕೊರೆಗಳೆಲ್ಲ ಕಾಣುವುದಿಲ್ಲ. ಅದಕ್ಕೇ ದೂರದ ದೃಶ್ಯ ಕಣ್ಣಿಗೆ ಚೆಂದ. ಕಗ್ಗ ಅದನ್ನೇ ಹೇಳುತ್ತದೆ ಎತ್ತರದಿಂದ ಕಂಡಾಗ ಸಣ್ಣ ಪುಟ್ಟ ಕೊರತೆಗಳು ಕಾಣದೆ ನೋಟ. ಸುಂದರವಾಗುತ್ತದೆ. ಅಂತೆಯೇ ಮನುಷ್ಯ ಸಾಧನೆಯಿಂದ, ಪ್ರೀತಿಯಿಂದ, ತ್ಯಾಗದಿಂದ, ಎತ್ತರಕ್ಕೆ ಏರಿದಾಗ ಎಲ್ಲವೂ ಭಗವಂತನ ಲೀಲೆಯೆಂಬುದು ಹೊಳೆದು, ಜಾತಿ, ಮತಗಳ, ಭಿನ್ನತೆಯ ದೋಷಗಳು ಕರಗಿ ಬದುಕು ಸುಂದರವಾಗುತ್ತದೆ. ಅದಕ್ಕಾಗಿ ಮನಸ್ಸು ಉದಾರವಾಗಬೇಕು, ವಿಸ್ತಾರವಾಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜನವರಿ 17, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ದಶಮಿ ಗಂ. 18-06 ನಕ್ಷತ್ರ: ವಿಶಾಖಾ ಗಂ. 18-46 ಯೋಗ: ಶೂಲ ಗಂ. 08-34, ಗಂಡ ಗಂ. 29- 58, ಕರಣ: ವಣಿಜ ಗಂ. 06-49, ಮಕರ ಮಾಸದ 03 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 –04-30
ಸೂರ್ಯೋದಯ : 07-01 ಸೂರ್ಯಾಸ್ತ : 06-20
ಮುಸ್ಲಿಂ ದಿನಾಂಕ : 24 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 1, 8

ಮೇಷ: ಬಹಳ ಕಾಲದಿಂದ ಅಪೇಕ್ಷಿಸಿದ್ದ ವಸ್ತುವೊಂದು ಅಲ್ಪ ಶ್ರಮದಿಂದ ದೊರಕಲಿದೆ. ನಿಮ್ಮೆಲ್ಲಾ ವ್ಯವಹಾರಗಳು ಬಹಿರಂಗವಾಗಿದ್ದರೆ ಒಳ್ಳೆಯದು. ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಪರಿಶ್ರಮ ವಹಿಸಬೇಕಾಗುವುದು.

ವೃಷಭ: ರೈತರು ಎಲ್ಲಾ ಉತ್ಪನ್ನಗಳಿಗೆ ಈ ದಿನ ಹೆಚ್ಚಿನ ಆದಾಯ ಕಾಣುವರು. ಗಣ್ಯ ವ್ಯಕ್ತಿಗಳ ವೈಯಕ್ತಿಕ ಭೇಟಿಯಿಂದಾಗಿ ಸಹಚರರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ. ಅನಿರೀಕ್ಷಿತ ಧನಾಗಮನದಿಂದ ಸಂತಸ ಮೂಡಲಿದೆ.

ಮಿಥುನ: ಯುವ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ಅವಕಾಶಗಳು ಲಭಿಸುವುದು. ಎಂದಿನಂತೆ ಮನಸ್ಸು ಹೆಚ್ಚು ಉಲ್ಲಾಸದಿಂದ ಕೂಡಿರುವುದರಿಂದ ಕೆಲಸ ಕಾರ್ಯಗಳು ಸರಾಗವಾಗಿ ನಡೆಯುವುದು.

ಕರ್ಕಾಟಕ: ಈ ದಿನ ಎಲೆಕ್ಟ್ರಾನಿಕ್ ಮತ್ತು ಎಲೆಕ್ಟ್ರಿಕ್ ಕ್ಷೇತ್ರದಲ್ಲಿರುವವರಿಗೆ ನಿರೀಕ್ಷೆಗೂ ಮೀರಿದ ಸಂಪಾದನೆ ಉಂಟಾಗುವುದು. ಜೀವನದಲ್ಲಿ ಬೇಸರಗೊಂಡಿರುವ ನೀವು ಮಾನಸಿಕವಾಗಿ ಸದೃಢರಾಗುವಿರಿ.

ಸಿಂಹ: ವ್ಯಕ್ತಿಯ ಮನಃ ಪರಿವರ್ತನೆ ಮಾಡುವ ವಿಚಾರದಲ್ಲಿ ಸಫಲರಾಗುತ್ತೀರಿ. ವಿವಾಹ, ಗೃಹಪ್ರವೇಶದಂತಹ ಶುಭಕಾರ್ಯಗಳ ಪ್ರಸ್ತಾಪ ನೆರವೇರುವುದು. ಹೊಸ ಸ್ಥಳದಲ್ಲಿ ಹೊಂದಿಕೊಳ್ಳಲು ಸಮಯ ಬೇಕೆನಿಸುವುದು.

ಕನ್ಯಾ: ಮನಸ್ಸು ಸಿರಿತನದ ಜೀವನವನ್ನು ಇಷ್ಟ ಪಡಲಿದೆ. ಆದರೆ ಬುದ್ಧಿ ಸ್ಥಿಮಿತದಲ್ಲಿರಲಿ. ಹಾಸಿಗೆ ಇದ್ದಷ್ಟೇ ಕಾಲು ಚಾಚಿ. ನಿನ್ನೆಯ ಕೆಲವು ಕಠಿಣ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿದ್ದು ಮನಸ್ಸು ನಿರಾಳವಾಗಲಿದೆ.

ತುಲಾ: ಉಳಿತಾಯದ ಹಣ ಮನೆಯ ನಿರ್ಮಾಣ ಕಾರ್ಯಗಳಿಗೆ ಬಳಸುವಿರಿ. ಕ್ರೀಡಾಪಟುಗಳಿಗೆ ಪುರಸ್ಕಾರ, ಗೌರವಾಭಿನಂದನೆಗಳು ಪ್ರಾಪ್ತಿಯಾಗಲಿದೆ. ಮದುವೆಗಾಗಿ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವ ಯೋಚನೆ ಬರಲಿದೆ.

ವೃಶ್ಚಿಕ: ರೈತರಿಗೆ ತಮ್ಮ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ. ರಾಜಕೀಯ ವ್ಯವಹಾರಗಳ ಪ್ರಬಲಾಕಾಂಕ್ಷಿಯಾಗಿರುವ ನೀವು ಇನ್ನಷ್ಟು ಚುರುಕಾಗಬೇಕಾಗಿದೆ. ಕ್ರೀಡಾಪಟುಗಳಿಗೆ ಪ್ರಾಯೋಜಕರು ದೊರೆತು ಸಂತಸ.

ಧನು: ಅವಿವಾಹಿತರಿಗೆ ಮಾಂಗಲ್ಯ ಭಾಗ್ಯವಿದ್ದು ಮದುವೆಯ ಮಾತುಕತೆಗಳನ್ನು ನಡೆಸುವರು. ಸಾಂಸಾರಿಕವಾಗಿ ಹಲವು ಸಮಸ್ಯೆಗಳಿಗೆ ಪರಿಹಾರ ದೊರೆತು, ಮನಸ್ಸಿನ ಶಾಂತಿ ಪಡೆಯುವಿರಿ. ಶ್ರೀ ರಾಮನಾಮದ ಜಪ ಮಾಡಿ.

ಮಕರ: ಹಾಡುಗಾರರಿಗೆ ಈ ದಿನ ಒಳ್ಳೆಯ ಅವಕಾಶವಿರುವುದು. ಈ ದಿನದ ಆಗು ಹೋಗುಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಇದೆಲ್ಲವೂ ಕ್ಷಣಿಕ. ಜೀವನದಲ್ಲಿ ಹೊಸ ಚೈತನ್ಯ ತುಂಬಿ, ಆಸಕ್ತಿ ಹೆಚ್ಚಿಸಿಕೊಳ್ಳಿ.

ಕುಂಭ: ಮಗನಿಂದ ಮನಸ್ಸಿಗೆ ನೋವಾಗುವಂತಹ ಘಟನೆ ನಡೆಯಬಹುದು. ಕಫ ಪ್ರಕೃತಿ ಶರೀರ ಹೊಂದಿದ ವ್ಯಕ್ತಿಗಳಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಜವಳಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಪ್ರಾಪ್ತಿ

ಮೀನ: ಪ್ರೀತಿ ಪಾತ್ರರೊಂದಿಗೆ ಭವಿಷ್ಯದ ಯೋಜನೆಗಳ ಹಾಗೂ ಜೀವನದ ಗುರಿ ತಲುಪುವ ಬಗ್ಗೆ ಗಂಭೀರ ಚರ್ಚೆ ನಡೆಸುವಿರಿ. ಮನಸ್ಸು ಬಿಚ್ಚಿ ಮಾತನಾಡುವಿರಿ. ದೇಹಾರೋಗ್ಯದ ಉದಾಸೀನತೆ ತೋರಬೇಡಿ.

ಪದಬಂಧ 5202

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ರಾಜ ಕುಳಿತುಕೊಳ್ಳುವ ಆಸನ (4)
3.ಉಳಿಕೆಯನ್ನು ನಿಲ್ಲಿಸಿಕೊಂಡಿರುವವನು (4)
5.ಸ್ಫುಟವಾಗಿ ಗೋಚರಿಸದೆ ಅಸ್ಪಷ್ಟವಾಗಿರುವುದು (3)
7.ಬಿಡುವಿನ ದಿನ (2)
9.ತಾರಾಗಣದಲ್ಲಿರುವ ನೆಲೆ (2)
10.ಹೊಟ್ಟೆಕಿಚ್ಚಿಗೊಂದು ಪರ್ಯಾಯ ಪದ (3)
11.ಹುಲ್ಲು ಸೊಪ್ಪು ಮೊದಲಾದವುಗಳ ಕಟ್ಟು (2)
12.ಪುಣ್ಯಕ್ಷೇತ್ರದಲ್ಲಿರುವ ಮಗ ತಿರುಗಿದ್ದಾನಲ್ಲಾ? (2)
14.ವನದ ಬಗ್ಗೆ ಬರೆದಿರುವ ಪದ್ಯ (3)
16.ಈತ ಅತೀ ಬುದ್ಧಿವಂತ (4)
17.ತರಹೇವಾರಿ ಕಾಯಿಪಲ್ಯೆ (4)

ಮೇಲಿಂದ ಕೆಳಕ್ಕೆ
1.ಅಡಿಕೆ ಹೂವಿನ ಗೊಂಚಲು (3)
2.ಚಿತ್ತವಿಲ್ಲಿ ಉಲ್ಟಾಪಲ್ಟಾ ಆಗಿದೆ (2)
3.ತಂಬಾಕು ಕತ್ತರಿಸಲು ಬಳಸಿದ ಕಿರುಗತ್ತಿ (2)
4.ಐಶ್ವರ್ಯ ಇಲ್ಲಿದೆ (3)
6.ಚಿನ್ನದ ಹಬ್ಬವಿದು (7)
8.ಮೈಮರೆಯದೆ ಎಚ್ಚರವಾಗಿರುವಿಕೆ (5)
9.ಮೋಕ್ಷದಾಯಕ ಮಂತ್ರ (5)
11.ಕೋಟೆಯ ಸುತ್ತಲಿನ ಕುಣಿ (3)
13.ರಾಜಕೀಯ ವ್ಯಕ್ತಿ (3)
14.ಕರಣದಲ್ಲಿರುವ ಅತ್ಯಂತ ಚಿಕ್ಕ ಚೂರುಕಾಣುತ್ತಿದೆಯೇ? (2)
15.ನಗುತಲಿದ್ದವದವ ಹೀಗೆ ಶರಣಾದ! (2)



5201ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿವಾದ 3.ಪ್ರವಾಸ
5.ವ್ಯಕ್ತಿ 6.ಸದ್ಭಾವ
7.ಕಲಿ 9.ನಗ
11.ಹೂದಾನಿ 13.ದ್ವಾರ
14.ಸುಗುಣ 15.ನಗರ

ಮೇಲಿಂದ ಕೆಳಕ್ಕೆ:
1.ವಿಮುಕ್ತಿ 2.ದವಸ
3.ಪ್ರಭಾವ 4.ಸರೀಕ
5.ವ್ಯವಕಲನ 8.ಲಿಲಾವುದಾರ
10.ಗವಸು 11.ಹೂಬಾಣ
12.ನಿಧನ 13.ದ್ವಾಪರ

ಸುಡೊಕು 5588

				8			6	
			1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5587 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಷೇರುಪೇಟೆ ವಹಿವಾಟು

168



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,956
ಇಂದಿನ ಅಂತ್ಯ	17,894
▼	62
ದಿನದ ಕನಿಷ್ಠ	17,853

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹575
12 ಮೊಟ್ಟೆಗೆ	₹75

ಮೈಸೂರು

100 ಮೊಟ್ಟೆಗೆ	₹577

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1230 (1230)
ಸೂರ್ಯಕಾಂತಿ (ರಿಫೈನ್ಡ್)	₹1260 (1260)
ಪಾಮೋಲಿನ್	₹918 (915)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹350-669
ದ್ವಿತಳಿ (ಬಿ.ವಿ)	₹455-786

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹136
ಆರ್‌ಎಸ್‌ಎಸ್-5	₹131
ಗುಡ್ ಲಾಟ್	₹124

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13750
ಎಸಿ	₹6720
ಆರ್‌ಪಿ	₹8000
ಆರ್‌ಸಿ	₹4440

ಕಡಿಮೆ ಬಡ್ಡಿ ದರದಲ್ಲಿ ಸಾಲ: ಬಜೆಟ್‌ನಲ್ಲಿ ಸರ್ಕಾರದಿಂದ ಘೋಷಣೆ ಸಾಧ್ಯತೆ

ಚಿಲ್ಲರೆ ವ್ಯಾಪಾರಕ್ಕೆ ಸುಲಭ ಸಾಲ?

ಮುಖ್ಯಾಂಶಗಳು

- ಇ-ವಾಣಿಜ್ಯ ವೇದಿಕೆಗಳಿಂದ ರಿಟೇಲ್ ವ್ಯಾಪಾರಿಗಳಿಗೆ ಸವಾಲು
- ಆನ್‌ಲೈನ್ ಮೂಲಕ ಪರವಾನಗಿ ನವೀಕರಣಕ್ಕೆ ಚಿಂತನೆ

ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಸಣ್ಣ ಪ್ರಮಾಣದ ಚಿಲ್ಲರೆ ವ್ಯಾಪಾರಿಗಳಿಗೆ ಕಡಿಮೆ ಬಡ್ಡಿ ದರಕ್ಕೆ ಸಾಲ ಒದಗಿಸುವ ಹಾಗೂ ಈ ವಲಯಕ್ಕೆ ಸಂಬಂಧಿಸಿದ ಕೆಲವು ನಿಯಮಗಳನ್ನು ಸಡಿಲಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಫೆಬ್ರುವರಿ 1ರಂದು ಮಂಡನೆ ಆಗಲಿರುವ ಕೇಂದ್ರ ಬಜೆಟ್‌ನಲ್ಲಿ ಈ ಕುರಿತು ಘೋಷಣೆ ಇರುವ ನಿರೀಕ್ಷೆ ಇದೆ. ಭೌತಿಕ ಮಳಿಗೆ ಮೂಲಕ ವಹಿವಾಟು ನಡೆಸುವ ಚಿಲ್ಲರೆ ವ್ಯಾಪಾರ ವಲಯವು ಇ-ವಾಣಿಜ್ಯ ವಲಯದ ಅಮೆಜಾನ್, ಫ್ಲಿಪ್‌ಕಾರ್ಟ್, ಬಿಗ್‌ಬಾಸ್ಕೆಟ್‌ನಂತಹ ಕಂಪನಿಗಳಿಂದಾಗಿ ಮಾರುಕಟ್ಟೆ ಪಾಲು ಕಳೆದುಕೊಂಡಿವೆ. ಹೀಗಾಗಿ, ಭೌತಿಕ ಅಂಗಡಿಗಳ ಮೂಲಕ ನಡೆಯುವ ವ್ಯಾಪಾರ ವಹಿವಾಟು ಪ್ರಮಾಣ ಹೆಚ್ಚಿಸುವ ಉದ್ದೇಶ ಇದರ ಹಿಂದೆ ಇದೆ ಎನ್ನಲಾಗಿದೆ.

'ಸಾಲವು ಸುಲಭವಾಗಿ ಹಾಗೂ ಕಡಿಮೆ ಬಡ್ಡಿ ದರಕ್ಕೆ ಈ ವಲಯಕ್ಕೆ ಸಿಗುವಂತೆ ಮಾಡಲು ಸರ್ಕಾರವು ಮುಂದಡಿ ಇರಿಸಿದೆ. ಗೋದಾಮಿನಲ್ಲಿ ಇರುವ ಉತ್ಪನ್ನಗಳನ್ನು ಅಡಮಾನವಾಗಿ ಇರಿಸಿಕೊಂಡು, ಅದಕ್ಕೆ ಕಡಿಮೆ ಬಡ್ಡಿ ದರಕ್ಕೆ ಸುಲಭವಾಗಿ ಸಾಲ ಕೊಡುವುದು ಒಂದು ಆಯ್ಕೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ವಿಚಾರವಾಗಿ ಕೇಂದ್ರ ವಾಣಿಜ್ಯ ಸಚಿವಾಲಯ ಪ್ರತಿಕ್ರಿಯೆ ನೀಡಿಲ್ಲ.

ಚಿಲ್ಲರೆ ವ್ಯಾಪಾರದ (ರಿಟೇಲ್) ವ್ಯಾಪಾರಿಗಳಿಗೆ ಕಡಿಮೆ ಬಡ್ಡಿ ದರಕ್ಕೆ ಸಾಲ ಒದಗಿಸುವ ಬ್ಯಾಂಕ್‌ಗಳಿಗೆ ಹೇಗೆ ಪರಿಹಾರ ನೀಡಲಾಗುತ್ತದೆ ಎಂಬ ವಿವರವನ್ನು ಮೂಲಗಳು ತಿಳಿಸಿಲ್ಲ.

ಹೊಸ ಮಳಿಗೆಗಳನ್ನು ತೆರೆಯಲು ಪಡೆಯಬೇಕಿರುವ ಪರವಾನಗಿ ಹಾಗೂ ಪರವಾನಗಿ ನವೀಕರಣ ಪ್ರಕ್ರಿಯೆಯನ್ನು ಸರಳವಾಗಿ ಆನ್‌ಲೈನ್ ಮೂಲಕ ಪೂರೈಸುವ ನೀತಿಯನ್ನು ಜಾರಿಗೆ ತರುವ ಸಾಧ್ಯತೆ ಇದೆ ಎನ್ನಲಾಗಿದೆ.

ಚಿಲ್ಲರೆ ವ್ಯಾಪಾರದ (ರಿಟೇಲ್) ಮಳಿಗೆಗಳು ಈಗಿನ ನಿಯಮಗಳ ಪ್ರಕಾರ 25ರಿಂದ 50 ವಿಧದ ಪರವಾನಗಿಗಳನ್ನು ಪಡೆದುಕೊಳ್ಳಬೇಕಿದೆ. ಇವುಗಳಲ್ಲಿ ಕೆಲವು ಪರವಾನಗಿಗಳನ್ನು ಪ್ರತಿ ವರ್ಷ ನವೀಕರಿಸಿಕೊಳ್ಳಬೇಕಾಗುತ್ತದೆ ಎಂದು ಸಣ್ಣ ವ್ಯಾಪಾರಿಗಳ ಒಕ್ಕೂಟದ (ಆರ್‌ಎಐ) ಸಿಇಒ ಕುಮಾರ್ ರಾಜಗೋಪಾಲನ್ ತಿಳಿಸಿದ್ದಾರೆ.

ಭಾರತದ ರಿಟೇಲ್ ವಹಿವಾಟುಗಳಲ್ಲಿ ಇ-ವಾಣಿಜ್ಯ ವೇದಿಕೆಗಳ ಪಾಲು ಈಗ ಶೇ 7ರಷ್ಟು ಇದೆ. ಇದು 2030ರೊಳಗೆ ಶೇ 19ಕ್ಕೆ ಏರಿಕೆ ಆಗುವ ಸಾಧ್ಯತೆ ಇದೆ ಎಂದು ಆರ್‌ಎಐ ವರದಿಯೊಂದು ಹೇಳಿದೆ. 'ಆರೋಗ್ಯಕರ ವಾತಾವರಣ ನಿರ್ಮಾಣಕ್ಕೆ ಅಡ್ಡಿಯಾಗಿರುವ ಹಲವು ಸಮಸ್ಯೆಗಳನ್ನು ಪರಿಹರಿಸಲು ನಾವು ಏಕರೂಪಿ ನಿಯಮಾವಳಿ ಜಾರಿಗೆ ಸಲಹೆ ನೀಡಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾರುತಿ ಕಾರುಗಳ ಬೆಲೆ ಶೇ 1.1ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಸೋಮವಾರದಿಂದ ತನ್ನ ಎಲ್ಲ ಮಾದರಿಯ ಕಾರುಗಳ ಬೆಲೆಯನ್ನು ಶೇಕಡ 1.1ರಷ್ಟು ಹೆಚ್ಚಳ ಮಾಡಿರುವುದಾಗಿ ಹೇಳಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದು ಹಾಗೂ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ 2023ರ ಏಪ್ರಿಲ್‌ನಿಂದ ಜಾರಿಗೆ ಬರಲಿರುವ ಕಠಿಣ ನಿಯಮಗಳ ಪಾಲನೆಗಾಗಿ ಬೆಲೆ ಏರಿಕೆ ಮಾಡಲಾಗುವುದು ಎಂದು ಕಂಪನಿಯು 2022ರ ಡಿಸೆಂಬರ್‌ನಲ್ಲಿ ಹೇಳಿತ್ತು.

ಡಿಸೆಂಬರ್‌ನಲ್ಲಿ ಶೇ 12ರಷ್ಟು ತಗ್ಗಿದ ರಫ್ತು

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು 2021ರ ಡಿಸೆಂಬರ್‌ಗೆ ಹೋಲಿಸಿದರೆ 2022ರ ಡಿಸೆಂಬರ್‌ನಲ್ಲಿ ಶೇಕಡ 12.2ರಷ್ಟು ಇಳಿಕೆ ಆಗಿದ್ದು ₹ 2.81 ಲಕ್ಷ ಕೋಟಿಗೆ ತಲುಪಿದೆ.

ಕೇಂದ್ರ ವಾಣಿಜ್ಯ ಸಚಿವಾಲಯ ಸೋಮವಾರ ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, 2021ರ ಡಿಸೆಂಬರ್‌ನಲ್ಲಿ ₹ 3.20 ಲಕ್ಷ ಕೋಟಿ ಮೌಲ್ಯದ ವಹಿವಾಟು ನಡೆದಿತ್ತು.

ಆಮದು ವಹಿವಾಟು 2021ರ ಡಿಸೆಂಬರ್‌ನಲ್ಲಿ ₹ 4.92 ಲಕ್ಷ ಕೋಟಿಯಿಂದ 2022ರ ಡಿಸೆಂಬರ್‌ನಲ್ಲಿ ₹ 4.75 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.

ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ರಫ್ತು ವಹಿವಾಟು ಶೇ 9ರಷ್ಟು ಹೆಚ್ಚಾಗಿ ₹ 27.15 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ಆಮದು ವಹಿವಾಟು ಶೇ 24.96ರಷ್ಟು ಹೆಚ್ಚಾಗಿ ₹ 45.02 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

16–1-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	11500-11600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	--- (1180)
ಪಾಮ್ ವಾರದ ಡೆಲಿವರಿ	916 (913)
ಸೂರ್ಯಕಾಂತಿ ಎಣ್ಣೆ ಕಚ್ಚಾ	1130 (1130)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

56,650 (56,600)

ಬೆಳ್ಳಿ ಕೆ.ಜಿ 69,150 (68,850)

ಆವರಣದಲ್ಲಿ ಶನಿವಾರದ ಧಾರಣೆ

ಸುಧಾ, ಮಯೂರ ಓದಿರಿ

22 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದ ಡಬ್ಲ್ಯುಪಿಐ

ಸಗಟು ಹಣದುಬ್ಬರ ಇಳಿಕೆ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರವು 2022ರ ಡಿಸೆಂಬರ್‌ನಲ್ಲಿ 22 ತಿಂಗಳ ಕನಿಷ್ಠ ಮಟ್ಟವಾದ ಶೇಕಡ 4.95ಕ್ಕೆ ಇಳಿಕೆಯಾಗಿದೆ.

ಆಹಾರ ವಸ್ತುಗಳು, ಅದರಲ್ಲಿಯೂ ಮುಖ್ಯವಾಗಿ ತರಕಾರಿಗಳು ಮತ್ತು ಎಣ್ಣೆಕಾಳುಗಳ ಬೆಲೆ ಇಳಿಕೆ ಆಗಿರುವುದರಿಂದ ಸಗಟು ಹಣದುಬ್ಬರ ಪ್ರಮಾಣ ತಗ್ಗಿದೆ.

ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಆಧರಿಸಿದ ಹಣದುಬ್ಬರ 2022ರ ನವೆಂಬರ್‌ನಲ್ಲಿ ಶೇ 5.85ರಷ್ಟು ಇತ್ತು. 2021ರ ಡಿಸೆಂಬರ್ ನಲ್ಲಿ ಶೇ 14.27ರಷ್ಟು ಆಗಿತ್ತು.

ಗೋಧಿ, ಬೇಳೆಕಾಳು ಮತ್ತು

ಆಲೂಗಡ್ಡೆ, ಹಾಲು, ಮಾಂಸ ಮತ್ತು ಮೀನು ದುಬಾರಿಯಾಗಿಯೇ ಇವೆ.

ಆಹಾರ ವಸ್ತುಗಳು, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಜವಳಿ, ರಾಸಾಯನಿಕ ಮತ್ತು ರಾಸಾಯನಿಕ ಉತ್ಪನ್ನಗಳ ಬೆಲೆ ಇಳಿಕೆ ಆಗಿರುವುದರಿಂದ ಸಗಟು ಹಣದುಬ್ಬರ ಪ್ರಮಾಣ ಕಡಿಮೆ ಆಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಚಿಲ್ಲರೆ ಮತ್ತು ಸಗಟು ಹಣದುಬ್ಬರಗಳೆರಡೂ ಇಳಿಕೆ ಕಂಡಿವೆ. ಹೀಗಾಗಿ ಫೆಬ್ರುವರಿಯಲ್ಲಿ ನಡೆಯಲಿರುವ ಹಣಕಾಸು ನೀತಿ ಸಭೆಯಲ್ಲಿ ಆರ್‌ಬಿಐ ಶೇ 0.25ರಷ್ಟು ಬಡ್ಡಿದರ ಹೆಚ್ಚಳ ಮಾಡುವ ಸಾಧ್ಯತೆ ಇದೆ. ಆ ಬಳಿಕ ಬಡ್ಡಿದರ ಏರಿಕೆಗೆ ವಿರಾಮ ನೀಡುವ ನಿರೀಕ್ಷೆ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		**ಸಾಗರ**		ಕೆಂಪುಗೋಟು	28999-32389
ಕೋಕ	12500-25000	ಬಿಳಿಗೋಟು	22110-30119	ರಾಶಿ	44099-46299
ಹಳತು	48000-54500	ಚಾಲಿ	33099-40269	ತಟ್ಟಿಬೆಟ್ಟೆ	38399-45099
ಚಿತ್ರದುರ್ಗ		ಕೋಕ	13169-26989	**ಶಿರಸಿ**	
ಆಪಿ	45619-46022	ಕೆಂಪುಗೋಟು	29399-38199	ಬೆಟ್ಟೆ	37168-43899
ಬೆಟ್ಟೆ	33829-34299	ರಾಶಿ	41199-46329	ಬಿಳಿಗೋಟು	21699-34689
ಕೆಂಪುಗೋಟು	29510-29959	ಸಿಪ್ಪೆಗೋಟು	4500-21669	ಚಾಲಿ	33499-44500
ರಾಶಿ	45139-45569	**ಶಿವಮೊಗ್ಗ**		ಕೆಂಪುಗೋಟು	26899-34928
ಕಾರ್ಕಳ		ಬೆಟ್ಟೆ	47599-52939	ರಾಶಿ	34099-46508
ಹೊಸತು	30000-40000	ಗೊರಬಲು	17080-35550	**ಯಲ್ಲಾಪುರ**	
ಹಳತು	40000-54500	ರಾಶಿ	42009-46299	ಬಿಳಿಗೋಟು	26109-34131
ಕುಮಟ		ಸರಕು	54119-77377	ಕೋಕ	18899-28099
ಚಿಪ್ಪು	28509-32869	**ಸಿದ್ದಾಪುರ**		ಹಳೆಚಾಲಿ	36022-43099
ಕೋಕ	16019-31019	ಬಿಳಿಗೋಟು	28899-33099	ಹೊಸಚಾಲಿ	32262-35611
ಫ್ಯಾಕ್ಟರಿ	11509-19829	ಚಾಲಿ	39349-42399	ಕೆಂಪುಗೋಟು	25899-35199
ಹಳೆಚಾಲಿ	38269-41229	ಕೋಕ	26119-30282	ರಾಶಿ	45000-53098
ಹೊಸಚಾಲಿ	34209-36599				

ತಳ್ಳುಗಾಡಿ ಬದುಕು

ಪಶ್ಚಿಮ ಬಂಗಾಳದ ನದಿಯಾ ಜಿಲ್ಲೆಯಲ್ಲಿ ಸೋಮವಾರ ಚಳಿ ಮತ್ತು ಮಂಜಿನಿಂದ ಕೂಡಿದ ವಾತಾವರಣದಲ್ಲಿಯೇ ಕಾರ್ಮಿಕರು ತಳ್ಳುಗಾಡಿಗಳಲ್ಲಿ ಇಟ್ಟಿಗೆಗಳನ್ನು ತುಂಬಿಕೊಂಡು ಸಾಗಿಸಿದರು –ಪಿಟಿಐ ಚಿತ್ರ

ಜಿಡಿಪಿ ಮುನ್ನೋಟ; ಫೆ. 28ಕ್ಕೆ ವರದಿ

ನವದೆಹಲಿ: ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ವಾರ್ಷಿಕ ಮುನ್ನೋಟದ ವರದಿಯನ್ನು ಫೆಬ್ರುವರಿ 28ರಂದು ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಇದುವರೆಗೆ ಈ ವರದಿಯನ್ನು ಜನವರಿ 31ರಂದು ಬಿಡುಗಡೆ ಮಾಡಲಾಗುತ್ತಿತ್ತು. ಬಜೆಟ್ ಮಂಡನೆಯ ಒಂದು ದಿನ ಮೊದಲು ಆರ್ಥಿಕ ಸಮೀಕ್ಷೆಯ ವರದಿಯನ್ನು ಮಂಡಿಸಲಾಗುತ್ತದೆ. ಈ ವರ್ಷ ಅದು ಜನವರಿ 31ರಂದು ಮಂಡನೆ ಆಗಲಿದೆ. ಆರ್ಥಿಕ ಸಮೀಕ್ಷೆಯ ವರದಿಯಲ್ಲಿಯೂ ಜಿಡಿಪಿ ಬೆಳವಣಿಗೆಗೆ ಸಂಬಂಧಿಸಿದ ಅಂಕಿ–ಅಂಶಗಳು ಇರುತ್ತವಾದ ಕಾರಣ, ಗೊಂದಲ ಸೃಷ್ಟಿಯಾಗದಿರಲಿ ಎಂಬ ಉದ್ದೇಶದಿಂದ ಎನ್‌ಎಸ್‌ಒ ಬಿಡುಗಡೆ ಮಾಡುವ ಮುನ್ನೋಟದ ವರದಿಯ ದಿನಾಂಕವನ್ನು ಕೇಂದ್ರವು ಬದಲಾಯಿಸಿರಬಹುದು ಎನ್ನಲಾಗಿದೆ.

'ಕೇಜ್ರಿವಾಲ್ ಆಡಳಿತದಲ್ಲಿ ಹೆಚ್ಚು ಮಲಿನಗೊಂಡ ಯಮುನಾ'

ನವದೆಹಲಿ (ಪಿಟಿಐ): 'ಕಳೆದ ಎಂಟು ವರ್ಷಗಳ ಅರವಿಂದ ಕೇಜ್ರಿವಾಲ್ ಅವರ ಆಡಳಿತದಲ್ಲಿ ಯಮುನಾ ನದಿಯ ಮಾಲಿನ್ಯವು ದುಪ್ಪಟ್ಟಾಗಿದೆ' ಎಂದು ಲೆಫ್ಟಿನೆಂಟ್ ಜನರಲ್ ವಿ.ಕೆ. ಸಕ್ಸೇನಾ ಅವರ ಕಚೇರಿ ಮೂಲಗಳು ಸೋಮವಾರ ಮಾಹಿತಿ ನೀಡಿವೆ. ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿ (ಡಿಪಿಸಿಸಿ) ಈ ಅಂಕಿ ಅಂಶಗಳನ್ನು ನೀಡಿದೆ ಎಂದಿವೆ.

ಯಮುನಾ ನದಿಯ ಮಾಲಿನ್ಯದ ಕುರಿತು ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ದೆಹಲಿ ಜಲ ಮಂಡಳಿಯು ಸಕ್ಸೇನಾ ಅವರಿಗೆ ಶನಿವಾರ ಮಾಹಿತಿ ನೀಡಿದೆ.

'ಯಮುನಾ ನದಿ ಸ್ವಚ್ಛ ಮಾಡುವ ಕುರಿತು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಇದೇ 9ರಂದು ಸಮಿತಿ ರಚಿಸಿದೆ. ಈ ಸಮಿತಿಯ ಸಭೆ ನಡೆಯಲಿದ್ದು ಅದಕ್ಕೂ ಮುನ್ನಾ ಸಕ್ಸೇನಾ ಈ ಮಾಹಿತಿ ಪಡೆದುಕೊಂಡರು' ಎಂದು ಮೂಲಗಳು ತಿಳಿಸಿವೆ. 'ದೆಹಲಿಯಲ್ಲಿರುವ 35 ಮಲಿನ ನೀರು ಸಂಸ್ಕರಣಾ ಘಟಕಗಳಲ್ಲಿ (ಎಸ್‌ಟಿಪಿ) ಒಂಬತ್ತು ಘಟಕಗಳು ಮಾತ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡಗಳನ್ನು ಅನುಸರಿಸುತ್ತಿವೆ' ಎಂದಿವೆ.

'ಸೇನಾಪಡೆ ಬಲ ತುಂಬಲಿದೆ ಅಗ್ನಿಪಥ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅಗ್ನಿವೀರರ ಮೊದಲ ತಂಡಕ್ಕೆ ಶುಭಾಶಯ ಕೋರಿದ್ದು 'ಅಗ್ನಿಪಥ ಯೋಜನೆಯು ದೇಶದ ಸೇನಾ ಪಡೆಗಳನ್ನು ಶಕ್ತಿಯುತಗೊಳಿಸುವ ಪರಿವರ್ತಕ ಯೋಜನೆಯಾಗಿದೆ' ಎಂದು ಬಣ್ಣಿಸಿದರು.

ಅಗ್ನಿವೀರರಾಗಿ ನೇಮಕಗೊಂಡಿರುವ ದೇಶದ ಮೊದಲ ತಂಡವನ್ನು ಉದ್ದೇಶಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಪ್ರಧಾನಿ ಮೋದಿ ಅವರು, 'ತಾಂತ್ರಿಕವಾಗಿ ಅತ್ಯಾಧುನಿಕ ತರಬೇತಿ ಪಡೆದಿರುವ ಸೈನಿಕರು ಸೇನಾ ಪಡೆಗಳಲ್ಲಿ ಮುಖ್ಯ ಪಾತ್ರ ವಹಿಸಲಿದ್ದಾರೆ' ಎಂದರು.

> **ಸಿಯಾಚಿನ್‌ನಲ್ಲಿ ಮಹಿಳೆಯರನ್ನು ನಿಯೋಜಿಸಲಾಗಿದೆ. ಮಹಿಳೆಯರು ಆಧುನಿಕ ಯುದ್ಧ ವಿಮಾನಗಳನ್ನು ಚಲಾಯಿಸುತ್ತಿದ್ದಾರೆ**
>
> **ನರೇಂದ್ರ ಮೋದಿ,** ಪ್ರಧಾನಿ

'ಸೇನಾ ಪಡೆಗಳನ್ನು ಆಧುನಿಕವಾಗಿಸಿ 'ಆತ್ಮನಿರ್ಭರ'ಗೊಳಿಸಲು ಹೊಸ ಭಾರತವು ಹೊಸ ಚೈತನ್ಯದೊಂದಿಗೆ ಪ್ರಯತ್ನ ನಡೆಸುತ್ತಿದೆ' ಎಂದರು.

'ಈ ಕ್ರಾಂತಿಕಾರಕ ಯೋಜನೆಯು ಮಹಿಳೆಯರನ್ನು ಇನ್ನಷ್ಟು ಸಶಕ್ತಗೊಳಿಸುತ್ತದೆ. ಮೂರೂ ಸೇನಾ ಪಡೆಗಳಲ್ಲಿ ಮಹಿಳಾ ಅಗ್ನಿವೀರರನ್ನು ನೋಡಲು ನಾನು ಉತ್ಸುಕನಾಗಿದ್ದೇನೆ. ಸೇನೆಯ ಹಲವು ವಿಭಾಗಗಳ ನೇತೃತ್ವಗಳನ್ನು ಮಹಿಳೆಯರು ವಹಿಸಿಕೊಳ್ಳಬೇಕು' ಎಂದರು.

'ದೇಶದಾದ್ಯಂತ ಅಗ್ನಿಪಥ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಯೋಜನೆಯಡಿ ಮಹಿಳೆಯರೂ ಅರ್ಜಿ ಸಲ್ಲಿಸಿದ್ದು, ಪುರುಷ ಅಗ್ನಿವೀರರೊಂದಿಗೆ ಮಹಿಳೆಯರು ತರಬೇತಿ ಪಡೆಯುತ್ತಿದ್ದಾರೆ' ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದರು.

'ಸೇವೆ ನಂತರ ಅಗ್ನಿವೀರರು ಸ್ವಉದ್ಯೋಗ ಮಾಡಲು ಬಯಸಿದರೆ, ಅಂಥವರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಕುರಿತು ಹಣಕಾಸು ಸಚಿವಾಲಯದೊಂದಿಗೆ ಮಾತುಕತೆ ನಡೆಸಲಾಗುತ್ತಿದೆ. ಅಗ್ನಿವೀರರು ಸುರಕ್ಷಾವೀರರು ಮಾತ್ರವಲ್ಲ ಸಮೃದ್ಧಿವೀರರು ಆಗಬೇಕು' ಎಂದರು.

ಸಂಕ್ಷಿಪ್ತ ಸುದ್ದಿ

ಸಿಜೆಐ ನೇಮಕ ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯನ್ನಾಗಿ (ಸಿಜೆಐ) ನೇಮಕ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

ಸಂಜೀವ್‌ಕುಮಾರ್ ತಿವಾರಿ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) 2022ರ ನವೆಂಬರ್ 11ರಂದು ವಿಚಾರಣೆಗೆ ಒಳಪಡಿಸಿದ್ದ ಹೈಕೋರ್ಟ್ ನ್ಯಾಯಪೀಠವು ಅರ್ಜಿದಾರರ ಮನವಿ ತಿರಸ್ಕರಿಸಿತ್ತು. ಜೊತೆಗೆ ₹1 ಲಕ್ಷ ಮೊತ್ತದ ದಂಡವನ್ನೂ ವಿಧಿಸಿತ್ತು. ಈ ತೀರ್ಪನ್ನು ಪುನರ್ ಪರಿಶೀಲಿಸುವಂತೆ ಕೋರಿ ಅರ್ಜಿದಾರರು ಮೇಲ್ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಸಚ್‌ದೇವ ಮತ್ತು ವಿಕಾಸ್ ಮಹಾಜನ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು 'ಮೇಲ್ಮನವಿ ಅರ್ಜಿಯನ್ನು ಮಾನ್ಯ ಮಾಡಲು ಆಗುವುದಿಲ್ಲ' ಎಂದು ಹೇಳಿತು.

ಆಜಾದ್ ಪಕ್ಷದಿಂದ ಇನ್ನೂ ಹಲವರು ಕಾಂಗ್ರೆಸ್‌ಗೆ: ಜೈರಾಂ

ನವದೆಹಲಿ: ಗುಲಾಂ ನಬಿ ಆಜಾದ್ ಅವರ ಡೆಮಾಕ್ರಟಿಕ್ ಆಜಾದ್ ಪಕ್ಷದಿಂದ (ಡಿಎಪಿ) ಇನ್ನೂ ಹಲವರು ಮಂಗಳವಾರ ಕಾಂಗ್ರೆಸ್‌ಗೆ ಮರಳಲಿದ್ದಾರೆ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಂ ರಮೇಶ್ ಸೋಮವಾರ ಹೇಳಿದ್ದಾರೆ.

ಈ ತಿಂಗಳ ಆರಂಭದಲ್ಲಿ ಡಿಎಪಿಯಲ್ಲಿದ್ದ ಜಮ್ಮು–ಕಾಶ್ಮೀರದ ಮಾಜಿ ಉಪಮುಖ್ಯಮಂತ್ರಿ ತಾರಾಚಂದ್ ಮತ್ತು ಪೀರ್‌ಜಾದಾ ಮೊಹಮ್ಮದ್ ಸಯೀದ್ ಸೇರಿದಂತೆ ಒಟ್ಟು 17 ನಾಯಕರು ಕಾಂಗ್ರೆಸ್‌ಗೆ ಮರಳಿ ಸೇರ್ಪಡೆಯಾಗಿದ್ದರು.

ಗೂಗಲ್ ಅರ್ಜಿ: ನಾಳೆ 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಆದೇಶ ಪ್ರಶ್ನಿಸಿ ಗೂಗಲ್ ಕಂಪನಿ ಸಲ್ಲಿಸಿರುವ ಅರ್ಜಿಯನ್ನು ಇದೇ 18ಕ್ಕೆ ವಿಚಾರಣೆಗೆ ಒಳಪಡಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡಿದ್ದಕ್ಕಾಗಿ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಗೂಗಲ್ ಕಂಪನಿಗೆ ₹1,337.76 ಕೋಟಿ ದಂಡ ವಿಧಿಸಿತ್ತು. ಇದಕ್ಕೆ ತಡೆ ನೀಡುವಂತೆ ಕೋರಿ ಕಂಪನಿಯು ಎನ್‌ಸಿಎಲ್‌ಎಟಿಗೆ ಮನವಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ್ದ ಎನ್‌ಸಿಎಲ್‌ಎಟಿ, ದಂಡದಲ್ಲಿ ಶೇ 10ರಷ್ಟು ಮೊತ್ತ ಪಾವತಿಸುವಂತೆ ಗೂಗಲ್ ಕಂಪನಿಗೆ ಸೂಚಿಸಿತ್ತು. ಈ ಕುರಿತು ಗೂಗಲ್, ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ: 40ಕ್ಕೇರಿದ ಸಾವು

ಕೀವ್(ಎಪಿ): ಉಕ್ರೇನ್‌ನ ನಿಪ್ರೊ ನಗರದ ಗೋಪುರ ಅಪಾರ್ಟ್‌ಮೆಂಟ್ ಮೇಲೆ ರಷ್ಯಾ ಶನಿವಾರ ತಡರಾತ್ರಿ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಮಡಿದವರ ಸಂಖ್ಯೆ ಸೋಮವಾರ 40ಕ್ಕೆ ತಲುಪಿದೆ. 70ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಹಲವರು ನಾಪತ್ತೆಯಾಗಿದ್ದಾರೆ.

1,700 ನಿವಾಸಿಗಳು ವಾಸವಿದ್ದ ಅಪಾರ್ಟ್‌ಮೆಂಟ್ ಗುರಿಯಾಗಿಸಿ ರಷ್ಯಾ ಸೇನೆ ಕೆಎಚ್–22 ಕ್ಷಿಪಣಿಯನ್ನು ಕರ್ಸ್ಕ್ ಪ್ರದೇಶದಿಂದ ಉಡಾಯಿಸಿತ್ತು.

ಸೋಮವಾರ ಕೆರ್ಸಾನ್, ಝುಪೊರಿಝಿಯಾ ನಗರಗಳ ಮೇಲೆ ರಷ್ಯಾ ಪಡೆಗಳು ಶೆಲ್ ದಾಳಿ ಮುಂದುವರಿಸಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ ಗೀತಾಲಕ್ಷ್ಮೀ ಆರ್.
ನಿಧನ : 17-1-1994
ನೀವು ನಮ್ಮನ್ನಗಲಿ ಇಂದಿಗೆ ಇಪ್ಪತ್ತೊಂಬತ್ತು ವರ್ಷಗಳಾದವು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ
ಎ. ರವೀಂದ್ರನಾಥ್ ಮತ್ತು ಎ. ಆರ್. ಅಶ್ವಥ್
ಹಾಗೂ ಕುಟುಂಬವರ್ಗದವರು
ರಾಜ್‌ಹನ್ಸ್ ಎಂಟರ್‌ಪ್ರೈಸಸ್, ರಾಜ್‌ಹನ್ಸ್ ಪಬ್ಲಿಕೇಷನ್,
ಪ್ರಿಯಾಂಕ ಮತ್ತು ಚಿತ್ರ ಪತ್ರಿಕೆಗಳು
ಬೆಂಗಳೂರು – 560 044.

16ನೇ ವರ್ಷದ ಸವಿನೆನಪು

ಹೆಚ್. ಮಹೇಶ್ ರೆಡ್ಡಿ
ದಿವಂಗತ ನೇತಪ್ಪ ರೆಡ್ಡಿಯವರ ಮೊಮ್ಮಗ
ದಿವಂಗತ ರಾಮಾಂಜಿನಿ ರೆಡ್ಡಿ
5-11-1988 - 17-01-2007
ನಿನ್ನ ಪ್ರೀತಿಯ ಸವಿನೆನಪು
ಸದಾ ನಮ್ಮಲ್ಲಿ ಇರುತ್ತದೆ.
ಸದಾ ನಿನ್ನ ಆತ್ಮಕ್ಕೆ ಶಾಂತಿ ಕೋರುವ
ತಾಯಿ – ಜಯಮ್ಮ ತಂದೆ–ಹನುಮಂತರೆಡ್ಡಿ
ಹಾಗೂ ಬಂಧು ಮಿತ್ರರು, ಚಿಕ್ಕ ಬಾಣಸವಾಡಿ

ಪ್ರಥಮ ವರ್ಷದ ಪುಣ್ಯಸ್ಮರಣೆ

ನಿಧನ : 17–01–2022
ಶ್ರೀ ಕೆ.ಹೆಚ್. ರಾಮಕೃಷ್ಣಪ್ಪ
ಕೊಡಿಗೇಹಳ್ಳಿ, ಬೆಂಗಳೂರು–560092
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವೆಂದು ಪ್ರಾರ್ಥಿಸುವೆ.
ಇಂತಿ ದುಃಖತಪ್ತರು: ಶ್ರೀಮತಿ ಮುನಿಯಮ್ಮ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು

ವೈಕುಂಠ ಸಮಾರಾಧನೆ



ಪ್ರೊ. ಓ. ಅನಂತರಾಮಯ್ಯ
ಶ್ರೀಮತಿ ಬಿ.ಕೆ. ಸುಭದ್ರಮ್ಮ, ನಾಗದೇವನಹಳ್ಳಿ, ಆರ್.ಆರ್. ಲೇಔಟ್, ಬೆಂಗಳೂರು–56
ನನ್ನ ಪೂಜ್ಯ ಪತಿಯವರಾದ ಪ್ರೊ. ಓ. ಅನಂತರಾಮಯ್ಯ ವಿಶ್ರಾಂತ ಸಂಸ್ಥಾಪಕ ಉಪಕುಲಪತಿಗಳು, ತುಮಕೂರು ವಿಶ್ವವಿದ್ಯಾಲಯ
ಇವರು ತಾ॥ 07–01–2023ರ ಶನಿವಾರ ಸಂಜೆ 6–30 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ತುಮಕೂರು ಜಿಲ್ಲೆ ಕೊರಟಗೆರೆಯಲ್ಲಿ ಶ್ರೀ ಗುಂಡಾಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ತಾ॥ 18–01–2023 ರಂದು ಬುಧವಾರ ಬೆಳಿಗ್ಗೆ 10–30 ರಿಂದ 12 ಗಂಟೆಗೆ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಫೋ: 9886635183, 7975753169
ಇಂತಿ ದುಃಖತಪ್ತರು : ಶ್ರೀಮತಿ ಬಿ.ಕೆ. ಸುಭದ್ರಮ್ಮ, ಮಕ್ಕಳು, ಅಳಿಯಂದಿರು, ಸಹೋದರರು, ಮೊಮ್ಮಕ್ಕಳು, ವಂಶಸ್ಥರು ಹಾಗೂ ಬಂಧು–ಮಿತ್ರರು

NAME CHANGE ANNOUNCEMENT
Log on to : dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ.8884777502, 8884777503.

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ವಾಹನ

Four Wheelers Selling

Others

ಪ್ರವಾಸ

Travel

ಸಂಕ್ರಾಂತಿ ಮತ್ತು ಕ್ರೈಸ್ತ ವರ್ಷದ ಶುಭಾಶಯಗಳು: 5 ದಿನಗಳ ರಾಮೇಶ್ವರ ಪ್ರವಾಸ. 5 ದಿನಗಳ ಕಾಶಿ ಪ್ರವಾಸ. 11 ದಿನಗಳ ಕಾಶಿ ಮತ್ತು ಹರಿದ್ವಾರ್ ಪ್ರವಾಸ. 10 ದಿನಗಳ ರಾಜಸ್ಥಾನ್ ಪ್ರವಾಸ. 12 ದಿನಗಳ ಗುಜರಾತ್ ಮತ್ತು ಮಧ್ಯಪ್ರದೇಶ 14 ದಿನಗಳ ಚಾರ್ ಧಾಮ್ ಪ್ರವಾಸ. ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಸ್ಕೈ N.R.ಕಾಲೋನಿ ಬೆಂಗಳೂರು19. 8277467677 9535169658

★7.02.2023 16ದಿನಗಳು★ 95ದಿವ್ಯದೇಶ ಪ್ರವಾಸ. 04.03.2023 13/8ದಿನಗಳು ವಿಮಾನದಲ್ಲಿ ಕಾಶಿ,ಪ್ರಯಾಗ ಗಯಾ,ಆಗ್ರಾ ಮಥುರ, ಅಯೋಧ್ಯ.ಆರ್.ಗಾಂಧಿ ಟೂರ್ಸ್(ರಿ) ತ್ಯಾಗರಾಜನಗರ. 9945445809/ 9902433500

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/02/23 ಕಾಶಿ, ಗಯ, ಅಯೋಧ್ಯ. 11/02/23 ಪೂರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ. 21/02/23 ದೆಹಲಿ, ವೈಷ್ಣೋದೇವಿ. 9964527782



DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
*conditions apply
For more information Contact:
9845114560 : 9731810277
9901641752 : 9886213331
080 - 45557163 / 164

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5 ದಿನಗಳು. 28.01.2023 ಗೋವ, ಕಾರವಾರ,ಗೋಕರಣ ಮುರುಡೇಶ್ವರ ಕೊಲ್ಲೂರು 7500/-. ಮಾಘ ಹುಣ್ಣಿಮೆ ಪವಿತ್ರ ಸ್ನಾನ ಕಾವೇರಿ ಭಾಗಮಂಡಲ ಕೊಡಗು ತಲಕಾವೇರಿ ರಾಜಾಸೀಟ್ ನಿಮಿಷಾಂಬ 1500/-. 9448390735 9449721678 9731159966

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಬಾರ್ಸಿಲೋನಾಗೆ ಸೂಪರ್ ಕಪ್ ಗರಿ

ರಿಯಾದ್ (ಎಎಫ್‌ಪಿ): ಯುವ ಆಟಗಾರ ಗಾವಿ ಅವರ ಕಾಲ್ಚಳಕದ ನೆರವಿನಿಂದ ಬಾರ್ಸಿಲೋನಾ ತಂಡ ಸ್ಪಾನಿಷ್ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿ ಗೆದ್ದುಕೊಂಡಿತು.

ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಬಾರ್ಸಿ ಲೋನಾ 3–1 ಗೋಲುಗಳಿಂದ ರಿಯಲ್ ಮ್ಯಾಡ್ರಿಡ್ ತಂಡವನ್ನು ಮಣಿಸಿತು. ಗಾವಿ ಅವರು 33ನೇ ನಿಮಿಷದಲ್ಲಿ ಬಾರ್ಸಿಲೋನಾ ತಂಡದ ಗೋಲಿನ ಖಾತೆ ತೆರೆದರು. ವಿರಾಮಕ್ಕೆ ಕೆಲವೇ ನಿಮಿಷಗಳಿರುವಾಗ ರಾಬರ್ಟ್ ಲೆವಂಡೊವ್‌ಸ್ಕಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು.

ಪೆಡ್ರಿ ಗೊನ್ಸಾಲೆಸ್ 69 ನೇ ನಿಮಿಷದಲ್ಲಿ ಮೂರನೇ ಗೋಲು ತಂದುಕೊಟ್ಟರು. ಎರಡು ಮತ್ತು ಮೂರನೇ ಗೋಲುಗಳಿಗೆ ಅಸಿಸ್ಟ್ ನೀಡಿದ ಗಾವಿ, ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಮ್ಯಾಡ್ರಿಡ್ ತಂಡದ ಏಕೈಕ ಗೋಲನ್ನು ಕರೀಂ ಬೆಂಜೆಮಾ ಹೆಚ್ಚುವರಿ ಅವಧಿಯಲ್ಲಿ ಗಳಿಸಿದರು.

ಮಿಥುನ್ ಮಿಂಚು

ಬೆಂಗಳೂರು: ಕರ್ನಾಟಕ ಫಾರೆಸ್ಟ್ ಸ್ಪೋರ್ಟ್ಸ್ ಬೋರ್ಡ್ ಸೊಸೈಟಿ (ಕೆಎಫ್‌ಎಸ್‌ಬಿಎಸ್) ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಕೆಎಫ್‌ಎಸ್‌ಬಿಎಸ್ 3–1ರಿಂದ ಹಿಂದೂಸ್ತಾನ್ ಫ್ರೆಂಡ್ಸ್ ಹಾಕಿ ಕ್ಲಬ್ ಎದುರು ಗೆದ್ದಿತು. ವಿಜೇತ ತಂಡದ ಮಿಥುನ್ 32 ಮತ್ತು 48ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ದರ್ಶನ್ ಡಿ.ಎಸ್. (40ನೇ ನಿ.) ಒಂದು ಗೋಲು ಹೊಡೆದರು. ಫ್ರೆಂಡ್ಸ್ ಕ್ಲಬ್ ತಂಡಕ್ಕಾಗಿ ವಿಘ್ನೇಶ್ ಆರ್. (43ನೇ ನಿ.) ಗೋಲು ದಾಖಲಿಸಿದರು.

ಹಾಕಿ: ಆಸ್ಟ್ರೇಲಿಯಾ ವಿರುದ್ಧ ಡ್ರಾ ಸಾಧಿಸಿದ ಅರ್ಜೆಂಟೀನಾ

ನೆದರ್ಲೆಂಡ್ಸ್ ಗೆಲುವಿನ ಓಟ

ರೂರ್ಕೆಲಾ/ ಭುವನೇಶ್ವರ (ಪಿಟಿಐ): ಚುರುಕಿನ ಆಟ ಮುಂದುವರಿಸಿದ ನೆದರ್ಲೆಂಡ್ಸ್ ತಂಡ ಎಫ್‌ಐಎಚ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಪಡೆಯಿತು.

ರೂರ್ಕೆಲಾದ ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಡಚ್ ತಂಡ 4–0 ಗೋಲುಗಳಿಂದ ನ್ಯೂಜಿಲೆಂಡ್ ವಿರುದ್ಧ ಗೆದ್ದಿತು. ಆರು ಪಾಯಿಂಟ್‌ಗಳೊಂದಿಗೆ ‘ಸಿ’ ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ನೆದರ್ಲೆಂಡ್ಸ್, ಕ್ವಾರ್ಟರ್ ಫೈನಲ್ ಸನಿಹ ತಲುಪಿತು.

ಥಿಯರಿ ಬ್ರಿಂಕ್‌ಮನ್ ಅವರು 2 ಹಾಗೂ 12ನೇ ನಿಮಿಷದಲ್ಲಿ ಸೊಗಸಾದ ಫೀಲ್ಡ್ ಗೋಲು ಗಳಿಸಿ ನೆದರ್ಲೆಂಡ್ಸ್‌ಗೆ ಮುನ್ನಡೆ ತಂದಿತ್ತರು. ಇತರ ಗೋಲುಗಳನ್ನು ಕೊಯೆನ್ ಬಿಜೆನ್ (19ನೇ ನಿ.) ಹಾಗೂ ಜೆಪ್ ಹೊಯೆದೆಮೇಕರ್ (54ನೇ ನಿ.) ಗಳಿಸಿದರು.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಮಲೇಷ್ಯಾ 3–2 ಗೋಲುಗಳಿಂದ ಚಿಲಿ ವಿರುದ್ಧ ಗೆದ್ದಿತು. ರಜೀ ರಹೀಂ (25ನೇ ನಿ.), ಅಶ್ರನ್ ಹಮ್ಸನಿ (46ನೇ ನಿ.) ಹಾಗೂ ನೊರ್ಸಿಯಾಫಿಕ್ ಸುಮಂತ್ರಿ (41ನೇ ನಿ.) ಅವರು ಗೋಲು ಗಳಿಸಿ ಮಲೇಷ್ಯಾ ಗೆಲುವಿಗೆ ಕಾರಣರಾದರು. ಚಿಲಿ ತಂಡದ ಪರ ಯುವಾನ್ ಅಮೊರೊಸೊ (19ನೇ ನಿ.) ಮತ್ತು ಮಾರ್ಟಿನ್ ರಾಡ್ರಿಗಸ್ (28ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಆಸ್ಟ್ರೇಲಿಯಾ ಕಟ್ಟಿಹಾಕಿದ ಅರ್ಜೆಂಟೀನಾ: ‘ಎ’ ಗುಂಪಿನ ಪಂದ್ಯದಲ್ಲಿ ಅರ್ಜೆಂಟೀನಾ ತಂಡ ವು ಪ್ರಬಲ ಆಸ್ಟ್ರೇಲಿಯಾ ತಂಡವನ್ನು 3–3 ಗೋಲುಗಳ ಡ್ರಾದಲ್ಲಿ ಕಟ್ಟಿಹಾಕಿತು.

ಪ್ರಬಲ ಪೈಪೋಟಿ ನಡೆದ ಪಂದ್ಯದ 9ನೇ ನಿಮಿಷದಲ್ಲಿ ಜೆರೆಮಿ ಹೇವರ್ಡ್ ಅವರು ಆಸ್ಟ್ರೇಲಿಯಾಕ್ಕೆ ಮುನ್ನಡೆ ತಂದುಕೊಟ್ಟರು. ಡೇನಿಯಲ್ ಬಿಯೆಲ್ 29ನೇ ನಿಮಿಷದಲ್ಲಿ ಎರಡನೇ ಗೋಲು ಗಳಿಸಿದರು.

ಮರುಹೋರಾಟ ನಡೆಸಿದ ಅರ್ಜೆಂಟೀನಾ, ಥಾಮಸ್ ಡೊಮೆನೆ (18 ನೇ ನಿ.) ಹಾಗೂ ಮೈಸೊ ಕ್ಯಾಸೆಲ (32ನೇ ನಿ.) ಅವರ ಗೋಲುಗಳ ನೆರವಿನಿಂದ 2–2ರಲ್ಲಿ ಸಮಬಲ ಸಾಧಿಸಿತು.

48ನೇ ನಿಮಿಷದಲ್ಲಿ ಮಾರ್ಟಿನ್ ಫೆರೆರೊ, ಅರ್ಜೆಂಟೀನಾಕ್ಕೆ 3–2 ಮೇಲುಗೈ ತಂದಿತ್ತರು. ಪಂದ್ಯ ಕೊನೆಗೊಳ್ಳಲು ಮೂರು ನಿಮಿಷಗಳು ಇದ್ದಾಗ ಬ್ಲೇಕ್ ಗೋವರ್ಸ್ (57ನೇ ನಿ.) ಕಾಂಗರೂ ನಾಡಿನ ತಂಡಕ್ಕೆ ಸಮಬಲದ ಗೋಲು ತಂದುಕೊಟ್ಟರು.

ಇವೆರಡು ತಂಡಗಳು ತಲಾ ನಾಲ್ಕು ಪಾಯಿಂಟ್ಸ್ ಹೊಂದಿವೆ. ಉತ್ತಮ ಗೋಲು ಸರಾಸರಿಯಲ್ಲಿ ಆಸ್ಟ್ರೇಲಿಯಾ ಅಗ್ರಸ್ಥಾನದಲ್ಲಿದ್ದರೆ, ಅರ್ಜೆಂಟೀನಾ ನಂತರದ ಸ್ಥಾನದಲ್ಲಿದೆ.

ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್ ತಂಡವು 2–1 ಗೋಲುಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು.

ಗೋಲು ಗಳಿಸಿದ ಆಸ್ಟ್ರೇಲಿಯಾದ ಬ್ಲೇಕ್ ಗೋವರ್ಸ್ ಅವರು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಇಂದಿನ ಪಂದ್ಯಗಳು

ಕೊರಿಯಾ–ಜಪಾನ್
ಸಂಜೆ 5ರಿಂದ

ಜರ್ಮನಿ–ಬೆಲ್ಜಿಯಂ
ಸಂಜೆ 7ರಿಂದ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆತ್ಮವಿಶ್ವಾಸದಲ್ಲಿ ಮಯಂಕ್ ಬಳಗ

ರಣಜಿ ಕ್ರಿಕೆಟ್: ಕೇರಳ ವಿರುದ್ಧದ ಪಂದ್ಯ ಇಂದಿನಿಂದ

ತಿರುವನಂತಪುರ: ನಾಕೌಟ್ ಹಂತದಲ್ಲಿ ಸ್ಥಾನವನ್ನು ಬಹುತೇಕ ಖಚಿತಪಡಿಸಿಕೊಂಡಿರುವ ಕರ್ನಾಟಕ ತಂಡ, ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕೇರಳ ತಂಡವನ್ನು ಎದುರಿಸಲಿದೆ.

ಇಲ್ಲಿನ ತುಂಬದಲ್ಲಿರುವ ಸೇಂಟ್ ಕ್ಸೇವಿಯರ್ ಕಾಲೇಜು ಮೈದಾನದಲ್ಲಿ ಮಂಗಳವಾರ ಆರಂಭವಾಗುವ ಪಂದ್ಯದಲ್ಲಿ ಗೆಲ್ಲುವ ವಿಶ್ವಾಸವನ್ನು ಮಯಂಕ್ ಅಗರವಾಲ್ ಬಳಗ ಹೊಂದಿದೆ.

ಐದು ಪಂದ್ಯಗಳಿಂದ 26 ಪಾಯಿಂಟ್ಸ್ ಕಲೆಹಾಕಿರುವ ಕರ್ನಾಟಕ ತಂಡ ‘ಸಿ’ ಗುಂಪಿನಲ್ಲಿ ಅಗ್ರಸ್ಥಾನಲ್ಲಿದೆ. ಕರ್ನಾಟಕ, ಆಲೂರಿನಲ್ಲಿ ನಡೆದಿದ್ದ ಹಿಂದಿನ ಪಂದ್ಯದಲ್ಲಿ ರಾಜಸ್ಥಾನ ತಂಡವನ್ನು 10 ವಿಕೆಟ್‌ಗಳಿಂದ ಮಣಿಸಿತ್ತು.

ಸ್ಪಿನ್ನರ್‌ಗಳತ್ತ ಚಿತ್ತ: ಕರ್ನಾಟಕ ತಂಡಕ್ಕೆ ಬ್ಯಾಟಿಂಗ್ ಮತ್ತು ವೇಗದ ಬೌಲಿಂಗ್ ವಿಭಾಗದಲ್ಲಿ ಯಾವುದೇ ಚಿಂತೆಯಿಲ್ಲ. ಆರ್.ಸಮರ್ಥ್, ಮಯಂಕ್ ಮತ್ತು ಮನೀಷ್ ಪಾಂಡೆ ಉತ್ತಮ ಲಯದಲ್ಲಿದ್ದು ದೊಡ್ಡ ಇನಿಂಗ್ಸ್ ಆಡಿದ್ದಾರೆ.

ವೇಗಿಗಳಾದ ವಿ.ಕೌಶಿಕ್, ವಿದ್ವತ್ ಕಾವೇರಪ್ಪ ಮತ್ತು ವೈಶಾಖ ವಿಜಯಕುಮಾರ್ ಈ ಋತುವಿನಲ್ಲಿ ಕರ್ನಾಟಕದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆದರೆ ಸ್ಪಿನ್ನರ್‌ಗಳಾದ ಕೆ.ಗೌತಮ್, ಶ್ರೇಯಸ್ ಗೋಪಾಲ್ ಹಾಗೂ ಶುಭಾಂಗ್ ಹೆಗ್ಡೆ ಇನ್ನೂ ತಮ್ಮ ಕೈಚಳಕ ತೋರಿಲ್ಲ.

ಇಲ್ಲಿನ ಪಿಚ್ ಸ್ಪಿನ್ನರ್‌ಗಳಿಗೆ ನೆರವು ನೀಡುವ ಸಾಧ್ಯತೆಯಿದ್ದು, ಗೌತಮ್ ಮತ್ತು ಶ್ರೇಯಸ್ ಮೇಲೆ ಚಿತ್ತ ನೆಟ್ಟಿದೆ. ರೋನಿತ್ ಮೋರೆ ಒಳಗೊಂಡಂತೆ ಕರ್ನಾಟಕದ ನಾಲ್ವರು ವೇಗಿಗಳು ಈ ಋತುವಿನಲ್ಲಿ ಒಟ್ಟು 66 ವಿಕೆಟ್‌ಗಳನ್ನು ತಮ್ಮೊಳಗೆ ಹಂಚಿಕೊಂಡಿದ್ದಾರೆ. ಆದರೆ ಮೂವರು ಸ್ಪಿನ್ನರ್‌ಗಳು ಪಡೆದಿರುವುದು 19 ವಿಕೆಟ್ ಮಾತ್ರ.

ಈ ಪಂದ್ಯದಲ್ಲಿ ಕೇರಳದ ಸ್ಪಿನ್ನರ್‌ಗಳು ಕರ್ನಾಟಕಕ್ಕೆ ಸವಾಲಾಗಿ ಪರಿಣಮಿಸುವುದು ಖಚಿತ. ಅತ್ಯುತ್ತಮ ಫಾರ್ಮ್‌ನಲ್ಲಿರುವ ಜಲಜ್ ಸಕ್ಸೇನಾ ಐದು ಪಂದ್ಯಗಳಿಂದ 43 ವಿಕೆಟ್ ಪಡೆದಿದ್ದಾರೆ. ವಿಶಾಖ ಚಂದ್ರನ್ ಮತ್ತು ಸಿಜೊಮೋನ್ ಜೋಸೆಫ್ ಅವರೂ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಸರ್ವಿಸಸ್ ಎದುರಿನ ಕೊನೆಯ ಪಂದ್ಯದಲ್ಲಿ ಜಲಜ್ 11 ವಿಕೆಟ್ ಗಳಿಸಿದ್ದರು. ಆ ಪಂದ್ಯವನ್ನು ಕೇರಳ 204 ರನ್‌ಗಳಿಂದ ಗೆದ್ದಿತ್ತು. 19 ಪಾಯಿಂಟ್ಸ್ ಪಡೆದಿರುವ ಕೇರಳ, ‘ಸಿ’ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ.

ದಿನದಾಟ ಆರಂಭ: ಬೆಳಿಗ್ಗೆ 9.30

ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್

ಇಂಡಿಯಾ ಓಪನ್: ಸಿಂಧು, ಸೇನ್ ಕಣಕ್ಕೆ

ನವದೆಹಲಿ (ಪಿಟಿಐ): ಹಾಲಿ ಚಾಂಪಿಯನ್, ಭಾರತದ ಲಕ್ಷ್ಯ ಸೇನ್ ಮತ್ತು ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ.ಸಿಂಧು ಅವರು ಮಂಗಳವಾರ ಆರಂಭವಾಗುವ ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದು, ಪ್ರಶಸ್ತಿ ಜಯಿಸುವ ನೆಚ್ಚಿನ ಆಟಗಾರ ಮತ್ತು ಆಟಗಾರ್ತಿಯರಲ್ಲಿ ಪ್ರಮುಖರೆನಿಸಿದ್ದಾರೆ.

ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಲಕ್ಷ್ಯ ಮತ್ತು ಎಚ್‌.ಎಸ್. ಪ್ರಣಯ್ ಮುಖಾಮುಖಿಯಾಗಲಿದ್ದಾರೆ. ಕ್ವಾಲಾಲಂಪುರದಲ್ಲಿ ಕಳೆದ ವಾರ ನಡೆದಿದ್ದ ಮಲೇಷ್ಯಾ ಓಪನ್ ಟೂರ್ನಿಯಲ್ಲೂ ಇವರಿಬ್ಬರೂ ಪರಸ್ಪರ ಸೆಣಸಿದ್ದರು. ಕಿದಂಬಿ ಶ್ರೀಕಾಂತ್ ಅವರಿಗೆ ಕಠಿಣ ಸವಾಲು ಎದುರಾಗಿದ್ದು, ಎರಡು ಬಾರಿಯ ವಿಶ್ವ ಚಾಂಪಿಯನ್, ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ಎದುರು ಆಡುವರು. ಡಬಲ್ಸ್‌ನಲ್ಲಿ ಸಾತ್ವಿಕ್–ಚಿರಾಗ್ ಅವರಿಗೆ ಡೆನ್ಮಾರ್ಕ್‌ನ ಜೆಪ್ಪೆ ಬೇ ಮತ್ತು ಲಾಸ್ಸೆ ಮೊಲ್ಹೆದೆ ಅವರ ಸವಾಲು ಎದುರಾಗಿದೆ.

ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಸಿಂಧು, ಥಾಯ್ಲೆಂಡ್‌ನ ಸುಪನಿದಾ ಕೇಟ್‌ಥೊಂಗ್ ಅವರನ್ನು ಎದುರಿಸುವರು. ಸೈನಾ ನೆಹ್ವಾಲ್, ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಟಿ20 ಕ್ರಿಕೆಟ್: ಮಹಿಳಾ ಐಪಿಎಲ್ ಟೂರ್ನಿಯ ಪ್ರಸಾರ ಹಕ್ಕು ಹರಾಜು

₹ 951 ಕೋಟಿಗೆ ವಯಾಕಾಮ್ ಪಾಲು

ನವದೆಹಲಿ (ಪಿಟಿಐ): ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯಗಳ ಮುಂದಿನ ಐದು ವರ್ಷಗಳ ಪ್ರಸಾರ ಹಕ್ಕನ್ನು ವಯಾಕಾಮ್ 18 ಸಂಸ್ಥೆ ₹ 951 ಕೋಟಿಗೆ ತನ್ನದಾಗಿಸಿಕೊಂಡಿದೆ.

ಸೋಮವಾರ ನಡೆದ ಹರಾಜಿನಲ್ಲಿ ಡಿಸ್ನಿ ಸ್ಟಾರ್ ಮತ್ತು ಸೋನಿ ಒಳಗೊಂಡಂತೆ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದ ವಯಾಕಾಮ್, ಅತಿದೊಡ್ಡ ಮೊತ್ತ ನೀಡಿ ಟಿ.ವಿ ಮತ್ತು ಡಿಜಿಟಲ್ ಪ್ರಸಾರದ ಹಕ್ಕನ್ನು ಜತೆಯಾಗಿ ಗೆದ್ದುಕೊಂಡಿದೆ. ಪ್ರತಿ ಪಂದ್ಯದ ಮೌಲ್ಯ ₹ 7 ಕೋಟಿ 9 ಲಕ್ಷ ಆಗಲಿದೆ.

ಚೊಚ್ಚಲ ಮಹಿಳಾ ಐಪಿಎಲ್ ಟೂರ್ನಿ ಮಾರ್ಚ್ ಮೊದಲ ವಾರದಲ್ಲಿ ಆಯೋಜನೆಯಾಗಲಿದೆ. ಮುಂಬೈನಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಐದು ತಂಡಗಳು ಪಾಲ್ಗೊಳ್ಳಲಿವೆ.

‘ಟಿ.ವಿ ಮತ್ತು ಡಿಜಿಟಲ್ ಪ್ರಸಾರದ ಹಕ್ಕುಗಳನ್ನು ಪಡೆದ ವಯಾಕಾಮ್ 18 ಸಂಸ್ಥೆಯನ್ನು ಅಭಿನಂದಿಸುತ್ತೇನೆ. ಮಹಿಳಾ ಐಪಿಎಲ್ ಟೂರ್ನಿ ಆಯೋಜಿಸುವ ನಿಟ್ಟಿನಲ್ಲಿ ನಮ್ಮ ಪ್ರಯಾಣ ಇದರೊಂದಿಗೆ ಆರಂಭವಾಗಿದೆ. ಇದೇ ತಿಂಗಳಲ್ಲಿ ಐದು ಫ್ರಾಂಚೈಸ್‌ಗಳನ್ನು ಘೋಷಿಸುವ ಮೂಲಕ ಇನ್ನೊಂದು ಹೆಜ್ಜೆ ಇಡಲಿದ್ದೇವೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿದ್ದಾರೆ.

‘ಪ್ರತಿ ಪಂದ್ಯದ ಪ್ರಸಾರ ಹಕ್ಕು ₹ 7.09 ಕೋಟಿಗೆ ಮಾರಾಟವಾಗಿದೆ. ಮಹಿಳಾ ಕ್ರಿಕೆಟ್ ಪಂದ್ಯವೊಂದಕ್ಕೆ ಇಷ್ಟು ಮೌಲ್ಯ ಹಿಂದೆಂದೂ ದೊರೆತಿಲ್ಲ’ ಎಂದಿದ್ದಾರೆ.

‘ಈಚೆಗಿನ ಕೆಲ ವರ್ಷಗಳಲ್ಲಿ ಮಹಿಳಾ ಕ್ರಿಕೆಟ್ ಜನಪ್ರಿಯತೆ ಪಡೆಯುತ್ತಿದೆ. ಭಾರತದಲ್ಲಿ ಯಾವ ರೀತಿ ಪ್ರಚಾರ ಪಡೆಯುತ್ತಿದೆ ಎಂಬುದಕ್ಕೆ ಆಸ್ಟ್ರೇಲಿಯಾ ವಿರುದ್ಧ ಇತ್ತೀಚೆಗೆ ನಡೆದಿದ್ದ ಸರಣಿ ಉತ್ತಮ ಉದಾಹರಣೆಯಾಗಿತ್ತು’ ಎಂದು ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ವೇತಾ ಶೆರಾವತ್ ಬ್ಯಾಟಿಂಗ್– ಬಿಸಿಸಿಐ ಟ್ವಿಟರ್ ಚಿತ್ರ

ಶಫಾಲಿ, ಶ್ವೇತಾ ಆಟ: ಭಾರತಕ್ಕೆ ಜಯ

19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್

ಬೆನೊನಿ, ದಕ್ಷಿಣ ಆಫ್ರಿಕಾ (ಪಿಟಿಐ): ನಾಯಕಿ ಶಫಾಲಿ ವರ್ಮಾ ಹಾಗೂ ಆರಂಭಿಕ ಬ್ಯಾಟರ್ ಶ್ವೇತಾ ಶೆರಾವತ್ ಅವರ ಅಮೋಘ ಅರ್ಧಶತಕಗಳ ಬಲದಿಂದ ಭಾರತ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಗೆಲುವಿನ ಓಟ ಮುಂದುವರಿಸಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಭಾರತದ ಮಹಿಳೆಯರು 122 ರನ್‌ಗಳಿಂದ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತಂಡವನ್ನು ಪರಾಭವಗೊಳಿಸಿದರು.

ಪಂದ್ಯದಲ್ಲಿ ಟಾಸ್ ಗೆದ್ದ ಯುಎಇ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕರಾಗಿ ಕಣಕ್ಕಿಳಿದ ಶಫಾಲಿ (78; 34ಎ, 4X12, 6X4) ಮತ್ತು ಶ್ವೇತಾ (ಔಟಾಗದೆ 74; 49 ಎ, 4X10) ಅವರ ನೆರವಿನಿಂದ ಭಾರತ ಮೂರು ವಿಕೆಟ್ ಕಳೆದುಕೊಂಡು 219 ರನ್ ಕಲೆಹಾಕಿತು. ಮೊದಲ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರು 111 ರನ್ ಸೇರಿಸಿದರು.

ರಿಚಾ ಘೋಷ್ (49) ಕೂಡ ಕೊಡುಗೆ ನೀಡಿದರು. ಗುರಿ ಬೆನ್ನತ್ತಿದ ಯುಎಇ ನಿಗದಿತ ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು 97 ರನ್ ಮಾತ್ರ ಗಳಿಸಿತು. ಈ ಗೆಲುವಿನೊಂದಿಗೆ ಭಾರತ ತಂಡವು ಡಿ ಗುಂಪಿನಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಭದ್ರಪಡಿಸಿಕೊಂಡಿತು.

ಭಾರತ ಮುಂದಿನ ಪಂದ್ಯದಲ್ಲಿ ಬುಧವಾರ ಸ್ಕಾಟ್ಲೆಂಡ್ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 219 (ಶ್ವೇತಾ ಶೆರಾವತ್ ಔಟಾಗದೆ 74, ಶಫಾಲಿ ವರ್ಮಾ 78, ರಿಚಾ ಘೋಷ್ 49, ಇಂದುಜಾ ನಂದಕುಮಾರ್ 47ಕ್ಕೆ 1, ಮಹಿಕಾ ಗೌರ್ 53ಕ್ಕೆ 1, ಸಮ್ಮೈರಾ ಧರಣಿಧರಕಾ 33ಕ್ಕೆ 1). **ಯುನೈಟೆಡ್ ಅರಬ್ ಎಮಿರೇಟ್ಸ್:** 20 ಓವರ್‌ಗಳಲ್ಲಿ 5 ವಿಕೆಟ್‌ಗೆ 97 (ತೀರ್ಥಾ ಸತೀಶ್ 16, ಲಾವಣ್ಯ ಕೆನಿ 24, ಮಹಿಕಾ ಗೌರ್ 26; ಶಬ್ನಂ ಎಂ.ಡಿ. 21ಕ್ಕೆ 1, ಟೈಟಸ್ ಸಧು 14ಕ್ಕೆ 1, ಮನ್ನತ್ ಕಶ್ಯಪ್ 14ಕ್ಕೆ 1). **ಫಲಿತಾಂಶ:** ಭಾರತ ತಂಡಕ್ಕೆ 122 ರನ್‌ಗಳ ಜಯ

ಆಸ್ಟ್ರೇಲಿಯಾ ಓಪನ್ ಟೆನಿಸ್: ಹಿಂದೆ ಸರಿದ ನಿಕ್ ಕಿರ್ಗಿಯೊಸ್

ರಫೆಲ್ ನಡಾಲ್, ಇಗಾ ಶುಭಾರಂಭ

ಮೆಲ್ಬರ್ನ್ (ರಾಯಿಟರ್ಸ್/ ಎಎಫ್‌ಪಿ: ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಅಗ್ರಶ್ರೇಯಾಂಕ ಪಡೆದಿರುವ ರಫೆಲ್ ನಡಾಲ್ ಹಾಗೂ ಇಗಾ ಶ್ವಾಂಟೆಕ್ ಅವರು ಆಸ್ಟ್ರೇಲಿಯಾ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಸತತ ಎರಡನೇ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 36 ವರ್ಷದ ನಡಾಲ್ ಸೋಮವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 7-5, 2-6, 6-4, 6-1 ರಲ್ಲಿ ಬ್ರಿಟನ್‌ನ ಜಾಕ್ ಡ್ರೇಪರ್ ಅವರನ್ನು ಮಣಿಸಿದರು.

ಮೊದಲ ಸೆಟ್ ಪ್ರಯಾಸದಿಂದ ಗೆದ್ದ ಸ್ಪೇನ್‌ನ ಆಟಗಾರ, ಎರಡನೇ ಸೆಟ್‌ನಲ್ಲಿ ಸೋತರು. ಆ ಬಳಿಕ ಲಯ ಕಂಡುಕೊಂಡರಲ್ಲದೆ. ಐದು ಗೇಮ್‌ಗಳನ್ನು ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟು ಕೊನೆಯ ಎರಡು ಸೆಟ್‌ಗಳನ್ನು ಗೆದ್ದುಕೊಂಡರು.

ಅಮೆರಿಕದ ಫ್ರಾನ್ಸೆಸ್ ಟೈಫೊ 6-3, 6-3, 6-7, 7-6 ರಲ್ಲಿ ಜರ್ಮನಿಯ ಡೇನಿಯಲ್ ಅಲ್ಟ್‌ಮಯೆರ್ ವಿರುದ್ಧ ಗೆದ್ದರೆ, ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್ 6-3, 6-4, 7-6 ರಲ್ಲಿ ಫ್ರಾನ್ಸ್‌ನ ಕ್ವೆಂಟಿನ್ ಹೇಯ್ಸ್ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ ಬ್ರಿಟನ್‌ನ ಕ್ಯಾಮರಾನ್ ನೋರಿ 7-6, 6-0, 6-3 ರಲ್ಲಿ ಫ್ರಾನ್ಸ್‌ನ ಲುಕಾ ವಾನ್ ಅಶೆ ವಿರುದ್ಧ; ಇಟಲಿಯ ಯಾನಿಕ್ ಸಿನೆರ್ 6-4, 6-0, 6-2 ರಲ್ಲಿ ಬ್ರಿಟನ್‌ನ ಕೈಲ್ ಎಡ್ಮಂಡ್ ವಿರುದ್ಧ ಜಯಿಸಿದರು.

ಕಿರ್ಗಿಯೊಸ್‌ಗೆ ಗಾಯ: ಆತಿಥೇಯ ದೇಶದ ಭರವಸೆ ಎನಿಸಿದ್ದ ನಿಕ್ ಕಿರ್ಗಿಯೊಸ್ ಅವರು ಗಾಯದ ಕಾರಣ ಟೂರ್ನಿಯಿಂದ ಹೊರಬಿದ್ದರು. ‘ಮಂಡಿನೋವಿನ ಕಾರಣ ಹಿಂದೆ ಸರಿಯುತ್ತಿದ್ದೇನೆ’ ಎಂದು ಸೋಮವಾರ ತುರ್ತು ಪತ್ರಿಕಾಗೋಷ್ಠಿ ಕರೆದು ಅವರು ತಿಳಿಸಿದರು.

ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಸ್ಪರ್ಧಿ ಎನಿಸಿರುವ ಪೋಲೆಂಡ್‌ನ ಇಗಾ ಶ್ವಾಂಟೆಕ್ 6-4, 7-5 ರಲ್ಲಿ ಜರ್ಮನಿಯ ಯೂಲಾ ನೀಮಯೆರ್ ಅವರನ್ನು ಮಣಿಸಿದರು.

ಇತರ ಪಂದ್ಯಗಳಲ್ಲಿ ಅಮೆರಿಕದ ಜೆಸ್ಸಿಕಾ ಪೆಗುಲಾ 6-0, 6-1 ರಲ್ಲಿ ರೊಮೇನಿಯದ ಜಾಕ್ವೆಲಿನ್ ಕ್ರಿಸ್ಟಿಯನ್ ವಿರುದ್ಧ; ಅಮೆರಿಕದ ಕೊಕೊ ಗಾಫ್ 6-1, 6-4 ರಲ್ಲಿ ಜೆಕ್ ರಿಪಬ್ಲಿಕ್‌ನ ಕ್ಯಾಥರಿನಾ ಸಿನಿಯಕೊವಾ ವಿರುದ್ಧ; ಗ್ರೀಸ್‌ನ ಮರಿಯಾ ಸಕರಿ 6-1, 6-4 ರಲ್ಲಿ ಚೀನಾದ ಯವಾನ್ ಯುಯಿ ವಿರುದ್ಧ; ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ 6–, 7-6 ರಲ್ಲಿ ಅಮೆರಿಕದ ಸೋಫಿಯಾ ಕೆನಿನ್ ವಿರುದ್ಧವೂ ಗೆದ್ದರು.

ಪೋಲೆಂಡ್‌ನ ಇಗಾ ಶ್ವಾಂಟೆಕ್ ಆಟದ ವೈಖರಿ – ಎಎಫ್‌ಪಿ ಚಿತ್ರ

ರ‍್ಯಾಕೆಟ್ ಕಳೆದುಕೊಂಡ ನಡಾಲ್!

ಮೊದಲ ಸುತ್ತಿನ ಪಂದ್ಯದ ವೇಳೆ ಬಾಲ್ ಬಾಯ್ ಒಬ್ಬ ರಫೆಲ್ ನಡಾಲ್ ಅವರ ರ‍್ಯಾಕೆಟ್ ಕೊಂಡೊಯ್ದ ಘಟನೆ ನಡೆಯಿತು.

ಮೊದಲ ಸೆಟ್‌ನಲ್ಲಿ 4-3 ರಲ್ಲಿ ಮುನ್ನಡೆಯಲ್ಲಿದ್ದ ವೇಳೆ ನಡಾಲ್, ತಮ್ಮಲ್ಲಿರುವ ಹೆಚ್ಚುವರಿ ರ‍್ಯಾಕೆಟ್‌ನ ಸ್ಟ್ರಿಂಗ್‌ಅನ್ನು ಬಿಗಿಗೊಳಿಸಿ ತರುವಂತೆ ಸಿಬ್ಬಂದಿಗೆ ಸೂಚಿಸಿದ್ದಾರೆ. ಆದರೆ ಬಾಲ್ ಬಾಯ್, ನಡಾಲ್ ಆಡಲು ಬಳಸುತ್ತಿದ್ದ ರ‍್ಯಾಕೆಟ್‌ಅನ್ನೇ ಎತ್ತಿಕೊಂಡು ಹೋಗಿದ್ದಾನೆ. ಕಿಟ್ ಪಕ್ಕ ಇಟ್ಟಿದ್ದ ರ‍್ಯಾಕೆಟ್ ಕಾಣದೇ ಇದ್ದಾಗ ಅವರು ಅಚ್ಚರಿಗೆ ಒಳಗಾದರು.

‘ಬಾಲ್ ಬಾಯ್ ನನ್ನ ರ‍್ಯಾಕೆಟ್ ಕೊಂಡೊಯ್ದ’ ಎಂದು ನಡಾಲ್ ನಗು ಬೀರುತ್ತಾ ಎದುರಾಳಿ, ಜಾಕ್ ಡ್ರೇಪರ್‌ಗೆ ತಿಳಿಸಿದ್ದಾರೆ. ಆ ಬಳಿಕ ಇನ್ನೊಂದು ರ‍್ಯಾಕೆಟ್ ಬಳಸಿ ಆಟ ಮುಂದುವರಿಸಿದರು.

ಬಾಲ್ ಬ್ಯಾಡ್ಮಿಂಟನ್: ಮಂಗಳೂರು ತಂಡಕ್ಕೆ ಮತ್ತೊಂದು ಜಯ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಆತಿಥೇಯ ಮಂಗಳೂರು ವಿವಿ ಮತ್ತು ಹಾಲಿ ಚಾಂಪಿಯನ್ ತಮಿಳುನಾಡಿನ ಎಸ್‌ಆರ್‌ಎಂ ವಿಜ್ಞಾನ-ತಂತ್ರಜ್ಞಾನ ಸಂಸ್ಥೆ ತಂಡಗಳು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯುತ್ತಿರುವ ಪುರುಷರ ಅಖಿಲ ಭಾರತ ಅಂತರ ವಿವಿ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಲೀಗ್ ಹಂತ ಪ್ರವೇಶಿಸಿವೆ.

ಕ್ವಾರ್ಟರ್ ಫೈನಲ್ ನಲ್ಲಿ ಮಂಗಳೂರು 5-21, 35-30ರಲ್ಲಿ ತಮಿಳುನಾಡಿನ ಅಣ್ಣಾಮಲೈ ವಿವಿ ವಿರುದ್ಧ ಜಯಿಸಿತು. ಎಸ್‌ಆರ್‌ಎಂ ಸಂಸ್ಥೆ ಕೊಯಮತ್ತೂರಿನ ಭಾರತಿಯಾರ್ ವಿವಿಯನ್ನು 37-35, 35-19ರಲ್ಲಿ ಮಣಿಸಿತು. ಆಂಧ್ರ ಮತ್ತು ಚೆನ್ನೈನ ಅಣ್ಣಾ ವಿವಿಗಳೂ ಲೀಗ್ ಹಂತ ಪ್ರವೇಶಿಸಿದವು.

ಇಂದಿನ ಪಂದ್ಯಗಳು: ಬೆಳಿಗ್ಗೆ 8ರಿಂದ ಲೀಗ್ ಹಣಾಹಣಿ. 2.30ಕ್ಕೆ 3ನೇ ಸ್ಥಾನಕ್ಕಾಗಿ ಪಂದ್ಯ. ಸಂಜೆ 4 ಗಂಟೆಗೆ ಅಂತಿಮ ಲೀಗ್ ಪಂದ್ಯ

ಚೇತರಿಸಿಕೊಳ್ಳುತ್ತಿದ್ದೇನೆ: ಪಂತ್

ಮುಂಬೈ (ಪಿಟಿಐ): ಕಾರು ಅಪಘಾತದಲ್ಲಿ ಗಾಯಗೊಂಡಿದ್ದ ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಚೇತರಿಸಿಕೊಳ್ಳುತ್ತಿದ್ದಾರೆ.

‘ನನ್ನ ಮೂರು ಶಸ್ತ್ರಚಿಕಿತ್ಸೆಗಳು ಯಶಸ್ವಿಯಾಗಿ ನಡೆದಿದ್ದು, ಚೇತರಿಕೆಯ ಹಾದಿಯಲ್ಲಿದ್ದೇನೆ. ಮುಂದಿರುವ ಸವಾಲುಗಳನ್ನು ಎದುರಿಸಲು ಸಜ್ಜಾಗುತ್ತಿದ್ದೇನೆ. ಸಂಕಷ್ಟದ ಸಮಯದಲ್ಲಿ ಬೆಂಬಲಕ್ಕೆ ನಿಂತ ಬಿಸಿಸಿಐ, ಜಯ್ ಶಾ (ಬಿಸಿಸಿಐ ಕಾರ್ಯದರ್ಶಿ), ಸರ್ಕಾರದ ಅಧಿಕಾರಿಗಳು, ವೈದ್ಯರು, ಸಹ ಆಟಗಾರರು, ಅಭಿಮಾನಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ’ ಎಂದು ಪಂತ್ ಅವರು ‘ಟ್ವೀಟ್’ ಮಾಡಿದ್ದಾರೆ.

‘ಈ ಸಮಯದಲ್ಲಿ ಎಲ್ಲರಿಗೂ ವೈಯಕ್ತಿಕವಾಗಿ ಕೃತಜ್ಞತೆ ಸಲ್ಲಿಸಲು ನನಗೆ ಸಾಧ್ಯವಾಗದು. ಆದರೆ ಅಪಘಾತದ ಸ್ಥಳದಲ್ಲಿ ನೆರವಿಗೆ ಧಾವಿಸಿದ ಇಬ್ಬರು ಹೀರೋಗಳಾದ ರಜತ್ ಕುಮಾರ್ ಮತ್ತು ನಿಶು ಕುಮಾರ್ ಅವರಿಗೆ ಎಂದೆಂದಿಗೂ ಕೃತಜ್ಞನಾಗಿರುತ್ತೇನೆ’ ಎಂದು ಬರೆದುಕೊಂಡಿದ್ದಾರೆ.

ರಿಷಭ್ ಪಂತ್

ಫೆಬ್ರುವರಿ 4ರಿಂದ ಚೆಸ್ ಟೂರ್ನಿ

ಬೆಂಗಳೂರು: ಶ್ರೀ ಸದ್ಗುರು ಚೆಸ್‌ಸ್ಮಾರ್ಟ್ಸ್ ಮತ್ತು ಮ್ಯೂಸಿಕ್ ಅಕಾಡೆಮಿ ಹುಬ್ಬಳ್ಳಿ ಅವರಿಂದ ರಾಷ್ಟ್ರಮಟ್ಟದ ಮುಕ್ತ ಫಿಡೆ ರೇಟೆಡ್ ರ‍್ಯಾಪಿಡ್ ಹಾಗೂ ಬ್ಲಿಟ್ಜ್ ಚೆಸ್ ಟೂರ್ನಿಯನ್ನು ಫೆಬ್ರುವರಿ 4 ಮತ್ತು 5ರಂದು ಆಯೋಜಿಸಲಾಗುತ್ತಿದೆ.

ಬೆಂಗಳೂರಿನ ವೈಟ್‌ಫೀಲ್ಡ್‌ನ ವರ್ತೂರು ಕ್ರಾಸ್ ರಸ್ತೆಯ ವರ್ಜಿನಿಯಾ ಮಾಲ್‌ನಲ್ಲಿ ಟೂರ್ನಿ ನಡೆಯಲಿದೆ. ಹೆಸರು ನೋಂದಾಯಿಸಲು ಕೊನೆಯ ದಿನಾಂಕ ಫೆಬ್ರುವರಿ 3. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 8762191789 ಅಥವಾ 8431737265 ಸಂಪರ್ಕಿಸಬೇಕು ಎಂದು ಸಂಸ್ಥೆಯ ಅಧ್ಯಕ್ಷೆ ಅರ್ಚನಾ ನಾಯಿಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಜಾಬ್ ಕಿಂಗ್ಸ್‌ಗೆ ಜೋಶಿ ಸ್ಪಿನ್ ಬೌಲಿಂಗ್ ಕೋಚ್

ನವದೆಹಲಿ (ಪಿಟಿಐ): ಭಾರತ ತಂಡದ ಮಾಜಿ ಆಟಗಾರ, ಕರ್ನಾಟಕದ ಸುನೀಲ್ ಜೋಶಿ ಅವರು ಐಪಿಎಲ್ ಕ್ರಿಕೆಟ್ ಫ್ರಾಂಚೈಸ್ ಪಂಜಾಬ್ ಕಿಂಗ್ಸ್ ತಂಡದ ಸ್ಪಿನ್ ಬೌಲಿಂಗ್ ಕೋಚ್ ಆಗಿ ನೇಮಕವಾಗಿದ್ದಾರೆ. ಪಂಜಾಬ್ ಕಿಂಗ್ಸ್‌ನ ಟ್ವಿಟರ್ ಖಾತೆಯಲ್ಲಿ ಈ ವಿಷಯ ತಿಳಿಸಲಾಗಿದೆ. 52 ವರ್ಷದ ಸುನೀಲ್ 1996–2001ರ ಅವಧಿಯಲ್ಲಿ ಭಾರತ ತಂಡದ ಪರ 15 ಟೆಸ್ಟ್ ಮತ್ತು 69 ಏಕದಿನ ಪಂದ್ಯಗಳಲ್ಲಿ ಆಡಿದ್ದರು. ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥರೂ ಆಗಿದ್ದರು.

72 ಜನರಲ್ಲಿ 69 ಮೃತದೇಹಗಳು ಪತ್ತೆ • ಶೋಧ ಕಾರ್ಯ ಮುಂದುವರಿಕೆ

ನೇಪಾಳ ವಿಮಾನ ದುರಂತ: ಬ್ಲ್ಯಾಕ್‌ಬಾಕ್ಸ್ ಪತ್ತೆ

ಕಠ್ಮಂಡು (ಪಿಟಿಐ): ನೇಪಾಳದ ಪೊಖರಾದಲ್ಲಿ ಪತನವಾದ ಯೇತಿ ಏರ್‌ಲೈನ್ಸ್‌ಗೆ ಸೇರಿದ ಪ್ರಯಾಣಿಕ ವಿಮಾನದ ಬ್ಲ್ಯಾಕ್‌ಬಾಕ್ಸ್ ಅಪಘಾತ ನಡೆದ ಸ್ಥಳದಲ್ಲಿ ಸೋಮವಾರ ಪತ್ತೆಯಾಗಿದೆ.

ವಿಮಾನದಲ್ಲಿ 72 ಜನರು ಪ್ರಯಾಣಿಕರಿದ್ದರು. ಈವರೆಗೆ 69 ಮೃತದೇಹಗಳು ದೊರೆತಿವೆ. ವಿಮಾನದಲ್ಲಿದ್ದ ಎಲ್ಲರೂ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಇನ್ನು ಮೂವರ ಶವ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

69 ಮೃತದೇಹಗಳಲ್ಲಿ 41 ಮೃತದೇಹಗಳ ಗುರುತು ಪತ್ತೆ ಮಾಡಲಾಗಿದೆ. ಶೋಧ ಕಾರ್ಯಾಚರಣೆ ಪ್ರಕ್ರಿಯೆ ಸಂಪೂರ್ಣವಾದ ಬಳಿಕ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ಕಸ್ಕಿ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ತಿಳಿದ್ದಾರೆ.

ಶೋಧ ಮತ್ತು ರಕ್ಷಣಾ ಕಾರ್ಯಕರ್ತರು 300 ಮೀಟರ್ ಆಳದ ಕಂದಕಕ್ಕೆ ಇಳಿದು ವಿಮಾನದ ಕಾಕ್‌ಪಿಟ್ ಧ್ವನಿಮುದ್ರಕ(ಸಿವಿಆರ್) ಮತ್ತು ವಿಮಾನದ ಡೇಟಾ ರೆಕಾರ್ಡರ್ ಅನ್ನು(ಎಫ್‌ಡಿಆರ್) ಹುಡುಕಿ ತಂದಿದ್ದಾರೆ. ರೇಡಿಯೊ ಪ್ರಸರಣ ಮತ್ತು ಕಾಕ್‌ಪಿಟ್‌ನ ಇತರ ಶಬ್ದಗಳನ್ನು ಸಿವಿಆರ್‌ನಲ್ಲಿ ಧ್ವನಿಮುದ್ರಣವಾಗಿರುತ್ತದೆ. ವಿಮಾನದ ವೇಗ, ವಿಮಾನ ಹಾರಾಟದ ಎತ್ತರ, ದಿಕ್ಕು, ಪೈಲಟ್‌ನ ತೆಗೆದುಕೊಂಡ ಕ್ರಮಗಳು ಸೇರಿ ಇತರ 80 ವಿವಿಧ ಬಗೆಯ ಮಾಹಿತಿಗಳು ಎಫ್‌ಡಿಆರ್‌ನಲ್ಲಿ ದಾಖಲಾಗಿರುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬ್ಲ್ಯಾಕ್ ಬಾಕ್ಸ್‌ಗಳನ್ನು ನೇಪಾಳ ನಾಗರಿಕ ವಿಮಾನಯಾನ ಪ್ರಾಧಿಕಾರಕ್ಕೆ (ಸಿಎಎಎನ್) ಒಪ್ಪಿಸಲಾಗಿದೆ ಎಂದು ಯೇತಿ ಏರ್‌ಲೈನ್ಸ್ ವಕ್ತಾರರು ತಿಳಿಸಿದ್ದಾರೆ.

ಭಾನುವಾರ ಬೆಳಿಗ್ಗೆ 10.58ಕ್ಕೆ ಪೊಖಾರಾ ವಿಮಾನ ನಿಲ್ದಾಣದಲ್ಲಿ ನಿಲುಗಡೆ ಆಗಬೇಕಿದ್ದ ವಿಮಾನವು, ನಿಲುಗಡೆಗೆ ಕೆಲವೇ ಸೆಕೆಂಡುಗಳು ಬಾಕಿ ಇರುವಂತೆ ಸೇಟಿ ನದಿಯ ದಡಕ್ಕೆ ಅಪ್ಪಳಿಸಿತು. ಎರಡು ಭಾಗವಾದ ವಿಮಾನದ ಒಂದು ಭಾಗ ನದಿಯ ಕಂದಕದಲ್ಲಿ ಬಿದ್ದರೆ, ಮತ್ತೊಂದು ಭಾಗ ನದಿಯ ದಡದಲ್ಲಿ ಬಿದ್ದಿತು. ಭಾರತದ ಐವರು ಸೇರಿ ಒಟ್ಟು 72 ಮಂದಿ ವಿಮಾನದಲ್ಲಿ ಇದ್ದರು.

17 ವರ್ಷಗಳ ಅಂತರದಲ್ಲಿ ಪೈಲಟ್ ದಂಪತಿ ಸಾವು: ಯೇತಿ ಏರ್‌ಲೈನ್ಸ್‌ನ ವಿಮಾನದಲ್ಲಿ ಸಹಪೈಲಟ್ ಆಗಿದ್ದ ಅಂಜು ಖಾತಿವಾಡ ಅವರು ದುರಂತದಲ್ಲಿ ಮೃತಪಟ್ಟಿದ್ದಾರೆ. ಯೇತಿ ಏರ್‌ಲೈನ್ಸ್‌ನಲ್ಲಿ ಪೈಲಟ್ ಆಗಿದ್ದ ಅವರ ಪತಿ ದೀಪಕ್ ಪೊಖಾರೆಲ್ ಅವರು 2006ರಲ್ಲಿ ಸಂಭವಿಸಿದ್ದ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದರು.

ನೇಪಾಳದ ಪತ್ರಕರ್ತನ ದೇಹ ಪತ್ತೆ: ಮೃತಪಟ್ಟವರಲ್ಲಿ ನೇಪಾಳದ ಖ್ಯಾತ ಪತ್ರಕರ್ತ ತ್ರಿಭುವನ್ ಪೌಡ್ಯಾಲ್ ಕೂಡ ಒಬ್ಬರು ಎನ್ನಲಾಗಿದೆ.

ನೇಪಾಳದ ಪತ್ರಕರ್ತರ ಒಕ್ಕೂಟದ (ಎಫ್‌ಎನ್‌ಜೆ) ಕೇಂದ್ರ ಕಾರ್ಯಕಾರಿ ಸದಸ್ಯರಾಗಿದ್ದ 37 ವರ್ಷದ ಪೌಡ್ಯಾಲ್ ಅವರ ಮೃತದೇಹವನ್ನು ಗುರುತಿಸಲಾಗಿದೆ.

ಲೈವ್ ವಿಡಿಯೊ: ವಿಮಾನ ನೆಲಕ್ಕೆ ಅಪ್ಪಳಿಸುವ ಮುನ್ನ ಪ್ರಯಾಣಿಕರೊಬ್ಬರು ಫೇಸ್‌ಬುಕ್ ಲೈವ್ ಮಾಡಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೆಲವೇ ಸೆಕೆಂಡ್‌ಗಳ ಈ ವಿಡಿಯೊದಲ್ಲಿ ಪ್ರಯಾಣಿಕರ ಚೀರಾಟ ಹಾಗೂ ಬೆಂಕಿಯ ಜ್ವಾಲೆಗಳನ್ನು ಕಾಣಬಹುದು.

ಉತ್ತರಪ್ರದೇಶದ ಸೋನು ಜೈಸ್ವಾಲ್ ಎಂಬುವರು ಫೇಸ್‌ಬುಕ್ ಲೈವ್ ಮಾಡಿದ್ದರು.

ಅವಘಡದಲ್ಲಿ ಮೃತಪಟ್ಟವರಲ್ಲಿ ಐವರು ಭಾರತೀಯರು ಇದ್ದು, ಅವರಲ್ಲಿ ನಾಲ್ವರು ಪ್ಯಾರಾಗ್ಲೈಡಿಂಗ್‌ಗೆ ಪೊಖರಾಗೆ ಹೊರಟಿದ್ದರು ಎಂದು ಯೇತಿ ಏರ್‌ಲೈನ್ಸ್‌ನ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಅಪಘಾತಕ್ಕೀಡಾದ ಯೇತಿ ಏರ್‌ಲೈನ್ಸ್‌ಗೆ ಸೇರಿದ ಎಟಿಆರ್–72 ವಿಮಾನದ ಅವಶೇಷಗಳು –ಪಿಟಿಐ ಚಿತ್ರ

ಈ ಹಿಂದೆ ಕಿಂಗ್‌ಫಿಷರ್ ಏರ್‌ಲೈನ್ಸ್‌ಗೆ ಸೇರಿದ್ದ ವಿಮಾನ

ಕಠ್ಮಂಡು: ನೇಪಾಳದಲ್ಲಿ ಅಪಘಾತಕ್ಕೀಡಾದ ಎಟಿಆರ್–72 ವಿಮಾನವು ಈ ಹಿಂದೆ ಉದ್ಯಮಿ ವಿಜಯ್ ಮಲ್ಯ ಒಡೆತನದ ಪ್ರಸ್ತುತ ನಿಷ್ಕ್ರಿಯವಾಗಿರುವ ಕಿಂಗ್‌ಫಿಷರ್ ಏರ್‌ಲೈನ್ಸ್ ಮಾಲೀಕತ್ವದಲ್ಲಿತ್ತು ಎಂದು ‘ಸಿರಿಯಮ್ ಫ್ಲೀಟ್ಸ್’ ತಿಳಿಸಿದೆ.

‘ಸಿರಿಯಮ್ ಫ್ಲೀಟ್ಸ್’ ಮಾಹಿತಿಯ ಪ್ರಕಾರ, 9ಎನ್–ಎಎನ್‌ಸಿ ಎಟಿಆರ್–72 ವಿಮಾನವನ್ನು 2007ರಲ್ಲಿ ಕಿಂಗ್‌ಫಿಷರ್ ಏರ್‌ಲೈನ್ಸ್ ಖರೀದಿಸಿತ್ತು. ಆರು ವರ್ಷಗಳ ಬಳಿಕ ಈ ವಿಮಾನವನ್ನು ಥಾಯ್ಲೆಂಡ್‌ನ ನೋಕ್ ಏರ್ ಖರೀದಿಸಿತ್ತು. ಬಳಿಕ ಈ ವಿಮಾನವನ್ನು 2019ರಲ್ಲಿ ನೇಪಾಳದ ಯೇತಿ ಏರ್‌ಲೈನ್ಸ್‌ಗೆ ಮಾರಾಟ ಮಾಡಲಾಗಿತ್ತು.

ಫ್ರಾನ್ಸ್ ಮತ್ತು ಇಟಲಿಯ ಜಂಟಿ ಸಹಭಾಗಿತ್ವದಲ್ಲಿ ಎಟಿಆರ್ ಕಂಪನಿಯು ಈ ವಿಮಾನವನ್ನು ಅಭಿವೃದ್ಧಿಪಡಿಸಿತ್ತು. ಅವಳಿ ಎಂಜಿನ್ ಟರ್ಬೊಪ್ರೊಪ್ ಹೊಂದಿದ್ದ ‘ಎಟಿಆರ್– 72’ ವಿಮಾನವು ತನ್ನ ಹೆಸರಿನಲ್ಲಿದ್ದ 72 ಸಂಖ್ಯೆಯಷ್ಟೇ ಪ್ರಯಾಣಿಕರ ಸಾಮರ್ಥ್ಯವನ್ನು ಹೊಂದಿದ್ದ ವಿಶಿಷ್ಟ ವಿಮಾನವಾಗಿತ್ತು. ಪ್ರಸ್ತುತ ಈ ವಿಮಾನವನ್ನು ಬುದ್ಧ ಏರ್ ಮತ್ತು ಯೇತಿ ಏರ್‌ಲೈನ್ಸ್ ಮಾತ್ರ ಅಲ್ಪಾವಧಿಯ ಸೇವೆಗೆ ಬಳಸುತ್ತಿದ್ದವು.

‘ಅಸಮರ್ಪಕ ನಿರ್ವಹಣೆ ಅಥವಾ ಪೈಲಟ್‌ನ ಆಯಾಸದ ಕಾರಣದಿಂದಾಗಿ ಭಾನುವಾರ ವಿಮಾನವು ಅಪಘಾತಕ್ಕೀಡಾಗಿರುವ ಸಾಧ್ಯತೆ ಇದೆ’ ಎಂದು ವಿಮಾನ ಅಪಘಾತ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

‘ಅಪಘಾತ ಸಂಭವಿಸುವ ಕೆಲವೇ ಸೆಕೆಂಡುಗಳ ಮುನ್ನ ಮೊಬೈಲ್ ವಿಡಿಯೊದಲ್ಲಿ ದಾಖಲಾದ ದೃಶ್ಯಾವಳಿಗಳನ್ನು ಗಮನಿಸಿದರೆ, ವಿಮಾನವು ಕೆಳಗಿಳಿಯುವ ಸಂದರ್ಭದಲ್ಲಿ ಆಕಾಶ ಶುಭ್ರವಾಗಿತ್ತು, ಅಪಘಾತಕ್ಕೀಡಾಗುವ ಮುನ್ನ ವಿಮಾನದ ಮುಂಭಾಗವು ತುಸು ಮೇಲಕ್ಕೆ ಹೋಗಿದೆ. ಬಳಿಕ ರೆಕ್ಕೆಗಳು ಎಡಭಾಗಕ್ಕೆ ಇಳಿಮುಖವಾಗಿದ್ದು, ನಿಷ್ಕ್ರಿಯವಾಗಿರುವ ಸಾಧ್ಯತೆ ಇದೆ’ ಎಂದು ತನಿಖಾಧಿಕಾರಿ ತಿಳಿಸಿದ್ದಾರೆ.

ನಾಲ್ವರು ಬಾಲ್ಯ ಸ್ನೇಹಿತರು

ಲಖನೌ: ನೇಪಾಳದ ಪೊಖರಾದಲ್ಲಿ ವಿಮಾನ ಪತನಗೊಂಡು ಮೃತಪಟ್ಟಿರುವ ಉತ್ತರಪ್ರದೇಶದ ಗಾಜಿಪುರ ಜಿಲ್ಲೆಯ ನಾಲ್ವರು ಬಾಲ್ಯಸ್ನೇಹಿತರಾಗಿದ್ದು, ಪ್ರಸಿದ್ಧ ಪಶುಪತಿನಾಥ ದೇವಾಲಯಕ್ಕೆ ಭೇಟಿ ನೀಡಲು ತೆರಳಿದ್ದರು ಎಂದು ಮೂಲಗಳು ತಿಳಿಸಿವೆ.

ಸೋನು ಜೈಸ್ವಾಲ್, ಅಭಿಷೇಕ್ ಕುಶ್ವಾಹಾ, ಅನಿಲ್ ರಾಜ್ಬರ್ ಮತ್ತು ವಿಶಾಲ್ ಶರ್ಮಾ ಅವರು ಒಂದೇ ಶಾಲೆಯಲ್ಲಿ ಕಲಿತಿದ್ದು, ಆತ್ಮೀಯರಾಗಿದ್ದರು. ಅಭಿಷೇಕ್, ಅನಿಲ್ ಮತ್ತು ವಿಶಾಲ್ ಅವರು ಮೊದಲ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು ಎಂದೂ ವಿವರಿಸಿವೆ. ಸೋನು ಜೈಸ್ವಾಲ್ ಮದ್ಯದ ವ್ಯಾಪಾರ ಮಾಡುತ್ತಿದ್ದು, ಪಶುಪತಿನಾಥ ದೇವಾಲಯ ದರ್ಶನಕ್ಕಾಗಿ ಇತರ ಮೂವರನ್ನೂ ಆತನೇ ಕರೆದೊಯ್ದಿದ್ದ ಎಂದಿವೆ.